ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ತುಮಕೂರಲ್ಲಿ ಅಂತಾರಾಷ್ಟ್ರೀಯ ಟೆನಿಸ್

ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಕೂಟಕ್ಕೆ ಸಿದ್ಧತೆ

ಮೇ 4ರಿಂದ 10ರವರೆಗೆ ಟೆನಿಸ್ ಹಬ್ಬ

೧೧

ಏ.3ಕ್ಕೆ ತಾರಾಗಿರಿ ಸ್ವದೇಶಿ ಯುದ್ಧನೌಕೆ ನಿಯೋಜನೆ



೦೫

ಬೆಂಗಳೂರು

ಭಾನುವಾರ, 22 ಮಾರ್ಚ್ 2026

ಸಂಪುಟ 33, ಸಂಚಿಕೆ 140, ಪುಟಗಳು 12+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94

REG No.KA/BG GPO/2532/2021-23

hosadigantha.com

epaper.hosadigantha.com

Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಭರಣಿ

ದಿನದ ಮಾತು

ತನ್ನ ಬಂಧು ಬಾಂಧವರನ್ನು ಅತಿಯಾಗಿ ಹಚ್ಚಿಕೊಂಡವನು ಭಯಶೋಕಗಳನ್ನು ಅನುಭವಿಸಲೇಬೇಕಾಗುತ್ತದೆ. ಅತಿ ಮಮತೆಯನ್ನು ಬಿಟ್ಟವನೇ ಸುಖಿಯಾಗಬಲ್ಲ.

▲ಚಾಣಕ್ಯ ನೀತಿ

ಬಾಯ್ ಮಾತು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ತೀರ್ಥಹಳ್ಳಿ: ಮಂಗನ ಕಾಯಿಲೆಗೆ ಮಹಿಳೆ ಬಲಿ



• **ತೀರ್ಥಹಳ್ಳಿ:** ತಾಲೂಕಿನಲ್ಲಿ ಮಂಗನ ಕಾಯಿಲೆಗೆ ಈ ವರ್ಷ ಎರಡನೇ ಸಾವು ಸಂಭವಿಸಿದ್ದು, ಅರಳಸುರುಳಿ ಸಮೀಪದ ತಟ್ಟಿಕೇವಿ ಗ್ರಾಮದ ಮಹಿಳೆ ಮಣಿಪಾಲ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗುಲಾಬಿ ಶೆಟ್ಟಿ (ನಾಗು ಶೆಡ್ತಿ (60) ಮೃತಪಟ್ಟವರು.ರೋಗ ಉಲ್ಬಣಗೊಂಡ ಸ್ಥಿತಿಯಲ್ಲಿ ಮಂಗಳವಾರ ಸರ್ಕಾರಿ ಜೆಸಿ ಆಸ್ಪತ್ರೆಗೆ ದಾಖಲಾಗಿದ್ದ ಅವರನ್ನು ಅದೇ ದಿನ ಮಣಿಪಾಲ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಅಸುನೀಗಿದರು. ಕಿಡ್ನಿ ಸಮಸ್ಯೆ ಕೂಡ ಇತ್ತು ಎಂದು ಹೇಳಲಾಗಿದೆ. ➡ಪುಟ ೨

ಸರ್ಕಾರಿ ಕಚೇರಿಯಲ್ಲೇ ಅಧಿಕಾರಿ ಆತ್ಮಹತ್ಯೆ

• **ಪಾವಗಡ:** ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಸಹಾಯ ನಿರ್ದೇಶಕ ಮಲ್ಲಿಕಾರ್ಜುನ್(60) ಕಚೇರಿಯಲ್ಲೇ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಪಾವಗಡ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

• ಪುಟ ೨

ಡಿಜಿಟಲ್ ಅರೆಸ್ಟ್ ವಂಚನೆಗೆ ಕೇಂದ್ರ ಸರ್ಕಾರ ಬ್ರೇಕ್

• **ಹೊಸದಿಲ್ಲಿ:** ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ವಂಚನೆಗೆ ತಡೆ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ವಂಚನೆಗೆ ಬಳಸಲಾಗುತ್ತಿರುವ ಡಿವೈಸ್ ಐಡಿಗಳನ್ನು ಬ್ಲಾಕ್ ಮಾಡಲು ವಾಟ್ಸ್ಆ್ಯಪ್ ಗೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

• ಪುಟ ೫

ಆರೆಸ್ಸೆಸ್ ನಿಷೇಧ ಶಿಫಾರಸು ಪೂರ್ವಾಗ್ರಹಪೀಡಿತ

• ಪುಟ ೫

ಅಪರಿಚಿತರಿಂದ ಮತ್ತೊಬ್ಬ ಭಯೋತ್ಪಾದಕನ ಹತ್ಯೆ

• ಪುಟ ೫

ವಾಣಿಜ್ಯ ಎಲ್‌ಪಿಜಿ ಹಂಚಿಕೆ ಶೇ.50ಕ್ಕೆ ಏರಿಕೆ

• ಪುಟ ೫

ಸರ್ಕಾರಿ ಸುಪರ್ದಿಗೆ ಅಲ್ ಫಲಾ ವಿವಿ

• ಪುಟ ೫

ವಿಕಿರಣ ಸೋರಿಕೆ? | ಟೆಹ್ರಾನ್‌ನಿಂದ 220 ಕಿಮೀ ದೂರದ ಸ್ಥಾವರ

ಇರಾನ್ ಪರಮಾಣು ಸ್ಥಾವರ ಮೇಲೆ ದಾಳಿ

• **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಭೀಕರ ಯುದ್ಧ ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಶನಿವಾರ ಅಮೆರಿಕ-ಇಸ್ರೇಲ್ ಇರಾನ್‌ನ ನಟಾಂಜ್ ಪರಮಾಣು ಸ್ಥಾವರದ ಮೇಲೆ ದಾಳಿ ನಡೆಸಿದೆ. ಇದರಿಂದ ವಿಕಿರಣ ಸೋರಿಕೆಯ ಆತಂಕ ಎಲ್ಲೆಡೆ ಮನೆ ಮಾಡಿದೆ.



ಶನಿವಾರ ಬೆಳಗ್ಗೆ ನಟಾಂಜ್‌ನಲ್ಲಿರುವ ಇರಾನ್‌ನ ಪ್ರಮುಖ ಯುರೇನಿಯಂ-ಪುಷ್ಟೀಕರಣ ಸ್ಥಾವರದ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿವೆ. ದಾಳಿ ನಂತರ ಯಾವುದೇ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಮತ್ತು ಸ್ಥಾವರದ ಬಳಿ ವಾಸಿಸುವ ನಿವಾಸಿಗಳು ಅಪಾಯದಲ್ಲಿಲ್ಲ ಎಂದು ಸುದ್ದಿ ಸಂಸ್ಥೆ ತಿಳಿಸಿದೆ. ಆದರೂ ಸ್ಥಳೀಯ ನಿವಾಸಿಗಳು ವಿಕಿರಣ ಸೋರಿಕೆಯ ಆತಂಕದಲ್ಲಿದ್ದಾರೆ. ನಟಾಂಜ್ ಪರಮಾಣು ಸ್ಥಾವರ ಇರಾನ್ ರಾಜಧಾನಿ ಟೆಹ್ರಾನ್‌ನಿಂದ ಸುಮಾರು 220 ಕಿಮೀ ದೂರದಲ್ಲಿದೆ.ಇರಾನ್‌ನ ಪರಮಾಣು ಸೌಲಭ್ಯ ಕೇಂದ್ರವಾದ ನಟಾಂಜ್ ಅನ್ನು ಯುದ್ಧ ಶುರುವಾದ ಮೊದಲ ವಾರದಲ್ಲೇ ಗುರಿಯಾಗಿಸಿತ್ತು ಎಂದು ಮಧ್ಯಮಗಳು ವರದಿ ಮಾಡಿವೆ. ದಾಳಿಯ ಉಪಗ್ರಹ ಚಿತ್ರಗಳು ಬೆಳಕಿಗೆ ಬಂದಿವೆ. ಈ ಕೇಂದ್ರದಿಂದ ಯಾವುದೇ ವಿಕಿರಣ ಸೋರಿಕೆಯಾಗಿಲ್ಲ ಎಂದು ಇರಾನ್ ಸುದ್ದಿಸಂಸ್ಥೆ ವರದಿ ಮಾಡಿದೆ.

4,000 ಕಿ.ಮೀ. ದೂರ ಇರಾನ್ ಕ್ಷಿಪಣಿ ದಾಳಿ!



• **ಹೊಸದಿಲ್ಲಿ:** ಅಮೆರಿಕ ಮತ್ತು ಬ್ರಿಟನ್ ಜಂಟಿ ಸೇನಾನೆಲೆಯಾದ ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪದ ಮೇಲೆ ಇರಾನ್ ಎರಡು ಮಧ್ಯಂತರ-ಶ್ರೇಣಿಯ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಇರಾನ್ ಕ್ಷಿಪಣಿಗಳ ಅಘೋಷಿತ ದೂರ ಸಾಮರ್ಥ್ಯವು ವಿಶ್ವದ ಗಮನಸೆಳೆದಿದೆ. ತನ್ನಲ್ಲಿ ಕೇವಲ 2,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳಷ್ಟೇ ಇವೆಯೆಂದು ಘೋಷಿಸಿಕೊಂಡ ಇರಾನ್, 4,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಬಹುಶಃ ರಹಸ್ಯವಾಗಿಟ್ಟಿತ್ತು. • ವಿವರ ಪುಟ ೫



ಇರಾನ್ ಮೇಲಿನ ತೈಲ ನಿರ್ಬಂಧ ಸಡಿಲಿಸಿದ ಅಮೆರಿಕ

ಜಾಗತಿಕ ಇಂಧನ ಬೆಲೆಗಳನ್ನು ನಿಯಂತ್ರಿಸುವ ಉದ್ದೇಶದಿಂದ, ಸಮುದ್ರದಲ್ಲಿರುವ ಇರಾನ್ ತೈಲದ ಮಾರಾಟಕ್ಕೆ ಟ್ರಂಪ್ ಆಡಳಿತ ಶುಕ್ರವಾರ 30 ದಿನಗಳ ಕಾಲ ನಿರ್ಬಂಧ ಸಡಿಲಿಕೆ ಘೋಷಿಸಿದೆ. ಸುಮಾರು 140 ಮಿಲಿಯನ್ ಬ್ಯಾರೆಲ್ ತೈಲವನ್ನು ಜಾಗತಿಕ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ತಿಳಿಸಿದ್ದಾರೆ. ಫೆ.28ರಂದು ಮಿಲಿಟರಿ ಕಾರ್ಯಾಚರಣೆ ಆರಂಭವಾದಾಗಿನಿಂದ ತೈಲ ಬೆಲೆ ಶೇ.50ರಷ್ಟು ಏರಿಕೆಯಾಗಿದ್ದು, ಈ ಕ್ರಮ ಗ್ರಾಹಕರು ಮತ್ತು ಉದ್ಯಮಗಳಿಗೆ ನಿರಾಳತೆ ತರುವ ಗುರಿ ಹೊಂದಿದೆ. ಏಪ್ರಿಲ್ 19 ರವರೆಗೆ ಈ ರಿಯಾಯಿತಿ ಜಾರಿಯಲ್ಲಿರಲಿದೆ.

ಭಾರತಕ್ಕೂ ಪ್ರಯೋಜನ?: ಈ ತೈಲ ಕೆಲವೇ ದಿನಗಳಲ್ಲಿ ಏಷ್ಯಾದ ಮಾರುಕಟ್ಟೆ ತಲುಪಬಹುದು ಎಂದು ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಹೇಳಿದ್ದಾರೆ. ➡ಪುಟ ೨

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

• **ಹೊಸದಿಲ್ಲಿ:** ಪ್ರಧಾನಿ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯನ್ ಅವರೊಂದಿಗೆ ಶನಿವಾರ ದೂರವಾಣಿ ಮಾತುಕತೆ ನಡೆಸಿ, ಪ್ರಮುಖ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಕಟುವಾಗಿ ಖಂಡಿಸಿದರು. • ವಿವರ ಪುಟ ೫

ಹೆಚ್ಚುವರಿ ತೈಲ ಲಭ್ಯತೆ ನಿರಾಕರಿಸಿದ ಇರಾನ್



• **ಟೆಹ್ರಾನ್:** ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಗೆ ಪೂರೈಸಲು ಪ್ರಸ್ತುತ ತನ್ನಲ್ಲಿ ಯಾವುದೇ ಹೆಚ್ಚುವರಿ ಅಥವಾ ಸಂಗ್ರಹಿತ ಕಚ್ಚಾ ತೈಲ ಲಭ್ಯವಿಲ್ಲ ಎಂದು ತಿಳಿಸುವ ಮೂಲಕ ಇರಾನ್ ತೈಲ ಸಚಿವಾಲಯ ಅಮೆರಿಕದ ಹೇಳಿಕೆಯನ್ನು ತಳ್ಳಿಹಾಕಿದೆ.ವಿವಾದಿತ ತೈಲ ದಾಸ್ತಾನು ವಾಷಿಂಗ್ಟನ್ ಗುರುತಿಸಿರುವಂತೆ ತನ್ನಲ್ಲಿ 140 ಮಿಲಿಯನ್ ಬ್ಯಾರೆಲ್‌ನಷ್ಟು ಸಿಲುಕಿಕೊಂಡಿರುವ ತೈಲ ದಾಸ್ತಾನು ಇಲ್ಲ ಎಂದು ಮುಂಬೈನಲ್ಲಿರುವ ಇರಾನ್ ರಾಯಭಾರ ಕಚೇರಿ ಸ್ಪಷ್ಟಪಡಿಸಿದೆ. ➡ಪುಟ ೨

ಚಿಂತೆಗೀಡಾದ ಅಭ್ಯರ್ಥಿ ಆಕಾಂಕ್ಷಿಗಳು

ಬಗೆಹರಿಯದ ಕೈ ಟಿಕೆಟ್ ಗೊಂದಲ



• **ಬೆಂಗಳೂರು:** ಉಪ ಸಮರಕ್ಕೆ ಸಜ್ಜಾಗಿರುವ ಕಾಂಗ್ರೆಸ್‌ನಲ್ಲಿ ಆಂತರಿಕ ಬಡಿದಾಟವೇ ಹೆಚ್ಚಾಗಿದ್ದು, ಆಡಳಿತ ಪಕ್ಷ ಕಾಂಗ್ರೆಸ್‌ಗೆ ಬಣಗಳ ಬಡಿದಾಟವು ತಲೆನೋವು ತಂದಿರುವುದರಿಂದ ತಮ್ಮದೇ ಕ್ಷೇತ್ರಗಳನ್ನು ಮರಳಿ ಪಡೆಯುವ ತಂತ್ರಕ್ಕೆ ಆರಂಭಿಕ ಹಿನ್ನಡೆಯಾಗಿದೆ.

ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ ಮೇಟಿ ಅವರ ನಿಧನದ ನಂತರ ತೆರವಾಗಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳಿಗೆ ಏ.9ರಂದು ಉಪ ಚುನಾವಣೆ ನಿಗದಿಯಾಗಿದ್ದು, ಮಾ.23 ಸೋಮವಾರ ನಾಮಪತ್ರ ಸಲ್ಲಿಸಲು ಕೊನೆ ದಿನವಾಗಿದ್ದರೂ ಇನ್ನೂ ಟಿಕೆಟ್ ಹಂಚಿಕೆ ಆಗದಿರುವುದು ಎರಡೂ ಕುಟುಂಬ ಸದಸ್ಯರನ್ನು ಚಿಂತೆಗೀಡು ಮಾಡಿವೆ.



ಮುಂಬರುವ ಸ್ಥಳೀಯ ಚುನಾವಣೆಗೆ ಈ ಉಪಕದನ ದಿಕ್ಸೂಚಿ ಎಂದು ಬಿಂಬಿತವಾಗಿರುವುದರಿಂದ ಈ ಚುನಾವಣೆ ಉಭಯ ಪಕ್ಷಗಳಿಗೆ ಸವಾಲಾಗಿದೆ. 3 ವರ್ಷದ ಸನಿಹದಲ್ಲಿರುವ ಗ್ಯಾರಂಟಿ ಸರ್ಕಾರವು 2 ಸ್ಥಾನವನ್ನು ಗೆಲ್ಲುವ ಮೂಲಕ ವಿಶ್ವಾಸ ಹೆಚ್ಚಿಸಿಕೊಳ್ಳುವ ಜತೆಗೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸಮಿಫೈನಲ್ ಎಂದು ಪರಿಗಣಿಸಿರುವುದರಿಂದ ಈ ಚುನಾವಣೆ ಕಾಂಗ್ರೆಸ್‌ಗೆ ಮುಖ್ಯವಾಗಿದೆ.

ಲೋಕಸಭೆಚುನಾವಣೆನಂತರನಡೆದಉಪಚುನಾವಣೆಯಲ್ಲಿ ಮೇಲುಗೈ ಸಾಧಿಸಿದ್ದ ಕಾಂಗ್ರೆಸ್ ಅದನ್ನು ಮುಂದುವರಿಸಲು ಸಿದ್ಧತೆ ನಡೆಸಿದೆ. ➡ಪುಟ ೨

ದಾವಣಗೆರೆಗೆ ಸಮರ್ಥ್, ಬಾಗಲಕೋಟೆಗೆ ಉಮೇಶ್ ಮೇಟಿ?

ಉಪ ಚುನಾವಣೆಗೆ ಕಾಂಗ್ರೆಸ್‌ನಿಂದ ಕುಟುಂಬ ಸದಸ್ಯರೆ ಅಭ್ಯರ್ಥಿಗಳು ಎಂದು ಹೇಳಲಾಗಿದ್ದರೂ ನಂತರದ ದಿನಗಳಲ್ಲಿ ಅದು ಬೇರೆ ರೀತಿ ತಿರುಗಿದ್ದರಿಂದ ಟಿಕೆಟ್ ಹಂಚಿಕೆ ಜಟಿಲವಾಗಿದೆ. ಬಾಗಲಕೋಟೆ, ದಾವಣಗೆರೆ ದಕ್ಷಿಣ ಟಿಕೆಟ್ ಬಹುತೇಕ ಬಗೆಹರಿದಿದ್ದು, ರಣದೀಪ್ ಸಿಂಗ್ ಸುರ್ಜೆವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಮಲ್ಲಿಕಾರ್ಜುನ, ಜಮೀರ್ ಅಹಮದ್ ಉಪಸ್ಥಿಯಲ್ಲಿ ಸಭೆ ನಡೆಸಿದ್ದು, ಭಾನುವಾರ ಅಧಿಕೃತವಾಗಿ ಟಿಕೆಟ್ ಘೋಷಣೆ ಆಗಲಿದೆ. ಸೋಮವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಬೈಕ್ ಮೇಲೆ ಟ್ರಕ್ ಹತ್ತಿಸಿ ಹತ್ಯೆ | ದಿಲ್ಲಿ-ಆಗ್ರಾ ರಾ.ಹೆ. ಬಂದ್

ಗೋರಕ್ಷಕ ಬಾಬಾ ಹತ್ಯೆಗೆ ಆಕ್ರೋಶ

• **ಲಖನೌ:** ಫರ್ಸಾ ವಾಲೆ ಬಾಬಾ (ಕೊಡಲಿ ಬಾಬಾ) ಎಂದೇ ಪ್ರಖ್ಯಾತರಾಗಿದ್ದ ಉತ್ತರಪ್ರದೇಶದ ಗೋರಕ್ಷಕ ಚಂದ್ರಶೇಖರ್ ಈದ್ ಹಬ್ಬದ ಸಂದರ್ಭ ಮಥುರಾದಲ್ಲಿ ಹತ್ಯೆಯಾಗಿದ್ದು, ಭಕ್ತರು ಹಾಗೂ ಗ್ರಾಮಸ್ಥರಿಂದ ಭಾರೀ ಆಕ್ರೋಶ ವ್ಯಕ್ತವಾಗಿದೆ. ಬಾಬಾ ಹತ್ಯೆ ನಡೆಸಿದವರ ಮೇಲೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪೊಲೀಸರಿಗೆ ಆದೇಶಿಸಿದ್ದಾರೆ. ಈದ್ ಹಬ್ಬದ ಸಂದರ್ಭ ಮಥುರಾದಲ್ಲಿ ಗೋವುಗಳ ಕಳ್ಳಸಾಗಣೆ ಮಾಡುತ್ತಿದ್ದ ಟ್ರಕ್‌ವೊಂದನ್ನು ಬಾಬಾ ತಮ್ಮ ಬೈಕ್‌ನಲ್ಲಿ ಬೆನ್ನಟ್ಟಿ ಅಡ್ಡಗಟ್ಟಲು ಪ್ರಯತ್ನಿಸಿದ್ದರು. ಆದರೆ ಟ್ರಕ್‌ನಲ್ಲಿದ್ದ ನಾಲ್ವರು ಆರೋಪಿಗಳು ಬೈಕ್ ಮೇಲೆಯೇ ಟ್ರಕ್ ಚಲಾಯಿಸಿ ಬಾಬಾರನ್ನು ಹತ್ಯೆ ಮಾಡಿದ್ದಾರೆಂದು ಆರೋಪಿಸಲಾಗಿದೆ. ಬೈಕ್ ಮೇಲೆ ಟ್ರಕ್ ಚಲಾಯಿಸಿದ ವೇಗಕ್ಕೆ ಗಂಭೀರ ಗಾಯಗೊಂಡಿದ್ದ ಬಾಬಾ ಸ್ಥಳದಲ್ಲೇ ಮೃತ ಪಟ್ಟಿದ್ದರು. ಪೊಲೀಸರ ಪ್ರಕಾರ, ಬಾಬಾ ಅಡ್ಡಗಟ್ಟಿದ್ದ ಟ್ರಕ್ ರಾಜಸ್ಥಾನದ್ದಾಗಿದ್ದು, ಟ್ರಕ್‌ನಲ್ಲಿ ದಿನಸಿ ಸಾಮಗ್ರಿಗಳಿದ್ದವು. ದಟ್ಟವಾದ ಮಂಜು ಇದ್ದಿದ್ದರಿಂದ ರಸ್ತೆ ಅಪಘಾತ ಸಂಭವಿಸಿದೆ. ➡ಪುಟ ೨



ಬೃಹತ್ ಪ್ರತಿಭಟನೆ

ಗೋರಕ್ಷಕನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದ್ದು, ದಿಲ್ಲಿ-ಆಗ್ರಾ ನಡುವಿನ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್-19) ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಇದರಿಂದ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನಗಳು ಸಂಚರಿಸಲಾಗದೆ ಸಾಲಾಗಿ ನಿಂತಿದ್ದವು.

ವ್ಯವಸ್ಥೆಗೆ ಕೃತಕ ಬುದ್ಧಿಮತ್ತೆ ಪೂರಕವಾಗಿರಲಿ: ನ್ಯಾ.ಸೂರ್ಯಕಾಂತ್

ಎಐ ನ್ಯಾಯಾಂಗ ಆಳಬಾರದು: ಸಿಜೆಐ

• **ಬೆಂಗಳೂರು:** ನ್ಯಾಯಾಂಗ ವ್ಯವಸ್ಥೆಗೆ ಎಐ ತಾಂತ್ರಿಕತೆಯನ್ನು ಸಂಯೋಜನೆಗೊಳಿಸುವಾಗ ಅದು ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವ ರೀತಿಯಲ್ಲಿ ಇರಬೇಕೇ ಹೊರತು ಅದರ ಮೇಲೆಯೇ ಸವಾರಿ ಮಾಡುವಂತಿರಬಾರದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯು ವತಿಯಿಂದ ಶನಿವಾರ ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಭಾಂಗಣದಲ್ಲಿ ಹಮ್ಮಿಕೊಂಡ ಕೃತಕ ಬುದ್ಧಿಮತ್ತೆ-ವ್ಯಾಜ್ಯಗಳ ತಡೆ ಗಟ್ಟುವಿಕೆ ಮತ್ತು ಇತ್ಯರ್ಥ ಕುರಿತಾಗಿನ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಗಾಧ ಪ್ರಮಾಣದ ದತ್ತಾಂಶ-ದಾಖಲಾತಿಗಳನ್ನು ನಿರ್ವಹಿಸಲು, ಮಾದರಿಗಳನ್ನು ಗುರುತಿಸಲು, ಪ್ರಕ್ರಿಯೆಗಳ ವಿಳಂಬ ತಗ್ಗಿಸಲು ಎಐ ಸಹಾಯಕವಾಗಬೇಕು. ಆದರೆ, ಪ್ರಧಾನ ಕಾರ್ಯವಾದ ತೀರ್ಪು ಪ್ರಕಟಿಸುವಿಕೆಯನ್ನೇ ಅದು ಅತಿಕ್ರಮಿಸುವಂತಾಗಬಾರದು. ➡ಪುಟ ೨



ನ್ಯಾಯಾಂಗ ಸುಧಾರಣಾ ಆಯೋಗ ರಚಿಸಿ: ನ್ಯಾ.ನಾಗರತ್ನ

• ಪುಟ ೭

ಭಕ್ತರ ಸಾಲಲ್ಲಿ ನಿಂತು ತಿರುಮಲ ದರ್ಶನ ಪಡೆದ ಸಿಎಂ ನಾಯ್ಡು



• **ತಿರುಮಲ:** ಮುಖ್ಯಮಂತ್ರಿ ಹುದ್ದೆಯಲ್ಲಿದ್ದರೂ ನಾರಾ ಚಂದ್ರಬಾಬು ನಾಯ್ಡು ಅವರು ವಿಐಪಿ ಸೌಲಭ್ಯಗಳನ್ನು ಬಳಸದೆ ಸಾಮಾನ್ಯ ಭಕ್ತರಂತೆ ಆಗಮಿಸಿ ಕುಟುಂಬಸ್ಥರೊಂದಿಗೆ ತಿರುಮಲದ ಶ್ರೀ ವೆಂಕಟೇಶ್ವರನ ದರ್ಶನ ಪಡೆದರು. ಶಿಷ್ಟಾಚಾರದ ಪ್ರಕಾರ ನೇರವಾಗಿ ಮಹಾದ್ವಾರದ ಮೂಲಕ ಪ್ರವೇಶಿಸುವ ಅವಕಾಶ ವಿದ್ದರೂ, ವೈಕುಂಠಂ ಕ್ಯೂ ಕಾಂಪ್ಲೆಕ್ಸ್ ಮೂಲಕವೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಸರಳತೆ ಮೆರೆದಿದ್ದಾರೆ. ➡ಪುಟ ೨



ಭಯೋತ್ಪಾದನೆಯಲ್ಲಿ ಪಾಕಿಸ್ತಾನ ನಂಬರ್ 1

» ಜಾಗತಿಕ ಉಗ್ರ ಸೂಚ್ಯಂಕದಲ್ಲಿ ಪಾಕ್‌ಗೆ ಮೊದಲ ಸ್ಥಾನ ಕುಖ್ಯಾತಿ

» ವಿಶ್ವದಲ್ಲಿ ಸಾವಿನ ಪ್ರಮಾಣ ಇಳಿಕೆಯಾದರೂ ಗಡಿಯಾಚೆಗಿನ ಉಗ್ರ ಜಾಲ ಮತ್ತೆ ಸಕ್ರಿಯ

• **ಇಸ್ಲಾಮಾಬಾದ್:** ಒಂದು ಕಾಲದಲ್ಲಿ ತಾನೇ ಅನ್ನ ಹಾಕಿ, ಸಲಹಿ, ಪೊರೆದು ಪೋಷಿಸಿದ ಉಗ್ರವಾದವೇ ಪಾಕಿಸ್ತಾನಕ್ಕೆ ಮುಳ್ಳಾಗಿದೆ.

ಜಾಗತಿಕ ಭಯೋತ್ಪಾದನಾ ಸೂಚ್ಯಂಕ 2026ರಲ್ಲಿ ಪಾಕಿಸ್ತಾನವೇ ಅತ್ಯಂತ ಹೆಚ್ಚು ಉಗ್ರ ಬಾಧಿತ ದೇಶವಾಗಿ ಹೊರಹೊಮ್ಮಿದ್ದು, ತಾನು ಬೆಂಬಲಿಸಿದವರಿಂದಲೇ ಏಟು ತಿನ್ನುತ್ತಿದೆ. ಇದುವರೆಗೆ ಪಾಕಿಸ್ತಾನವನ್ನು ಉಗ್ರ ಪೋಷಕ ದೇಶವೆಂದೇ ಕರೆಯಲಾಗುತ್ತಿತ್ತು. ಇದರಿಂದ ನೆರೆ ಹೊರೆಯ ದೇಶಗಳಿಗೆ ಹೆಚ್ಚು ಹಾನಿಯಾಗುತ್ತಿತ್ತೇ ವಿನಃ ತನಗೆ ಏನೂ ಆಗುತ್ತಿರಲಿಲ್ಲ. ಆದರೆ, ಈಗ ನೆರೆಯ ದೇಶಗಳ ಭದ್ರತಾ ಸ್ಥಿತಿ, ರಾಜಕೀಯ ಗಟ್ಟಿತನದಿಂದಾಗಿ ಪಾಕ್ ಪ್ರಾಯೋಜಿತ ಉಗ್ರರು, ತಮ್ಮ ದೇಶದ ಒಳಗೇ ದಾಳಿ ನಡೆಸಿ ಜನರನ್ನು ಕೊಲ್ಲುತ್ತಿದ್ದಾರೆ. ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ), ಬಲೂಚ್‌ನ ಪ್ರತ್ಯೇಕ ಹೋರಾಟಗಾರರ ಜಾಲ ಮತ್ತು ಅಫ್ಘಾನ್ ಗಡಿ ಅಸ್ಥಿರತೆ ಪರಿಣಾಮವಾಗಿ ಪಾಕ್ ಈ ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿದೆ. ಅಂದರೆ, 2025ರಲ್ಲಿ ಪಾಕಿಸ್ತಾನದಲ್ಲಿ ಉಗ್ರ ದಾಳಿಗಳ ತೀವ್ರತೆ ಏರಿಕೆಯಾಗಿದ್ದು, ಅದು ಉಗ್ರತೆ ಯಿಂದ ಅತ್ಯಂತ ಹೆಚ್ಚು ಬಾಧಿತ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದೆ. ➡ಪುಟ ೨



ಚಾಮುಂಡೇಶ್ವರಿಗೆ ನಮೋ ಭಕ್ತಿನಮನ



• **ಹೊಸದಿಲ್ಲಿ:** ಶ್ರೀಚಾಮುಂಡೇಶ್ವರಿ ಎಂಬ ಪ್ರಸಿದ್ಧ ಕನ್ನಡ ಭಕ್ತಿಗೀತೆಯನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಚೈತ್ರ ನವರಾತ್ರಿಯ 3ನೇ ದಿನದ ಸಂದೇಶ ನೀಡಿದ್ದಾರೆ. ಇದು ಡಾ.ರಾಜಕುಮಾರ್ ಅಭಿನಯದ ಶ್ರೀ ಕೃಷ್ಣದೇವರಾಯ ಚಿತ್ರದ ಗೀತೆಯಾಗಿದ್ದು, ಮೋದಿ ಪೋಸ್ಟ್‌ಗೆ ವಿಶ್ವದೆಲ್ಲೆಡೆ ಕನ್ನಡಿಗರು, ಅಣ್ಣಾವ್ರ ಅಭಿಮಾನಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಜಗಜ್ಜನನಿ ಅಮ್ಮನವರ ಮೇಲಿನ ಅಚಲ ನಂಬಿಕೆಯು ಭಕ್ತರಲ್ಲಿ ಹೊಸ ಚೈತನ್ಯ ಮತ್ತು ಸ್ಫೂರ್ತಿ ತುಂಬಲಿದೆ ಎಂದು ಮೋದಿ ತಮ್ಮ ಚೈತ್ರ ನವರಾತ್ರಿ ಮೂರನೇ ದಿನದ ಸಂದೇಶದಲ್ಲಿ ಬರೆದುಕೊಂಡಿದ್ದಾರೆ. ➡ಪುಟ ೨



ಎಕ್ಸ್‌ನಲ್ಲಿ ಡಾ.ರಾಜ್ ಚಿತ್ರದ ಗೀತೆ ಹಂಚಿಕೊಂಡ ಪ್ರಧಾನಿ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,45,000(2,55,000) ಅಪರಂಜಿ ಚಿನ್ನ: 1,45,970(1,50,930) ಆಭರಣ ಚಿನ್ನ: 1,38,800(1,38,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ.(ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 74,532(325↑) ಎನ್‌ಎಸ್‌ಇ 23,114(112↑)

$1 = ₹93.72

ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇಂಗಿತ

ಮುಸಲ್ಮಾನರ ವಿರೋಧಿಗಳಲ್ಲ

ಬೆಂಗಳೂರು: ಬಿಜೆಪಿ ಬಗ್ಗೆ ಮುಸ್ಲಿಂರಿಗೆ ಬೇಸರ ಇರಬಹುದು, ಆದರೆ ನಾವು ಮುಸಲ್ಮಾನರ ವಿರೋಧಿಗಳಲ್ಲ, ಕಾಂಗ್ರೆಸ್ ಅವರ ತಲೆಯಲ್ಲಿ ಬಿಟ್ಟ ಹುಳಗಳು ಇನ್ನೂ ಸತ್ತಿಲ್ಲ ಎಂದ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಶನಿವಾರ ರಾಜ್ಯ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿ, ಅವರು ನಮಗೆ ಮತ ಕೊಡುವುದು ಬೇಕಿಲ್ಲ. ಅದು ಅವರಿಗೆ ಬಿಟ್ಟ ವಿಷಯ, ನಾವು ಇಡೀ ದೇಶದಲ್ಲಿ



ಅಧಿಕಾರದಲ್ಲಿದ್ದೇವೆ ಎಂದರು. ದೇಶವನ್ನಾಳುವ ಮೋದಿ ಅವರು ದೊಡ್ಡ ಸಮುದಾಯದವರಲ್ಲ, ಅವರು ಕೂಡ ಹಿಂದುಳಿದವರೇ. ಯಾವ ರೀತಿ ಸಿದ್ದರಾಮಯ್ಯನವರು ನಾನು ಅಹಿಂದ ಎಂದು ಅಂದುಕೊಳ್ಳುತ್ತಾರೋ ಅದೇ ರೀತಿ ಮೋದಿ ಅವರು ಅಹಿಂದವೇ ಎಂದು ಹೇಳಿದರು.

ಹಿಂದೆ ಕಾಂಗ್ರೆಸ್ಸಿನಲ್ಲಿ ಮಂಡ್ಯ ಹೊರತುಪಡಿಸಿ ಇತರ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡುತ್ತಿದ್ದರು. ಈಗ ಎಲ್ಲ ಕಡೆಯಲ್ಲಿ ಅವರಿಗೆ ಕಾಂಗ್ರೆಸ್ ಕೊಕ್ ಕೊಡುತ್ತ ಬಂದಿದೆ. ಮುಸಲ್ಮಾನರು ನಮ್ಮ ಗುಲಾಮರು, ಅವರಿಗೆ ಟಿಕೆಟ್ ಕೊಡದಿದ್ದರೂ ಬಿಜೆಪಿಯನ್ನು ತೋರಿಸಿದರೆ ಸಾಕು, ಬಾಲ ಮುದುರಿಕೊಂಡು ಬಂದು ನಮಗೆ ಮತ ಕೊಡುತ್ತಾರೆಂಬ ಪ್ರವೃತ್ತಿಯನ್ನು ಕಾಂಗ್ರೆಸ್ ಬೆಳೆಸಿಕೊಂಡಿದೆ ಎಂದು ಟೀಕಿಸಿದರು.

ಮುಸಲ್ಮಾನರಲ್ಲೂ ಕೆಲವು ಮುಖಂಡರಿದ್ದಾರೆ. ಅವರು ಕೊನೆವರೆಗೆ ಕೇಳಿ ನೋಡುತ್ತಾರೆ. ಆಗಲಿಲ್ಲ ಎಂದರೆ ಬಾಲ ಮುದುರಿಕೊಂಡು ಬಂದು ಬಿದ್ದಿರ್ತಾರೆ ಎಂಬ ಕಾಂಗ್ರೆಸ್ ಅನಿಸಿಕೆಯಂತೆ ಬಾಲ ಮುದುರಿಕೊಂಡು ಹೋಗಿ ಇರುತ್ತಾರೆ. ಅದೇ ಕಾರಣದಿಂದ ಕಾಂಗ್ರೆಸ್ ಮಾಡುವುದೂ ಸರಿ ಇದೆ, ಇವರು ಮಾಡುವುದೂ ಹಾಗೇ ಇದೆ ಎಂದರು. ಮಲ್ಲಿಕಾರ್ಜುನ್ ಸಚಿವರು, ಪತ್ನಿ ಸಂಸದೆ. ಮಗನಿಗೆ ಒಂದು ಅವಕಾಶ ಕೊಡಿಸಬೇಕು ಎಂದು ಕಾಂಗ್ರೆಸ್‌ಗೆ ಸವಾಲು ಹಾಕಿ ಅವರು ನಾಮಪತ್ರ ಸಲ್ಲಿಸಿದ್ದಾರೆ. ಈಗ ಕಾಂಗ್ರೆಸ್ ಅನಿವಾರ್ಯವಾಗಿ ಅವರಿಗೆ ಟಿಕೆಟ್ ಕೊಡಬೇಕಾಗಬಹುದು ಎಂದರು.

ನೃತ್ಯ ಪ್ರದರ್ಶನ



ಮಂಗಳೂರಿನ ಆಳ್ವಾಸ್ ಕಾಲೇಜಿನಲ್ಲಿ ಶನಿವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವಿದರಿಂದ ನೃತ್ಯ ಪ್ರದರ್ಶನ.

ಮಸೀದಿ ಅಕ್ರಮ ನಿರ್ಮಾಣ: 24ಕ್ಕೆ ತಿಪಟೂರು ಬಂದ್‌ಗೆ ಬಿಜೆಪಿ ಕರೆ

ತಿಪಟೂರು: ನಗರದಲ್ಲಿ ಅನ್ಯಕೋಮಿನ ನಡುವೆ ಎರಡು ಪ್ರತ್ಯೇಕ ಘಟನೆಗಳು ನಡೆದ ಹಿನ್ನೆಲೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು ಹಿಂದುಪರ ಕಾರ್ಯಕರ್ತರು ಮತ್ತು ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದ್ದಾರೆ.

ರಂಜಾನ್ ಆಚರಣೆಯ ದಿನದಂದೇ ಎರಡು ಪ್ರತ್ಯೇಕ ಘಟನೆಗಳು ನಡೆದಿದ್ದು, ನಗರದ ಮಾವಿನತೋಪಿನಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಿರುವ ಬಗ್ಗೆ ಹಾಗೂ ಜಾನುವಾರು ಅಕ್ರಮ ಸಾಗಣೆ ಮಾಡುತ್ತಿದ್ದ ಪ್ರಕರಣ ಸಂಬಂಧ ಹಿನ್ನೆಲೆಯಲ್ಲಿ ಮಾ.24ರಂದು ತಿಪಟೂರು ಬಂದ್‌ಗೆ ಕರೆ ನೀಡಲಾಗಿದೆ.

ಮಾವಿನತೋಪಿನಲ್ಲಿ ಮಸೀದಿ ನಿರ್ಮಾಣ ವಿವಾದ: ತಿಪಟೂರು ನಗರಸಭೆಯ ವಾರ್ಡ್ ನಂ.5ರ ಮಾವಿನತೋಪಿನ ಸರ್ವೆ ನಂ.366ರಲ್ಲಿ 2004ರಲ್ಲಿ ಅಂಜುಮನ್ ಶಾಲೆಗೆ ನೀಡಲಾಗಿದ್ದ ಸ್ಥಳದಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಶುಕ್ರವಾರ ರಾತ್ರಿ ಈ ವಿಚಾರವಾಗಿ ಎರಡು ಸಮುದಾಯಗಳ ನಡುವೆ ವಾಗ್ವಾದ ನಡೆದು ಉದ್ವಿಗ್ನತೆ ಉಂಟಾಯಿತು.

ಶನಿವಾರ ಬೆಳಗ್ಗೆ ಕೆಲವು ಸಂಘಟನೆಗಳ ಕಾರ್ಯಕರ್ತರು ಅಕ್ರಮ ಮಸೀದಿ ನಿರ್ಮಾಣ ನಡೆಯಬಾರದು ಎಂದು ಪಟ್ಟುಹಿಡಿದ ಹಿನ್ನೆಲೆ ಪರಿಸ್ಥಿತಿ ಮತ್ತಷ್ಟು ತೀವ್ರಗೊಂಡಿತು. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ನಗರ ಪೊಲೀಸ್ ಠಾಣೆಯ ಅಧಿಕಾರಿ ರವಿಕುಮಾರ್ ನೇತೃತ್ವದಲ್ಲಿ ಸ್ಥಳಕ್ಕೆ ಪೊಲೀಸರು ತೆರಳಿ ಶಾಂತಿ ಕಾಪಾಡಿದರು.

ಕಸಾಯಿಖಾನೆಗೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದರೆಂದು ಆರೋಪಿಸಿ ಒಂದು ವಾಹನವನ್ನು ಬಜರಂಗದಳದ ಕಾರ್ಯಕರ್ತರು ತಡೆದು ತಪಾಸಣೆ ನಡೆಸಿದ ವೇಳೆ ಬಜರಂಗದಳದ ಕಾರ್ಯಕರ್ತರ ಮೇಲೆ ಮುಸ್ಲಿಂ ಗುಂಪೊಂದು ಧಾವಿಸಿ ಹಲ್ಲೆ ನಡೆಸಿದ ಪರಿಣಾಮ ಕೆಲವರು ಗಾಯಗೊಂಡಿದ್ದು ಗಾಯಾಳುಗಳನ್ನು ತಿಪಟೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ಮಾ.25ರಂದು ವಿಧಾನಸೌಧದ ಮುಖ್ಯದ್ವಾರ ಉದ್ಘಾಟನೆ

ಮಂಗಳೂರು: ವಿಧಾನಸೌಧದ ಮುಖ್ಯ ದ್ವಾರವನ್ನು ಮಾ.25 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಈ ಪ್ರವೇಶ ದ್ವಾರವು ಕರ್ನಾಟಕ ಶೈಲಿಯ ಅತ್ಯಂತ ಸುಂದರವಾದ ಕೆತ್ತನೆಗಳನ್ನು ಹೊಂದಿದ್ದು, ಅರಣ್ಯ ಅಭಿವೃದ್ಧಿ ನಿಗಮ ಮತ್ತು ಲೋಕೋಪಯೋಗಿ ಇಲಾಖೆ ಮೂಲಕ ಅಭಿವೃದ್ಧಿಪಡಿಸಲಾಗಿದೆ. ವಿಧಾನಸೌಧದ ಭವ್ಯ ಮೆಟ್ಟಿಲುಗಳ ಬಳಿ ಮತ್ತು ಹೈಕೋರ್ಟ್ ಪೀಠ ಕಡೆಯಿಂದ ಪ್ರವೇಶ ದ್ವಾರಗಳನ್ನು ಅಭಿವೃದ್ಧಿಪಡಿಸಲು ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ವಿಧಾನಸೌಧಕ್ಕೆ ಭಾಗಶಃ ವಿದ್ಯುತ್ ಪೂರೈಸುವ ಸೌರ ಫಲಕಗಳನ್ನೂ ಮಾ. 25 ರಂದು ಉದ್ಘಾಟಿಸಲಾಗುವುದು ಎಂದು ರಾಜ್ಯ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮಂಗಳೂರಿನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿಧಾನಸೌಧದ ಆವರಣದಲ್ಲಿರುವ ಬೀದಿ ನಾಯಿಗಳಿಗೆ ಶ್ವಾನ ಆಶ್ರಯ ತಾಣ ನಿರ್ಮಿಸುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ನಮ್ಮ ಅಭಿಪ್ರಾಯ ಮತ್ತು ಯೋಜನೆಗಳನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದೇವೆ. ಈ ಬಗ್ಗೆ ಸರಕಾರವೇ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಹೇಳಿದರು.

ಅಮಾನತುಗೊಂಡ ಚಾಲಕನಿಂದ ಬಸ್ ಕಳ್ಳತನ!

ಯಾದಗಿರಿ: ಕರ್ತವ್ಯ ಲೋಪದಿಂದ ನೌಕರಿಯಿಂದ ವಜಾಗೊಂಡಿರುವ ಕೆಕೆಆರ್‌ಟಿಸಿ ಚಾಲಕ ಕಂ ನಿರ್ವಾಹಕನೊಬ್ಬ ಬಸ್ ಅನ್ನೆ ಕಳ್ಳತನ ಮಾಡಿದ ಅಪರೂಪದ ಘಟನೆ ಯಾದಗಿರಿ ತಾಲೂಕಿನ ಸೈದಾಪುರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಮಾ.19ರಂದು ಈ ಘಟನೆ ನಡೆದಿದೆ. ಸೇವೆಯಿಂದ ವಜಾಗೊಂಡಿರುವ ಚಾಲಕ ಕಂ ನಿರ್ವಾಹಕನಾಗಿದ್ದ ಮಹಿಪಾಲರೆಡ್ಡಿ ಎಂಬುವವನೇ ಈ ಕೃತ್ಯ ಎಸಗಿದ್ದಾನೆ. ಸೈದಾಪುರ ಬಸ್ ನಿಲ್ದಾಣದಿಂದ ಬಸ್ ಕಳ್ಳತನ ಮಾಡಿ ತೆಗೆದುಕೊಂಡು ಹೋಗುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಕ್ಕೆ ಸೇರಿದ ಬಸ್ ಇದಾಗಿದೆ. ಈ ಹಿಂದೆ ಕೂಡಾ ಒಂದೆರಡು ಸಲ ಕರ್ತವ್ಯ ಲೋಪ ಹಿನ್ನಲೆ ಅಮಾನತು ಮಾಡಲಾಗಿತ್ತು. ತನ್ನ ಊರಾದ ರಾಚನಳ್ಳಿಗೆ ಹೋಗಲು ಯಾವುದೇ ವಾಹನಗಳು ಇಲ್ಲದಕ್ಕೆ, ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ ಬಸ್ ಚಾಲನೆ ಮಾಡಿಕೊಂಡು ಕದ್ದೋಯಿದ್ದಾನೆ. ಬಸ್ ಕಳ್ಳತನ ಮಾಡಿ ಊರಿನ ದೇವಸ್ಥಾನ ಮುಂಭಾಗದಲ್ಲಿ ನಿಲ್ಲಿಸಲಾಗಿದೆ. ಸೈದಾಪುರ ಪೊಲೀಸ್ ಠಾಣೆಯಲ್ಲಿ ಇತನ ವಿರುದ್ಧ ಕೇಸ್ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆತ್ಮಹತ್ಯೆ

ಪಾವಗಡ: ಸಮಾಜಕಲ್ಯಾಣಇಲಾಖೆಯತಾಲೂಕು ಸಹಾಯ ನಿರ್ದೇಶಕ ಮಲ್ಲಿಕಾರ್ಜುನ್(60) ಕಚೇರಿಯಲ್ಲೇ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವಘಟನೆ ಪಾವಗಡ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಮೂಲತಃ ಪಾವಗಡತಾಲೂಕಿನ ಗುಂಡಾರ್ಲಹಳ್ಳಿ ಗ್ರಾಮಕ್ಕೆ ಸೇರಿದ ಮಲ್ಲಿಕಾರ್ಜುನ್, ಪಟ್ಟಣದ ಸಮಾಜಕಲ್ಯಾಣಇಲಾಖೆಯಲ್ಲಿ ಕಳೆದ 3 ವರ್ಷಗಳಿಂದ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ತಿಂಗಳ ಮಾ.31ಕ್ಕೆ ನಿವೃತ್ತರಾಗಲಿದ್ದರು, ಕಚೇರಿಯಲ್ಲಿ ಆತ್ಮಹತ್ಯೆಗೂ ಮುನ್ನ ನನ್ನ ಸಾವಿಗೆ ಮೇಲಾಧಿಕಾರಿ ಜೆಂಟಿ ನಿರ್ದೇಶಕ ಕೃಷ್ಣಪ್ಪನ ಕಿರುಕುಳವೇ ಕಾರಣ ಎಂದು ವಿಡಿಯೋ ಮಾಡಿ ಸಿಬ್ಬಂದಿಗೆ ಶೇರ್ ಮಾಡಿದ್ದಾರೆ. ಘಟನೆ ತಿಳಿದು ಪಾವಗಡ ಪೊಲೀಸರು ಹಾಗೂ ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಠಾಣೆಯಲ್ಲಿ ದೂರು ದಾಖಲಾಗಿದೆ.

ನೀರಾನೆ ದಾಳಿಯಿಂದ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಸಾವಿನ ಪ್ರಕರಣ

ಕುಟುಂಬಸ್ಥರ ಅನುಮಾನ

ಶಿವಮೊಗ್ಗ: ಇಲ್ಲಿನ ಸಿಂಹಧಾಮದಲ್ಲಿನ ನೀರಾನೆ ದಾಳಿಗೆ ಒಳಗಾಗಿ ಮೃತಪಟ್ಟ ಡಾ. ಸಮೀಕ್ಷಾ ರೆಡ್ಡಿ ಅವರ ಸಾವಿನ ಪ್ರಕರಣ ಜಟಿಲವಾಗುತ್ತಿದ್ದು, ತಡ ರಾತ್ರಿ 11.30ರ ಸುಮಾರಿಗೆ ಅವರನ್ನು ಯಾರಾದರೂ ಕಳಿಸಿದ್ದರೆ? ಅಥವಾ ಸ್ವಯಂಪ್ರೇರಿತವಾಗಿ ಹೋಗಿದ್ದರೆ? ಎಂಬ ಅನುಮಾನ ಇಲಾಖೆ ವಲಯದಲ್ಲಿಯೇ ವ್ಯಕ್ತವಾಗಿದೆ.



ಯಾವುದೇ ವನ್ಯ ಪ್ರಾಣಿಗಳಿಗೆ ಚಿಕಿತ್ಸೆ ನೀಡಲು ತೆರಳುವಾಗ ಒಬ್ಬರು ಇಬ್ಬರು ಹೋಗುವಂತಿಲ್ಲ. ಆ ಪ್ರಾಣಿಗೆ ಸಂಬಂಧಿಸಿದ ಕೇರ್‌ಟೇಕರ್‌ನಿಂದ ಹಿಡಿದು, ಸಂಬಂಧಿಸಿದ ಫಾರೆಸ್ಟರ್, ವೈದ್ಯರ ಸಹಾಯಕರು, ಅರವಳಿಗೆ ತಜ್ಞರು, ಅಟೆಂಡರ್ ಇರಬೇಕು. ಆದರೆ ಇಲ್ಲಿ ಇವರ ಯಾರ ಪಾತ್ರವೂ ಇಲ್ಲ.

ನೀರಾನೆ (ಹಿಪ್ಪೋಪಟಾಮಸ್) ದೈತ್ಯ ಕಾಯದ ಪ್ರಾಣಿ. ಕಾಡುಕೋಣ, ಆನೆ, ಘೇಂಡಾ ಮೃಗಗಳ ರೀತಿಯೇ ಇರುವ ಹಾಗೂ ಸ್ವಭಾವದಲ್ಲೂ ಅದೇ ರೀತಿ ಇರುವ ಪ್ರಾಣಿ. ಈ ಪ್ರಾಣಿ ಇಲ್ಲಿಯ ಪರಿಸರದ್ದೇ ಅಲ್ಲ. ಆದರೆ ಮನುಷ್ಯ ಪಳಗಿಸಿದ ಮಾತ್ರಕ್ಕೆ ಈ ವಾತಾವರಣಕ್ಕೆ ಹೊಂದಿಕೊಂಡಿರುವ ಪ್ರಾಣಿ. ಅದರಲ್ಲೂ ಟ್ರೈನಿ ವೈದ್ಯಗೆ ಇದರ ಸ್ವಭಾವ ಗೊತ್ತಿರಲಿಕ್ಕಿಲ್ಲ. ಪ್ರತಿದಿನ ಸಂಜೆ 5 ಗಂಟೆ ಮೇಲೆ ಇಡೀ ಸಫಾರಿ ಬಂದ್ ಆಗುತ್ತದೆ. ಪ್ರವಾಸಿಗರು ಯಾರೂ ಇರುವುದಿಲ್ಲ. ಸಿಬ್ಬಂದಿ ಮಾತ್ರ ಇರುತ್ತಾರೆ. ಇರುವ ಸಿಬ್ಬಂದಿಗಳೂ ಕೂಡ ರಾತ್ರಿ ಗಸ್ತು ಮಾಡುವುದು, ಪ್ರಾಣಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕಿದೆ. ಅದರಲ್ಲೂ ಗರ್ಭಾವಸ್ಥೆಯಲ್ಲಿರುವ ಪ್ರಾಣಿಗಳ ಮೇಲೆ ಹೆಚ್ಚಿನ ನಿಗಾ ಇಡಲಾಗುತ್ತದೆ.

ಹಂಸಿಣಿಯ (ನೀರಾನೆ) ಕೇರ್ ಟೇಕರ್ ಪವನ್ ಸಂಜೆ 6 ಗಂಟೆಗೆ ಬೀಗ ಹಾಕಿಕೊಂಡು ತಾನು ಹೋಗಿರುವುದಾಗಿ ಈಗಾಗಲೇ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ತರಬೇತಿ ವೈದ್ಯೆ ಸಮೀಕ್ಷಾ ಹೋಗಿರುವುದು ತಮ್ಮ ಗಮನಕ್ಕೆ ಬಂದಿಲ್ಲ. ತಮ್ಮ ಫೋನ್ ಸ್ವಿಚ್ ಆಫ್ ಆಗಿತ್ತು ಎಂದು ಹೇಳಿದ್ದಾರೆ.

ಕೇರ್ ಟೇಕರ್ ಸಂಬಂಧಿಸಿದ ಪ್ರಾಣಿಯ ಕೇಜ್‌ನ ಲಾಕ್ ಓಪನ್ ಮಾಡಿ ಕೊಟ್ಟ ಬಳಿಕವೇ ಚಿಕಿತ್ಸೆ ನೀಡುವುದು ನಿಯಮ. ಇದಕ್ಕೆ ಬೇಕಾದ ಮುಂಜಾಗ್ರತೆ ತೆಗೆದುಕೊಳ್ಳಬೇಕಿತ್ತು. ಯಾವುದೇ ವನ್ಯ ಪ್ರಾಣಿ ಮರಿ ಹಾಕುವ ಸಮಯದಲ್ಲಿ ನಿಗಾ ಇಡಬಹುದೇ ವಿನಃ ಚಿಕಿತ್ಸೆ ನೀಡಿ ಸುಖ ಪ್ರಸವ ಮಾಡಿಸುವುದು ವನ್ಯ ಪ್ರಾಣಿಗಳ ವಿಚಾರದಲ್ಲಿ ಕಷ್ಟವೆನ್ನಲಾಗುತ್ತದೆ. ಆದರೂ ಸಮೀಕ್ಷಾ ಉಷ್ಣತೆ ಚೆಕ್ ಮಾಡಲು ಮುಂದಾಗಿದ್ದರು ಎನ್ನಲಾಗಿದೆ.



ಅನುಮಾನಗಳಿವೆ – ತನಿಖೆಯಾಗಲಿ

ವೈದ್ಯೆಯ ಸಂಬಂಧಿಕರು ಕೂಡ ಈ ಸಂಬಂಧ ಮಾಧ್ಯಮಗಳಲ್ಲಿ ಮಾತನಾಡಿದ್ದು, ಸಮೀಕ್ಷಾ ಮೃತಪಟ್ಟಿರುವ ಕಾರಣ ವಿವಾದ ಸೃಷ್ಟಿಸಲಾಗುತ್ತಿದೆ. ಆಕೆ ಈಗ ಇಲ್ಲ ಎಂಬ ಕಾರಣದಿಂದ ಈಗ ಏನೇನೋ ಹೇಳುತ್ತಿದ್ದಾರೆ. ಚಿಕಿತ್ಸೆ ನೀಡಲು ಕಳಿಸಿದವರು ಈಗ ಬಾಯಿ ಬಿಡುತ್ತಿಲ್ಲ. ಹಾಗಿದ್ದರೆ ಕೇಜ್‌ನ ಬೀಗ ತೆಗೆದವರಾರು? ಬೀಗ ತೆಗೆಯಲು ಅನುಮತಿ ನೀಡಿದವರಾರು? ಇದೆಲ್ಲವೂ ಪ್ರಶ್ನಾರ್ಹವಾಗಿದೆ. ಈ ಸಂಬಂಧ ಸೂಕ್ತ ತನಿಖೆ ನಡೆಯಬೇಕೆಂದು ಆಗ್ರಹಿಸಿದ್ದಾರೆ.

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರ ಭೇಟಿ: ತನಿಖೆ

ಶಿವಮೊಗ್ಗ: ಘಟನೆಯ ಹಿನ್ನೆಲೆಯಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ತ್ಯಾವರೆಕೊಪ್ಪ ಸಿಂಹಧಾಮಕ್ಕೆ ಶನಿವಾರ ಭೇಟಿ ನೀಡಿ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ನಂತರ ಮಾತನಾಡಿ, ತರಬೇತಿ ಪಶುವೈದ್ಯೆ ಡಾ. ಸಮೀಕ್ಷಾ ರಾತ್ರಿ ಏಕಾಂಗಿಯಾಗಿ ಮೃಗಾಲಯದ ನೀರಾನೆ ಆರೋಗ್ಯ ತಪಾಸಣೆಗೆ ಮುಂದಾಗಿದ್ದು ಏಕೆ? ಆಕೆಗೆ ಯಾರು ಅಂತಹ ಆದೇಶ ನೀಡಿದ್ದರೆಂಬುದನ್ನು ಪತ್ತೆ ಮಾಡಲು ಸೂಕ್ತ ತನಿಖೆ ನಡೆಸುವುದಾಗಿ ಹೇಳಿದರು. ಸರ್ಕಾರ ಏನೇ ಪರಿಹಾರ ನೀಡಿದರೂ ಪಾಲಕರ ಶೋಕ ತಣಿಸಲು ಸಾಧ್ಯವಿಲ್ಲ. ಯುವ ವೈದ್ಯೆಯ ಸಾವು ದುರದೃಷ್ಟಕರ. ಅರಣ್ಯ ಸಚಿವರು ಇಲಾಖಾ ತನಿಖೆಗೆ ಸೂಚಿಸಿದ್ದಾರೆ. ಪೊಲೀಸ್ ತನಿಖೆಯೂ ನಡೆಯುತ್ತಿದೆ. ನಿಜಾಂಶ ತಿಳಿಯಲಿದೆ. ಮಾರ್ಗ ಸೂಚಿ ಉಲ್ಲಂಘಿಸಿದವರಿಗೆ ಶಿಕ್ಷೆ ನಿಶ್ಚಿತ ಎಂದರು. ಇಬ್ಬರು ಸಿಬ್ಬಂದಿಯೊಂದಿಗೆ ಡಾ. ಸಮೀಕ್ಷಾ ಪರೀಕ್ಷೆಗೆ ತೆರಳಿದ್ದರು ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದರು. ಸಿಸಿ ಕ್ಯಾಮರವನ್ನು ಪೊಲೀಸರು ಕೊಂಡೊಯ್ದಿದ್ದಾರೆ. ಮಾರ್ಗಸೂಚಿ ಉಲ್ಲಂಘನೆಯಾಗಿದೆಯೇ? ಎಂಬುದನ್ನು ಗಮನಿಸಲಾಗುವುದು ಎಂದು ಹೇಳಿದ್ದ.

ಸ್ವಯಂಪ್ರೇರಿತವಾಗಿ ಬಿಡುಗಡೆ ಇಲ್ಲ: ಹೈ

ಬೆಂಗಳೂರು: ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಯು 20 ವರ್ಷ ಜೈಲು ಶಿಕ್ಷೆ ಪೂರೈಸಿದ ಬಳಿಕ ಸ್ವಯಂಪ್ರೇರಿತವಾಗಿ ಬಿಡುಗಡೆ ಮಾಡುವ ಯಾವುದೇ ತೆರನಾದ ಕಾನೂನಾತ್ಮಕ ಹಕ್ಕಿಲ್ಲ ಎಂದು ಕರ್ನಾಟಕ ಹೈಕೋರ್ಟ್ ತೀರ್ಪಿತ್ತಿದೆ.



ಮೈಸೂರು ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ನಗರದ ಕೋರಮಂಗಲ ಮೂಲದ ಕಿಶನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಕ್ಷಮಾದಾನ ಅಥವಾ ಅವಧಿಗೂ ಮುನ್ನ ಅಪರಾಧಿಯನ್ನು ಬಿಡುಗಡೆ ಮಾಡುವ ಪ್ರಶ್ನೆಯು ಶಾಸನಬದ್ಧ ನಿಬಂಧನೆ ಮತ್ತು ನೀತಿಯ ಅಡಿ ಸೂಕ್ತ ಸರ್ಕಾರಕ್ಕೆ ಮಾತ್ರ ಇದೆ ಎಂದು ನ್ಯಾಯಾಲಯ ತಿಳಿಸಿದೆ.

ಅಪರಾಧಿಯು 20 ವರ್ಷ ಶಿಕ್ಷೆ ಪೂರೈಸಿದ ಬಳಿಕ ಜೀವಾವಧಿ ಶಿಕ್ಷೆಗೆ ಗುರಿಯಾದವನನ್ನು ಬಿಡುಗಡೆ ಮಾಡಬಹುದಾಗಿ ಐಪಿಸಿ ಸೆಕ್ಷನ್ 57 ಹೇಳುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಕಾನೂನಿನ ಅಡಿ ಪರಿವರ್ತನೆ, ಕ್ಷಮಾದಾನ ಸಿಗದ ಹೊರತು ಜೈಲು ಶಿಕ್ಷೆಯನ್ನು ಸೀಮಿತಗೊಳಿಸುವ ನಿರ್ದಿಷ್ಟ ನ್ಯಾಯಾಂಗ ನಿರ್ದೇಶನದ ಗೈರಿನ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ವಿಧಿಸಿರುವ ಜೀವಾವಧಿಶಿಕ್ಷೆಯನ್ನು ಬದುಕಿರುವವರೆಗಿನ ಶಿಕ್ಷೆ ಎಂದು ಪರಿಗಣಿಸಬೇಕಾಗುತ್ತದೆ ಎಂದೂ ಪೀಠ ಹೇಳಿದೆ.

ಅಪರಾಧಿ ಕಿಶನ್ ಜೈಲಿನಲ್ಲಿ 20 ವರ್ಷ ಕಳೆದಿರುವುದರಿಂದ ಸರ್ಕಾರಕ್ಕೆ ಕ್ಷಮಾದಾನ ಕೋರಿಕೆ ಸಲ್ಲಿಸಲು ಅರ್ಹರಾಗಿದ್ದಾರೆ. ಸರ್ಕಾರ ಕ್ಷಮಾದಾನ ನೀತಿ ಮತ್ತು ಸೂಕ್ತ ಶಾಸನಬದ್ಧ ನಿಬಂಧನೆಗಳ ಅಡಿ ಕ್ಷಮಾದಾನಕೋರಬಹುದಾಗಿದೆ. ಇಂತಹ ಅರ್ಜಿ ಸಲ್ಲಿಸಿದರೆ ಶಿಕ್ಷೆ ಪರಿಶೀಲನಾ ಮಂಡಳಿಯು ಪ್ರಕರಣದ ಆಧಾರದ ಮೇಲೆ ಅಪರಾಧಿಯು ಶಿಕ್ಷೆ ಅನುಭವಿಸಿರುವ ಅವಧಿ, ಅರ್ಜಿದಾರನ ನಡತೆ, ಅಪರಾಧದ ಸ್ವರೂಪ, ಸಂತ್ರಸ್ತರ ಹಿತಾಸಕ್ತಿ, ಅನ್ವಯಿಸುವ ನೀತಿಯನ್ನು ಪರಿಗಣಿಸಿ ನಿರ್ಧರಿಸಬಹುದು ಎಂದು ಹೇಳಿದೆ.

ಪ್ರಕರಣದ ಹಿನ್ನೆಲೆ

ಇಬ್ಬರು ಮಕ್ಕಳನ್ನು ಅಪಹರಿಸಿ ಕೊಲೆ ಮಾಡಿದ ಪ್ರಕರಣದಲ್ಲಿ ಅರ್ಜಿದಾರ ಕಿಶನ್ ಸೇರಿ ಮೂವರಿಗೆ ಬೆಂಗಳೂರಿನ ಸತ್ರ ನ್ಯಾಯಾಲಯವು ಮರಣದಂಡನೆ ವಿಧಿಸಿತ್ತು. ಈ ಪ್ರಕರಣದ ಮೇಲ್ಮನವಿ ಪ್ರಕ್ರಿಯೆಯು 2013 ರಲ್ಲಿ ಪೂರ್ಣಗೊಂಡಿದ್ದು, ಹೈಕೋರ್ಟ್ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿತ್ತು. ಐಪಿಸಿ ಸೆಕ್ಷನ್ 57ರ ಅಡಿ 14 ವರ್ಷ ಜೈಲು ಶಿಕ್ಷೆ ಪೂರ್ಣಗೊಂಡ ಬಳಿಕ ಶಿಕ್ಷೆಯ ಅವಧಿಯಲ್ಲಿ ಯಾವುದೇ ಕಡಿತ ಇರುವುದಿಲ್ಲ ಎಂಬ ಸ್ಪಷ್ಟ ನಿರ್ದೇಶನವನ್ನೂ ನ್ಯಾಯಾಲಯ ನೀಡಿತ್ತು. 2025 ರ ಜ. 15 ರಂದು 20 ವರ್ಷ ಶಿಕ್ಷೆ ಪೂರೈಸಿದ್ದ ಕಿಶನ್, ಐಪಿಸಿ ಸೆಕ್ಷನ್ 57ರ ಅಡಿ ಕ್ಷಮಾದಾನಕ್ಕೆ ಅರ್ಹವಾಗಿರುವುದರಿಂದ ಬಿಡುಗಡೆ ಮಾಡುವಂತೆ ಕೋರಿದ್ದರು.

ಶ್ರೀನಿವಾಸ ದಾಸಕರಿಯಪ್ಪರಿಂದ 5.76 ಕೋಟಿ ರೂ. ಚರಾಸ್ತಿ ಘೋಷಣೆ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ ದಾಸಕರಿಯಪ್ಪ ಒಟ್ಟು 5.76 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸ್ಥಿರ ಮತ್ತು ಚರಾಸ್ತಿ ಘೋಷಿಸಿಕೊಂಡಿದ್ದಾರೆ.



ಚುನಾವಣಾಧಿಕಾರಿಗೆ ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಅವರು ತಮ್ಮ ಹೆಸರಿನಲ್ಲಿ 34.79 ಲಕ್ಷ ರೂ. ಮೌಲ್ಯದ ಚರಾಸ್ತಿ ಹಾಗೂ 5.41 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಇರುವುದಾಗಿ ಘೋಷಿಸಿದ್ದಾರೆ. ಸ್ಥಿರಾಸ್ತಿಯಲ್ಲಿ 1.13 ಕೋಟಿ ರೂ. ಮೌಲ್ಯದ ಪಿತ್ರಾರ್ಜಿತ ಕೃಷಿ ಭೂಮಿ ಹಾಗೂ 4.27 ಕೋಟಿ ರೂ. ಮೌಲ್ಯದ ಸ್ವಯಾರ್ಜಿತ ಆಸ್ತಿಗಳು ಸೇರಿವೆ. ಕೈಯಲ್ಲಿ 3.60 ಲಕ್ಷ ರೂ. ನಗದು ಇದ್ದು, ತುಂಬಿಗೆರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 2.96 ಲಕ್ಷ ರೂ. ಸಾಲ ಇರುವುದಾಗಿ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಸಮರ್ಥ್ 4.25 ಕೋಟಿ ರೂ. ಶ್ರೀಮಂತ ಪಕ್ಷೇತರ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸಮರ್ಥ್ ಶಾಮನೂರು 4.25 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿ ಹೊಂದಿರುವುದಾಗಿ ಘೋಷಿಸಿಕೊಂಡಿದ್ದಾರೆ.

27 ವರ್ಷದ ಯುವ ಉದ್ಯಮಿ ಸಮರ್ಥ್‌ಗೆ 2.17 ಕೋಟಿ ಮೌಲ್ಯದ ಚರ ಆಸ್ತಿ ಹಾಗೂ 2.08 ಕೋಟಿ ಮೌಲ್ಯದ ಕೃಷಿ ಭೂಮಿ ಸೇರಿದಂತೆ ಸ್ಥಿರ ಆಸ್ತಿ ಇದೆ. ಸಮರ್ಥ್ ಹೆಸರಿನಲ್ಲಿ 8.35 ಲಕ್ಷ ರೂ. ನಗದು ಹಣವಿದ್ದು, ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹೂಡಿಕೆ ಹಾಗೂ 14.45 ಲಕ್ಷ ಮೌಲ್ಯದ ಚಿನ್ನಾಭರಣ ಹೊಂದಿದ್ದಾರೆ.

ದಾವಣಗೆರೆ ತಾಲೂಕಿನ ಆನೆಕೊಂಡ ಮತ್ತು ಬೇತೂರು ಗ್ರಾಮಗಳಲ್ಲಿ ಒಟ್ಟು 6 ಎಕರೆ 14 ಗುಂಟೆ ಕೃಷಿ ಭೂಮಿ ಹೊಂದಿದ್ದಾರೆ. ಆಸ್ತಿಯ ಜೊತೆಗೆ ಸಮರ್ಥ್ ಹೆಸರಿನಲ್ಲಿ ಒಟ್ಟು 3.52 ಕೋಟಿ ಮೊತ್ತದ ಸಾಲ ಹಾಗೂ ಹೊಣೆಗಾರಿಕೆಗಳಿವೆ ಎಂದು ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ. 2024-25ನೇಸಾಲಿನಆದಾಯತೆರಿಗೆ ರಿಟರ್ನ್ಸ್‌ನಲ್ಲಿ ಅವರು 96.05 ಲಕ್ಷ ರೂ. ವಾರ್ಷಿಕ ಆದಾಯ ತೋರಿಸಿದ್ದಾರೆ.

ಬಸ್ ಟಿಕೆಟ್ ದರ ಹೆಚ್ಚಿಸಲ್ಲ: ರಾಮಲಿಂಗಾರೆಡ್ಡಿ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದ್ದರೂ ರಾಜ್ಯದಲ್ಲಿ ಬಸ್ ಟಿಕೆಟ್ ದರವನ್ನು ಹೆಚ್ಚಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಧ್ಯಪ್ರಾಚ್ಯ ಯುದ್ಧದ ಪರಿಣಾಮವಾಗಿ ಡೀಸೆಲ್ ದರಗಳು ಏರಿಕೆಯಾಗಿದ್ದು, ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಡೀಸೆಲ್ ಖರೀದಿ ಮಾಡುತ್ತಿರುವುದರಿಂದ ವೆಚ್ಚದ ಒತ್ತಡ ಹೆಚ್ಚಾಗಿದೆ. ಆದರೂ, ಈ ಭಾರವನ್ನು ಪ್ರಯಾಣಿಕರ ಮೇಲೆ ಹಾಕುವ ಉದ್ದೇಶ ಇಲ್ಲ ಎಂದರು. ಯುದ್ಧದ ಪರಿಣಾಮವಾಗಿ ಇಂಧನ ದರಗಳಲ್ಲಿ ಏರಿಕೆ ಆಗಿದೆ. ಡೀಸೆಲ್ ದರ ಏರಿಕೆಯಿಂದ ಖರ್ಚು ಹೆಚ್ಚಾಗಿದೆ. ಆದರೆ ಯಾವುದೇ ಕಾರಣಕ್ಕೂ ಬಸ್ ಟಿಕೆಟ್ ದರ ಏರಿಕೆ ಮಾಡುವುದಿಲ್ಲ. ಯುದ್ಧ ನಿಂತರೆ ಬೆಲೆಗಳು ತಾನಾಗಿಯೇ ಕಡಿಮೆಯಾಗುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೋರಮಂಗಲದಲ್ಲಿ ಬಯೋ ಗ್ಯಾಸ್: ಕೋರಮಂಗಲದ ನಿವಾಸಿಗಳಿಂದ ಸಂಗ್ರಹಿಸಿದ ಸಂಪೂರ್ಣ ಹಸಿ ಕಸವನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ, ಬೆಂಗಳೂರಿನ ಮೊದಲ ಬಯೋ ಗ್ಯಾಸ್ ಪ್ಲಾಂಟ್ (2018 ರಲ್ಲಿ ಪ್ರಾರಂಭವಾದ 8 ಟನ್ ಸಾಮರ್ಥ್ಯದ ಘಟಕ) ಇದರೊಂದಿಗೆ, ಹೆಚ್ಚುವರಿಯಾಗಿ ನಿರ್ಮಿಸಲಾದ ದಿನಕ್ಕೆ 5 ಟನ್ ಸಾಮರ್ಥ್ಯದ ಜೈವಿಕ ಅನಿಲ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಕೋರಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಮೊಟ್ಟಮೊದಲ ಬಾರಿಗೆ ಬಯೋ ಗ್ಯಾಸ್ ಆರಂಭವಾಗಿದ್ದಕ್ಕೆ ಹಾಗೂ ಅದರ ಲಾಭವನ್ನು ಹತ್ತಿರದ ಹೋಟೇಲ್‌ಗಳು ಪಡೆದುಕೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ. ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲೂ ಬಯೋಗ್ಯಾಸ್ ಉತ್ಪದನಾ ಘಟಕ ಶುರುಮಾಡಿದರೆ, ಗ್ಯಾಸ್ ಸಮಸ್ಯೆ ಜತೆ ಕಸದ ಸಮಸ್ಯೆ ಕೂಡ ಮುಕ್ತಿ ಸಿಗಲಿದೆ ಎಂದರು.



ಡಾ.ಸಮೀಕ್ಷಾ ಅವರ ಆತ್ಮಕ್ಕೆ ಶಾಂತಿ ಸಿಗಲಿ

ಮೂಕಪ್ರಾಣಿಗಳ ನೋವಿಗೆ ಸ್ಪಂದಿಸಲೆಂದೇ ಪಶುವೈದ್ಯಕೀಯ ವೃತ್ತಿ ಆಯ್ದುಕೊಂಡಿದ್ದ ಆನೇಕಲ್ಲ ಹೆಮ್ಮೆಯ ಪುತ್ರಿ ಡಾ.ಸಮೀಕ್ಷಾ ರೆಡ್ಡಿ ಅವರ ನಿಧನದ ಸುದ್ದಿ ತಿಳಿದು ಅತೀವ ದುಃಖವಾಯಿತು. ಗರ್ಭಿಣಿ ನೀರಾನೆಯ ಜೀವ ಉಳಿಸಲು ಹೋದಾಗ ಸಂಭವಿಸಿದ ದುರಂತ ನಿಜಕ್ಕೂ ವಿಧಿಯ ಕ್ರೂರ ಆಟವಾಗಿದೆ. ತನ್ನ 27ನೇ ವಯಸ್ಸಿನಲ್ಲೇ ಸಮಾಜಕ್ಕೆ ಮಾದರಿಯಾಗಿದ್ದ ಈ ಚೇತನ ಅಕಾಲಿಕವಾಗಿ ಮೃತಪಟ್ಟಿರುವುದು. ಸಕಲವಾರ ಗ್ರಾಮಕ್ಕೆ ಮತ್ತು ಇಡೀ ನಮ್ಮ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದ್ದು, ಡಾ.ಸಮೀಕ್ಷಾ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಎಂದು ಹೇಳಿದ್ದಾರೆ.

ನಕಲಿ ಸಿಬಿಐ ಡೈರೆಕ್ಟರ್‌ನಿಂದ ಬಹುಕೋಟಿ ವಂಚನೆ ಪ್ರಕರಣ

ವೃದ್ಧನಿಗೆ ₹15.45 ಕೋಟಿ ಪಂಗನಾಮ

ಬೆಳಗಾವಿ: ಸಿಬಿಐ ಡೈರೆಕ್ಟರ್ ಹೆಸರಿನಲ್ಲಿ ನಗರದ ವೃದ್ಧ ನಾಗರಿಕರೊಬ್ಬರಿಗೆ ಕರೆ ಮಾಡಿದ ಆನ್‌ಲೈನ್ ಅಪರಾಧಿಗಳು ಬರೋಬ್ಬರಿ 15.45ಕೋಟಿ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ಲಪಟಾಯಿಸಿರುವ ಮಾಹಿತಿ ತಡವಾಗಿ ಹೊರಬಿದ್ದಿದೆ.

ಕೇಂದ್ರ ತನಿಖಾ ದಳದ ನಿರ್ದೇಶಕ ಕೆ.ಸುಬ್ರಹ್ಮಣ್ಯಂ ಎಂದು ಹೇಳಿಕೊಂಡು ನಗರದ ಹಿರಿಯ ನಾಗರಿಕರಾದ ಇಲ್ಲಿನ ಟಿಳಕವಾಡಿ ಅಗರಕರ ರಸ್ತೆಯ ಅಜಿತ ಗೋಪಾಲಕೃಷ್ಣ ಸರಾಫ್ (81) ಎಂಬುವವರಿಗೆ ಕಳೆದ ಫೆ.5ರಂದು ಕರೆ ಮಾಡಿ ಬ್ಲ್ಯಾಕ್ ಮೇಲ್ ಮಾಡಿ ಹೆದರಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಫೆಬ್ರವರಿ 5ರ ಬೆಳಗ್ಗೆ ಸಿಬಿಐ ಕಚೇರಿಯಿಂದ ಫೋನ್ ಮಾಡುತ್ತಿರುವುದಾಗಿ ವಂಚನೆಗೊಳಗಾದ ಅಜಿತ ಗೋಪಾಲಕೃಷ್ಣ ಸರಾಫ್ ಎಂಬುವವರ ಮೊಬೈಲ್‌ಗೆ ಕರೆ ಮಾಡಿ ನಿಮ್ಮ ಬಳಿ ಎರಡು ಸಿಮ್ ಕಾರ್ಡ್ ಆಕ್ಟೀವ್ ಇವೆ.

ಅವುಗಳಿಂದ ಜೆಟ್ ಏರವೇಸ್ ಸಿಇಓ ನರೇಶ್ ಗೋಯಲ್ ಅವರಿಗೆ ಕರೆ ಮಾಡಿ ಸಂಪರ್ಕ ಹೊಂದಿದ್ದೀರಿ ಎಂದು ಕಥೆ ಕಟ್ಟಿ ಹೆದರಿಸಿದ್ದು, ಸದ್ಯ ನರೇಶನನ್ನು ಬಂಧಿಸಲಾಗಿದ್ದು ನೀವು ನರೇಶನೊಂದಿಗೆ ಮನಿಲಾಂಡ್‌ರಿಂಗ್‌ನಲ್ಲಿ ತೊಡಗಿ 25 ಲಕ್ಷ ಹಣ ಕೆನರಾ ಬ್ಯಾಂಕ್ ಕೊಟ್ಟು 5ಲಕ್ಷ ಕಮಿಷನ್ ಪಡೆದಿದ್ದೀರಿ ಎಂದು ದೂರುದಾರರಿಗೆ ಹೆದರಿಸಿದ್ದಾರೆ.

» ಸಿಬಿಐ ಹೆಸರಿನಲ್ಲಿ ಆನ್‌ಲೈನ್ ವಂಚನೆ

ಆನ್‌ಲೈನ್ ಅಪರಾಧಿಗಳು ದೂರುದಾರರ ಎಫ್‌ಡಿ ಹಣ ಹಾಗೂ ಷೇರುಗಳ ಬಗ್ಗೆ ಮಾಹಿತಿ ಪಡೆದು ದೂರುದಾರರು ಮೋತಿಲಾಲ ಓಸ್ವಾಲ್ ಕಂಪನಿಯಲ್ಲಿ ಹೊಂದಿದ್ದ ಹೂಡಿಕೆ ಷೇರುಗಳನ್ನು ಮಾರಿಸಿ ವಂಚನೆಗೊಳಗಾದ ದೂರುದಾರನಿಂದ 15.45ಕೋಟಿ ಹಣವನ್ನು ಆರ್‌ಟಿಜಿಎಸ್ ಮೂಲಕ ಫೆ.7ರಂದು ಮತ್ತು ಮಾ.9ರವರೆಗೆ ಲಪಟಾಯಿಸಿದ್ದಾರೆ.

ಸಿಬಿಐ ನಿರ್ದೇಶಕ, ಕೆ.ಸುಬ್ರಹ್ಮಣ್ಯಂ, ಸಿಬಿಐ ಚೀಫ್ ಶಿವಾ ಸುಬ್ರಹ್ಮಣ್ಯ ಹಾಗೂ ಆರ್‌ಬಿಐ ವೀಚಕ್ಷಣಾಧಿಕಾರಿ ಜಾರ್ಜ್ ಮ್ಯಾಥ್ಯೂ ಹೆಸರಿನ ವಂಚಕರು ಬೃಹತ್ ಹಣಕಾಸಿನ ಅಪರಾಧ ಎಸಗಿರುವುದ ಬೆಳಗಾವಿ ಪೊಲೀಸರ ನಿದ್ದೆಗೆಡಿಸಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ 2008ರ 66ಡಿ, 66ಸಿ, ಬಿಎನ್‌ಎಸ್ 2023ರ 318(4), 319(2) ರ ಅಡಿ ಪ್ರಕರಣ ಮಾ.18ರಂದು ನಗರದ ಟಿಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಗಾವಿ ಸಿಇಎನ್ ಠಾಣೆ ಪೊಲೀಸ್ ಇನ್ಸಪೆಕ್ಟರ್ ಶ್ರೀಶೈಲ್ ಗಾಬಿ ಅವರು ತನಿಖೆ ಮುಂದುವರಿಸಿದ್ದಾರೆ.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್ ಹೇಳಿಕೆ

ನವೀಕರಿಸುವ ವಿದ್ಯುತ್ ಬಳಕೆಯಲ್ಲಿ ಮುಂಚೂಣಿ

ಹೊಸದಿಲ್ಲಿ /ಬೆಂಗಳೂರು: ಭವಿಷ್ಯದ ವಿದ್ಯುತ್ ಅಗತ್ಯತೆಗಳಿಗೆ ಸಜ್ಜಾಗಿರುವ ಗ್ರಿಡ್ ನಿರ್ಮಾಣ, ಭೌಗೋಳಿಕಸವಾಲುಗಳುಹಾಗೂ ಸಪ್ಲೇ ಚೈನ್ ನಿರ್ವಹಣೆಯನ್ನು ಕರ್ನಾಟಕ ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತಿದೆ. ರಾಜ್ಯ ನವೀಕರಿಸಬಹುದಾದ ವಿದ್ಯುತ್ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಇದನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಹೊಸದಿಲ್ಲಿಯಲ್ಲಿ ನಡೆದ ಪ್ರತಿಷ್ಠಿತ ಭಾರತ್ ಎಲೆಕ್ಟ್ರಿಕ್ ಸಿಟಿ ಸಮ್ಮಿಟ್-2026 ರಲ್ಲಿ ಭಾಗವಹಿಸಿ ಮಾತನಾಡಿ, ಕರ್ನಾಟಕ ರಾಜ್ಯದ ಒಟ್ಟು 31,000 ಮೆ.ವ್ಯಾ ವಿದ್ಯುತ್ ಸಾಮರ್ಥ್ಯದಲ್ಲಿ ಸರಿಸುಮಾರು 21,000 ಮೆ.ವ್ಯಾ (ಶೇ.57ರಷ್ಟು) ವಿದ್ಯುತ್ ಅನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪಡೆಯಲಾಗುತ್ತಿದೆ. ಹೆಚ್ಚಿನ ಬಿಸಿಲಿನಿಂದಾಗಿ ಉತ್ತರ ಕರ್ನಾಟಕವು ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯ ಕೇಂದ್ರವಾಗಿದ್ದರೆ, ವಿದ್ಯುತ್ ಬೇಡಿಕೆಯ ಬಹುಪಾಲು ದಕ್ಷಿಣ ಭಾಗಗಳಲ್ಲಿ (ಬೆಂಗಳೂರು) ಕೇಂದ್ರೀಕೃತವಾಗಿದೆ. ಈ ಭೌಗೋಳಿಕ ಸವಾಲನ್ನು ನಿಭಾಯಿಸಲು ಕೆಪಿಟಿಸಿಎಲ್ ಈಗಾಗಲೇ 7,000 ಮೆ.ವ್ಯಾ ಸಾಮರ್ಥ್ಯವನ್ನು ನಿರ್ವಹಿಸುವ ಗ್ರೀನ್ ಎನರ್ಜಿ ಕಾರಿಡಾರ್‌ನ 1 ಮತ್ತು 2ನೇ ಹಂತಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದು ತಿಳಿಸಿದ್ದಾರೆ.

19 ಗಿ.ವ್ಯಾ ಬೃಹತ್ ಕಾರಿಡಾರ್ ಯೋಜನೆ: ಈ ಎರಡೂ ಹಂತಗಳ ಯಶಸ್ಸಿನ ಹಿನ್ನಲೆಯಲ್ಲಿ, ರಾಜ್ಯದ ವಿದ್ಯುತ್ ಪ್ರಸರಣ ಜಾಲವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ, ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ವಿದ್ಯುತ್ ಒದಗಿಸಲು ನಾವು 19 ಗಿಗಾವ್ಯಾಟ್ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಯನ್ನು ರೂಪಿಸುತ್ತಿದ್ದೇವೆ. ಈ ಮಹತ್ವಾಕಾಂಕ್ಷೆಯ ಯೋಜನೆಯು ಮೂರು 765 ಕೆ.ವಿ ಸ್ಟೇಷನ್‌ಗಳು, ಇಪ್ಪತ್ತನಾಲ್ಕು 400 ಕೆ.ವಿ ಸಬ್‌ಸ್ಟೇಷನ್‌ಗಳು, ಸುಮಾರು 500 ಸರ್ಕ್ಯೂಟ್ ಕಿಲೋಮೀಟರ್ ಪ್ರಸರಣ ಮಾರ್ಗಗಳ ಸ್ಥಾಪನೆಯನ್ನು ಒಳಗೊಂಡಿರಲಿದೆ, ಎಂದು ವಿವರಿಸಿದ್ದಾರೆ. ಕೆಪಿಟಿಸಿಎಲ್ ಪ್ರಸ್ತುತ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ಸ್ ಮತ್ತು ಪಂಪ್ಡ್ ಸ್ಟೋರೇಜ್ ಹೈಡ್ರೋ ಗಳತ್ತ ಹೆಚ್ಚಿನ ಗಮನ ಹರಿಸುತ್ತಿದೆ. ಇದು ಪೀಕ್ ಲೋಡ್ ನಿರ್ವಹಣೆಯ ವೆಚ್ಚವನ್ನು ಗಣನೀಯವಾಗಿ ಇಳಿಸುತ್ತದೆ ಎಂದರು.



> ವಿದ್ಯುತ್ ಉಪಕರಣಗಳನ್ನು ಉತ್ಪಾದಿಸುವ ಸ್ಥಳೀಯ ತಯಾರಕರಿಗೆ ನಾವು ಹೆಚ್ಚಿನ ಪ್ರೋತ್ಸಾಹವನ್ನು ನೀಡುವ ನಿಟ್ಟಿನಲ್ಲಿ ಅಗತ್ಯ ನೀತಿ ರೂಪಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆ.
>
> ■ ಡಾ. ರಾಮ್ ಪ್ರಸಾತ್ ಮನೋಹರ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಕಿರುಸುದ್ದಿ

ಇಸ್ಪೀಟ್ ಆಡುವ ವಿಚಾರಕ್ಕೆ ಗಲಾಟೆ: ಬಡಿದಾಡಿಕೊಂಡ ಯುವಕರ ಗುಂಪು



ದೊಡ್ಡಬಳ್ಳಾಪುರ: ಯುಗಾದಿ ಹಬ್ಬದ ಸಂದರ್ಭದಲ್ಲಿ ಇಸ್ಪೀಟ್ ಆಡುವ ವಿಚಾರಕ್ಕೆ ಯುವಕರು ದೊಣ್ಣೆ ಹಿಡಿದು ಬಡಿದಾಡಿಕೊಂಡಿರುವ ಘಟನೆ ತಾಲೂಕಿನ ಕಂಚಿಗನಾಳ ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ. ಹೊಸತಡಕು ದಿನ ಇಸ್ಪೀಟ್ ಆಡುವ ವಿಚಾರಕ್ಕೆ ಎರಡು ಯುವಕರ ಗುಂಪಿನ ನಡುವೆ ಜಗಳವಾಗಿದೆ. ಹೀಗಾಗಿ ನಡುರಸ್ತೆಯಲ್ಲಿ ದೊಣ್ಣೆಗಳನ್ನಿಡಿದು ಯುವಕರು ಹೊಡೆದಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಕಂಚಿಗನಾಳ ಗ್ರಾಮದ ಯುವಕರ ಮೇಲೆ ಬಿಡಿಗೆರೆ ಹಾಗೂ ರಾಜಘಟ್ಟ ಯುವಕರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮಾಂಗಲ್ಯ ಸರ ಕಳ್ಳನ ಬಂಧನ

ವಿಜಯಪುರ: ಮಹಿಳೆಯ ಕುತ್ತಿಗೆಯಿಂದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಆರೋಪಿಯನ್ನು ವಿಜಯಪುರ ಟೌನ್ ಪೊಲೀಸರು ಬಂಧಿಸುವಲ್ಲಿ ಸಫಲರಾಗಿದ್ದಾರೆ. ಬೆಂಗಳೂರಿನ ಡಿ.ಜೆ ಹಳ್ಳಿಯ ಆರೀಫ್ ಖಾನ್ (25) ಬಂಧಿತ ಆರೋಪಿ. ಪದ್ಮಾವತಿ ಎಂಬ ಮಹಿಳೆ ಮಾ.17ರಂದು ಚಿಕ್ಕಬಳ್ಳಾಪುರ-ದೇವನಹಳ್ಳಿಯ ರಾಷ್ಟ್ರೀಯ ಹೆದ್ದಾರಿ ಸಮೀಪದ ಮುನೇಶ್ವರಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಹೆದ್ದಾರಿ ಸಂಪರ್ಕಿಸುವ ಸರ್ವಿಸ್ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಆರೋಪಿ ಹಿಂದಿನಿಂದ ಬೈಕ್‌ನಲ್ಲಿ ಬಂದು ಕುತ್ತಿಗೆಗೆ ಕೈ ಹಾಕಿ ಕತ್ತಿನಲ್ಲಿದ್ದ ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದನು. ಸುಮಾರು 5 ಲಕ್ಷ ಮೌಲ್ಯದ 55 ಗ್ರಾಂ. ತೂಕದ ಚಿನ್ನದ ಮಾಂಗಲ್ಯ ಸರ ಕದ್ದು ಪರಾರಿಯಾಗಿದ್ದ ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು. ಶುಕ್ರವಾರ ಆರೋಪಿಯಿಂದ ಚಿನ್ನದ ಮಾಂಗಲ್ಯ ಸರ ಮತ್ತು ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಿಜಯಪುರ ಟೌನ್ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಚಿನ್ನದ ಒಡವೆಗೆ ಪಾಲಿಶ್; ಮಹಿಳೆಗೆ ವಂಚನೆ

ವಿಜಯಪುರ (ದೇವನಹಳ್ಳಿ): ಚಿನ್ನದ ಒಡವೆಗಳಿಗೆ ಪಾಲಿಶ್ ಮಾಡಿಕೊಡುವುದಾಗಿ ಮಹಿಳೆಗೆ ನಂಬಿಸಿದ ಇಬ್ಬರು ಅಪರಿಚಿತ ಕಳ್ಳರು ಸುಮಾರು 5 ಲಕ್ಷ ರೂ. ಬೆಲೆ ಬಾಳುವ 30 ಗ್ರಾಂ ತೂಕದ ಚಿನ್ನದ ಸರ, ಡಾಲರ್, ಕಿವಿ ಓಲೆ ಕದ್ದು ಪರಾರಿಯಾಗಿದ್ದಾರೆ. ಪಟ್ಟಣದ 17ನೇ ವಾರ್ಡಿನ ಪಂಚಮುಖಿ ವಿನಾಯಕ ದೇವಾಲಯದ ರಸ್ತೆಯ ದರ್ಗಾ ಬಳಿಯ ನಿವಾಸಿಯಾದ ಕಲಂದರ್ ಪಾಷಾ ಪತ್ನಿ ಬಲ್ಕಿಸ್ ಬಾನು ಚಿನ್ನಾಭರಣ ಕಳೆದುಕೊಂಡ ಮಹಿಳೆ. ಶುಕ್ರವಾರ ಬೆಳಗ್ಗೆ 11.30ರ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಅಪರಿಚಿತರು ಕಂಪನಿಯಿಂದ ಬಂದಿದ್ದೇವೆ. ಚಿನ್ನದ ಒಡವೆಗಳಿಗೆ ಪೌಡರ್ ಹಾಕಿ ಫಳಫಳ ಹೊಳೆಯುವಂತೆ ಪಾಲಿಶ್ ಮಾಡಿಕೊಡುತ್ತೇವೆ ಎಂದು ಬಲ್ಕಿಸ್ ಬಾನುಗೆ ನಂಬಿಸಿದ್ದಾರೆ. ಆಕೆಯು ಮನೆಯಲ್ಲಿದ್ದ ಚಿನ್ನದ ಸರ, ಡಾಲರ್ ಮತ್ತು ಕಿವಿ ಓಲೆಯನ್ನು ಪಾಲಿಶ್ ಮಾಡಲು ಅವರಿಗೆ ನೀಡಿದ್ದಾಳೆ. ಅವರು ಆಕೆಯ ಕಣ್ಣಮುಂದೆಯೇ ಒಡವೆಗಳಿಗೆ ಪೌಡರ್ ಹಾಕಿ ಪಾಲಿಶ್ ಮಾಡಿ ಡಬ್ಬಿಯಲ್ಲಿ ಇಟ್ಟು ಕವರ್‌ನೊಳಗೆ ಪ್ಯಾಕ್ ಮಾಡಿದ್ದಾರೆ. ಆಕೆಯ ಗಮನವನ್ನು ಬೇರೆಡೆಗೆ ಸೆಳೆದ ಖದೀಮರು, ಆಕೆಯ ಕೈಗೆ ಅದೇ ರೀತಿಯ ಬೇರೆ ಕವರೊಂದನ್ನು ನೀಡಿ 10 ನಿಮಿಷದ ಬಳಿಕ ತೆರೆಯಿರಿ ಎಂದು ಹೇಳಿ ಅವರಿಂದ ಹಣವನ್ನು ಪಡೆಯದೆ ಅಲ್ಲಿಂದ ಪರಾರಿಯಾಗಿದ್ದಾರೆ. 10 ನಿಮಿಷದ ಬಳಿಕ ಅವರು ನೀಡಿದ ಕವರ್ ತೆರೆದು ನೋಡಿದಾಗ ಅದರೊಳಗೆ ಕಲ್ಲು ತುಂಬಿರುವುದು ಬೆಳಕಿಗೆ ಬಂದಿದೆ. ಮೋಸ ಹೋಗಿದ್ದೇವೆ ಎಂದು ತಿಳಿದು ವಿಷಯವನ್ನು ಕುಟುಂಬದವರಿಗೆ ತಿಳಿಸಿದ್ದಾಳೆ. ಕೂಡಲೇ ಸ್ಥಳೀಯ ಸಿ.ಸಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದಾರೆ. ಒಟ್ಟು ಮೂವರು ಬಂದಿರುವ ಶಂಕೆ ವ್ಯಕ್ತವಾಗಿದೆ. ಬಲ್ಕಿಸ್ ಬಾನು ವಿಜಯಪುರ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೈಗೆ ಕಲ್ಲು ತುಂಬಿದ ಡಬ್ಬಿ ನೀಡಿ ಚಿನ್ನ ಕದ್ದು ಪರಾರಿಯಾದ ಕಳ್ಳರು

ಒಂದು ಬಾಕ್ಸ್ ಟೊಮೆಟೊ ದರ 800 ರೂ.ನಿಂದ 250 ರೂ.ಗೆ ಕುಸಿತ | ಯುದ್ಧದ ಹಿನ್ನೆಲೆಯಲ್ಲಿ ದರ ವ್ಯತ್ಯಾಸ

ಟೊಮೆಟೊ ದರ ಕುಸಿತ, ಅನ್ನದಾತ ಕಂಗಾಲು

ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಭಾರತ ಮಾತ್ರವಲ್ಲದೆ ಇಡೀ ವಿಶ್ವದ ಆರ್ಥಿಕ ಚಟುವಟಿಕೆ ಸೇರಿದಂತೆ ಇತರೆ ಎಲ್ಲಾ ಕ್ಷೇತ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಈ ಹಿನ್ನೆಲೆಯಲ್ಲಿ ಅಡುಗೆ ಅನಿಲ ಕೊರತೆ, ತರಕಾರಿಗಳ ಬೆಲೆ ಕುಸಿತ ಹೀಗೆ ಹತ್ತಾರು ಸಮಸ್ಯೆಗಳು ಉಲ್ಬಣಿಸಿವೆ. ತಾವರೆಕೆರೆ ವ್ಯಾಪ್ತಿಯಲ್ಲಿ ಟೊಮೆಟೊ ದರ ಕುಸಿತವಾಗಿದ್ದು ಬೆಳೆಗಾರ ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ವಾರದ ಹಿಂದೆ ಟೊಮೆಟೊ 15 ಕೆಜಿ ಯ ಒಂದು ಬಾಕ್ಸ್ 800 ರೂ.ಗಳಿದ್ದದ್ದು, ದಿಢೀರನೆ ಉತ್ತಮವಾದ ಟೊಮೆಟೊ ಬಾಕ್ಸ್‌ಗೆ 250 ರೂ.ಗೆ ಕುಸಿದಿದೆ. ಇದಕ್ಕಿಂತ ಸ್ವಲ್ಪ ಕಡಿಮೆ ದರ್ಜೆಯ ಟೊಮೆಟೊ 100 ರಿಂದ 150 ರೂ.ಗೆ ಇಳಿಕೆಯಾಗಿ ಟೊಮೆಟೊ ಬೆಳೆದ ರೈತ ಚಿಂತೆಗೀಡಾಗಿದ್ದಾನೆ.

ಮಳೆ, ಮೋಡ ಕವಿದ ವಾತವಾರಣ ಹಾಗೂ ರೋಗ ಬಾಧೆಯಿಂದ ಗುಣಮಟ್ಟ ಕಳೆದುಕೊಳ್ಳುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಧಾರಣೆ ದಿಢೀರ್ ಕುಸಿತಕ್ಕೆ ಕಾರಣವಾಗಿದೆ, ಆದರೂ ಸಹ ಚಿಲ್ಲರೆ ಮಾರಾಟಗಾರರು ಒಂದು ಕೆಜಿಗೆ 20 ರಿಂದ 25 ರೂ. ಮಾರಾಟ ಮಾಡುತ್ತಿದ್ದಾರೆ. ರೈತರು ಸಾಲು- ಸಾಲು ಹಬ್ಬಗಳಿಂದಾಗಿ ಉತ್ತಮ ಲಾಭದ ನಿರೀಕ್ಷೆಯಲ್ಲಿದ್ದರು, ಆದರೆ ದಿಢೀರ್ ಕುಸಿತದಿಂದ ನಿರಾಸರಾಗಿದ್ದಾರೆ. ಅದರಲ್ಲೂ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಕೈಚಳಕದಿಂದಲೂ ಸಹ ದರದಲ್ಲಿ ಭಾರೀ ಕುಸಿತವಾಗಿದ್ದು, ರೈತರು ಕಂಗಲಾಗಿದ್ದಾರೆ.

ಟೊಮೆಟೊ ಬೆಳೆಯಲು ಖರ್ಚು ಮಾಡಿದ ಹಣಕ್ಕಿಂತ ಮಾರಾಟ ಮಾಡಿದ ದರ ಕಡಿಮೆಯಾಗಿದ್ದರಿಂದ ರೈತರು ತೀವ್ರ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ. ಮಾರಿದ ಹಣದಲ್ಲಿ ಎಲ್ಲಾ ವೆಚ್ಚಗಳು ಹೋಗಿ ಕೆಜಿಗೆ ಕೇವಲ 3 ರೂ. ಸಿಗುತ್ತಿದೆ. ರೈತರಿಗೆ ಆಗುತ್ತಿರುವ ಅನ್ಯಾಯ ನೋಡಿಯು ನೋಡದಂತೆ ಮಾರುಕಟ್ಟೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ ಎಂದು ಅಳಲು ತೋಡಿಕೊಳ್ಳುತ್ತಿದ್ದಾರೆ.

ದಿಗಂತ ವಿಶೇಷ

ಟೊಮೆಟೊ ಹಣ್ಣು ಕೀಳುವ ಕೂಲಿ ಕಾರ್ಮಿಕರಿಗೆ ಪ್ರತಿ ದಿನ ಊಟದ ಜೊತೆಗೆ 350 ರಿಂದ 400 ರೂ. ಕೂಲಿ ಕೊಡಬೇಕು. ಮಾರುಕಟ್ಟೆ ತರುವ ವಾಹನಕ್ಕೆ ತಲಾ ಒಂದು ಬಾಕ್ಸ್ 25 ರಿಂದ 30 ರೂ. ಬಾಡಿಗೆಯಿದೆ. ದಲ್ಲಾಳಿಗೆ ಶೇಕಡಾ 10ರಷ್ಟು ನೀಡಿದಲ್ಲಿ ರೈತನಿಗೆ ಪ್ರತಿ ಬಾಕ್ಸ್ ಟೊಮೆಟೊಗೆ ಕೇವಲ 20 ರೂ. ಉಳಿಯುತ್ತದೆ. ಮಾರುಕಟ್ಟೆಯಲ್ಲಿ ತಮಗಾಗಿ ಅಲ್ಪಸ್ವಲ್ಪ ಖರ್ಚು ಮಾಡಿದ್ದಲ್ಲಿ ಬರಿ ಕೈಯಲ್ಲಿ ಮನೆಗೆ ಹೋಗುವಂತಾಗಿದೆ.

ಸಗಟು ಮಾರುಕಟ್ಟೆಯಲ್ಲಿ ದರ ಕಡಿಮೆಯಾಗಿದ್ದರಿಂದ ರೈತರು ತೀವ್ರ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸುವಂತೆ ರೈತರು ಆಗ್ರಹಿಸಿದ್ದಾರೆ. ಅಗತ್ಯ ವಸ್ತುಗಳು ಬೆಲೆ ಏರಿಕೆಯಾಗಿದ್ದರೂ ರೈತರು ಬೆಳೆದ ಬೆಳೆಗಳ ದರ ಏಕೆ ಏರಿಕೆಯಾಗುತ್ತಿಲ್ಲ ಎಂದು ಕಿಡಿಕಾರಿದ್ದಾರೆ.



ಹೊರ ರಾಜ್ಯಗಳಾದ ರಾಜಸ್ಥಾನ, ಆಂಧ್ರಪ್ರದೇಶ, ಪಶ್ಚಿಮಬಂಗಾಳ, ಉತ್ತರ ಪ್ರದೇಶ, ಹರಿಯಾಣ ರಾಜ್ಯಗಳಲ್ಲಿ ಟೊಮೆಟೊಗೆ ಬಹು ಬೇಡಿಕೆಯಿದೆ. ಆದರೆ ಮಾರುಕಟ್ಟೆಗೆ ಗುಣಮಟ್ಟದ ಟೊಮೆಟೊ ಬರುತ್ತಿಲ್ಲ, ಆದ್ದರಿಂದ ವ್ಯಾಪಾರಸ್ಥರು ಖರೀದಿ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಏಕೆಂದರೆ ಟೊಮೆಟೊವನ್ನು ಲಾರಿಗಳಲ್ಲಿ ದೂರದ ರಾಜ್ಯಗಳಿಗೆ ತೆಗೆದು ಕೊಂಡು ಹೋಗುವ ಸಂದರ್ಭದಲ್ಲಿ ಗುಣಮಟ್ಟವಿಲ್ಲದ ಕಾರಣ ಹಾಳಗುತ್ತದೆ. ಇದರಿಂದಲೂ ವರ್ತಕರಿಗೆ ನಷ್ಟವಾಗುತ್ತದೆ. ಆದ್ದರಿಂದ ಟೊಮೆಟೊ ಖರೀದಿ ಮಾಡಲು ವರ್ತಕರು ಹಿಂದೇಟು ಹಾಕುತ್ತಿದ್ದಾರೆ.
■ ಶ್ರೀನಾಥ್‌ಗೌಡ, ಮಾರುಕಟ್ಟೆ ವ್ಯಾಪಾರಿ

ಟೊಮೆಟೊ ಫಸಲು ನೀರಿಕ್ಷೆಗಿಂತ ಅಧಿಕವಾಗಿ ಬಂದಿತ್ತು ಆದರೆ ಒಂದೆರಡು ಭಾರಿ ಒಳ್ಳೆಯ ದರಕ್ಕೆ ಮಾರಾಟವಾಯಿತು. ದಿಢೀರನೆ ಸುರಿದ ಮಳೆ, ಗಾಳಿಯಿಂದ ಫಸಲು ನೆಲಕಚ್ಚುವಂತಾಗಿ ಗುಣಮಟ್ಟಕ್ಕೆ ಹೊಡೆತ ಬಿದ್ದಿದೆ. ಫಸಲು ಕಡಿಮೆಯಾಗಿದ್ದು ಮಾರುಕಟ್ಟೆಯಲ್ಲಿ ದರವಿಲ್ಲ ಹೀಗಾಗಿ ಈ ಟೊಮೆಟೊ ಋತುವಿನಲ್ಲಿ ಮಾರುಕಟ್ಟೆಗೆ ತೆಗೆದುಕೊಂಡ ಹೋದ ರೈತ ನಷ್ಟ ಅನುಭವಿಸುವಂತಾಗಿದೆ. ಕೆಲವೊಮ್ಮೆ ರಸ್ತೆಯಲ್ಲಿ ಬಿಸಾಡಿ ಬರುವ ಸಂದರ್ಭವು ಸಹ ಎದುರಾಗಿದೆ. ಕೂಡಲೇ ದಲ್ಲಾಳಿಗಳ ಹಾವಳಿ ತಪ್ಪಿಸಿ, ಸರ್ಕಾರ ಮಧ್ಯಪ್ರ ವೇಶಿಸಿ ಅಧಿಕಾರಿಗಳಿಗೆ ತಿಳಿ ಹೇಳಿ, ಎಲ್ಲಾ ರೈತರಿಗೆ ನೆರವಾಗಬೇಕು.
■ ರಾಜು, ರೈತ, ತಾವರೆಕೆರೆ

ನೀರು ಬಂಡಿಗಳ ಮೆರವಣಿಗೆ ಉತ್ಸವ

ದೊಡ್ಡಬಳ್ಳಾಪುರ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತನ್ನದೇ ಆದ ಸಾಂಸ್ಕೃತಿಕ ಛಾಪನ್ನು ಉಳಿಸಿಕೊಂಡಿರುವ ತಾಲೂಕಿನಲ್ಲಿ ನಡೆಯುವ ನೀರು ಬಂಡಿಗಳ ಮೆರವಣಿಗೆ ಉತ್ಸವ ಅತಿ ಹೆಚ್ಚು ಗಮನ ಸೆಳೆಯುತ್ತದೆ. ಯುಗಾದಿಯ ಎರಡನೆ ದಿನ ಈ ಉತ್ಸವ ನಡೆಯಲಾಗುತ್ತದೆ.

ತಾಲೂಕಿನ ತೂಬಗೆರೆ ಹೋಬಳಿಯ ಕೆಳಗಿನ ಜೂಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಗೌರಿಬಿದನೂರು ತಾಲೂಕಿನ ಪೂಜಾರಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬದ ಮಾರನೇ ದಿನ ಸಂಪ್ರದಾಯಬದ್ಧವಾಗಿ ನಡೆಯುವ ಶ್ರೀ ವೀರತಿಪ್ಪಯ್ಯಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಅಲಂಕಾರಿಕ ನೀರು ಬಂಡಿಗಳ ಮೆರವಣಿಗೆಯೊಂದಿಗೆ ಭಾಗವಹಿಸಿದ್ದರು. ಜಾತ್ರೆಯ ಪ್ರಮುಖ ಆಕರ್ಷಣೆಯಾಗಿ ಸಿಂಗರಿಸಲ್ಪಟ್ಟ ನೀರುಬಂಡಿಗಳ ಮೆರವಣಿಗೆ ಎಲ್ಲರ ಕಣ್ಮನ ಸೆಳೆದಿತು. ಇತಿಹಾಸ ಪ್ರಸಿದ್ಧ ಘಾಟಿ ಸುಬ್ರಹ್ಮಣ್ಯ ಸುತ್ತಮುತ್ತಲಿನ ಗ್ರಾಮಗಳ ರೈತರು ತಮ್ಮ ದನಗಳನ್ನು ಅಲಂಕರಿಸಿ, ನೀರುಬಂಡಿಗಳನ್ನು ಕಟ್ಟಿಕೊಂಡು ಭಕ್ತಿಭಾವದಿಂದ ಮೆರವಣಿಗೆ ನಡೆಸಿದ ದೃಶ್ಯ ಗಮನಾರ್ಹವಾಗಿತ್ತು. ಪ್ರತಿ ವರ್ಷದಂತೆ ಈ ವರ್ಷವೂ ಬಣ್ಣಬಣ್ಣದ ಅಲಂಕಾರಗಳಿಂದ ಸಜ್ಜುಗೊಂಡ ಎತ್ತುಗಳು, ಕಳಶಗಳು ಮತ್ತು ಸಂಪ್ರದಾಯಬದ್ಧ ನೀರುಬಂಡಿಗಳು ಜಾತ್ರೆಯ ಸೊಬಗನ್ನು ಹೆಚ್ಚಿಸಿತು. ಗ್ರಾಮೀಣ ಸಂಸ್ಕೃತಿ, ಪರಂಪರೆ ಮತ್ತು ರೈತರ ಜೀವನಶೈಲಿಯನ್ನು ಪ್ರತಿಬಿಂಬಿಸಿದ ಈ ಮೆರವಣಿಗೆಗೆ ಸಾವಿರಾರು ಜನ ಸಾಕ್ಷಿಯಾದರು. ಮಜ್ಜಿಗೆ ಮತ್ತು ಪಾನಕ ವಿತರಣೆ, ಭಕ್ತರ ಸಂಭ್ರಮ ಹಾಗೂ ಅಪಾರ ಭಕ್ತ ಸಮೂಹ ಸೇರಿ ಜಾತ್ರೆಗೆ ವಿಶೇಷ ಮೆರುಗು ತಂದವು. ಇಂತಹ ಸಾಂಪ್ರದಾಯಿಕ ಉತ್ಸವಗಳು ಸಮಾಜದಲ್ಲಿ ಒಗ್ಗಟ್ಟು ಮತ್ತು ಸಂಸ್ಕೃತಿ ಮೌಲ್ಯಗಳನ್ನು ಬಲಪಡಿಸುತ್ತವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಮಂಜುನಾಥ್, ಮುಖಂಡ ಕುಮಾರ್, ಯುವ ಮುಖಂಡ ಉದಯ ಆರಾಧ್ಯ ಹಾಗೂ ಸುತ್ತಮುತ್ತಲಿನ ರೈತರು ಜಾತ್ರೆಯಲ್ಲಿ ಭಾಗವಹಿಸಿ ಭಕ್ತರೊಂದಿಗೆ ಬೆರೆತು ಹಬ್ಬದ ಉತ್ಸಾಹ ಹಂಚಿಕೊಂಡರು.



ನಮ್ಮ ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ದೊಡ್ಡಬಳ್ಳಾಪುರ, ಗೌರಿಬಿದನೂರು ಭಾಗಗಳಲ್ಲಿ ಈ ನೀರು ಬಂಡಿಗಳ ಮೆರವಣಿಗೆ ನಡೆಸಲಾಗುತ್ತದೆ. ಯುಗಾದಿ ಹಬ್ಬದ ದಿನ ಪ್ರತಿಯೊಬ್ಬ ರೈತರು ಕುಟುಂಬಸ್ಥರ ಸಮೂಹದಲ್ಲಿ ಭಾಗವಹಿಸಿ ಮೆರವಣಿಗೆಯಲ್ಲಿ ಖುಷಿ ಪಡುತ್ತಾರೆ.
■ ಉದಯ ಆರಾಧ್ಯ, ಯುವ ಮುಖಂಡ

ನಾಗರಾಜಾಚಾರಿಗೆ ಯಕ್ಷ ಕಲಾಕಿಂಕರ ಪ್ರಶಸ್ತಿ

ತಾವರೆಕೆರೆ: ಹಿರಿಯ ಯಕ್ಷಗಾನ ಕಲಾವಿದ ನಾಗರಾಜಾಚಾರಿಯವರಿಗೆ ಯಕ್ಷ ಕಲಾ ಕಿಂಕರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಹೊಸಕೋಟೆ ತಾಲೂಕು ಕಲಾವಿದರ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಉಪಾಧ್ಯಕ್ಷ ನಟರಾಜ್ ಎಂಎನ್‌ಆರ್‌ರವರು ತಿಳಿಸಿದರು.

ತಾಲೂಕಿನ ಮೈಲಾಪುರ ವಳಗೆರೆಪುರ ಗೇಟ್ ಬಳಿಯಿರುವ ವೀರಾಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ವೀರಾಂಜನೇಯ ಸ್ವಾಮಿ ಸೇವಾ ಟ್ರಸ್ಟ್ ಮತ್ತು ಕಲಾವಿದರ ಕ್ಷೇಮಾಭಿವೃದ್ಧಿ ಸಂಘದ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ದಕ್ಷಯಜ್ಞ ನಾಟಕ ಮತ್ತು ಯಕ್ಷ ಕಲಾ ಕಿಂಕರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದರು.

ತಾಲೂಕು ಕಲಾವಿದರ ಕ್ಷೇಮಾಭಿವೃದ್ಧಿ ಸಂಘದಿಂದ ರಂಗಭೂಮಿ ನಾಟಕದಲ್ಲಿ ಮೈಲಾಪುರ ವಳಗೆರೆಪುರ ಗೇಟ್‌ನಲ್ಲಿ ಪ್ರಪ್ರಥಮವಾಗಿ ಏಳಗಳ್ಳಿ ಪರಮಶಿವಯ್ಯನವರ ನಿರ್ದೇಶನದಲ್ಲಿ ಮೈಸೂರಿನ ಖ್ಯಾತ ಮಹಿಳಾ ಕಲಾವಿದರೂ ಹಾಗೂ ವಾದ್ಯಗೋಷ್ಠಿಯೊಂದಿಗೆ ದಕ್ಷಯಜ್ಞ ಅಥವಾ ಬೃಗುಮುನಿ ಗರ್ವಭಂಗ ನಾಟಕ ಪ್ರದರ್ಶನ ಮಾಡಿದ್ದು, ಅಲ್ಲದೆ ಪ್ರತಿ ವರ್ಷದಂತೆ ಎಲೆಮರೆಕಾಯಂತಿರವ ಹಿರಿಯ ಕಲಾವಿದರನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುವಂತೆ ಹಿರಿಯ ಯಕ್ಷಗಾನ ಕಲಾವಿದ ನಾಗರಾಜಾಚಾರಿಯವರಿಗೆ ಯಕ್ಷಕಲಾಕಿಂಕರ ಪ್ರಶಸ್ತಿ ನೀಡಿ ಗೌರವಿಸಲಾಯಿತು ಎಂದರು.

ಈ ಸಂದರ್ಭದಲ್ಲಿ ವೀರಾಂಜನೇಯ ಸ್ವಾಮಿ ಸೇವಾ ಸಮಿತಿಯ ಪದಾಧಿಕಾರಿಗಳು ಹಾಗೂ ಕಲಾವಿದರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಿರಿಯಕಲಾವಿದರು ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರೂ,

ರಂಗಭೂಮಿ, ನಾಟಕ ನಿರ್ದೇಶಕರೂ ಆದ ಏಳಗಳ್ಳಿ ಪರಮ ಶಿವಯ್ಯನವರು, ತಬಲವಾದಕ ಕೃಷ್ಣಮೂರ್ತಿ, ಸೋಲೆಕ್ಸ ವಾದಕರಾದ ಮೈಸೂರು ಆದರ್ಶ್, ಮಹಿಳಾ ಕಲಾವಿದರಾದ ದೀಪಿಕ, ಶರ್ಮಿಳಾ ತಂಡದವರು ಇದ್ದರು.



ಸ್ಥಳೀಯ ಆಡಳಿತ ವೈಖರಿ ಕುರಿತು ಅಧ್ಯಯನ

ದೇವನಹಳ್ಳಿ: ತಾಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಿಂದ ವಿಶೇಷ ಮಾನಿಟರ್ ಉಮಾಕಾಂತ್, ಪಂಚಾಯತ್ ರಾಜ್ ಹಾಗೂ ಸ್ಥಳೀಯ ಸರ್ಕಾರ ರಾಜ್ಯದ ವಿವಿಧ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳನ್ನು ಭೇಟಿ ನೀಡಿ, ಸ್ಥಳೀಯ ಸರ್ಕಾರಗಳ ಆಡಳಿತ ವೈಖರಿ, ಯೋಜನೆಗಳ ಅನುಷ್ಠಾನ, ಸ್ಥಳೀಯ ಸರ್ಕಾರದ ಮುಖೇನ ಸಂವಿಧಾನದ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸುವಲ್ಲಿ ಎದುರಾಗುತ್ತಿರುವ ಸವಾಲುಗಳು ಇತ್ಯಾದಿಗಳ ಕುರಿತು ಅಧ್ಯಯನ ನಡೆಸಿದರು. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಿವಕುಮಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಾಥಗೌಡ, ಯೋಜನಾ ನಿರ್ದೇಶಕ ಮೋಹನ್ ಕುಮಾರ್, ನೋಮೇಶ್ ಪಿಡಿಒ ಶ್ರೀನಿವಾಸ್ ಕಂದಾಯ ಇಲಾಖೆ, ಗ್ರಾಖ, ಫೆಕೊಖ ಹಾಗೂ ಗ್ರಾಮ ಪಂಚಾಯತ್ ಕಾರ್ಯದರ್ಶಿ, ಸಿಬ್ಬಂದಿ ಉಪಸ್ಥಿತರಿದ್ದರು.



ಗಾಳಿಗೆ ಹಾರಿದ ಶೀಟ್‌ಗಳು | ನೆಲಕ್ಕೆ ಬಿದ್ದ ವಿದ್ಯುತ್ ಕಂಬಗಳು | ಕತ್ತಲಲ್ಲಿ ಕಾಲ ಕಳೆದ ಜನ

ಬಿರುಗಾಳಿ ಸಹಿತ ಭಾರೀ ಮಳೆಗೆ ನೆಲ ಕಚ್ಚಿದ ಬಾಳೆ

ದೊಡ್ಡಬಳ್ಳಾಪುರ: ತಾಲೂಕಿನಾದ್ಯಂತ ಬಿರು ಗಾಳಿ ಸಹಿತ ಬಾರಿ ಮಳೆಯಾಗಿದ್ದು, ಇದರಿಂದ ಹಲವು ಕಡೆ ವಿದ್ಯುತ್ ಕಂಬಗಳು, ಮರಗಳು ಧರೆಗುರುಳಿವೆ. ಯುಗಾದಿ ಹಬ್ಬದ ಮುನ್ನ ಸುರಿದ ಭಾರಿ ಮಳೆಯಿಂದಾಗಿ ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ವಿದ್ಯುತ್ ಇಲ್ಲದಂತಾಗಿತ್ತು.

ತಾಲೂಕಿನ ಪೆರಮಗೊಂಡನಹಳ್ಳಿ ಗ್ರಾಮದಲ್ಲಿ ಫಸಲಿಗೆ ಬಂದಿದ್ದ ಬಾಳೆ ತೋಟಕ್ಕೂ ಹಾನಿಯಾಗಿರುವ ಘಟನೆ ನಡೆದಿದೆ. ಪೆರಮಗೊಂಡನಹಳ್ಳಿ ಗ್ರಾಮದ ರೈತ ಮುನೇಗೌಡರು ತಮ್ಮ ಎರಡು ಎಕರೆ ಭೂಮಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬಾಳೆ ತೋಟ ಮಾಡಿದ್ದರು. ರಾತ್ರಿ ಬಿರುಗಾಳಿ ಸಹಿತ ಸುರಿದ ಭಾರೀ ಮಳೆಗೆ ಎರಡು ಎಕರೆಯಲ್ಲಿ ಬೆಳೆದಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಬಾಳೆ ಬೆಳೆ ನೆಲಕಚ್ಚಿದೆ. ನೆಲಕ್ಕೆ ಉರುಳಿದ ಬಾಳೆ ಗೊನೆಗಳು ಸಂಪೂರ್ಣ ಕಟಾವಿಗೆ ಬಂದಿದ್ದವು. ಒಂದು ಕೆಜಿಗೆ 30-40 ರೂ. ಬಾಳೆ ಮಾರಾಟ ಮಾಡುತ್ತಿದ್ದ ರೈತನಿಗೀಗ ದೊಡ್ಡ ಪ್ರಮಾಣದಲ್ಲಿ ಅಂದರೆ ಸುಮಾರು 5-6ಲಕ್ಷ ರೂ. ನಷ್ಟವಾಗಿದೆ ಎಂದು ರೈತ ತಿಳಿಸಿದ್ದಾರೆ. ತಾಲೂಕಿನ ಕಸಬಾ ಹೋಬಳಿ ಕೆಸ್ತೂರು ಪಂಚಾಯಿತಿ ವ್ಯಾಪ್ತಿಯ ಹೊನ್ನಾಘಟ್ಟ ಗ್ರಾಮದಲ್ಲಿ 2 ಟ್ರಾನ್ಸ್‌ಫಾರ್ಮರ್ (ವಿದ್ಯುತ್ ಪರಿವರ್ತಕ), 9 ವಿದ್ಯುತ್ ಕಂಬಗಳು ಧರೆಗುರುಳಿವೆ. ಇದರಿಂದಾಗಿ ಜನ ಜೀವಭಯದಲ್ಲಿ ರಾತ್ರಿ ಕಳೆಯುವಂತಾಗಿದೆ. ಭಾರೀ ಅನಾಹುತ ಸಂಭವಿಸುವುದಕ್ಕಿಂತ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಧರೆಗುರುಳಿದ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್ (ವಿದ್ಯುತ್ ಪರಿವರ್ತಕ) ಗಳನ್ನು ತೆರವುಗೊಳಿಸಬೇಕೆಂದು ಕೆಸ್ತೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶೃತಿ ಮಂಜುನಾಥ್ ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಒಟ್ಟಾರೆ ಮಳೆಯ ಅವಾಂತರದಿಂದ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಹೆಚ್ಚು ಸಮಸ್ಯೆ ಉಂಟಾಗಿದೆ.





ಕಂಬಗಳ ತೆರವಿಗೆ ಆಗ್ರಹ

ಶುಕ್ರವಾರ ರಾತ್ರಿ ಭಾರೀ ಗಾಳಿ, ಮಳೆಗೆ ಮನೆಯ ಮೇಲ್ಛಾವಣಿಗೆ ಅಳವಡಿಸಿದ್ದ ಝಿಂಕ್ ಅಲ್ಯೂಮಿನಿಯಮ್ ಶೀಟ್‌ಗಳು ಹಾರಿ ವಿದ್ಯುತ್ ತಂತಿಗಳ ಮೇಲೆ ಬಿದ್ದ ಪರಿಣಾಮ ರಸ್ತೆಗೆ ಅಡ್ಡಲಾಗಿ ಸುಮಾರು 7 ವಿದ್ಯುತ್ ಕಂಬಗಳು ಬಿದ್ದಿರುವ ಘಟನೆ ತಾಲೂಕಿನ ಮಧುರೆ ಹೋಬಳಿಯ ಚಿನ್ನದೇವಿ ಅಗ್ರಹಾರ ಗ್ರಾಮದಲ್ಲಿ ನಡೆದಿದೆ. ಇದರಿಂದಾಗಿ ಜನರಿಗೆ ತೀವ್ರ ತೊಂದರೆಯಾಗಿದ್ದು, ಅನಾಹುತ ಸಂಭವಿಸುವುದಕ್ಕಿಂತ ಮೊದಲು ವಿದ್ಯುತ್ ಕಂಬಗಳನ್ನು ತೆರವುಗೊಳಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಶನೈಶ್ಚರ ಸ್ವಾಮಿಗೆ ವಿಶೇಷ ಅಲಂಕಾರ, ಪೂಜೆ

ಹಿಂದುಗಳ ವಿಶೇಷ ಹಬ್ಬ ಯುಗಾದಿ

ತಾವರೆಕೆರೆ: ಹೊಸಕೋಟೆ ತಾಲೂಕಿನ ದೊಡ್ಡ ನಲ್ಲೂರಹಳ್ಳಿ ಗ್ರಾಮದ ಶ್ರೀ ಅಭಯ ಶನೈಶ್ಚರ ಸ್ವಾಮಿ ಕ್ಷೇತ್ರದಲ್ಲಿ ಯುಗಾದಿ ಹಬ್ಬ ಹಾಗೂ ಶನಿವಾರದ ವಿಶೇಷ ದಿನದಂದು ಸ್ವಾಮಿಗೆ ವಿಶೇಷ ಅಭಿಷೇಕ ಹಾಗೂ ವಿಶೇಷ ಹೂವಿನ ಅಲಂಕಾರದೊಂದಿಗೆ ಕ್ಷೇತ್ರದ ಧರ್ಮದರ್ಶಿಗಳಾದ ಶ್ರೀ ವೀರಬ್ರಹ್ಮಾಚಾರಿ ಗುರೂಜಿಗಳ ದಿವ್ಯ ಸಾನಿನ್ನಧ್ಯದಲ್ಲಿ ಪೂಜಾ ಕಾರ್ಯಕ್ರಮಗಳು ನೆರವೇರಿತು.

ನಂತರ ಮಾತನಾಡಿದ ಅವರು, ಕ್ಷೇತ್ರದಲ್ಲಿ ಪ್ರತಿ ಶನಿವಾರ ವಿಶೇಷ ಪೂಜೆ ಹಾಗೂ ಅಲಂಕಾರಗಳೊಂದಿಗೆ ಪೂಜಾ ಕಾರ್ಯಕ್ರಮಗಳು ನೆರವೇರುತ್ತಾ ಬಂದಿದೆ. ಅದೇ ರೀತಿ ಶನಿವಾರ ಶ್ರೀ ಶನೈಶ್ಚರ ಸ್ವಾಮಿಗೆ ಯುಗಾದಿ ಹಬ್ಬ ಹಾಗೂ ಶನಿವಾರದ ಪ್ರಯುಕ್ತ ವಿಶೇಷ ಪೂಜೆ ಹಾಗೂ ಪಂಚಾಮೃತ ಅಭಿಷೇಕ ಮೂಲಕ ಪೂಜಾ ಕಾರ್ಯಕ್ರಮ ನೆರವೇರಿತು. ಕ್ಷೇತ್ರದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಹಾಗೂ ಭಾನುವಾರ ಅಮಾವಾಸ್ಯೆ, ಹುಣ್ಣಿಮೆ ದಿನದಂದು ಸಾವಿರಾರು ಸಂಖ್ಯೆಯಲ್ಲಿ ಭಕ್ತ ಸಮೂಹ ಕ್ಷೇತ್ರಕ್ಕೆ ಬಂದು ದೇವರ ಮುಂದೆ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಇಟ್ಟು ಪ್ರಾರ್ಥಿಸುತ್ತಾರೆ ಎಂದರು. ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದಲೂ ಸಹ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಯುಗಾದಿಯು ಹಿಂದುಗಳ ಪ್ರಮುಖ ಹೊಸ ವರ್ಷದ ಹಬ್ಬವಾಗಿದ್ದು, ಚೈತ್ರ ಮಾಸದ ಶುಕ್ಲ ಪಕ್ಷದ ಮೊದಲ ದಿನದಂದು ಆಚರಿಸಲಾಗುತ್ತದೆ. ಇದು ಸೃಷ್ಟಿಕರ್ತ ಬ್ರಹ್ಮದೇವನು ಜಗತ್ತನ್ನು ಸೃಷ್ಟಿಸಿದ ದಿನವೆಂದು ನಂಬಲಾಗಿದೆ. ವಸಂತ ಋತುವಿನ ಆರಂಭ, ಹೊಸ ಆರಂಭಗಳು, ಸುಖ-ಸಮೃದ್ಧಿ ಮತ್ತು ಬೇವು-ಬೆಲ್ಲದ ಮೂಲಕ ಜೀವನದ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಸಂದೇಶವನ್ನು ಈ ಹಬ್ಬ ಸಾರುತ್ತದೆ. ಯುಗ ಎಂದರೆ ಕಾಲ, 'ಆದಿ' ಎಂದರೆ ಆರಂಭ. ಈ ಹಬ್ಬವು ಹಿಂದು ಚಂದ್ರಮಾನ ಪಂಚಾಂಗದ ಪ್ರಕಾರ ಹೊಸ ಸಂವತ್ಸರದ ಆರಂಭವನ್ನು ಸೂಚಿಸುತ್ತದೆ. ಪೌರಾಣಿಕ ನಂಬಿಕೆಯ ಪ್ರಕಾರ, ಬ್ರಹ್ಮದೇವನು ಈ ದಿನ ವಿಶ್ವವನ್ನು ಸೃಷ್ಟಿಸಿದನು. ವಸಂತ ಋತುವಿನ ಆಗಮನದೊಂದಿಗೆ, ಮರಗಿಡಗಳು ಚಿಗುರಿ, ಪ್ರಕೃತಿಯು ಹಸಿರಿನಿಂದ ಕಂಗೊಳಿಸುತ್ತದೆ. ಇದು ನವಚೇತನದ ಸಂಕೇತವಾಗಿದೆ.



ಪೂಜಾ ಕಾರ್ಯಕ್ರಮದಲ್ಲಿ ರವಿಸುತ ಚಾರಿಟೆಬಲ್ ಟ್ರಸ್ಟ್ ಪದಾಧಿಕಾರಿಗಳು ಹಾಗೂ ಭಕ್ತ ಸಮೂಹ ಸ್ಥಳೀಯರು ಭಾಗವಹಿಸಿದ್ದರು.

ಹೊಸ ಕೆಲಸ, ಉದ್ಯಮ ಆರಂಭಕ್ಕೆ ಯುಗಾದಿ ಪ್ರಶಸ್ತ್ಯ: ಜೀವನದಲ್ಲಿ ಬರುವ ಕಹಿ (ಕಷ್ಟ) ಮತ್ತು ಸಿಹಿ (ಸುಖ) ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ಎಂಬ ಪಾಠವನ್ನು ಬೇವು-ಬೆಲ್ಲ ತಿನ್ನುವ ಮೂಲಕ ತಿಳಿಸಲಾಗುತ್ತದೆ. ಹೊಸ ವರ್ಷದ ಗ್ರಹಗತಿಗಳು, ಹವಾಮಾನ ಮತ್ತು ಭವಿಷ್ಯದ ಬಗ್ಗೆ ಜ್ಯೋತಿಷಿಗಳಿಂದ ತಿಳಿಯುವ, ವರ್ಷದ ಯೋಜನೆಗಳನ್ನು ರೂಪಿಸುವ ದಿನವಿದು. ರೈತರು ಹೊಸ ಬೆಳೆ, ಕೃಷಿ ಕೆಲಸಗಳನ್ನು ಶುರು ಮಾಡುವ ಶುಭ ದಿನವೆಂದು ಪರಿಗಣಿಸುತ್ತಾರೆ. ಹೊಸ ಕೆಲಸ, ಉದ್ಯಮಗಳನ್ನು ಆರಂಭಿಸಲು ಯುಗಾದಿಯು ಅತ್ಯಂತ ಪ್ರಶಸ್ತವಾದ ದಿನವಾಗಿದೆ ಎಂದು ಶ್ರೀ ವೀರಬ್ರಹ್ಮಾಚಾರಿ ಗುರೂಜಿ ತಿಳಿಸಿದರು.

ಏ.3ರಂದು ಕುರುಬ ಸಂಘದ ಚುನಾವಣೆ

ಹೊಸಕೋಟೆ: ಐದು ವರ್ಷಗಳಿಗೊಮ್ಮೆ ನಡೆಯುವ ತಾಲೂಕು ಕುರುಬರ ಸಂಘದ ಚುನಾವಣೆ ಏಪ್ರಿಲ್ 3ಕ್ಕೆ ನಿಗದಿ ಪಡಿಸಲಾಗಿದ್ದು ಸಂಘದ 1300 ಸದಸ್ಯರೂ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆಡಳಿತ ಮಂಡಳಿಯ ನಿರ್ದೇಶಕರನ್ನು ಆಯ್ಕೆ ಮಾಡಬೇಕು ಎಂದು ಕುರುಬರ ಸಂಘದ ಅಧ್ಯಕ್ಷ ರಾಮಾಂಜಿನಿ ತಿಳಿಸಿದರು.

ನಗರದ ಕನಕ ಭವನ ಸಭಾಂಗಣದಲ್ಲಿ ಸುದ್ದಿಗೋಷ್ಠಿ ಏರ್ಪಡಿಸಿ ಮಾತನಾಡಿದ ಅವರು, ಸಂಘದ ಹಾಗೂ ಸಮುದಾಯದ ಅಭಿವೃದ್ಧಿಗೆ ಪ್ರತಿ 5 ವರ್ಷಕ್ಕೊಮ್ಮೆ ಚುನಾವಣೆ ನಡೆಸಿಕೊಂಡು ಬಂದಿದ್ದು, ಸಂಘದಲ್ಲಿ 1326 ಸದಸ್ಯರು ಇದ್ದು ನೂತನವಾಗಿ 750 ಸದಸ್ಯರು ಇದ್ದು, ಕೇವಲ ಹಳೆಯ ಸದಸ್ಯರಿಗೆ ಮಾತ್ರ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ. ನೂತನವಾಗಿ ಸಂಘದ ಸದಸ್ಯರಾಗಿರುವವರಿಗೆ ಈ ಬಾರಿ ಚುನಾವಣೆಯಲ್ಲಿ ಮತದಾನದ ಹಕ್ಕು ಇರುವುದಿಲ್ಲ, ಇದು ಸಂಘದ ಬೈಲಾ ಪ್ರಕಾರ ಇದ್ದು ಮುಂದಿನ ಬಾರಿ ಚುನಾವಣೆಯಲ್ಲಿ ಭಾಗವಹಿಸಬಹುದಾಗಿದೆ ಎಂದರು. ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಚನ್ನಸಂದ್ರ ನಾಗರಾಜ್ ಮಾತನಾಡಿ, ಇದೇ ಮಾರ್ಚ್ 26 ಮತ್ತು 27 ರಂದು ಚುನಾವಣೆಗೆ ನಾಮಪತ್ರ ಸಲ್ಲಿಸಲು ಬೆಳಗ್ಗೆ 11 ರಿಂದ ಮಧ್ಯಾನ 3 ಗಂಟೆಯವರೆಗೆ ಅವಕಾಶ ಇದೆ, 28ರಂದು ನಾಮಪತ್ರ ಪರಿಶೀಲನೆ, 29ರಂದು ನಾಮಪತ್ರ ವಾಪಸ್ ಪಡೆಯಲು ಅವಕಾಶ, 31ರಂದು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಏಪ್ರಿಲ್ 3 ರಂದು ಬೆಳಗ್ಗೆ 9 ರಿಂದ 3 ಗಂಟೆಯವರೆಗೆ ನಗರದ ಕನಕ ಭವನದಲ್ಲಿ ಚುನಾವಣೆ ನಡೆಯಲಿದ್ದು 3 ಗಂಟೆಯ ನಂತರ ಮತ ಎಣಿಕೆ ಹಾಗೂ ಫಲಿತಾಂಶ ಪ್ರಕಟಿಸಲಾಗುವುದು ಎಂದರು. ಈ ಸುದ್ದಿಗೋಷ್ಠಿಯಲ್ಲಿ ಕುರುಬರ ಸಂಘದ ಅಧ್ಯಕ್ಷ ರಾಮಾಂಜಿನಿ, ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ರಾಜಣ್ಣ, ಸಹ ಕಾರ್ಯದರ್ಶಿ ಕೆಂಪಣ್ಣ, ನಿರ್ದೇಶಕರಾದ ಸಿ.ನಾಗರಾಜ್, ಮುನಿರಾಜ್, ನಾರಾಯಣಸ್ವಾಮಿ, ರಾಜೇಂದ್ರ, ದಶರಥ್, ಎಸ್.ಪಿ. ರಾಮು, ಟಿ.ನಾಗರಾಜ್ ಸೇರಿ ಹಲವರು ಹಾಜರಿದ್ದರು



ಕಿರುಸುದ್ದಿ

ಹಿಂದುಗಳ ನೆಮ್ಮದಿಗಾಗಿ ಶ್ರೀ ಪ್ರತ್ಯಂಗಿರಾ ಹೋಮ



ನಾಗಮಂಗಲ: ಯುಗಾದಿಯ ಹೊಸ ವರ್ಷದ ಪರಾಭವ ಸಂವತ್ಸರದಲ್ಲಿ ಸಮಸ್ತ ಹಿಂದುಗಳಿಗೆ ಶಾಂತಿ, ನೆಮ್ಮದಿ, ಆರೋಗ್ಯ ಲಭಿಸಲಿ ಎಂದು ಶ್ರೀ ಪ್ರತ್ಯಂಗಿರಾ ಹೋಮವನ್ನು ಆಯೋಜಿಸಲಾಗಿತ್ತು ಎಂದು ಶ್ರೀ ಕೋದಂಡರಾಮಸ್ವಾಮಿ ಟ್ರಸ್ಟ್ ಅಧ್ಯಕ್ಷರಾದ ಯೋಗೇಶ್ ಗುರೂಜಿ ತಿಳಿಸಿದರು.

ಪಟ್ಟಣದ ಶ್ರೀ ಕೋದಂಡರಾಮಸ್ವಾಮಿ ಕೈಂಕರ್ಯ ಭಕ್ತ ಮಂಡಳಿ ಟ್ರಸ್ಟ್(ರಿ) ವತಿಯಿಂದ ಆಯೋಜಿಸಲಾಗಿದ್ದ ಶ್ರೀ ಪ್ರತ್ಯಂಗೀರಾದೇವಿ ಹೋಮದ ನಂತರ ಮಾತನಾಡಿದ ಅವರು ಹಿಂದೂಗಳ ಹೊಸ ವರ್ಷ ಯುಗಾದಿ ಹಬ್ಬವು ಈ ಬಾರಿ ಅಮಾವಾಸ್ಯೆಯ ವಿಶೇಷವಾಗಿದ್ದು ಶ್ರೀ ಪ್ರತ್ಯಂಗಿರಾದೇವಿ ಹೋಮವನ್ನು ಹಮ್ಮಿಕೊಳ್ಳಲಾಗಿದೆ ಈ ಹೋಮ ಸಾಮಾನ್ಯವಾದದ್ದಲ್ಲ ಪ್ರತಿಯೊಬ್ಬರಿಗೂ ದೃಷ್ಟಿ ದೋಷ ಶಾಂತಿ ನೆಮ್ಮದಿ ಆರೋಗ್ಯ, ಭಾಗ್ಯ ಲಭಿಸಲಿದೆ ಈ ಹೋಮದಲ್ಲಿ ಸಿಪ್ಪೆ ಸಹಿತ ಒಣಕಾಯಿ, ಉಂಡೆ ಬೆಳ್ಳುಳ್ಳಿ ಮೆಣಸು, ಒಣ ಶುಂಠಿ,ಕೆಂಪು ಮೆಣಸಿನ ಕಾಯಿ, ಬಿಳಿಎಳ್ಳು, ತುಪ್ಪ, ಉಪ್ಪು ಸೇರಿದಂತೆ ಹಲವು ಪದಾರ್ಥಗಳನ್ನು ಬಳಸಲಾಗುವುದು ಇದರಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗವಹಿಸುವ ಪ್ರತಿಯೊಬ್ಬರಿಗೂ ಒಳ್ಳೆಯದಾಗಲಿದೆ ಮುಂದಿನ ದಿನಗಳಲ್ಲಿ ಪ್ರತೀ ಅಮಾವಾಸ್ಯೆಯಂದು ಶ್ರೀ ಪ್ರತ್ಯಂಗಿರಾದೇವಿ ಹೋಮ ನಡೆಸಲಾಗುತ್ತದೆ ಹಾಗೂ ಶ್ರೀ ಕೋದಂಡರಾಮಸ್ವಾಮಿ ದೇವಾಲಯ ಶಿಥಿಲಗೊಂಡಿದ್ದು ನವೀಕರಣ ನಡೆಯುತ್ತಿದೆ ಭಕ್ತಾದಿಗಳು ತನು ಮನ ಧನದ ಮೂಲಕ ಸಹಕರಿಸಬೇಕು ಎಂದು ತಿಳಿಸಿದರು.

ಈ ಸಮಯದಲ್ಲಿ ಹರಿಶ್ ಬಾಬು, ಮೂರ್ತಿ, ಎಚ್. ಗೌಡ, ಕಂಟ್ರಾಕ್ಟರ್ ಲೋಕಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೊಸಹಳ್ಳಿ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಕೆ.ಆರ್.ನಗರ: ತಾಲೂಕಿನ ಹೊಸಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ವಿಜಯಕುಮಾರ್, ಉಪಾಧ್ಯಕ್ಷರಾಗಿ ರಾಜನಾಯಕ ಅವಿರೋಧವಾಗಿ ಆಯ್ಕೆಯಾದರು.

ಶುಕ್ರವಾರ ಸಂಘದ ಆಡಳಿತ ಕಛೇರಿಯಲ್ಲಿ ಅಧ್ಯಕ್ಷ ?ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಈ ಇಬ್ಬರನ್ನು ಹೊರತುಪಡಿಸಿ ಬೇರ್‍ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಎಸ್.ರವಿ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ವೆಂಕಟೇಗೌಡ, ರಮೇಶ್, ತಿರ್ಥೇಶ್, ಮೂಡಲಕೊಪ್ಪಲುರಮೇಶ್, ಎಲ್.ಎಸ್. ಮಹೇಶ್, ಮಂಜುಳಾಗುಡ್ಡಪ್ಪ, ಎನ್.ಹೇಮಲತಾ, ಸುರೇಶ್, ಲಕ್ಷ್ಮಣ, ಎ.ಎಂ.ಜಯಣ್ಣ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಟಿ.ಉಮೇಶ್, ಸಂಘದ ಸಿಇಒ ಎಂ.ಜಿ. ಸಂತೋಷ್ ಇದ್ದರು.

ನೂತನ ಅಧ್ಯಕ್ಷ ವಿಜಯಕುಮಾರ್, ಉಪಾಧ್ಯಕ್ಷ ರಾಜನಾಯಕ ಅವರನ್ನು ಕಾಂಗ್ರೆಸ್ ಪಕ್ಷ ಮುಖಂಡರು ಮತ್ತು ಅವರ ಬೆಂಬಲಿಗರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ಮಹದೇವ್, ವಕ್ತಾರ ಸೈಯದ್ ಜಾಬೀರ್, ಜಿ.ಪಂ. ಮಾಜಿ ಸದಸ್ಯ ಮಾರ್ಚಹಳ್ಳಿ ಶಿವರಾಂ, ಎಪಿಎಂಸಿ ಮಾಜಿ ನಿರ್ದೇಶಕ ಎಲ್.ಪಿ.ರವಿಕುಮಾರ್, ದೊಡ್ಡೆಕೊಪ್ಪಲು ಮಾಜಿ ಗ್ರಾ.ಪಂ.ಅಧ್ಯಕ್ಷ ಭಾಗ್ಯಕರೀಗೌಡ, ಚಂದ್ರೇಗೌಡ, ಮುಖಂಡರಾದ ಉಮೇಶ್, ಗಿರೀಶ್, ಕೆ.ಎಂ.ಹರೀಶ್ ಮತ್ತಿತರರು ಹಾಜರಿದ್ದರು.

ಸದನದಲ್ಲಿ ಧ್ವನಿ ಎತ್ತಿದ್ದ ಶಾಸಕ ದರ್ಶನ ಪುಟ್ಟಣ್ಣಯ್ಯ । ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸಿ

ಪಾಂಡವಪುರ: 2026–27ನೇ ಸಾಲಿನ ಬಜೆಟ್ ಅಧಿವೇಶದನದಲ್ಲಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಪರ ಸದನದಲ್ಲಿ ಧ್ವನಿ ಎತ್ತಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ತಿಂಗಳಿಗೆ ಕೆಲಸದ ಸರಾಸರಿ ಗಂಟೆಗಳೆಷ್ಟು? ಪ್ರಸ್ತುತ ಸೇವೆಯಲ್ಲಿರುವ ಕಾರ್ಯಕರ್ತೆಯರ ಸಂಖ್ಯೆಯೆಷ್ಟು? ಈ ಕಾರ್ಯಕರ್ತೆಯರಿಗೆ ಸರ್ಕಾರ ಪ್ರತಿ ತಿಂಗಳಿಗೆ ನೀಡುವ ವೇತನ ಎಷ್ಟು?ವೇತನವನ್ನು ಕೊನೆಯ ಬಾರಿಗೆ ಹೆಚ್ಚಿಸಿದ ದಿನಾಂಕ ಯಾವುದು? ಇವರು ಸಮಾಜಕ್ಕೆ ನೀಡುತ್ತಿರುವ ಅಮೂಲ್ಯ ಸೇವೆಯನ್ನು ಗಮನದಲ್ಲಿಟ್ಟುಕೊಂಡು 2026–27ನೇ ಹಣಕಾಸು ವರ್ಷದಲ್ಲಿ ಅವರ ವೇತನವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಎಂದು ಪ್ರಶ್ನಿಸಿದರು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರಿಗೆ ಅತಿ ಹೆಚ್ಚು ಜವಾಬ್ದಾರಿಗಳಿವೆ. ಅಂಗನವಾಡಿ ಕಾರ್ಯಕರ್ತೆಯರು ಮಹಿಳೆಯರು, ಮಕ್ಕಳು ಮತ್ತು ಗರ್ಭಿಣಿಯರ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುತ್ತಾರೆ. ಮನೆಮನೆಗಳಿಗೆ ಯೋಜನೆಗಳನ್ನು ತಲುಪಿಸಲು ಕೆಲಸ ಮಾಡುತ್ತಾರೆ. 6 ತಿಂಗಳಿಂದ 6 ವಯಸ್ಸಿನ ಪೋಷಣ ಆಹಾರಗಳನ್ನು ಯಾವ ರೀತಿ ಕೊಡಬೇಕು ಎಂಬುದರ ಕುರಿತು ಜನರಿಗೆ ಮಾಹಿತಿ ಕೊಡುತ್ತಾರೆ. ಗರ್ಭಿಣಿಯರು ಮತ್ತು ತಾಯಂದಿರಿಗೆ ಆರೋಗ್ಯ ಮತ್ತು ಪೋಷಣೆ ಸಲಹೆ ಕೊಡುತ್ತಾರೆ. ಇಂತಹ ಹಲವಾರು ಕಾರ್ಯಗಳನ್ನು ಕಾರ್ಯಕರ್ತೆಯರು ಮಾಡುತ್ತಾರೆ ಎಂದರು.



ಇವರಿಗೆ ಸಂಬಳ ಕಡಿಮೆ. ಸಮಯಕ್ಕೆ ಸರಿಯಾಗಿ ಸಂಬಳ ಆಗುವುದಿಲ್ಲ, ಇದು ಮುಖ್ಯ ಸಮಸ್ಯೆ. ಅವರಿಗೆ ಯಾವುದೇ ಸರ್ಕಾರಿ ಉದ್ಯೋಗ ಮಾನ್ಯತೆ ಇಲ್ಲ, ಆದರೂ ಇವುಗಳ ನಡುವೆ ಯಾವುದೇ ಸರ್ಕಾರಿ ಸೇವೆಗಳಿದ್ದರೂ ಅವುಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸವನ್ನು ಮಾಡಬೇಕು. ಕೆಲವೆಡೆ ಆಹಾರ ತಲುಪಿಸುವುದು ತುಂಬಾ ವಿಳಂಬವಾಗುತ್ತಿದೆ ಎಂದು ದರ್ಶನ್ ಪುಟ್ಟಣ್ಣಯ್ಯ ಸದನದ ಗಮನ ಸೆಳೆದರು. ಆಶಾ ಕಾರ್ಯಕರ್ತೆಯರು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಾರೆ ಮತ್ತು ಸರ್ಕಾರದ ಸೇವೆಗಳಾದ ಐಸಿಡಿಎಸ್, ಎನ್ ಎಚ್ ಎಮ್, ಎ ಎನ್ ಸಿ, ಪಿ ಎಚ್ ಸಿ ಸೇವೆಗಳ ಜೊತೆಗೆ ಲಸಿಕೆಗಳನ್ನು ಹಾಕುವ ಕೆಲಸ ಕೂಡ ಮಾಡುತ್ತಾರೆ. ಜೊತೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೂಡ ಸಹಾಯಕರಾಗಿ ಕೆಲಸ ಮಾಡುತ್ತಾರೆ ಎಂದು ಸಚಿವರ ಗಮನ ಸೆಳೆದರು. ಹೀಗೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು ಕಡೆಯ ಹಳ್ಳಿಯ ಕೊನೆಯ ವ್ಯಕ್ತಿಗೆ ತಳ ಮಟ್ಟದಲ್ಲಿ ಬಹುಮುಖ್ಯ ಸೇವೆಗಳನ್ನು ಒದಗಿಸುತ್ತಾರೆ. ಇವರಿಗೆ ಸಂಬಳ ಹೆಚ್ಚಳ ಮತ್ತು ಆರೋಗ್ಯ ಭದ್ರತೆಯನ್ನು ಒದಗಿಸಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು. ಅವರ ಪ್ರಶ್ನೆಗೆ ಉತ್ತರಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಮಾಡುವ ಕೆಲಸದಲ್ಲಿ ಯಾವುದೇ ಪ್ರಶ್ನೆ ಇಲ್ಲ. ಅಂಗನವಾಡಿ ಕಾರ್ಯಕರ್ತೆಯರು ಸರ್ಕಾರಿ ಯೋಜನೆಗಳನ್ನು ಜನರಿಗೆ ಕೊಂಡೊಯ್ಯುವ ಕೊಂಡಿ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಸರ್ಕಾರದ ಯಾವುದೇ ಯೋಜನೆಗಳು, ಏನೇ ಕೆಲಸ ಇದ್ದರು ಬಹಳಷ್ಟು ಉತ್ತಮ ರೀತಿಯಲ್ಲಿ ಹಳ್ಳಿಮಟ್ಟದಲ್ಲಿ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತಂದುಕೊಡುವವರು ಆಶಾ, ಅಂಗನವಾಡಿ ಕಾರ್ಯಕರ್ತೆಯರು ಎಂದರು. ದರ್ಶನ್ ಪುಟ್ಟಣ್ಣಯ್ಯನವರು ಹೇಳಿದಂತೆ ಆಶಾ, ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನ ಹೆಚ್ಚಳ ಮಾಡಬೇಕು. ಕರ್ನಾಟಕ ರಾಜ್ಯ ಇಡೀ ದೇಶದಲ್ಲಿ ಅತ್ಯಧಿಕ ಗೌರವ ಧನ ಕೊಡುತ್ತಿದೆ. ಹರಿಯಾಣ, ತೆಲಂಗಾಣ, ಕೇರಳ ನಂತರ ನಮ್ಮ ರಾಜ್ಯವಿದೆ. ಕೇಂದ್ರ ಸರ್ಕಾರ ಕೇವಲ 2,700 ರೂ. ಮಾತ್ರ ಪಾವತಿಸುತ್ತದೆ. ಆದರೂ ಗೌರವಧನ ಪಾವತಿಯಲ್ಲಿ ಇಡೀ ದೇಶದಲ್ಲೇ ನಮ್ಮ ರಾಜ್ಯ 4ನೇ ಸ್ಥಾನದಲ್ಲಿದೆ ಎಂದರು.

ಪ್ರತಿ ತಿಂಗಳು 12,000 ರೂ. ಗೌರವಧನ

ಈ ವೇಳೆ ಚರ್ಚೆಯಲ್ಲಿ ಪ್ರವೇಶಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಅಂಗನವಾಡಿಯಲ್ಲಿ 12,000 ರೂ. ಪ್ರತಿ ತಿಂಗಳು ಗೌರವ ಧನ ನೀಡಲಾಗುತ್ತಿದೆ. ಇದರಲ್ಲಿ ರಾಜ್ಯದ ಪಾಲು 9,300 ರೂ. ಕೇಂದ್ರ ಸರ್ಕಾರದ ಪಾಲು 2,700 ರೂ. ಆಶಾ ಕಾರ್ಯಕರ್ತೆಯರಿಗೆ 8,000 ರೂ. ಪ್ರತಿ ತಿಂಗಳು ಗೌರವ ಧನ, ಇದರಲ್ಲಿ 6,000 ರೂ. ರಾಜ್ಯದ ಪಾಲು, ಕೇಂದ್ರದ ಪಾಲು 2,000 ರೂ. ಅದೇ ರೀತಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕರ್ತರಿಗೆ 4,000 ರೂ. ಗೌರವಧನ ಕೊಡಲಾಗುತ್ತಿದೆ ಎಂದರು.

ವೇತನ ಹೆಚ್ಚಳಕ್ಕೆ ಒತ್ತಾಯ

ಈ ವೇಳೆ ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ಔರಾದ್ ಶಾಸಕ ಪ್ರಭು ಚೌಹಾಣ್, ನಮಗೂ ಎಲ್ಲರೂ ಮನವಿ ಪತ್ರ ಕೊಟ್ಟಿದ್ದಾರೆ. ದರ್ಶನ್ ಪುಟ್ಟಣ್ಣಯ್ಯ ಮುಖ್ಯ ವಿಷಯವನ್ನು ಸದನದಲ್ಲಿ ಮಂಡಿಸಿದ್ದಾರೆ. ತಾವು ಅತಿ ಹೆಚ್ಚು ಗೌರವ ಧನ ಕೊಡುತ್ತಿರುವುದಾಗಿ ಹೇಳಿದ್ದೀರಿ. ಆದರೆ ಅವರು ಎಲ್ಲ ಶಾಸಕರ ಮನೆಗಳಿಗೆ ಹೋಗಿ ಮನವಿ ಕೊಟ್ಟಿದ್ದಾರೆ. ಅದಕ್ಕಾಗಿ ಗೌರವ ಧನವನ್ನು ಹೆಚ್ಚಿಸಬೇಕು. ಜೊತೆಗೆ ದರ್ಶನ್ ಪುಟ್ಟಣ್ಣಯ್ಯನವರು ಬಹಳ ವಿವರವಾಗಿ ಹೇಳಿದ್ದಾರೆ. ಆ ಮನವಿಯನ್ನು ಪರಿಗಣಿಸಬೇಕು. ಅವರು ಎಲ್ಲ ಕಡೆ ಕೆಲಸ ಮಾಡುತ್ತಾರೆ ಎಂದು ನೀವೇ ಒಪ್ಪಿಕೊಂಡಿದ್ದೀರಿ. ಅವರ ವೇತನವನ್ನು ಹೆಚ್ಚಿಸಿ ಎಂದು ಒತ್ತಾಯಿಸಿದರು.

ಮಹಿಳೆಯರ ಆಭರಣ ದೋಚಿದ್ದ ಆರೋಪಿ ಬಂಧನ

ಬೆಂಗಳೂರು: ಅಂಗಡಿಉದ್ಘಾಟನೆಗೆಮುತ್ತೈದೆಯರು ಬರಬೇಕೆಂದು ನಂಬಿಸಿ, ಮಹಿಳೆಯೊಬ್ಬರನ್ನು ಕರೆದೊಯ್ದು ಅವರ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿದ್ದ ಖತರ್ನಾಕ್ ವಂಚಕನನ್ನು ರಾಜಾಜಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ 15 ಲಕ್ಷ ರೂ. ಮೌಲ್ಯದ 116 ಗ್ರಾಂ ಚಿನ್ನಾಭರಣ ಹಾಗೂ 409 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತ ವಂಚಕ ಪ್ರವೀಣ್ ಭಟ್, ಶ್ರೀಮಂತ ಉದ್ಯಮಿಯಂತೆ ಪೋಸ್ ನೀಡಿ ದೇವಸ್ಥಾನದ ಅರ್ಚಕರೊಂದಿಗೆ ಸ್ನೇಹ ಬೆಳೆಸುತ್ತಿದ್ದ. ದೇವಸ್ಥಾನಗಳಿಗೆ ಸಾವಿರಾರು ರೂಪಾಯಿ ದೇಣಿಗೆ ನೀಡುವ ಮೂಲಕ ಅರ್ಚಕರ ವಿಶ್ವಾಸಗಳಿಸುತ್ತಿದ್ದ. ಪ್ರಕಾಶ ನಗರದ 9ನೇ ಮುಖ್ಯ ರಸ್ತೆಯ ನಿವಾಸಿಯೊಬ್ಬರ ಮನೆಗೆ ಹೋಗಿ, ತನ್ನ ಅಂಗಡಿಉದ್ಘಾಟನಾಕಾರ್ಯಕ್ರಮಕ್ಕೆಭಾಗೀನ ನೀಡಲು ಮುತ್ತೈದೆಯರು ಬರಬೇಕೆಂದು ಅರ್ಚಕರ ಮೂಲಕ ನಂಬಿಸಿ ಆಹ್ವಾನಿಸಿದ್ದ.

ದೂರುದಾರರ ತಾಯಿಯನ್ನು ಆಟೋದಲ್ಲಿ ಕೆ.ಆರ್. ಮಾರ್ಕೆಟ್ ಕಡೆಗೆ ಕರೆದೊಯ್ದ ಪ್ರವೀಣ್, ಹೋಗುವಸ್ಥಳದಲ್ಲಿ ಒಡವೆಧರಿಸಿರಬಾರದು ಎಂದು ಹೇಳಿ ಅವರ ಚಿನ್ನದ ಮಾಂಗಲ್ಯ ಸರ ಹಾಗೂ 2 ಉಂಗುರಗಳನ್ನು ಬಿಚ್ಚಿಸಿಕೊಂಡಿದ್ದಾನೆ. ನಂತರ ಮಾರ್ಕೆಟ್ ಬಳಿ ಅವರನ್ನು ಇಳಿಸಿ ಆಭರಣ ಗಳೊಂದಿಗೆ ಪರಾರಿಯಾಗಿದ್ದಾನೆ. ಇದರಿಂದ ಗಾಬರಿಗೊಂಡ ಮಹಿಳೆ ತಕ್ಷಣ ಮಗನಿಗೆ ವಿಷಯ ತಿಳಿಸಿದ್ದು, ರಾಜಾಜಿನಗರ ಠಾಣೆ ಯಲ್ಲಿ ದೂರು ದಾಖಲಾಗಿತ್ತು.

ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ಕೆಂಪೇಗೌಡ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ವಿಚಾರಣೆ ವೇಳೆ ಆತ ನಗರದ ವಿವಿಧ ಜ್ಯುವೆಲರಿ ಅಂಗಡಿಗಳಲ್ಲಿ ಆಭರಣ ಮಾರಾಟ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಹೊಸೂರು ರಸ್ತೆಯಲ್ಲಿರುವ ಆತನ ಮನೆಯಿಂದ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿ ಬಂಧನದಿಂದ ರಾಜಾಜಿನಗರ, ಹೆಬ್ಬಾಳ, ರಾಮಮೂರ್ತಿನಗರ ಹಾಗೂ ಸಿಟಿ ಮಾರ್ಕೆಟ್ ಠಾಣೆಗಳ ತಲಾ ಒಂದು ಪ್ರಕರಣಗಳು ಸೇರಿದಂತೆ ಒಟ್ಟು 4 ಪ್ರಕರಣಗಳು ಬೆಳಕಿಗೆ ಬಂದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಜಿಟಲ್ ಆರ್ಥಿಕತೆ ಹೆಚ್ಚಳ ಗುರಿ: ಸಚಿವ

ಬೆಂಗಳೂರು: ಬೆಂಗಳೂರು ಆಚೆಗಿನ ಪ್ರದೇಶಗಳು ಇಂದು ಕರ್ನಾಟಕದ ಡಿಜಿಟಲ್ ಆರ್ಥಿಕತೆಗೆ ಸುಮಾರು ಶೇ.3 ರಷ್ಟು ಕೊಡುಗೆ ನೀಡುತ್ತಿವೆ. 2030ರ ವೇಳೆಗೆ ನಾವು ಇದನ್ನು ಶೇ.10 ಕ್ಕೆ ಏರಿಸುವ ಗುರಿ ಹೊಂದಿದ್ದೇವೆ ಎಂದು ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಕೆಡಿಇಎಂ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರು ಆಚೆಗಿನ ಪ್ರದೇಶಗಳು ಇಂದು ಕರ್ನಾಟಕದ ಡಿಜಿಟಲ್ ಆರ್ಥಿಕತೆಗೆ ಸುಮಾರು ಶೇ. 3 ರಷ್ಟು ಕೊಡುಗೆ ನೀಡುತ್ತಿವೆ. 2030ರ ವೇಳೆಗೆ ನಾವು ಇದನ್ನು ಶೇ.10 ಕ್ಕೆ ಏರಿಸುವ ಗುರಿ ಹೊಂದಿದ್ದೇವೆ. ಈ ಪರಿವರ್ತನೆಯನ್ನು ಸಾಧಿಸಲು ನಮ್ಮಲ್ಲಿ ಸರಿಯಾದ ನೀತಿಗಳು, ಪೂರಕವಾದ ಪರಿಸರ ವ್ಯವಸ್ಥೆ ಇದೆ ಮತ್ತು ಇದನ್ನು ಕಾರ್ಯಗತಗೊಳಿಸುವ ಎಂಜಿನ್ ಆಗಿ ಕೆಡಿಇಎಂ ನಮ್ಮೊಂದಿಗಿದೆ ಎಂದು ಹೇಳಿದರು. ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ.ಮಂಜುಳಾ ಎನ್.ಮಾತನಾಡಿ, ಕರ್ನಾಟಕದ ಜಿಸಿಸಿ ನೀತಿ, ಐಟಿ ನೀತಿ, ಸ್ಟಾರ್ಟ್‌ಅಪ್ ನೀತಿ ಮತ್ತು ಇಎಸ್ಡಿಎಂ ನೀತಿಗಳು ರಾಜ್ಯವು ಜಾರಿಗೆ ತಂದಿರುವ ಅತ್ಯಂತ ಸಮಗ್ರವಾದ ಡಿಜಿಟಲ್ ಆರ್ಥಿಕ ಕಾರ್ಯಸೂಚಿಯನ್ನು ಪ್ರತಿನಿಧಿಸುತ್ತವೆ.ನಮ್ಮ ಗುರಿಗಳು ಸ್ಪಷ್ಟವಾಗಿವೆ ಮತ್ತು ಪ್ರತಿ ಜಿಲ್ಲೆಯಲ್ಲೂ ಕಾರ್ಯಗತಗೊಳಿಸುವ ಮೂಲಸೌಕರ್ಯಗಳನ್ನು ನಿರ್ಮಿಸಲಾಗುತ್ತಿದೆ ಎಂದರು.



ರೆಡ್‌ಕ್ರಾಸ್ ಸಂಸ್ಥೆಗೆ ರಾಜಕೀಯ: ಬೇಸರದ ಸಂಗತಿ

ತುಮಕೂರು: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಒಂದು ಸೇವಾ ಮನೋಭಾವ ಹಿನ್ನೆಲೆಯ ಸಂಸ್ಥೆ. ಆದರೆ ಚುನಾವಣೆ ಅಂಗವಾಗಿ ರೆಡ್‌ಕ್ರಾಸ್ ಸಂಸ್ಥೆಗೆ ರಾಜಕೀಯ ನುಸುಳಿರುವುದು ಬೇಸರದ ಸಂಗತಿ ಎಂದು ಮಾಜಿ ಸಚಿವ ಸೊಗಡು ಶಿವಣ್ಣ ಪತ್ರಿಕಾ ಪ್ರಕಟಣೆ ಮೂಲಕ ಬೇಸರ ವ್ಯಕ್ತಪಡಿಸಿದ್ದಾರೆ. 1955 ರಲ್ಲಿ ಈ ಸಂಸ್ಥೆ ತುಮಕೂರಿನಲ್ಲಿ ಜನ್ಮತಾಳಿತು. ಹಿರಿಯರಾದ ಡಾ.ಟಿ.ಎಸ್. ಮಲ್ಲಿಕಾರ್ಜುನಯ್ಯ, ಬಾಪೂಜಿ ಸಂಸ್ಥೆಯ ಎನ್.ಬಸವಯ್ಯ ಅವರಂತಹ ಹಲವರು ಹುಟ್ಟು ಹಾಕಿದ ಸಂಸ್ಥೆ. ಇದೀಗ ಹೆಮ್ಮರವಾಗಿ ಬೆಳೆದು ನಿಂತಿದೆ. 2009ರಲ್ಲಿ ಅಂದಿನ ಚೇರ್ಮನ್ ಟಿ.ಎಂ.ಸ್ವಾಮಿ ನೇತೃತ್ವದಲ್ಲಿ ಅಶೋಕ ರಸ್ತೆಯಲ್ಲಿರುವ ರೆಡ್ ಕ್ರಾಸ್ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಚಾಲನೆ ಸಿಕ್ಕಿತು.



ಇಂತಹ ನಿಸ್ವಾರ್ಥ, ಸೇವಾಸಂಸ್ಥೆಯಲ್ಲಿ ಮೊದಲ ಬಾರಿಗೆ ರಾಜಕೀಯ ನುಸುಳಿದೆ. ಇದಕ್ಕೆ ಕಾರಣ ಯಾರು ಎಂಬುದು ಜಗಜ್ಜಾಹೀರಾಗಿರುವ ವಿಷಯ. ಮೊದಲ ಬಾರಿಗೆ ಎರಡು ವರ್ಷದ ಅವಧಿಗೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಗೆ ಚುನಾವಣೆ ನಡೆಯುತ್ತಿದ್ದು ಬಲಾಢ್ಯರೊಬ್ಬರು ಅಧಿಕಾರ ದರ್ಪ ಬಳಸಿಕೊಂಡು ಅರ್ಹ ಮತದಾರರ ಹೆಸರನ್ನು ಕೈಬಿಟ್ಟಿದ್ದರು. ಇದನ್ನು ಪ್ರಶ್ನಿಸಿ ಆಜೀವ ಸದಸ್ಯರು ಹೈಕೋರ್ಟ್ ಮೆಟ್ಟಿಲೇರಿದ್ದು ಸಕಾರಾತ್ಮಕ ಬೆಳವಣಿಗೆ ಆಶಾಕಿರಣವಾಗಿ ಹೊರಹೊಮ್ಮಿದೆ.

ಇದಲ್ಲದೆ ಈ ಹಿಂದೆ ಕೊರೋನ ಸಂದರ್ಭದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಸೇವೆಯಲ್ಲಿ ಅಕ್ರಮಗಳನ್ನು ತಡೆಯಲು ಯತ್ನಿಸಿದ್ದನ್ನೇ ಮುಚ್ಚಿ ಹಾಕಲು ಇಲ್ಲಸಲ್ಲದ ಸುಳ್ಳು ಹೇಳುತ್ತ ಅಪಪ್ರಚಾರಗಳನ್ನು ಮಾಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳನ್ನು ಬಳಸಿಕೊಂಡು ಹಾಲಿ ಆಡಳಿತ ಮಂಡಳಿಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಮಾ. 15ರಂದು ಸರ್ವ ಸದಸ್ಯರ ಸಭೆ ನಡೆಸಲಾಯಿತು. ಇದು ರೆಡ್ ಕ್ರಾಸ್ ಸಂಸ್ಥೆಯ ಬೈಲಾ ಸ್ಪಷ್ಟ ಉಲ್ಲಂಘನೆ ಆಗಿದೆ. ಈ ಮಹಾ ಸಭೆಯಲ್ಲಿ ಚುನಾವಣೆ ಬೇಡ, ಸರ್ವಾನು ಮತದ ಆಯ್ಕೆಗೆ ನಮ್ಮ ಸಮ್ಮತಿ ಇದೆ ಎಂದು ಒಂದು ತಂಡ ಹೇಳಿತಾದರೂ ಮತ್ತೊಂದು ತಂಡ ಚುನಾವಣೆ ನಡೆಯಲಿ ಎಂದು ಪಟ್ಟು ಹಿಡಿದಿದ್ದರಿಂದಾಗಿ ಮೊಟ್ಟ ಮೊದಲ ಬಾರಿಗೆ ರೆಡ್ ಕ್ರಾಸ್‌ನಲ್ಲಿ ಚುನಾವಣೆ ನಡೆಯುತ್ತಿದೆ.

ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಪದಾಧಿಕಾರಿಗಳ ವಿರುದ್ಧ ಎಫ್‌ಐಆರ್

ಬೆಂಗಳೂರು: ಪ್ರಿನ್ಸ್‌ಟೌನ್ ಅಪಾರ್ಟ್‌ಮೆಂಟ್‌ನಲ್ಲಿ ಭಾರಿ ಮೊತ್ತದ ಹಣ ದುರುಪಯೋಗವಾಗಿರುವ ಆರೋಪ ಕೇಳಿಬಂದಿದ್ದು, ಅಸೋಸಿಯೇಷನ್‌ನ 18 ಮಂದಿ ಸದಸ್ಯರ ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.

ಶೆಟ್ಟಿಹಳ್ಳಿಯಲ್ಲಿರುವ ಪ್ರಿನ್ಸ್ ಟೌನ್ ಅಪಾರ್ಟ್‌ಮೆಂಟ್‌ನಲ್ಲಿ ಸುಮಾರು 700 ಫ್ಲಾಟ್‌ಗಳನ್ನು ಹೊಂದಿರುವ ಈ ಬೃಹತ್ ವಸತಿಸಮುಚ್ಚಯದಲ್ಲಿ ನಿವಾಸಿಗಳಿಂದ ಸಂಗ್ರಹಿಸಿದ ಕೋಟ್ಯಂತರ ರೂಪಾಯಿ ಹಣವನ್ನು ವೈಯಕ್ತಿಕ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ ಎಂದು ನಿವಾಸಿಗಳು ಗಂಭೀರವಾಗಿ ಆರೋಪಿಸಿದ್ದಾರೆ. ಅಪಾರ್ಟ್‌ಮೆಂಟ್ ನಿವಾಸಿ ಹಾಗೂ ವಕೀಲೆ ನಿಶಾ ಅವರು ನೀಡಿದ ದೂರಿನನ್ವಯ, ಅಸೋಸಿಯೇಷನ್ ಅಧ್ಯಕ್ಷ ಅರುಣ್ ಕುಲಕರ್ಣಿ, ಕಾರ್ಯದರ್ಶಿ ಅಲೆಕ್ಸ್, ಖಜಾಂಚಿ ಪ್ರವೀಣ್ ನಾಯ್ಕರ್ ಸೇರಿದಂತೆ ಒಟ್ಟು 18 ಜನರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲೆಕ್ಕದಲ್ಲಿ ಸಿಗದ ಕೋಟಿ ಕೋಟಿ ಹಣ: ಪ್ರತಿ ಫ್ಲಾಟ್‌ನಿಂದ ವಾರ್ಷಿಕ ಸುಮಾರು 60 ಸಾವಿರ ರೂ. ನಿರ್ವಹಣಾ ಶುಲ್ಕ ಸಂಗ್ರಹಿಸಲಾಗುತ್ತಿದ್ದು, ವರ್ಷಕ್ಕೆ ಅಂದಾಜು 3.6 ಕೋಟಿ ರೂ. ಹಣ ಅಸೋಸಿಯೇಷನ್ ಕೈಸೇರುತ್ತದೆ. ಆದರೆ, ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸುಮಾರು 1.73 ಕೋಟಿ ರೂ.ಹಣದಲೆಕ್ಕದಲ್ಲಿ ಭಾರಿವ್ಯತ್ಯಾಸ ಕಂಡುಬಂದಿದೆ. ಆಡಿಟ್ ವರದಿಯಲ್ಲಿ ತೋರಿಸಲಾದ ಖರ್ಚು ವೆಚ್ಚಗಳು ಅನುಮಾನಕ್ಕೆ ಕಾರಣ, ಒಂದು ವರ್ಷ ಆಡಿಟ್ ಖರ್ಚನ್ನೇ 35 ಲಕ್ಷ ರೂ. ಹಾಗೂ ಮತ್ತೊಂದು ವರ್ಷ 24 ಲಕ್ಷ ರೂ. ಎಂದು ತೋರಿಸಿರುವುದು ನಿವಾಸಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಕತ್ತು ಕೊಯ್ದು ಕೊಲೆಗೆ ಯತ್ನ

ಬೆಂಗಳೂರು: ನಗರದ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೆಲಸ ಮುಗಿಸಿಕೊಂಡು ನಡೆದುಕೊಂಡು ಹೋಗುತ್ತಿದ್ದ ಗ್ರಾನೈಟ್ ಕಂಪನಿ ಕಾರ್ಮಿಕನ ಅಡ್ಡಗಟ್ಟಿದ ದುಷ್ಕರ್ಮಿ ಚಾಕುವಿನಿಂದ ಕತ್ತು ಕೊಯ್ದು ಕೊಲೆಗೆ ಯತ್ನಿಸಿದ್ದಾನೆ.

ಮಾದನಾಯಕನಹಳ್ಳಿಯ ಕಡಬಗೆರೆ ಗ್ರಾನೈಟ್ ಕಂಪನಿಯಲ್ಲಿ ಕಾರ್ಮಿಕನಾಗಿರುವ ನಾರಾಯಣ (38) ಎಂಬಾತ ಕೆಲಸ ಮುಗಿಸಿಕೊಂಡು ಶುಕ್ರವಾರ ಬೆಳಗ್ಗೆ 6 ಗಂಟೆ ಸುಮಾರಿನಲ್ಲಿ ನಡೆದುಕೊಂಡು ಹೋಗುತ್ತಿದ್ದರು.

ವಿನಾಯಕನಗರದ ಪೆಟ್ರೋಲ್ ಬಂಕ್ ಬಳಿ ಕಾರ್ಮಿಕನನ್ನು ಅಡ್ಡಗಟ್ಟಿದ ದುಷ್ಕರ್ಮಿ ಏಕಾಏಕಿ ಚಾಕುವಿನಿಂದ ಅವರ ಗಂಟಲಿನ ಭಾಗಕ್ಕೆ ಇರಿದು ಹಲ್ಲೆ ಮಾಡಿ ಪರಾರಿಯಾಗಿದ್ದಾನೆ. ಇರಿತಕ್ಕೆ ಒಳಗಾದ ಕಾರ್ಮಿಕ ಸ್ಥಳದಲ್ಲೇ ಕುಸಿದು ಬಿದ್ದಿದ್ದಾನೆ. ಇದನ್ನು ಗಮನಿಸಿದ ಸ್ಥಳೀಯರು, ತಕ್ಷಣ ನಮ್ಮ 112 ಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ನಂತರ ಕೂಡಲೇ ಹೊಯ್ಸಳ ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ.

ಸುದ್ದಿ ತಿಳಿದು ಸಬ್ ಇನ್‌ಸ್ಪೆಕ್ಟರ್ ಕೆಂಪರಾಜು, ಇನ್‌ಸ್ಪೆಕ್ಟರ್ ಹರೀಶ್‌ಕುಮಾರ್ ಅವರು ತಕ್ಷಣ ಘಟನಾ ಸ್ಥಳಕ್ಕೆ ಹೋಗಿ ರಸ್ತೆಯಲ್ಲಿ ಬಿದ್ದಿದ್ದ ವ್ಯಕ್ತಿಯನ್ನು ಸುಂಕದಕಟ್ಟೆಯಲ್ಲಿರುವ ನರ್ಸಿಂಗ್ ಹೋಮ್‌ಗೆ ಕರೆದೊಯ್ದು ತುರ್ತು

ಚಿಕಿತ್ಸೆ ಕೊಡಿಸಿ, ನಂತರ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಕಾರ್ಮಿಕ ಪ್ರಾಣಾಪಾಯದಿಂದ ಪರಾಗಿದ್ದಾನೆ.

ಈ ಕಾರ್ಮಿಕನ ಪೂರ್ಣ ವಿಳಾಸ ಸದ್ಯಕ್ಕೆ ತಿಳಿದು ಬಂದಿಲ್ಲ. ಕಾರ್ಮಿಕ ಸದ್ಯಕ್ಕೆ ಮಾತನಾಡುವ ಸ್ಥಿತಿಯಲ್ಲಿಲ್ಲ. ಆತ ಚೇತರಿಸಿಕೊಂಡ ಬಳಿಕವಷ್ಟೇ ಏತಕ್ಕಾಗಿ ಯಾರು ಚಾಕುವಿನಿಂದ ಇರಿದರು ಎಂಬುವುದು ಗೊತ್ತಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂದು ಮುಸ್ಲಿಂ ಸಹೋದರರಾಗಿ ಬಾಳಬೇಕು: ಸಚಿವ

ವಿಜಯಪುರ: ಮಾನವರೆಲ್ಲ ಒಂದೇ ಭಾರತೀಯರು, ಹಿಂದು, ಮುಸ್ಲಿಮರು ಸಹೋದರರಾಗಿ ಬಾಳಬೇಕು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಪಟ್ಟಣದ ಶಿಡ್ಲಘಟ್ಟ ರಸ್ತೆಯ ಬಳಿವಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಮರು ಆಯೋಜಿಸಿದ್ದ ರಂಜಾನ್ ಹಬ್ಬದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿಜಯಪುರ ಮತ್ತು ದೇವನಹಳ್ಳಿಗೆ ಪ್ರತ್ಯೇಕ ಶಾದಿ ಮಹಲ್ ನಿರ್ಮಾಣಕ್ಕೆ ಮಂಜೂರಿ ಮಾಡಲಾಗಿದೆ ಎಂದರು.

ಜಗತ್ತಿನಲ್ಲಿ ಆಗುತ್ತಿರುವ ವಿದ್ಯಮಾನಗಳು ಮಾನವನಿಗೆ ಒಳಿತಲ್ಲ, ಕೂಡಲೇ ಅಲ್ಲಿ ನಡೆಯುತ್ತಿರುವ ಯುದ್ಧವು ಕೂಡಲೇ ನಿಲ್ಲಬೇಕು ಎಂದು ನಾವುವೆಲ್ಲರೂ ದೇವರಲ್ಲಿ ಪ್ರಾರ್ಥನೆ ಮಾಡೋಣ, ದೇಶದ ಒಳಿತಿ ಗಾಗಿ ಹಿಂದು, ಮುಸ್ಲಿಮರು ಒಂದಾಗಿ ಬದುಕಬೇಕು. ಆದಾಯದ ಒಂದು ಭಾಗವಾದರೂ ಸಮಾಜದ ಒಳಿತಿ ಗಾಗಿ, ದುರ್ಬಲರ ಏಳ್ಗೆಗೆ ಮೀಸಲಿಡಿ. ಪ್ರವಾದಿ ಗುರುಗಳು ಹೇಳಿದಂತೆ ಧರ್ಮ ಜಾತಿ ಯಾದರೇನು ಸಹಬಾಳ್ವೆ ಮುಖ್ಯ ಎಂದು ಹೇಳಿದರು.

ಪುರಸಭಾ ಮಾಜಿ ಅಧ್ಯಕ್ಷ ಎಂ.ಸತೀಶ್ ಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಪರಸ್ಪರ ಕಿತ್ತಾಡುವುದು ದೂರವಾಗಬೇಕು. ಎಲ್ಲರೂ ಸಹೋದರರಂತೆ ಬಾಳಬೇಕು. ಕೋಮು ಸೌಹಾರ್ದತೆ ಮೂಡಬೇಕು ಎಂದರು.

ಮುಸ್ಲಿಮರು ತಂಡೋಪತಂಡವಾಗಿ ಈದ್ಗಾ ಮೈದಾನಕ್ಕೆ ಆಗಮಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.ಒಬ್ಬರನ್ನೊಬ್ಬರು ಬಾಯಿ ಬಾಯಿ ಎಂದು ಅಪ್ಪಿಕೊಂಡು ಪರಸ್ಪರ ಸುಭಾಷಯ ವಿನಿಮಯ ಮಾಡಿಕೊಂಡರು.

ಮುಸ್ಲಿಂ ಮುಖಂಡರಾದ ಪುರಸಭಾ ಮಾಜಿ ಸದಸ್ಯ ಮುಬಾರಕ್, ಸೈಫುಲ್ಲ, ಸಮಾಜಸೇವಕ ನಯಾಜ್ ಪಾಷಾ, ಧರ್ಮ ಗುರುಗಳು ಹಾಗೂ ಎಲ್ಲಾ ಮುಖಂಡರು ಹಾಜರಿದ್ದರು.



ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಸೂಚನೆ

ಕಾಮಗಾರಿ ಪೂರ್ಣ ವಿವರವುಳ್ಳ ಫಲಕ ಕಡ್ಡಾಯ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಂಡಿರುವ ಸ್ಥಳಗಳಲ್ಲಿ ಕಾಮಗಾರಿಯ ಪೂರ್ಣ ವಿವರವುಳ್ಳ ಫಲಕವನ್ನು ಅಳವಡಿಸುವಂತೆ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹೊರಮಾವು, ಅಗರ, ಬಂಜಾರ ಬಡಾವಣೆ, ಕಲ್ಕೆರೆ ಬಡಾವಣೆ, ಬಾಬುಸಾಪಾಳ್ಯ ಹಾಗೂ ಚಳ್ಳಕೆರೆ ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆ, ಮೂಲಸೌಕರ್ಯ ಅಭಿವೃದ್ಧಿ, ರೈಲ್ವೆ ಅಂಡರ್‌ಪಾಸ್, ಕೆರೆಗಳ ಅಭಿ ವೃದ್ಧಿ ಮತ್ತು ಕಸ ವಿಲೇವಾರಿ ಸಂಬಂಧಿಸಿದ ಕಾಮಗಾರಿಗಳನ್ನು ಅವರು ಪರಿಶೀಲನೆ ನಡೆಸಿದ್ದಾರೆ.

ಈ ವೇಳೆ ಸ್ಥಳೀಯ ನಿವಾಸಿಗಳೊಂದಿಗೆ ಚರ್ಚಿಸಿ, ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಹಾಗೂ ಎಲ್ಲಾ ಅಂಡರ್ ಪಾಸ್ ಕಾಮಗಾರಿ ವೇಗಗೊಳಿಸಲು ತಿಳಿಸಿದ್ದಾರೆ. ಬಾಬುಸಾಪಾಳ್ಯ ರೈಲ್ವೆ ಅಂಡರ್‌ಪಾಸ್ ಕಾಮಗಾರಿ ಭೂ ವಿವಾದದಿಂದ ವಿಳಂಬವಾಗಿರುವ ಹಿನ್ನೆಲೆಯಲ್ಲಿ, ಯಾವುದೇ ತಡೆಯಾಜ್ಞೆ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ತಕ್ಷಣವೇ ಕಾಮಗಾರಿ ಆರಂಭಿಸಿ ಶೀಘ್ರ ಪೂರ್ಣಗೊಳಿಸಲು ರೈಲ್ವೆ ಅಧಿಕಾರಿಗಳಿಗೆ ಡಿ.ಎಸ್. ರಮೇಶ್ ನಿರ್ದೇಶಿಸಿದ್ದಾರೆ.



ಹೊರಮಾವು ಅಗರ ಕೆರೆಯಲ್ಲಿ ನಿರ್ವಹಣೆ ಕಾಮಗಾರಿಗಳಿಗಾಗಿ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದ್ದು, ಕೆರೆಯ ಸ್ವಚ್ಛತೆ ಮತ್ತು ನಿರ್ವಹಣೆ ಕಾರ್ಯಗಳನ್ನು ಶೀಘ್ರದಲ್ಲಿ ಕೈಗೊಳ್ಳಿ. ಸ್ಥಳೀಯ ನಿವಾಸಿಗಳು ಶೌಚಾಲಯ, ಬೆಂಚ್, ವಾಕ್ ವೇ, ಲಾನ್ ಹಾಗೂ ಇತರೆ ಸೌಲಭ್ಯಗಳ ಅಭಿವೃದ್ಧಿಗೆ ಬೇಡಿಕೆ ಇಟ್ಟಿದ್ದು, ಸಂಬಂಧಿತ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪಟ್ಟಿ ತಯಾರಿಸಲು ಹಾಗೂ ಮುಂದಿನ ಬಜೆಟ್‌ನಲ್ಲಿ ಅವಶ್ಯಕ ಅನುದಾನ ಮೀಸಲಿಡಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಗರ ಕೆರೆ ರಸ್ತೆಯು ತಗ್ಗು ಪ್ರದೇಶದಲ್ಲಿದ್ದು, ಪ್ರತಿ ವರ್ಷವೂ ಮಳೆಯಿಂದಾಗಿ ನೀರು ನಿಂತು ಸಮಸ್ಯೆಯಾಗುತ್ತಿದ್ದು, ಈ ಸಮಸ್ಯೆಯನ್ನು ನಿವಾರಿಸಲು ರಸ್ತೆ ಮಟ್ಟವನ್ನು ಏರಿಸಲು ಕ್ರಮ ಕೈಗೊಳ್ಳಲಾಗಿದೆ. ಬಿಟುಮನ್ ಕೊರತೆಯಿಂದ ಡಾಂಬರೀಕರಣ ಕಾಮಗಾರಿ ವಿಳಂಬವಾಗಿದ್ದು, ಹಾಟ್ ಮಿಕ್ಸ್ ಪೂರೈಕೆಯಾದ ಕೂಡಲೇ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದ್ದಾರೆ.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಾಶ್ವತ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದ್ದು, ಕೆರೆಗಳ ಪುನರುಜ್ಜೀವನ, ರಸ್ತೆ ಸುಧಾರಣೆ, ಚರಂಡಿ ವ್ಯವಸ್ಥೆ ಬಲಪಡಿಸುವುದು ಮತ್ತು ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಡಿ.ಎಸ್.ರಮೇಶ್ ತಿಳಿಸಿದ್ದಾರೆ.

ಆತ್ಮಪರಿಶೀಲನೆ ಮಾಡಿಕೊಳ್ಳುವುದೇ ರಂಜಾನ್ ಉದ್ದೇಶ: ಸತೀಶ್ ಗೌಡ

ಸತೀಶ್‌ಗೌಡರಿಂದ ಫುಡ್ ಕಿಟ್ ವಿತರಣೆ

ಸೂಲಿಬೆಲೆ: ರಂಜಾನ್ ಹಬ್ಬದ ಅಂಗವಾಗಿ ಬಮುಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡರು ಅಲ್ಪಸಂಖ್ಯಾತ ಸಮುದಾಯವರಿಗೆ ಫುಡ್ ಕಿಟ್‌ಗಳನ್ನು ವಿತರಣೆ ಮಾಡಿದರು.

ಬೆಂಡಿಗಾನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಫುಡ್ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಂಜಾನ್ ಹಬ್ಬದ ಮೂಲ ಉದ್ದೇಶ ಆತ್ಮಪರಿಶೀಲನೆ ಮಾಡಿಕೊಳ್ಳುವುದು. ವರ್ಷ ಪೂರ್ತಿ ನಾವು ಮಾಡಿದ ಪಾಪ–ಪುಣ್ಯಗಳನ್ನು ಮನನ ಮಾಡಿಕೊಂಡು ಒಂದು ತಿಂಗಳು ಉಪವಾಸ ಆಚರಿಸುವ ಮೂಲಕ ಆತ್ಮಶುದ್ಧಿ ಮಾಡಿಕೊಳ್ಳಬೇಕು. ಬೆಳಗ್ಗಿನಿಂದ ರಾತ್ರಿ ತನಕ ಉಪವಾಸವಿದ್ದು, ಅನ್ನದ ಬೆಲೆ ಏನೆಂಬುದು ಅರಿತುಕೊಳ್ಳಬೇಕು. ದಿನಕ್ಕೆ ಐದು ಬಾರಿ ಕಡ್ಡಾಯವಾಗಿ ನಮಾಜ್ ಮಾಡುತ್ತಾ ಪವಿತ್ರ ರಂಜಾನ್ ತಿಂಗಳನ್ನು ಭಕ್ತಿಯಿಂದ ಆಚರಿಸಲಾಗುತ್ತದೆ. ಹೊಸಕೋಟೆ ತಾಲೂಕಿನ ಎಲ್ಲ ಮುಸ್ಲಿಂ ಸಮುದಾಯದವರಿಗೆ ರಂಜಾನ್ ಹಬ್ಬ ಒಳಿತನ್ನುಂಟು ಮಾಡಲಿ ಎಂದರು.

ಇದೇ ಸಂದರ್ಭದಲ್ಲಿ ದೊಡ್ಡಅರಳಿಗೆರೆ ಗ್ರಾಪಂ ವ್ಯಾಪ್ತಿಯ ತಮ್ಮರಸನಹಳ್ಳಿ ಗ್ರಾಮದ 200ಕ್ಕೂ ಹೆಚ್ಚು ಕುಟುಂಬಗಳಿಗೆ ಫುಡ್ ಕಿಟ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ತಮ್ಮರಸನಹಳ್ಳಿ ಗ್ರಾಪಂ ಸದಸ್ಯ ಯಾರಬ್ ಹಾಗೂ ಮುಖಂಡರು ಹಾಜರಿದ್ದರು.



ಹೊಸಕೋಟೆ ತಾಲೂಕು ಸೂಲಿಬೆಲೆ ಹೋಬಳಿ ತಮ್ಮರಸನಹಳ್ಳಿಯಲ್ಲಿ ಮುಸ್ಲಿಂ ಸಮುದಾಯದವರಿಗೆ ರಂಜಾನ್ ಅಂಗವಾಗಿ ಫುಡ್ ಕಿಟ್‌ಗಳನ್ನು ಬಮೂಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡ ವಿತರಣೆ ಮಾಡಿದರು.

ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪ | ಅಮೆರಿಕ-ಬ್ರಿಟನ್ ಜಂಟಿ ಸೇನಾನೆಲೆ ಮೇಲೆ ದಾಳಿಗೆ ಯತ್ನ
ವಿಶ್ವದ ಗಮನಸೆಳೆದ ಇರಾನ್ ಕ್ಷಿಪಣಿಗಳ ದೂರ ಸಾಮರ್ಥ್ಯ | ಇರಾನ್ ಕ್ಷಿಪಣಿಗಳ ಘೋಷಿತ ಸಾಮರ್ಥ್ಯ 2,000 ಕಿ.ಮೀ.

4,000 ಕಿ.ಮೀ. ದೂರ ಇರಾನ್ ಕ್ಷಿಪಣಿ ದಾಳಿ!

• ಹೊಸದಿಲ್ಲಿ: ಅಮೆರಿಕ ಮತ್ತು ಬ್ರಿಟನ್ ಜಂಟಿ ಸೇನಾನೆಲೆಯಾದ ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪದ ಮೇಲೆ ಇರಾನ್ ಎರಡು ಮಧ್ಯಂತರ-ಶ್ರೇಣಿಯ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಇರಾನ್ ಕ್ಷಿಪಣಿಗಳ ಅಘೋಷಿತ ದೂರ ಸಾಮರ್ಥ್ಯವು ವಿಶ್ವದ ಗಮನಸೆಳೆದಿದೆ.

ತನ್ನಲ್ಲಿ ಕೇವಲ 2,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳಷ್ಟೇ ಇವೆಯೆಂದು ಘೋಷಿಸಿಕೊಂಡ ಇರಾನ್, 4,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಬಹುಶಃ ರಹಸ್ಯವಾಗಿಟ್ಟಿತ್ತು. ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪವು ಇರಾನ್‌ನಿಂದ 4,000 ಕಿ.ಮೀ. ದೂರದಲ್ಲಿದೆ.

ಇರಾನ್ ಕಳುಹಿಸಿದ ಎರಡು ಕ್ಷಿಪಣಿಗಳಲ್ಲಿ ಒಂದು ವಿಫಲವಾಗಿದ್ದು, ಇನ್ನೊಂದು ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ. ಎರಡನೇ ಕ್ಷಿಪಣಿ ಗುರಿ ಮುಟ್ಟುವಲ್ಲಿ ಯಶಸ್ವಿಯಾಗಿದ್ದರಿಂದ ಇರಾನ್ ಕ್ಷಿಪಣಿಗಳ ದೂರ ಸಾಮರ್ಥ್ಯ ಬಯಲಾಗಿದೆ. ಎರಡೂ ಕ್ಷಿಪಣಿಗಳು ವಿಫಲವಾಗಿದ್ದರೆ ಇದು ತಿಳಿಯುತ್ತಿರಲಿಲ್ಲ.

ಪರಿಣಾಮವೇನು?: ಇರಾನ್ ಕ್ಷಿಪಣಿಗಳು ಹಿಂದು ಮಹಾಸಾಗರ ಮತ್ತು ದಕ್ಷಿಣ ಯುರೋಪ್ ತಲುಪುವ ಸಾಮರ್ಥ್ಯವನ್ನೂ ಹೊಂದಿರುವುದು ಬಹಿರಂಗವಾಗಿದೆ. ಇರಾನ್ ಕ್ಷಿಪಣಿಗಳ ಬಗ್ಗೆ ನೆರೆಯ ಗಲ್ಫ್ ರಾಷ್ಟ್ರಗಳು ಮತ್ತು ಇಸ್ರೇಲ್ ತಮ್ಮ ವಾಯು ರಕ್ಷಣಾ ವ್ಯವಸ್ಥೆ ಸಾಮರ್ಥ್ಯ ಕುರಿತು ಅವಲೋಕನ ನಡೆಸುವ ಅಗತ್ಯ ವಿದೆ. ಮಧ್ಯಪ್ರಾಚ್ಯ ಯುದ್ಧವು ಹಿಂದು ಮಹಾಸಾಗರವನ್ನು ಪ್ರವೇಶಿಸಿದೆ.

ಡೀಗೋ ಗಾರ್ಸಿಯಾದಲ್ಲಿ ಏನಿದೆ?: ಹಿಂದು ಮಹಾಸಾಗರದಲ್ಲಿರುವ ಈ ದ್ವೀಪವು ಅಮೆರಿಕದ ಹೆವಿ ಬಾಂಬರ್ ಮತ್ತು ಕಣ್ಗಾವಲು ವಿಮಾನಗಳ ನೆಲೆಯಾಗಿದೆ. ಮಧ್ಯಪ್ರಾಚ್ಯದಲ್ಲಿ ಯಾವುದೇ ಸೇನಾ ಕಾರ್ಯಾಚರಣೆ ನಡೆಸಲು ಈ ಸೇನಾನೆಲೆಯನ್ನು ಅಮೆರಿಕ ಬಳಸುತ್ತದೆ. ಬಿ-52 ಬಾಂಬರ್ಸ್, ಅಣ್ವಸ್ತ್ರ ಸಾಮರ್ಥ್ಯದ ಸಬ್‌ಮೆರೀನ್‌ಗಳು ಮತ್ತು ಇತರ ಯುದ್ಧ ವಿಮಾನಗಳಿಗೆ ಇದು ನೆಲೆಯಾಗಿದೆ. ಇದು ಪ್ರವಾಸಿ ತಾಣವಲ್ಲ, ಸೇನಾ ಸಿಬ್ಬಂದಿಗೆ ಮಾತ್ರ ಪ್ರವೇಶವಿದೆ.

ಪ್ರಾದೇಶಿಕ ದಾಳಿಗಳು ಮತ್ತು ಭದ್ರತೆ

ಇರಾಕ್‌ನ ಬಾಗ್ದಾದ್‌ನಲ್ಲಿರುವ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ಪ್ರಧಾನ ಕಚೇರಿಯ ಮೇಲೆ ಡ್ರೋನ್ ದಾಳಿ ನಡೆದಿದೆ. ಇದೇ ವೇಳೆ, ಸೌದಿ ಅರೇಬಿಯಾ ತನ್ನ ತೈಲ ಸಮೃದ್ಧ ಪೂರ್ವ ವಲಯದಲ್ಲಿ ಎರಡೇ ಗಂಟೆಗಳಲ್ಲಿ 20 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ವರದಿ ಮಾಡಿದೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಪ್ರಾದೇಶಿಕ ಏಕತೆಗೆ ಕರೆ ನೀಡಿದ್ದು, ಭಿನ್ನಾಭಿಪ್ರಾಯಗಳಿಂದ ಇಸ್ರೇಲ್‌ಗೆ ಮಾತ್ರ ಲಾಭವಾಗುತ್ತದೆ, ಎಂದು ತಿಳಿಸಿದ್ದಾರೆ. ಪವಿತ್ರ ನಗರ ಕೋಮ್‌ನಲ್ಲಿ ಇಸ್ರೇಲ್ ದಾಳಿಗೆ ಬಲಿಯಾದ ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಮತ್ತು ರೆವಲ್ಯೂಷನರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನೈನಿ ಅಂತ್ಯಕ್ರಿಯೆ ಶನಿವಾರ ನಡೆದಿದೆ.

ರಾಜತಾಂತ್ರಿಕ ಮಾತುಕತೆಗಳು: ಇಂಧನ ಸಾಗಾಣಿಕಾ ಮಾರ್ಗಗಳನ್ನು ಸುರಕ್ಷಿತಗೊಳಿಸಲು ದಕ್ಷಿಣ ಕೊರಿಯಾ ಟೆಹ್ರಾನ್ ನೊಂದಿಗೆ ವಿವಿಧ ಹಂತದ ಮಾತುಕತೆಗಳನ್ನು ಆರಂಭಿಸಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಜಪಾನಿನ ಹಡಗುಗಳ ಸಂಚಾರಕ್ಕೆ ಅನುವು ಮಾಡಿಕೊಡುವ ಬಗ್ಗೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೀಡಿದ ಹೇಳಿಕೆಯ ಬೆನ್ನಲ್ಲೇ ಈ ಮಾತುಕತೆ ನಡೆಯುತ್ತಿದೆ.

913 ಪ್ರಜೆಗಳು ಭಾರತಕ್ಕೆ ವಾಪಸ್

ಇರಾನ್‌ನಲ್ಲಿ ಸಿಲುಕಿರುವ 913 ಭಾರತೀಯ ಪ್ರಜೆಗಳು ನೆರೆಯ ದೇಶಗಳ ಮೂಲಕ ಭೂ ಮಾರ್ಗಗಳ ಮೂಲಕ ಭಾರತಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಭಾರತೀಯ ರಾಯಭಾರ ಕಚೇರಿಗಳ ಸಹಾಯದಿಂದ ಸ್ಥಳಾಂತರಿಸುವ ಪ್ರಕ್ರಿಯೆಯು ಮುಂದುವರೆದಿದೆ ಎಂದು ಹೇಳಿದೆ.



ಭಾರತಕ್ಕೆ ಬರಲಿವೆ ಇನ್ನೂ 2 ಎಲ್‌ಪಿಜಿ ಹಡಗುಗಳು

ಹೊಸದಿಲ್ಲಿ: ಇನ್ನೂ ಎರಡು ಭಾರತೀಯ ಎಲ್‌ಪಿಜಿ ಕ್ಯಾರಿಯರ್ ಹಡಗುಗಳು ಹಾರ್ಮುಜ್ ಜಲಸಂಧಿ ದಾಟಿ ಸ್ವದೇಶಕ್ಕೆ ಮರಳುವ ಸಿದ್ಧತೆ ಯಲ್ಲಿವೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಶಾರ್ಜಾದಲ್ಲಿ ಲಂಗರು ಹಾಕಿರುವ ಭಾರತ್ ಪೆಟ್ರೋಲಿಯಂನ ಪೈನ್ ಗ್ಯಾಸ್ ಮತ್ತು ಇಂಡಿಯನ್ ಆಯಿಲ್‌ನ ಜಗ್ ವಸಂತ್ ಹಡಗುಗಳು ಶೀಘ್ರ, ಭಾರತಕ್ಕೆ ಮರಳಲಿವೆ. ಹಾರ್ಮುಜ್ ಜಲಸಂಧಿಯನ್ನು ಹಲವು ರಾಷ್ಟ್ರಗಳಿಗೆ ಮುಚ್ಚಲಾಗಿದ್ದು, ಭಾರತೀಯ ಮತ್ತು ಭಾರತದ ರಾಷ್ಟ್ರಧ್ವಜವುಳ್ಳ ಇತರ ಹಡಗುಗಳಿಗೆ ಹಾರ್ಮುಜ್ ದಾಟಲು ಇರಾನ್ ಅವಕಾಶ ನೀಡುತ್ತಿದೆ. ಮಾ.2ರಂದೇ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿತ್ತು. ಆದರೆ ಕಳೆದ ವಾರವೂ ಭಾರತೀಯ ಹಡಗುಗಳಿಗೆ ಇರಾನ್ ಜಲಸಂಧಿಯಲ್ಲಿ ಹಾದುಹೋಗಲು ಅವಕಾಶ ನೀಡಿದೆ. ಭಾರತ 22 ಹಡಗುಗಳು ಗಲ್ಫ್‌ನಲ್ಲಿವೆ. ಈ ಹಡಗುಗಳ ಸುರಕ್ಷತೆ ಖಚಿತಪಡಿಸಲು ಪ್ರಧಾನಿ ನರೇಂದ್ರ ಮೋದಿಯವರು ವಿಶ್ವ ನಾಯಕನರ ಜತೆ ಸಂಪರ್ಕದಲ್ಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಹೇಳಿದ್ದರು.

22 ದೇಶಗಳಿಂದ ಖಂಡನೆ

ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ವಿಧಿಸಿರುವ ದಿಗ್ಬಂಧನದ ವಿರುದ್ಧ ಜಗತ್ತಿನ ಸುಮಾರು 22ಕ್ಕೂ ಹೆಚ್ಚು ದೇಶಗಳು ಖಂಡಿಸಿವೆ. ಈ ಜಲಸಂಧಿಯನ್ನು ಮುಕ್ತಮಾಡಬೇಕು, ಎಲ್ಲ ದೇಶಗಳ ತೈಲ ಟ್ಯಾಂಕರ್‌ಗಳ ಓಡಾಟಕ್ಕೆ ಅವಕಾಶ ನೀಡಬೇಕು ಎಂದು ಈ ದೇಶಗಳು ಆಗ್ರಹಿಸಿವೆ. ಹಾರ್ಮುಜ್ ಸಂಧಿಯಲ್ಲಿನ ತೈಲ ಹಡಗುಗಳ ಸರಾಗ ಓಡಾಟಕ್ಕೆ ಅನುವಾಗುವಂತೆ ನ್ಯಾಟೋ ದೇಶಗಳು ಮತ್ತು ಯುರೋಪ್ ದೇಶಗಳು ಭದ್ರತೆ ಒದಗಿಸಬೇಕು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೇಡಿಕೆಯನ್ನು ಮೊದಲಿಗೆ ಈ ಎಲ್ಲ ದೇಶಗಳು ತಿರಸ್ಕರಿಸಿದ್ದವು. ಆದರೆ, ಟ್ರಂಪ್ ಆಡಳಿತದ ಮನವೊಲಿಕೆ ಮೇರೆಗೆ ಜಪಾನ್, ಆಸ್ಟ್ರೇಲಿಯಾ, ಇಂಗ್ಲೆಂಡ್ ಸೇರಿದಂತೆ 22ಕ್ಕೂ ಹೆಚ್ಚು ದೇಶಗಳು ಒಪ್ಪಿಗೆ ನೀಡಿವೆ. ಈ ಎಲ್ಲ ದೇಶಗಳು ಹಡಗುಗಳ ಸುರಕ್ಷಿತ ಓಡಾಟಕ್ಕೆ ಅನುವು ಮಾಡಿಕೊಡಲಿವೆ ಎಂದೇ ಹೇಳಲಾಗುತ್ತಿದೆ.

ಹಿಜ್ಬುಲ್ಲಾ ನೆಲೆಗಳ ಮೇಲೆ ದಾಳಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸೇನಾ ಕಾರ್ಯಾಚರಣೆಗಳನ್ನು ಕಡಿತಗೊಳಿಸುವ ಮುನ್ಸೂಚನೆ ನೀಡುತ್ತಿರುವ ಬೆನ್ನಲ್ಲೇ, ಇರಾನ್ ಜೊತೆಗಿನ ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ ಅಮೆರಿಕ ಹೆಚ್ಚಿನ ಯುದ್ಧನೌಕೆಗಳು ಮತ್ತು ನೌಕಾಪಡೆಗಳನ್ನು ಈ ವಲಯಕ್ಕೆ ನಿಯೋಜಿಸಿದೆ. ಶನಿವಾರ ಮುಂಜಾನೆ ಇಸ್ರೇಲ್ ಸೇನೆ, ಟೆಹ್ರಾನ್ ಮತ್ತು ಬೈರುತ್‌ನ ಹಿಜ್ಬುಲ್ಲಾ ನೆಲೆಗಳ ಮೇಲೆ ಹೊಸದಾಗಿ ದಾಳಿ ನಡೆಸಿದೆ.

ಸಾಮಾನ್ಯ ಸ್ಥಿತಿಗೆ ಕುಂಠಿತವಾಗಿದ್ದ ಎಲ್‌ಪಿಜಿ ಗ್ಯಾಸ್ ಪೂರೈಕೆ

ವಾಣಿಜ್ಯ ಎಲ್ಪಿಜಿ ಹಂಚಿಕೆ ಶೇ.50ಕ್ಕೆ

• ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ನಡೆದ ಮೂರು ವಾರಗಳ ಯುದ್ಧದ ಪರಿಣಾಮವಾಗಿ ಅಸ್ತವ್ಯಸ್ತಗೊಂಡಿದ್ದ ಇಂಧನ ಪೂರೈಕೆ ಪರಿಸ್ಥಿತಿ ಈಗ ಹಂತ ಹಂತವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆಯ ಎಲ್‌ಪಿಜಿ ಹಂಚಿಕೆಯನ್ನು ಶೇ.50ಕ್ಕೆ ಹೆಚ್ಚಿಸಿದೆ.

ಈ ಹಿಂದೆ ಗೃಹ ಬಳಕೆಯ ಅಡುಗೆ ಅನಿಲ ಪೂರೈಕೆಗೆ ಆದ್ಯತೆ ನೀಡುವ ಉದ್ದೇಶದಿಂದ ಹೋಟೆಲ್, ರೆಸ್ಟೋರೆಂಟ್ ಸೇರಿದಂತೆ ವಾಣಿಜ್ಯ ಬಳಕೆದಾರರಿಗೆ ಎಲ್‌ಪಿಜಿ ಪೂರೈಕೆಯನ್ನು ಕಡಿತಗೊಳಿಸಲಾಗಿತ್ತು. ಬಳಿಕ ಹಂತ ಹಂತವಾಗಿ ಪೂರೈಕೆ ಪುನರ್ ಸ್ಥಾಪನೆಗೊಂಡು, ಈಗ ಹೆಚ್ಚುವರಿ ಶೇ.20 ಹಂಚಿಕೆಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮಂಜೂರು ಮಾಡಲಾಗಿದೆ.

ಈ ಹೆಚ್ಚುವರಿ ಎಲ್‌ಪಿಜಿ ಹಂಚಿಕೆ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಕೈಗಾರಿಕಾ ಕ್ಯಾಂಟೀನ್‌ಗಳು, ಆಹಾರ ಸಂಸ್ಕರಣ ಘಟಕಗಳು, ಸಮುದಾಯ ಅಡುಗೆ ಕೇಂದ್ರಗಳು ಮತ್ತು ಸಬ್ಸಿಡಿ ಆಹಾರ ವಿತರಣೆ ಕೇಂದ್ರಗಳಿಗೆ ನೆರವಾಗಲಿದೆ. ಜತೆಗೆ ವಲಸೆ ಕಾರ್ಮಿಕರಿಗೆ ವಿತರಣೆಯ ಮೂಲಕ ಸಹಾಯ ಒದಗಿಸುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ.

ಆದರೆ, ಈ ಹೆಚ್ಚುವರಿ ಹಂಚಿಕೆ ಪಡೆಯಲು ವಾಣಿಜ್ಯ ಸಂಸ್ಥೆಗಳು ತೈಲ ಕಂಪನಿಗಳಲ್ಲಿ ನೋಂದಣಿ ಮಾಡಿಸಿಕೊಂಡು ಪೈಪ್ ನೈಸರ್ಗಿಕ ಅನಿಲ(ಪಿಎನ್‌ಜಿ) ಸಂಪರ್ಕಕ್ಕೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ತೈಲ ಕಾರ್ಯದರ್ಶಿಗಳು ರಾಜ್ಯಗಳಿಗೆ ತಿಳಿಸಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರದ ಪ್ರಕಾರ, ದೇಶೀಯ ಎಲ್‌ಪಿಜಿ ಪೂರೈಕೆ ಸ್ಥಿರವಾಗಿದ್ದು, ವಿತರಣೆ ಕೇಂದ್ರಗಳಲ್ಲಿ ಯಾವುದೇ ಕೊರತೆ ವರದಿಯಾಗಿಲ್ಲ, ಸಾಮಾನ್ಯವಾಗಿ ಡೆಲಿವರಿ ಪ್ರಕ್ರಿಯೆಗಳು ಮುಂದುವರಿದಿವೆ. ಪ್ಯಾನಿಕ್ ಬುಕ್ಕಿಂಗ್‌ಗಳು ಕಡಿಮೆಯಾಗಿದ್ದು, ಜನರು ಗಾಬರಿಯಾಗದೆ ಮನೆಮಟ್ಟದ ವಿತರಣೆ ಸೇವೆಯನ್ನು ಬಳಸುವಂತೆ ಸಲಹೆ ನೀಡಲಾಗಿದೆ. ಇನ್ನೊಂದೆಡೆ, ಪೂರೈಕೆ ಒತ್ತಡವನ್ನು ಕಡಿಮೆ ಮಾಡಲು ವಾಣಿಜ್ಯ ಬಳಕೆದಾರರನ್ನು ಪೈಪ್ ನೈಸರ್ಗಿಕ ಅನಿಲ ಬಳಕೆಗೆ ಉತ್ತೇಜಿಸಲಾಗುತ್ತಿದೆ. ನಗರ ಅನಿಲ ವಿತರಣಾ ಜಾಲದ ಅನುಮೋದನೆಗಳನ್ನು ವೇಗಗೊಳಿಸಲು ರಾಜ್ಯಗಳಿಗೆ ಸೂಚನೆ ನೀಡಲಾಗಿದೆ. ಸಮಾನಾಂತರವಾಗಿ, ದೇಶದ ಎಲ್ಲಾ ರಿಫೈನರಿಗಳು ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿದೆ. ಇಂಧನ ಕೊರತೆ ಎಲ್ಲಿಯೂ ವರದಿಯಾಗಿಲ್ಲವೆಂದು ಸರ್ಕಾರ ಸ್ಪಷ್ಟಪಡಿಸಿದೆ.

ಮುಖ್ಯಾಂಶಗಳು

- **ವಾಣಿಜ್ಯ ಎಲ್‌ಪಿಜಿ ಹಂಚಿಕೆ: ಶೇ.50ಕ್ಕೆ ಏರಿಕೆ**
- **ಹೆಚ್ಚುವರಿ ಹಂಚಿಕೆ: ಶೇ.**20
- **ದಾಳಿ ಸಂಖ್ಯೆ:** 3,500+
- **ವಶಪಡಿಸಿಕೊಂಡ ಸಿಲಿಂಡರ್‌ಗಳು:** 1,400
- **ಕೈಗಾರಿಕಾ ಅನಿಲ ಪೂರೈಕೆ: ಶೇ.**80

ನೈಸರ್ಗಿಕ ಅನಿಲ ಪೂರೈಕೆ ಗೃಹ ಬಳಕೆ ಪಿಎನ್‌ಜಿ ಮತ್ತು ಸಿಎನ್‌ಜಿ ಸಾರಿಗೆ ವಿಭಾಗಗಳಿಗೆ ಪೂರ್ಣ ಪ್ರಮಾಣದಲ್ಲಿ ಮುಂದುವರಿದಿದ್ದು, ಕೈಗಾರಿಕಾ ಬಳಕೆದಾರರಿಗೆ ಸದ್ಯಕ್ಕೆ ಸುಮಾರು ಶೇ.80 ಪೂರೈಕೆ ನೀಡಲಾಗುತ್ತಿದೆ.

ಅದರ ಜತೆಗೆ, ದೇಶೀಯ ಎಲ್‌ಪಿಜಿ ಉತ್ಪಾದನೆ ಹೆಚ್ಚಿಸುವುದು, ಬುಕ್ಕಿಂಗ್ ಅವಧಿ ವಿಸ್ತರಣೆ ಮತ್ತು ಪರ್ಯಾಯವಾಗಿ ಸೀಮೆಎಣ್ಣೆ ಹಂಚಿಕೆ ಹೆಚ್ಚಿಸುವ ಕ್ರಮಗಳನ್ನೂ ಸರ್ಕಾರ ಕೈಗೊಂಡಿದೆ.

ಅಕ್ರಮ ಸಂಗ್ರಹಣೆ ಮತ್ತು ಕಳ್ಳಬಜಾರ್ ತಡೆಯಲು ದೇಶಾದ್ಯಂತ 3,500 ಕ್ಕೂ ಹೆಚ್ಚು ದಾಳಿ ನಡೆಸಲಾಗಿದ್ದು, ಸುಮಾರು 1,400 ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಹುತೇಕ ರಾಜ್ಯಗಳು ನಿಯಂತ್ರಣ ಕೊಠಡಿಗಳು ಹಾಗೂ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಗಳನ್ನು ಸ್ಥಾಪಿಸಿವೆ.

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

• ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಹೊತ್ತಿಕೊಂಡಿರುವ ಸಂಘರ್ಷ ದಿನೇದಿನೇ ಗಂಭೀರ ತಿರುವು ಪಡೆಯುತ್ತಿರುವ ನಡುವೆ, ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯನ್ ಅವರೊಂದಿಗೆ ಶನಿವಾರ ದೂರವಾಣಿ ಮಾತುಕತೆ ನಡೆಸಿ, ಪ್ರಮುಖ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಕಟುವಾಗಿ ಖಂಡಿಸಿದರು. ಜಾಗತಿಕ ಸರಬರಾಜು ಸರಪಳಿ ಕುಸಿಯುವ ಅಪಾಯ ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಸಾಗಣೆ ಮಾರ್ಗಗಳು ಯಾವುದೇ ಅಡಚಣೆ ಇಲ್ಲದೆ ತೆರೆದೂ ಸುರಕ್ಷಿತವಾಗಿಯೂ ಇರಬೇಕೆಂದು ಅವರು ಕಠಿಣವಾಗಿ ಎಚ್ಚರಿಸಿದರು.

- **ಮೂಲಸೌಕರ್ಯಗಳ ಮೇಲಿನ ದಾಳಿಗೆ ಪ್ರಧಾನಿ ಖಂಡನೆ**
- **ಟ್ಯಾಂಕರ್‌ಗಳಿಗೆ ಅನುಮತಿ ನೀಡಿದ್ದಕ್ಕೆ ವಂದನೆ**

ಈದ್ ಹಾಗೂ ನವರೋಜ್ ಹಬ್ಬಗಳ ಶುಭಾಶಯಗಳನ್ನು ತಿಳಿಸಿದ ಮೋದಿ, ಪಶ್ಚಿಮ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ನೆಲೆಸಬೇಕೆಂಬ ಆಶಯ ವ್ಯಕ್ತಪಡಿಸಿದರೂ, ನೆಲದ ವಾಸ್ತವ ಸ್ಥಿತಿ ಆತಂಕಕಾರಿ ಎಂಬುದನ್ನು ಸ್ಪಷ್ಟಪಡಿಸಿದರು. 'ಮೂಲಸೌಕರ್ಯಗಳ ಮೇಲೆ ದಾಳಿಗಳು ಪ್ರದೇಶದ ಸ್ಥಿರತೆಯನ್ನು ಸಂಪೂರ್ಣವಾಗಿ ಕದಡುತ್ತಿವೆ. ಇದು ಜಾಗತಿಕ ಸರಬರಾಜು ವ್ಯವಸ್ಥೆಗೆ ನೇರ ಹೊಡೆತ,' ಎಂಬ ಸಂದೇಶವನ್ನು ಪ್ರಧಾನಿ ಸ್ಪಷ್ಟವಾಗಿ ನೀಡಿದ್ದಾರೆ. ಸಾಗಣೆ ಮಾರ್ಗಗಳ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆಯಾಗಬಾರದು, ಹಡಗು ಸಂಚಾರ ನಿರ್ಬಂಧಿಸುವ ಯಾವುದೇ ಪ್ರಯತ್ನಗಳು ಅಸ್ವೀಕಾರಾರ್ಹವೆಂದು ಅವರು ಪುನರುಚ್ಚರಿಸಿದರು.

ಇರಾನ್‌ನಲ್ಲಿರುವ ಭಾರತೀಯರ ಸುರಕ್ಷತೆ ವಿಚಾರದಲ್ಲಿ ನೀಡುತ್ತಿರುವ ಸಹಕಾರವನ್ನು ಮೋದಿ ಮೆಚ್ಚಿದರೂ, ಪ್ರಸ್ತುತ ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುವ ರೀತಿಯಲ್ಲಿ ಮಾತುಕತೆ ನಡೆದಿರುವುದು ಗಮನಾರ್ಹ.

ಫೆಬ್ರವರಿ 28ರಿಂದ ಉಲ್ಬಣಗೊಂಡಿರುವ ಸಂಘರ್ಷದ ಬಳಿಕ, ಮೋದಿ-ಪೆಝೆಶ್ಕಿಯನ್ ನಡುವೆ ಇದು ಎರಡನೇ ನೇರ ಸಂಪರ್ಕ. ಮಾ.12ರಂದು ನಡೆದ ಮಾತುಕತೆಯಲ್ಲಿ, ಇರಾನ್ ಅಧ್ಯಕ್ಷರು ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದರೆ, ಭಾರತ ತನ್ನ ಸ್ಥಿರ ನಿಲುವಾದ ಸಂವಾದವೇ ಪರಿಹಾರ ಎಂಬುದನ್ನು ಸ್ಪಷ್ಟಪಡಿಸಿತ್ತು. ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಯಿಂದ ಪ್ರಾರಂಭವಾದ ಈ ಸಂಘರ್ಷಕ್ಕೆ ಪ್ರತಿಯಾಗಿ ಇರಾನ್ ನಡೆಸಿದ ಪ್ರತಿದಾಳಿ ಈಗ ಸಂಪೂರ್ಣ ಪ್ರದೇಶವನ್ನು ಅಸ್ಥಿರತೆಯ ಅಂಚಿಗೆ ತಳ್ಳಿದೆ.

ಕಿರುಸುದ್ದಿ

ಅಪರಿಚಿತರಿಂದ ಮತ್ತೊಬ್ಬ ಭಯೋತ್ಪಾದಕನ ಹತ್ಯೆ

• ಲಾಹೋರ್: ಇಲ್ಲಿನ ಮುರಿದ್ಕೆಯಲ್ಲಿರುವ ಲಷ್ಕರ್-ಎ-ತೈಬಾ ಸಂಘಟನೆಯ ಪ್ರಮುಖ ಕೇಂದ್ರ ಮರ್ಕಜ್ ತೈಬಾ ಆವರಣದಲ್ಲೇ ಈದ್ ನಮಾಜಿನ ತಕ್ಷಣ ಉಗ್ರ ಕಮಾಂಡರ್ ಬಿಲಾಲ್ ಅರಿಫ್ ಸಲಾಫಿಯನ್ನು ಹತ್ಯೆ ಮಾಡಲಾಗಿದೆ. ಇಬ್ಬರು ಅಪರಿಚಿತರು ಚೂರಿಯಿಂದ ಇರಿದು, ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಶನಿವಾರ ನಡೆದ ಈದ್ ಸಮೂಹ ನಮಾಜಿನಲ್ಲಿ ಮೌಲಾನಾ ಅಬು ಝುರ್, ಮೌಲಾನಾ ಅಬ್ದುಲ್ ರೆಹಮಾನ್ ಅಬಿದ್ ಸೇರಿದಂತೆ ಸಂಘಟನೆಯ ಹಲವು ಉಗ್ರರು ಭಾಗಿಯಾಗಿದ್ದರು. ನಮಾಜು ಮುಗಿದು ಕೆಲವೇ ಕ್ಷಣಗಳಲ್ಲಿ ಹೊರಬರುತ್ತಿದ್ದ ಸಲಾಫಿ ಮೇಲೆ ಇಬ್ಬರು ದಾಳಿ ನಡೆಸಿದ್ದಾರೆ ಎನ್ನಲಾಗಿದೆ. ಒಬ್ಬನು ಸಮೀಪದಿಂದ ಗುಂಡು ಹಾರಿಸಿದ್ದರೆ, ಮತ್ತೊಬ್ಬ ಮಹಿಳೆ ಚೂರಿಯಿಂದ ಇರಿದು ಕೊಲೆಗೈದಿದ್ದಾಳೆ. ಬಿಲಾಲ್ ಅರಿಫ್ ಸಲಾಫಿ ಯಾರು? 2005ರಿಂದ ಲಷ್ಕರ್-ಎ-ತೈಬಾ ಸಂಘಟನೆಯೊಂದಿಗೆ ನಂಟು ಹೊಂದಿದ್ದ ಸಲಾಫಿ, ಹಣ ಸಂಗ್ರಹ, ಜಾಲ ವಿಸ್ತರಣೆ ಮತ್ತು ಕಾರ್ಯಾಚರಣೆ ಸಮನ್ವಯದಲ್ಲಿ ಸಕ್ರಿಯನಾಗಿದ್ದನೆಂದು ಹೇಳಲಾಗುತ್ತಿದೆ.

ಏ.3ಕ್ಕೆ ತಾರಾಗಿರಿ ಸ್ವದೇಶಿ ಯುದ್ಧನೌಕೆ ನಿಯೋಜನೆ

• ಹೊಸದಿಲ್ಲಿ: ಸೂಪರ್‌ಸೋನಿಕ್ ಕ್ಷಿಪಣಿಗಳ ಸಹಿತ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆ ಹೊಂದಿರುವ ಸ್ವದೇಶಿ ಯುದ್ಧನೌಕೆ ತಾರಾಗಿರಿಯನ್ನು ಏ.3ರಂದು ಭಾರತೀಯ ನೌಕಾಪಡೆಯಲ್ಲಿ ನಿಯೋಜಿಸಲು ಸಕಲ ಸಿದ್ಧತೆಗಳು ನಡೆಯುತ್ತಿವೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ವಿಶಾಖಪಟ್ಟಣದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ತಾರಾಗಿರಿ ನಿಯೋಜನೆ ಕಾರ್ಯಕ್ರಮ ನಡೆಯಲಿದೆ. ನೌಕಾಪಡೆ ಸಂಪೂರ್ಣ ಆತ್ಮನಿರ್ಭರ (ಸ್ವಾವಲಂಬಿ) ಶಕ್ತಿಯಾಗುವತ್ತ ಸಾಗುತ್ತಿದೆ ಎಂಬುದಕ್ಕೆ ಇದು ಬಲವಾದ ಸಾಕ್ಷಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇಕ್ ಇನ್ ಇಂಡಿಯಾದ ಸ್ಫೂರ್ತಿಯ ಸೆಲೆ: ನೀಲಗಿರಿ (ಪ್ರಾಜೆಕ್ಟ್ 17ಎ) ವರ್ಗದ 4ನೇ ಶಕ್ತಿಶಾಲಿ ಯುದ್ಧನೌಕೆ ತಾರಾಗಿರಿಯೊಂದು ಹಡಗು ಮಾತ್ರವಲ್ಲ; ಇದು 6,670 ಟನ್ ಭಾರದ ಮೇಕ್ ಇನ್ ಇಂಡಿಯಾ ಉಪಕ್ರಮದ ಸ್ಫೂರ್ತಿಯ ಸೆಲೆ ಮತ್ತು ನಮ್ಮ ಸ್ವದೇಶಿ ಹಡಗು ನಿರ್ಮಾಣ ಶಿಪ್‌ಯಾರ್ಡ್‌ಗಳ ಅತ್ಯುನ್ನತ ಇಂಜಿನಿಯರಿಂಗ್ ಸಾಮರ್ಥ್ಯದ ಪ್ರತಿರೂಪ ಎಂದು ನೌಕಾಪಡೆ ವಕ್ತಾರರು ತಿಳಿಸಿದ್ದಾರೆ. ಮಜಗಾನ್ ಡಾಕ್ ಶಿಪ್‌ಬಿಲ್ಡಿಂಗ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದ ಮೂರನೇ ಹಡಗು ತಾರಾಗಿರಿ (ಯಾರ್ಡ್ 12653) ಅನ್ನು ಕಳೆದ ವರ್ಷ ನ.28ರಂದು ಮುಂಬೈನಲ್ಲಿ ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು. ಇದರ ಸ್ವದೇಶಿ ವಿನ್ಯಾಸ ಮತ್ತು ನಿರ್ಮಾಣವು ಆತ್ಮನಿರ್ಭರತೆ ಸಾಧಿಸುವತ್ತ ಪ್ರಮುಖ ಮೈಲಿಗಲ್ಲಾಗಿದೆ.

ತಾರಾಗಿರಿಯಲ್ಲಿ ಶೇ.75ರಷ್ಟು ದೇಸಿ ಉಪಕರಣಗಳನ್ನು ಬಳಸಲಾಗಿದೆ. ಇದರಲ್ಲಿ ಸೂಪರ್‌ಸೋನಿಕ್ ಕ್ಷಿಪಣಿಗಳಲ್ಲದೆ, ಸಬ್‌ಮೆರೀನ್ ವಿರೋಧಿ ಅಂಡರ್ ವಾಟರ್ ಕ್ಷಿಪಣಿಗಳನ್ನೂ ಅಳವಡಿಸಲಾಗಿವೆ.

ಡಿಜಿಟಲ್ ಅರೆಸ್ಟ್ ಸೈಬರ್ ವಂಚನೆಗೆ ಕೇಂದ್ರ ಬ್ರೇಕ್

• ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ವಂಚನೆಗೆ ತಡೆ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ವಂಚನೆಗೆ ಬಳಸಲಾಗುತ್ತಿರುವ ಡಿವೈಸ್ ಐಡಿಗಳನ್ನು ಬ್ಲಾಕ್ ಮಾಡಲು ವಾಟ್ಸ್‌ಆ್ಯಪ್ ಗೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಈ ಕ್ರಮವು ಗೃಹ ಸಚಿವಾಲಯದ ಸೈಬರ್ ವಿಭಾಗವಾದ ವರದಿ ನಂತರ ಕೈಗೊಳ್ಳಲಾಗಿದೆ. ವರದಿಯಲ್ಲಿ ಡಿಜಿಟಲ್ ಅರೆಸ್ಟ್ ಮಾದರಿಯ ವಂಚನೆ ಪ್ರಕರಣಗಳು ವೇಗವಾಗಿ ಹೆಚ್ಚುತ್ತಿರುವುದಾಗಿ ಎಚ್ಚರಿಸಲಾಗಿದೆ.

ವಂಚಕರು ಹೊಸ ಖಾತೆಗಳನ್ನು ನಿರಂತರವಾಗಿ ಸೃಷ್ಟಿಸಿ ತಮ್ಮ ಚಟುವಟಿಕೆ ಮುಂದುವರಿಸುತ್ತಿರುವ ಹಿನ್ನೆಲೆಯಲ್ಲಿ, ಕೇವಲ ಖಾತೆ ಮಟ್ಟದಲ್ಲಲ್ಲದೆ ಡಿವೈಸ್ ಮಟ್ಟದಲ್ಲೇ ನಿರ್ಬಂಧ ಹೇರಲು ಸರ್ಕಾರ ಚಿಂತನೆ ನಡೆಸಿದೆ. ಜೊತೆಗೆ ವಾಟ್ಸ್‌ಆ್ಯಪ್ ಸೇರಿದಂತೆ ಇತರ ಪ್ಲಾಟ್‌ಫಾರ್ಮ್‌ಗಳಲ್ಲಿ ಹೊಸ ಸುರಕ್ಷತಾ ವೈಶಿಷ್ಟ್ಯಗಳನ್ನು ಪರಿಚಯಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ.

ಇನ್ನೊಂದೆಡೆ, 2021ರ ಐಟಿ ನಿಯಮಗಳಲ್ಲಿ ಅಳಿಸಲಾದ ಖಾತೆಗಳ ಮಾಹಿತಿಯನ್ನು ಕನಿಷ್ಠ 180 ದಿನಗಳವರೆಗೆ ಸಂಗ್ರಹಿಸುವ ಅಗತ್ಯವಿದೆ ಎಂದು ಅಧಿಕಾರಿಗಳು ಒತ್ತಾಯಿಸಿದ್ದಾರೆ. ಇದರಿಂದ ತನಿಖಾ ಸಂಸ್ಥೆಗಳು ಅಗತ್ಯ ಮಾಹಿತಿಯನ್ನು ಸುಲಭವಾಗಿ ಪಡೆಯಲು ನೆರವಾಗುತ್ತದೆ ಎಂಬುದು ಅವರ ಅಭಿಪ್ರಾಯ.

ಅದೇ ವೇಳೆ, ದುಷ್ಪಯೋಜನೆಗೆ ಬಳಸಲಾಗುತ್ತಿರುವ ನಕಲಿ ಎಪಿಕೆ ಫೈಲ್‌ಗಳು ಮತ್ತು ಅಪ್ಲಿಕೇಶನ್‌ಗಳನ್ನು ಗುರುತಿಸಿ ಬ್ಲಾಕ್ ಮಾಡುವ ದೊಡ್ಡ ಮಟ್ಟದ ಯೋಜನೆಯನ್ನೂ ಸರ್ಕಾರ ರೂಪಿಸುತ್ತಿದೆ.

ರತ್ನಮ್ಮ ಹಿತ್ತಲಿನ ಕೊಳವೆ ಬಾವಿಯಲ್ಲಿ ಅನಿಲ!

• ತಿರುವನಂತಪುರಂ: ಹಾರ್ಮುಜ್ ಜಲಸಂಧಿ ಮುಚ್ಚಿರುವ ಹಿನ್ನೆಲೆ ಜಾಗತಿಕ ಮಟ್ಟದಲ್ಲಿ ಇಂಧನ ಮತ್ತು ಅಡುಗೆ ಅನಿಲ ಪೂರೈಕೆ ವ್ಯತ್ಯಯ ಉಂಟಾಗಿದ್ದು, ಎಲ್‌ಪಿಜಿ ಬೆಲೆ ಏರಿಕೆ ಆತಂಕ ಹೆಚ್ಚಿಸಿದೆ. ಆದರೆ ಕೇರಳದ ರತ್ನಮ್ಮ ಅವರ ಕುಟುಂಬಕ್ಕೆ ಇದ್ಯಾವುದರ ಚಿಂತೆಯಿಲ್ಲ.

ಆಲಪ್ಪುಳದ ಆರಾಟ್ಟುವಳಿ ಗ್ರಾಮದ ರತ್ನಮ್ಮ ಅವರು ಕಳೆದ ಒಂದು ದಶಕದಿಂದಲೂ ಒಂದು ವಿಶಿಷ್ಟ ಹಾಗೂ ಸಂಪೂರ್ಣ ಸ್ಥಳೀಯ ತೈಲ ಮೂಲವನ್ನು ಬಳಸುತ್ತಿದ್ದಾರೆ. ಅವರ ಮನೆ ಹಿಂಭಾಗದ ಕೊಳವೆಬಾವಿಯಿಂದ ಹೊರಹೊಮ್ಮುವ ನೈಸರ್ಗಿಕ ಅನಿಲವನ್ನು ಬಳಸುತ್ತಿದ್ದಾರೆ. ವಾರ್ಷಿಕ 10,000 ರೂ. ಉಳಿತಾಯ ಮಾಡುತ್ತಿದ್ದಾರೆ.

2011ರಲ್ಲಿ ಶುದ್ಧ ಕುಡಿಯುವ ನೀರಿನ ಮೂಲದ ಹುಡುಕಾಟದಲ್ಲಿ ರತ್ನಮ್ಮ ಕುಟುಂಬ ಕೊಳವೆಬಾವಿಯನ್ನು ತೋಡಿಸಿತ್ತು. 75 ಅಡಿ ಆಳದವರೆಗೆ ತೋಡಿದರೂ ಕೇವಲ ಕೆಸರಿನ ನೀರು ಮಾತ್ರ ಸಿಕ್ಕಿತ್ತು. ವೆಚ್ಚ ಹೆಚ್ಚಾದ ಕಾರಣ ಅವರು ಆ ಪ್ರಯತ್ನವನ್ನು ಕೈಬಿಟ್ಟಿದ್ದರು. ಆದರೆ, ನಂತರ ಅಚ್ಚರಿಯ ಘಟನೆ ಸಂಭವಿಸಿದೆ. ಪ್ಲಂಬರ್ ಕೊಳವೆಬಾವಿಯನ್ನು ಮುಚ್ಚಲು ಪ್ರಯತ್ನಿಸಿದ್ದಾಗ, ಹತ್ತಿರದಲ್ಲಿದ್ದ ಒಬ್ಬ ವ್ಯಕ್ತಿ ಬೆಂಕಿಕಡ್ಡಿ ಹಚ್ಚಿದಾಗ ಕೊಳವೆಬಾವಿಯ ಬಾಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಮೊದಲಿಗೆ ಆತಂಕ ಉಂಟಾದರೂ, ಅಲ್ಲಿ ಬೆಂಕಿ ಸುಲಭವಾಗಿ ಹೊತ್ತಿ ಉರಿಯುವ ಅನಿಲವಿದೆ ಎಂದು ಕುಟುಂಬಕ್ಕೆ ತಿಳಿಯಿತು. ಪ್ಲಂಬರ್ ಸಹಾಯದಿಂದ ಕೊಳವೆಬಾವಿಯಿಂದ ಅಡುಗೆಮನೆಯ ಒಲೆಗೆ ಪೈಪ್ ಜೋಡಿಸಿದ್ದರು. ಬ್ಲ್ಯಾಕ್ ಕಾಫಿ ಮಾಡುವುದರ ಮೂಲಕ ಅಡುಗೆ ಆರಂಭಿಸಿದ್ದರು.

ಸರ್ಕಾರಿ ಸುಪರ್ದಿಗೆ ಅಲ್ ಫಲಾ ವಿವಿ

• ಹೊಸದಿಲ್ಲಿ: ದಿಲ್ಲಿ ಕೆಂಪು ಕೋಟೆ ಉಗ್ರ ದಾಳಿ ವೇಳೆ ಭಯೋತ್ಪಾದಕರಿಗೆ ದಾಳಿ ನಡೆಸಲು ಸಹಾಯ ಮಾಡಿದ ಹಲವು ವೈಟ್ ಕಾಲರ್ ಟೆರರ್ ಮಾಡ್ಯೂಲ್‌ನ ಅಕ್ರಮ ಬಯಲಿಗೆ ಬಂದ ಬೆನ್ನಲ್ಲೇ ಇದೀಗ ಹರ್ಯಾಣ ಸರ್ಕಾರವು ಫರಿದಾಬಾದ್‌ನಲ್ಲಿರುವ ಅಲ್-ಫಲಾ ವಿಶ್ವವಿದ್ಯಾನಿಲಯವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಯಲ್ಲಿ ಅಕ್ರಮಗಳನ್ನು ಗುರುತಿಸಿದ ತನಿಖೆ ಬಳಿಕ ಹಿರಿಯ ಐಎಎಸ್ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಿದೆ. ಹಿರಿಯ ಐಎಎಸ್ ಅಧಿಕಾರಿ ಅಮಿತ್ ಅಗರವಾಲ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದು, ಅವರು ವಿಶ್ವವಿದ್ಯಾಲಯದ ಹಣಕಾಸು ಮತ್ತು ಆಡಳಿತಾತ್ಮಕ ವ್ಯವಹಾರಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ. ಜನವರಿಯಲ್ಲಿ, ಇಡಿ ವಿವಿಗೆ ಸೇರಿದ ಸುಮಾರು 140 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿತ್ತು.

ಅಮೆರಿಕ ಧಾರ್ಮಿಕ ಸ್ವಾತಂತ್ರ್ಯ ವರದಿ ವಿರುದ್ಧ ತೀವ್ರ ಆಕ್ರೋಶ | 275 ನಿವೃತ್ತ ನ್ಯಾಯಾಧೀಶರು, ಅಧಿಕಾರಿಗಳ ಜಂಟಿ ಹೇಳಿಕೆ

ಆರ್‌ಎಸ್‌ಎಸ್ ನಿಷೇಧ ಶಿಫಾರಸು ಪೂರ್ವಾಗ್ರಹ ಪೀಡಿತ

• ಹೊಸದಿಲ್ಲಿ: ಅಮೆರಿಕದ ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್ಸಿಐಆರ್‌ಎಫ್) ಇತ್ತೀಚೆಗೆ ಹೊರಡಿಸಿದ ವರದಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ನಿಷೇಧಕ್ಕೆ ಶಿಫಾರಸು ಮಾಡಿರುವ ಕ್ರಮಕ್ಕೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. 25 ನಿವೃತ್ತ ನ್ಯಾಯಮೂರ್ತಿಗಳು, 119 ನಿವೃತ್ತ ಆಡಳಿತಾಧಿಕಾರಿಗಳು ಹಾಗೂ 131 ನಿವೃತ್ತ ಸೈನಿಕ ಅಧಿಕಾರಿಗಳು ಸೇರಿ ಒಟ್ಟು 275 ಗಣ್ಯರು ಈ ವರದಿಯನ್ನು ಖಂಡಿಸಿ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಈ ವರದಿಯನ್ನು ಅವರು 'ಅತ್ಯಂತ ಪೂರ್ವಾಗ್ರಹಪೂರಿತ ಹಾಗೂ ಬೌದ್ಧಿಕ ದಿವಾಳಿತನದ ಪ್ರತಿಬಿಂಬ' ಎಂದು ವರ್ಣಿಸಿದ್ದಾರೆ. ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಭಾರತೀಯರ ಆಸ್ತಿ ಸ್ಥಗಿತಗೊಳಿಸುವುದು, ಸಂಚಾರಕ್ಕೆ ನಿರ್ಬಂಧ ಹೇರುವುದು ಹಾಗೂ ಸಂಘದೊಂದಿಗೆ ಸಂಬಂಧ ಹೊಂದಿದವರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಯುಎಸ್ಸಿಐಆರ್‌ಎಫ್ ಶಿಫಾರಸುಗಳು ದುರುದ್ದೇಶಪೂರಿತವಾಗಿವೆ ಎಂದು ಹೇಳಿದ್ದಾರೆ.

ಜಂಟಿ ಹೇಳಿಕೆಯಲ್ಲಿ, ಯುಎಸ್ಸಿಐಆರ್‌ಎಫ್ ವರದಿಗೆ ಕೊಡುಗೆ ನೀಡಿದವರ ಹಿನ್ನೆಲೆಯ ಬಗ್ಗೆ ಅಮೆರಿಕ ಸರ್ಕಾರ ಕಟ್ಟುನಿಟ್ಟಿನ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ. ಅಮೆರಿಕದ ತೆರಿಗೆದಾರರ ಹಣದಿಂದ ನಡೆಯುವ ಸಂಸ್ಥೆಯೊಂದು, ಭಾರತ ವಿರೋಧಿ ಗುಪ್ತ ಅಜೆಂಡಾ ಹೊಂದಿದ ಹಿತಾಸಕ್ತಿಪರ ಗುಂಪುಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಆತಂಕಕಾರಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಹೇಳಿಕೆಯಲ್ಲಿ ಯುಎಸ್ಸಿಐಆರ್‌ಎಫ್ ಮೇಲೆ ಮತ್ತೊಂದು ಗಂಭೀರ ಆರೋಪವೂ ಮಾಡಲಾಗಿದೆ. ಭಾರತೀಯ ರಾಜ್ಯ ಸಂಸ್ಥೆಗಳು ಹಾಗೂ ಆರ್‌ಎಸ್‌ಎಸ್‌ನಂತಹ ಸಾಂಸ್ಕೃತಿಕ-ಸಾಮಾಜಿಕ ಸಂಘಟನೆಗಳನ್ನು ಸಮಗ್ರ ಸಂದರ್ಭವಿಲ್ಲದೆ ನಿರಂತರವಾಗಿ ಋಣಾತ್ಮಕ ಬೆಳಕಿನಲ್ಲಿ ಚಿತ್ರಿಸುವ ಪ್ರವೃತ್ತಿ ಈ ಸಂಸ್ಥೆಯಲ್ಲಿ ಕಾಣಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಮರ್ಶೆ ಅಗತ್ಯವಿದ್ದರೆ ಅದು ದೃಢವಾದ ಸಾಕ್ಷ್ಯಾಧಾರಗಳ ಮೇಲೆ ನಿಲ್ಲಬೇಕೇ ಹೊರತು ಸಾಮಾನ್ಯೀಕರಣಗಳ ಮೇಲೆ ಅಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ದೀರ್ಘಕಾಲದ ನ್ಯಾಯಾಂಗ ವ್ಯವಸ್ಥೆ, ಚುರುಕು ಪ್ರಜಾತಾಂತ್ರಿಕ ಸಂಸ್ಥೆಗಳು ಹಾಗೂ ಸಂಸತ್ತಿನ ಮೇಲ್ವಿಚಾರಣೆ ಇರುವ ಹಿನ್ನೆಲೆಯಲ್ಲಿ ಧಾರ್ಮಿಕ ಹಕ್ಕುಗಳ ಉಲ್ಲಂಘನೆಗಳು ನಿರ್ಲಕ್ಷ್ಯಕ್ಕೆ ಒಳಗಾಗುವ ಅವಕಾಶ ಅತೀ ಕಡಿಮೆ ಎಂದು ಗಣ್ಯರು ಹೇಳಿದ್ದಾರೆ. ಈ ಜಂಟಿ ಹೇಳಿಕೆಗೆ ಸಹಿ ಹಾಕಿದವರಲ್ಲಿ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿಗಳಾದ ಆದರ್ಶ ಕುಮಾರ್ ಗೋಯಲ್ ಮತ್ತು ಹೇಮಂತ್ ಗುಪ್ತಾ, ಮಾಜಿ ಮುಖ್ಯ ಚುನಾವಣಾ ಆಯುಕ್ತರಾದ ಒ.ಪಿ. ರಾವತ್ ಹಾಗೂ ಸುನೀಲ್ ಅರೋರಾ, ಮಾಜಿ ವಿದೇಶ ಕಾರ್ಯದರ್ಶಿ ಕನ್ವಲ್ ಸಿಬಲ್, ಮಾಜಿ ಎನ್‌ಐಎ ನಿರ್ದೇಶಕ ಯೋಗೇಶ್ ಚಂದರ್ ಮೋದಿ ಸೇರಿದಂತೆ ಹಲವಾರು ನಿವೃತ್ತ ಐಎಎಸ್, ಐಪಿಎಸ್ ಹಾಗೂ ಸಶಸ್ತ್ರ ಪಡೆ ಅಧಿಕಾರಿಗಳು ಸೇರಿದ್ದಾರೆ.

ಪ್ರಮುಖಾಂಶಗಳು

- **275 ಗಣ್ಯರ ಜಂಟಿ ಹೇಳಿಕೆ, ಯುಎಸ್ಸಿಐಆರ್‌ಎಫ್ ವರದಿಗೆ ತೀವ್ರ ವಿರೋಧ**
- **25 ನಿವೃತ್ತ ನ್ಯಾಯಾಧೀಶರು, 119 ನಿವೃತ್ತ ಆಡಳಿತಾಧಿಕಾರಿಗಳು, 131 ನಿವೃತ್ತ ಸೈನಿಕ ಅಧಿಕಾರಿಗಳು**
- **ಆರ್‌ಎಸ್‌ಎಸ್ ನಿಷೇಧ ಶಿಫಾರಸು 'ದುರುದ್ದೇಶಪೂರಿತ' ಎಂದು ಟೀಕೆ**
- **ವರದಿ ರಚನೆಗೆ ಕಾರಣಕರ್ತರಾದವರ ಹಿನ್ನೆಲೆ ಪರಿಶೀಲನೆಗೆ ಅಮೆರಿಕ ಸರ್ಕಾರಕ್ಕೆ ಆಗ್ರಹ**
- **ಭಾರತದ ಪ್ರಜಾಪ್ರಭುತ್ವ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಉಲ್ಲೇಖಿಸಿ ವರದಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನೆ**

ಸಹಿ ಹಾಕಿದ ಪ್ರಮುಖರು

- **ನ್ಯಾ.ಆದರ್ಶ್ ಕುಮಾರ್ ಗೋಯಲ್**
- **ನ್ಯಾ.ಹೇಮಂತ್ ಗುಪ್ತಾ**
- **ಮಾಜಿ ಮುಖ್ಯ ಚುನಾವಣಾ ಆಯುಕ್ತರು ಒ.ಪಿ. ರಾವತ್, ಸುನೀಲ್ ಅರೋರಾ**
- **ಮಾಜಿ ವಿದೇಶಾಂಗ ಕಾರ್ಯದರ್ಶಿ ಕನ್ವಲ್ ಸಿಬಲ್**
- **ಮಾಜಿ ಎನ್‌ಐಎ ನಿರ್ದೇಶಕ ಯೋಗೇಶ್ ಚಂದರ್ ಮೋದಿ**

ಯುಎಸ್ಸಿಐಆರ್‌ಎಫ್‌ನ ಉಪಾಧ್ಯಕ್ಷನ ಮೂಲ ಪಾಕ್

ಅಮೆರಿಕದ ಈ ಧಾರ್ಮಿಕ ಸ್ವಾತಂತ್ರ್ಯಗಳ ಸಂಸ್ಥೆಗೂ ಪಾಕಿಸ್ತಾನಕ್ಕೂ ಅವಿನಾಭಾವ ನಂಟಿದೆ. ಹೀಗಾಗಿಯೇ ಈ ಸಂಸ್ಥೆ ರಾ ಮತ್ತು ಆರ್‌ಎಸ್‌ಎಸ್ ಅನ್ನು ಗುರಿಯಾಗಿಸಿಕೊಂಡಿದೆ ಎಂಬ ಆರೋಪಗಳೂ ಇವೆ. ಅಂದರೆ, ಈ ಸಂಸ್ಥೆಯ ಉಪಾಧ್ಯಕ್ಷನ ಹೆಸರು ಡಾ.ಆಸೀಫ್ ಮಹಮ್ಮದ್. ಈತ ಪಾಕಿಸ್ತಾನದ ಮೂಲದವನಾಗಿದ್ದು, 1990ರಲ್ಲಿ ಅಮೆರಿಕಕ್ಕೆ ತೆರಳಿದ್ದ. ಈಗ ಈ ಸಂಸ್ಥೆಯ ಉಪಾಧ್ಯಕ್ಷನಾಗಿದ್ದು, ಇಂಥದ್ದೊಂದು ವರದಿ ನೀಡಲು ಕಾರಣವಾಗಿದ್ದಾನೆ ಎಂಬ ಮಾತುಗಳಿವೆ.

ಪಾಕ್‌ನ ಹಿಂದುಗಳು ಎಲ್ಲಿ?

ಭಾರತದ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರು, ಪಾಕ್‌ನಲ್ಲಿನ ಹಿಂದುಗಳು ಎಲ್ಲಿ ಹೋದರು ಎಂಬ ಪ್ರಶ್ನೆಯನ್ನೂ ನಿವೃತ್ತ ನ್ಯಾಯಮೂರ್ತಿಗಳು, ಅಧಿಕಾರಿಗಳು ಪ್ರಶ್ನೆ ಮಾಡಿದ್ದಾರೆ. ಸ್ವಾತಂತ್ರ್ಯ ಬಂದಾಗ ಅವಿಭಜಿತ ಪಾಕಿಸ್ತಾನದಲ್ಲಿ ಶೇ.20-22ರಷ್ಟು ಹಿಂದೂಗಳಿದ್ದರು. ಈಗ ಪಾಕ್‌ನಲ್ಲಿ ಶೇ.1.5ರಿಂದ ಶೇ.2ರಷ್ಟಿದ್ದರೆ, ಬಾಂಗ್ಲಾದಲ್ಲಿ ಶೇ.7ರಿಂದ 8ರಷ್ಟಿದ್ದಾರೆ. ಉಳಿದವರು ಎಲ್ಲಿ ಹೋದರು ಎಂದೂ ಪ್ರಶ್ನೆ ಮಾಡಿದ್ದಾರೆ.



• ವಿದ್ವಾನ್ ನರಸಿಂಹ ಭಟ್

ದುರ್ಲಭವಾದ ಚತುರ್ಭದ್ರಗಳು ಯಾವುವು?

ಉ. ಪ್ರಿಯವಾದ ಮಾತಿನಿಂದ ಕೂಡಿದ ದಾನ, ಗರ್ವರಹಿತವಾದ ಜ್ಞಾನ, ಕ್ಷಮಾದಿಂದ ಕೂಡಿದ ಶೌರ್ಯ ಮತ್ತು ತ್ಯಾಗದಿಂದ ಕೂಡಿದ ವಿತ್ತ.

ಈ ಹಿಂದಿನ ಪ್ರಶ್ನೋತ್ತರದಲ್ಲಿ ಚತುರ್ಭದ್ರ ಅಂದರೆ ಯಾವುದು?' ಎಂಬ ವಿಷಯವನ್ನು ವಿವರಿಸಲಾಗಿತ್ತು. ನಾಲ್ಕು ಪುರುಷಾರ್ಥಗಳೇ ಚತುರ್ಭದ್ರಗಳು ಎಂಬ ವಿವರಣೆ ಅಲ್ಲಿತ್ತು. ಇದಕ್ಕೂ ಮುಂದುವರಿದ ಪ್ರಶ್ನೆ ಇದಾಗಿದೆ. ದುರ್ಲಭವಾದ ಚತುರ್ಭದ್ರಗಳು ಯಾವುವು? ಎಂದು. ಅಂದರೆ ಇಲ್ಲಿ ಹೇಳಿದ ನಾಲ್ಕು ಸಂಗತಿಗಳು ನಾಲ್ಕು ಪುರುಷಾರ್ಥಗಳನ್ನು ಪಡೆಯಲು ಅತ್ಯಂತ ಸಹಕಾರಿಗಳು ಎಂಬುದು ಎರಡು ಪ್ರಶ್ನೋತ್ತರಗಳನ್ನು ಗಮನಿಸಿದಾಗ ತಿಳಿದುಬರುವ ಅಂಶವಾಗಿದೆ. ಹಾಗಾಗಿ ಈ ಉತ್ತರದಲ್ಲಿ ಚತುರ್ಭದ್ರವನ್ನು ಸಾಧಿಸಲು ಬೇಕಾದ ದುರ್ಲಭವಾದ ಚತುರ್ಭದ್ರಗಳು ಯಾವುವು? ಎಂಬುದನ್ನು ತಿಳಿಯಬೇಕಾದ ಸಂದರ್ಭವಿದೆ.

ದಾನ ಮಾಡಬೇಕು. ಆದರೆ ದಾನವನ್ನು ಮಾಡುವಾಗ ಪ್ರಿಯವಾದ ಮಾತಿನಿಂದ ದಾನ ಮಾಡಬೇಕು. ಅಂದರೆ ದಾನವನ್ನು ಕೊಡುವ ಸಂದರ್ಭದಲ್ಲಿ ಸ್ವೀಕರಿಸುವವರ ಮನಸ್ಸು ಮೃದುವಾಗಿರಬೇಕು; ಅಂತಹ ಮನಸ್ಸನ್ನು ನಿರ್ಮಿಸಬೇಕು; ಅಂತಹ ಮನಸ್ಸನ್ನು ನಿರ್ಮಿಸಲು ಇರುವ ಉತ್ತಮ ಸಾಧನವೇ ಪ್ರಿಯವಾದ ಮಾತು. ಪ್ರಿಯವಾದ ಮಾತಿನಿಂದ ದಾನ ಮಾಡಿದಾಗ ದಾನಕ್ಕೆ ಹೆಚ್ಚಿನ ಮಹತ್ವ ಬರುತ್ತದೆ ಎಂಬುದು ಇದರ ಅರ್ಥ. ಜ್ಞಾನವು ಗರ್ವದಿಂದ ರಹಿತವಾದಾಗ ಶೋಭಿಸುತ್ತದೆ. ಇದಕ್ಕೆ ಸಂಬಂಧಪಟ್ಟ ಒಂದು ಸುಭಾಷಿತ ಹೀಗಿದೆ - ವಿದ್ಯಾ ವಿನಯೇನ ಶೋಭತೇ' ಎಂಬುದಾಗಿ. ವಿನಯ ಎಂದರೆ ಗರ್ವ ಇಲ್ಲದಿರುವುದು. ಜ್ಞಾನವು ಎತ್ತರದಲ್ಲಿರುವ ವಿಷಯ. ಅದು ನಮ್ಮಲ್ಲಿಗೆ ಬರಬೇಕಾದರೆ ಬಾಗುವಿಕೆ ಅತ್ಯಂತ ಅನಿವಾರ್ಯ. ಈ ಬಾಗುವಿಕೆಯೇ ವಿನಯ ಎಂಬುದಾಗಿ ಕರೆಸಿಕೊಳ್ಳುತ್ತದೆ. ಹಾಗಾಗಿ ಜ್ಞಾನದ ಹರಿವು ವಿನಯದಲ್ಲಿ ನೆಲೆನಿಲ್ಲುತ್ತದೆ. ವಿನಯವಂತಿಕೆ ಜ್ಞಾನವನ್ನು ಇನ್ನಷ್ಟು ಪರಿಶೋಧಿಸುತ್ತದೆ.ಶೌರ್ಯ ಎಂಬುದು ಬಹಳ ದೊಡ್ಡ ಗುಣ. ಅದು ಶರೀರ, ಇಂದ್ರಿಯ, ಮನಸ್ಸು ಇವುಗಳು ಬಲಿಷ್ಠವಾದಾಗ ರೂಪಿತಗೊಳ್ಳುವ ಒಂದು ವಿಶೇಷಗುಣ. ಈ ಗುಣವು ಪರಿಪೂರ್ಣವಾಗಬೇಕಾದರೆ ಅದಕ್ಕೆ ಕ್ಷಮಾ ಎಂಬ ಗುಣವು ಬೇಕು. ಸಹನೆ ಎಂಬುದು ಇದರ ಅರ್ಥ. ಶೌರ್ಯದಿಂದ ಕೂಡಿರುವ ವ್ಯಕ್ತಿಯು ಬಲಹೀನನಾದವನ ಮೇಲೆ ತನ್ನ ಬಲವನ್ನು ಪ್ರಯೋಗಿಸಬಾರದು; ಅದಕ್ಕೆ ಅವನಿಗೆ ಸಹನೆ ಅಥವಾ ಕ್ಷಮೆ ಎಂಬ ಗುಣ ಅತ್ಯಂತ ಅವಶ್ಯಕ. ಯಾರ ಮೇಲೆ ಬಲಪ್ರಯೋಗವನ್ನು ಮಾಡಬೇಕು? ಯಾರ ಮೇಲೆ ಬಲಪ್ರಯೋಗವನ್ನು ಮಾಡಬಾರದು? ಎಂಬ ವಿವೇಕವನ್ನು ಕ್ಷಮಾ ಗುಣವು ಶೌರ್ಯ ಇದ್ದವನಿಗೆ ಕಲಿಸುತ್ತದೆ.

ಮನುಷ್ಯನು ಧನವನ್ನು ಸಂಪಾದನೆ ಮಾಡಬೇಕಾದದ್ದು ಅತ್ಯಂತ ಅನಿವಾರ್ಯ. ಧನವಿಲ್ಲದಿದ್ದರೆ ಅವನ ಜೀವನ ಸಾರ್ಥಕವಲ್ಲ, ಧನವಿಲ್ಲದ ಜೀವನ ಉಸಿರಿಲ್ಲದ ಶವದಂತೆ. ಆದರೆ ಸಂಪಾದನೆ ಮಾಡಿದ ಧನವು ಉಳಿಯಬೇಕಾದರೆ ಅದು ತ್ಯಾಗದಿಂದ ಮಾತ್ರ ಸಾಧ್ಯ. ಅದಕ್ಕೆ ದಾಸರು ಹೇಳುವುದು ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಎಂಬುದಾಗಿ. ಇಟ್ಟು ಇಟ್ಟು ಧನವು ಹಾಳಾಗುತ್ತದೆ. ನಿಂತ ನೀರು ಕೆಡುತ್ತದೆ. ಹರಿಯುವ ನೀರು ಶುದ್ಧವಾಗಿರುತ್ತದೆ. ಸಂಪಾದಿಸಿದ ವಿತ್ತವು ತ್ಯಾಗದಿಂದ ಶುದ್ಧವಾಗುತ್ತದೆ. ಮತ್ತಷ್ಟು ಶುದ್ಧವಾದ ಧನ - ಸಂಪತ್ತು ಅವನನ್ನು ಸೇರಿಕೊಳ್ಳುತ್ತದೆ. ಹಾಗಾಗಿ ತ್ಯಾಗದಿಂದ ಕೂಡಿದ ಧನವು ಆ ವ್ಯಕ್ತಿಯಲ್ಲಿ ವ್ಯಕ್ತಿತ್ವವನ್ನು ರೂಪಿಸುತ್ತದೆ. ಹೀಗೆ ದಾನ, ಜ್ಞಾನ, ಶೌರ್ಯ ಮತ್ತು ಧನ ಈ ನಾಲ್ಕು ಸಂಪತ್ತುಗಳು ಉಳಿಯಬೇಕಾದರೆ ಏನು ಮಾಡಬೇಕು ಎಂಬ ಉತ್ತರ ಈ ಪ್ರಶ್ನೋತ್ತರದಲ್ಲಿ ಇದೆ ಎಂಬುದನ್ನು ನಾವು ಗಮನಿಸಬೇಕು.



• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜರಾಸಂಧನೊಂದಿಗೆ ಮಾತಿನ ಚಕಮಕಿ

ಜರಾಸಂಧನು ಹೀಗಂದನು: ಸ್ನಾತಕವ್ರತವನ್ನು ಮುಗಿಸಿ ಬಂದ ವಿಪ್ರರು ವೇಷವಿರೋಧಿಯಾದ ಆಚಾರವುಳ್ಳವರಾಗಿ ಹೊರಗೆ ತೋರುವಂತೆ ಹೀಗೆ ಮಾಲಾಧಾರಣ -ಚಂದನ-ಲೇಪನಗಳನ್ನು ಮಾಡಿಕೊಳ್ಳುವುದಿಲ್ಲ. ಇದು ಎಲ್ಲರಿಗೂ ತಿಳಿದಿರುವಂತಹುದೇ ಸರಿ. ಆದರೆ ತಾವುಗಳು ಪುಷ್ಪಮಾಲೆಗಳನ್ನು ಧರಿಸಿದ್ದೀರಿ. ಅಷ್ಟೇ ಅಲ್ಲ, ತಮ್ಮ ತೋಳುಗಳಲ್ಲಿ ಬಿಲ್ಲಿನ ಹುರಿಯ ಚಿಹ್ನೆಗಳಿವೆ. ಹಾಗಿರಲು ನಿಜವಾಗಿ ನೀವು ಯಾರು? ಕ್ಷತ್ರಿಯರಿಗೆ ಸಲ್ಲುವ ಓಜಸ್ಸನ್ನು ಹೊಂದಿದ್ದೀರಿ. ಆದರೆ ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಿದ್ದೀರಿ. ಬೇರೆ ಬೇರೆ ಬಣ್ಣಗಳನ್ನು ಹೊಂದಿರುವ ವಸ್ತ್ರಗಳನ್ನು ಧರಿಸಿರುವಿರಿ. ಹೊರಗೆ ಮಾಲ್ಯಾನುಲೇಪನಗಳನ್ನು - ಎಂದರೆ ಹಾರಚಂದನಗಳನ್ನು ಧರಿಸಿರುವಿರಿ. ನೀವು ಯಾರೆಂಬುದನ್ನು ಸತ್ಯವಾಗಿ ಹೇಳಿರಿ. ರಾಜರಿಗೆ ಶೋಭಿಸತಕ್ಕದ್ದು ಸತ್ಯವೇ ಸರಿ. ಅಷ್ಟೇ ಅಲ್ಲ, ಬರುವಾಗ ಚೈತ್ಯಪರ್ವತದ ಶಿಖರಗಳನ್ನು ಒಡೆದುಹಾಕಿದ್ದೀರಿ. ಅದು ರಾಜಾಪಚಾರವಲ್ಲವೇ? ಅದಕ್ಕಾಗಿ ನಿಮ್ಮಲ್ಲಿ ಭಯವಿರಬೇಡವೇ? ಛದ್ಮವೇಷವನ್ನು ಧರಿಸಿರುವಿರಲ್ಲದೆ ಅದ್ವಾರದಿಂದ ಪ್ರವೇಶಮಾಡಿದ್ದೀರಿ! ಯಾವ ಕಾರಣಕ್ಕಾಗಿ? ಮಾತನಾಡಿ.

ಬ್ರಾಹ್ಮಣರಾದವರಿಗಂತೂ ತಮ್ಮ ಮಾತಿನಲ್ಲೇ ವೀರ್ಯವೆಂಬುದು ನೆಲೆಗೊಂಡಿರುವುದು. ನಿಮ್ಮ ಕರ್ಮವು ವಿಲಿಂಗಸ್ಥವಾದದ್ದು. ಅರ್ಥಾತ್, ನಿಮ್ಮ ಬಾಹ್ಯ ಚಿಹ್ನಗಳಿಗೆ ಹೊಂದತಕ್ಕದ್ದಲ್ಲ; ವಾಸ್ತವವಾಗಿ ಅದಕ್ಕೆ ವಿರುದ್ಧವಾದದ್ದೇ ಸರಿ! ಇರಲಿ. ಒಟ್ಟಿನಲ್ಲಿ ನಿಮ್ಮ ಧ್ಯೇಯವೇನು? ನನ್ನ ಬಳಿಗೇನೋ ಬಂದಿದ್ದೀರಿ. ಆದರೆ ವಿಧ್ಯುಕ್ತವಾಗಿ ನಾವು ನಿಮಗೆ ಅರ್ಪಿಸಿದ ಆದರವನ್ನು ಸ್ವೀಕರಿಸದೆಯೇ ನಿಂತಿದ್ದೀರಿ. ಇದಕ್ಕೆ ಕಾರಣವೇನು? ನಮ್ಮಲ್ಲಿಗೆ ನೀವು ಬರುವುದರ ಹಿಂದಿನ ಉದ್ದೇಶವಾದರೂ ಏನಾಗಿದೆ? ಜರಾಸಂಧನು ಹೀಗೆ ನುಡಿಯಲಾಗಿ, ಮಹಮನಸ್ಕನಾದ ಕೃಷ್ಣನು ಉತ್ತರವಿತ್ತನು. ವಾಕ್ಯವಿಶಾರದನಾದ ಆತನ ಮಾತು ಸ್ನಿಗ್ಧವೂ ಗಂಭೀರವೂ ಆಗಿದ್ದಿತು. ಕೃಷ್ಣನು ಹೀಗೆ ಹೇಳಿದನು: ರಾಜನೇ, ನಮ್ಮನ್ನು ನೀನು ಸ್ನಾತಕ ಬ್ರಾಹ್ಮಣರೆಂದೇ ಭಾವಿಸಿಕೋ, ಪರವಾಯಿಲ್ಲ. ಆದರೆ ಸ್ನಾತಕ ವ್ರತಿಗಳೆಂದರೆ ಬ್ರಾಹ್ಮಣರು ಮಾತ್ರವಲ್ಲದೆ, ಕ್ಷತ್ರಿಯರೂ ವೈಶ್ಯರೂ ಆಗಬಹುದಷ್ಟೆ. ಸ್ನಾತಕರೆನಿಸಿಕೊಂಡವರಿಗೆಲ್ಲಾ ಅನ್ವಯಿಸುವ ಸಾಮಾನ್ಯ ನಿಯಮಗಳೂ ಇವೆ. ಜೊತೆಗೆ ವಿಶೇಷ ನಿಯಮಗಳೂ ಇರುತ್ತವೆಯಷ್ಟೆ? ವಿಶೇಷ ನಿಯಮಗಳನ್ನು ಸತತವಾಗಿ ಅನುಸರಿಸತಕ್ಕ ಕ್ಷತ್ರಿಯನು ಯಾರುಂಟೋ ಆತನು ಲಕ್ಷ್ಮಿಯನ್ನು ಹೊಂದುವನೇ ಸರಿ. ಯಾರು ಪುಷ್ಪ ಧಾರಣೆಯನ್ನು ಮಾಡುವರೋ ಅವರಲ್ಲಿ ಲಕ್ಷ್ಮಿಯು ನೆಲಸುವಳು. ಆ ಕಾರಣಕ್ಕಾಗಿಯೇ ನಾವು ಪುಷ್ಪವಂತರಾಗಿದ್ದೇವೆ. ಕ್ಷತ್ರಿಯನೆಂದರೆ ಬಾಹುವೀರ್ಯವುಳ್ಳವನು. ಕ್ಷತ್ರಿಯನು ಅದೆಷ್ಟು ಬಾಹುವೀರ್ಯವುಳ್ಳವನೋ ಅಷ್ಟೊಂದು ವಾಕ್ಯವೀರ್ಯವುಳ್ಳವನಲ್ಲ. ಎಂದೇ ಓ ಬೃಹದ್ರಥಪುತ್ರನಾದ ಜರಾಸಂಧನೇ, ಕ್ಷತ್ರಿಯನ ಮಾತಿನಲ್ಲಿ ದಾರ್ಷ್ಟ್ಯವು ಹೆಚ್ಚಿರುವುದಿಲ್ಲ. ಸೃಷ್ಟಿಮಾಡುವಾಗ ಬ್ರಹ್ಮನು ಕ್ಷತ್ರಿಯರ ಬಲವೆಂಬುದನ್ನು ಅವರ ತೋಳುಗಳಲ್ಲಿಯೇ ತುಂಬಿಸಿಟ್ಟಿರುವನು. ಅದನ್ನು ನೀ ನೋಡಬಯಸುವೆಯಾದರೆ, ಓ ರಾಜನೇ, ಇಂದು ನಿಸ್ಸಂಶಯವಾಗಿಯೂ ನೋಡುವೆ. ಇದರಲ್ಲಿ ಸಂಶಯವೇ ಇಲ್ಲ. ಮಿತ್ರಗೃಹವನ್ನು ಪ್ರವೇಶಿಸುವಾಗ ದ್ವಾರದ ಮೂಲಕ ಪ್ರವೇಶಿಸತಕ್ಕದ್ದು; ಆದರೆ ಶತ್ರುಗೃಹವನ್ನು ಪ್ರವೇಶಿಸುವಾಗ ಅದ್ವಾರದ ಮೂಲಕವೇ ಪ್ರವೇಶಿಸತಕ್ಕದ್ದು. ಇದು ಧೀರರ ನಡೆ. ಹೀಗಿರುವುವು ಶತ್ರು-ಮಿತ್ರರುಗಳ ದ್ವಾರಗಳು ಎಂಬುದಾಗಿ ಧರ್ಮ ದೃಷ್ಟಿಯಿಂದ ಹೇಳಲಾಗಿದೆ. ನಮ್ಮ ಕೆಲಸದ ಮೇರೆಗೇ ನಾವು ನಿನ್ನ ಮನೆಗೆ ಬಂದಿರುವುದು. ಶತ್ರುವಿನಿಂದ ನಾವು ಆದರ ಸತ್ಕಾರಗಳನ್ನು ಸ್ವೀಕರಿಸುವವರಲ್ಲ, ಇದುವೇ ನಮ್ಮ ಶಾಶ್ವತ ವ್ರತವಾಗಿದೆ ಎಂದನು ಶ್ರೀಕೃಷ್ಣ.

ಸುಧಾರಣೆಯಾಗದ ಕೆಪಿಎಸ್‌ಸಿ

ಪತ್ರ ಮಿತ್ರ

ತನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳದೆ, ಅಭ್ಯರ್ಥಿಗಳ ಕನಸುಗಳೊಂದಿಗೆ ಚೆಲ್ಲಾಟವಾಡುತ್ತಿರುವ ಕೆಪಿಎಸ್ಸಿಯು ಕೆಟ್ಟ ಕಾರಣಗಳಿಗಾಗಿಯೇ ಸದಾ ಸುದ್ದಿಯಲ್ಲಿರುತ್ತದೆ. ಕೆಪಿಎಸ್ಸಿಯಲ್ಲಿ ಪಾರದರ್ಶಕತೆ ತಂದು ಸುಧಾರಣೆಗೊಳಿಸುವ ನಿಟ್ಟಿನಲ್ಲಿ ಯುಪಿಎಸ್ಸಿಯ ಮಾಜಿ ಅಧ್ಯಕ್ಷ ಪಿ.ಸಿ. ಹೋಟಾ ಸಮಿತಿಯು 2013ರ ಆಗಸ್ಟ್‌ನಲ್ಲೇ ಮಾಡಿರುವ ಶಿಫಾರಸ್ಸುಗಳನ್ನು, ಅಂದಿನಿಂದ ಇಂದಿನವರೆಗೆ ಸರಕಾರಗಳಾವುವೂ ಗಂಭೀರವಾಗಿ ಪರಿಗಣಿಸಿ ಜಾರಿಗೆ ತರದೆ, ಕೇವಲ 'ರಾಜಕಾರಣ' ಮಾಡಿಕೊಂಡೇ ಬಂದಿವೆ. ಕೆಪಿಎಸ್ಸಿ ಸುಧಾರಣೆಯನ್ನೇನೂ ಕಾಣಲಿಲ್ಲ. ಅಕ್ರಮ, ಅವ್ಯವಹಾರ, ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮುಂದುವರಿದವೇ ಹೊರತು ನಿಲ್ಲಲಿಲ್ಲ. ಉಚ್ಚ ನ್ಯಾಯಾಲಯವು 2011ನೇ ಸಾಲಿನ ಕೆಪಿಎಸ್ಸಿಯ ಪತ್ರಾಂಕಿತ ಅಧಿಕಾರಿಗಳ ಆಯ್ಕೆ ಪಟ್ಟಿ ರದ್ದುಪಡಿಸಿದರೂ, 2022ರಲ್ಲಿ ಕಾಯ್ದೆಯೊಂದನ್ನು ಜಾರಿಗೆ ತರುವ ಮೂಲಕ, ಸರ್ಕಾರವೇ 'ಅಕ್ರಮ' ಪಟ್ಟಿಗೆ ಅಧಿಕೃತವಾಗಿ 'ಸಕ್ರಮ'ದ ಮುದ್ರೆಯೊತ್ತಿಬಿಡುತ್ತದೆ. ಕಾಣದ ಕೈಗಳ ಒತ್ತಡಕ್ಕೆ ಮಣಿದು ಕೆಪಿಎಸ್ಸಿಯ ನಾಲ್ಕು ಕಾರ್ಯದರ್ಶಿಗಳು ವರ್ಗಾವಣೆಗೊಂಡರೂ, ಪರೀಕ್ಷೆಗಳಲ್ಲಿನ ಲೋಪಕ್ಕೆ ನಿಯಂತ್ರಕರೇ ಕಾರಣರೆಂದು ಶಾಸಕರೇ ವಿಧಾನ ಸಭೆಯಲ್ಲಿ ಆಪಾದಿಸಿದರೂ, ನಾಲ್ಕು ವರ್ಷಗಳಿಂದ ಆ ಹುದ್ದೆಯಲ್ಲೇ ಮುಂದುವರೆದಿರುವ ಅವರನ್ನು ಕದಲಿಸಲಾಗದಿರುವುದು, ಕೆಪಿಎಸ್ಸಿಯಲ್ಲಿ ಎಲ್ಲವೂ ಸರಿಯಿಲ್ಲ ಮತ್ತು ಕಾಣದ ಕೈಗಳು ಅದನ್ನು ನಿಯಂತ್ರಿಸುತ್ತಿವೆ ಎಂಬುದಕ್ಕೆ ತಾಜಾ ಉದಾಹರಣೆ.

-ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಬಾಯ್ ಮಾತು



• ಎನ್.ರಾಮನಾಥ್
anakuramanath@gmail.com

'ವರ್ಲ್ಡ್ ಓರಲ್ ಹೆಲ್ತ್ ಡೇ' ಡಾಕ್ಟರ್ ಪಾಂಡುವಿಗೆ ಶುರುವಾಗಿದ್ದೇ ವಿಚಿತ್ರವಾಗಿ.

''ಬಾಯಿಯ ಆರೋಗ್ಯ ನೋಡಿಕೊಳ್ಳಿ'' ಎಂದರು ಡಾಕ್ಟರ್.

''ಮೀನಾಬಾಯಿಯದೇ? ಅವಳು ನನ್ನ ಅಸಿಸ್ಟೆಂಟ್ ಡಾಕ್ಟೇ. ಅವಳ ಕಡೆ ಗಮನ ಕೊಟ್ಟಿದ್ದಕ್ಕೇ ಮನೆಯ ಆರೋಗ್ಯ ಹಾಳಾಗಿರೋದು'' ಎಂದ ಸೀನು.

''ಬಾಯ್ಕಡೆ ಹೆಚ್ಚಿನ ಗಮನ ಕೊಡಿ'' ಎಂದರು ನೆಕ್ಸ್ಟ್ ಪೇಷೆಂಟ್‌ಗೆ.

''ಶೂರ್ ಡಾಕ್ಟೇ. ಸ್ವಲ್ಪ ನಮ್ಮ ಪೇರೆಂಟ್ಸ್‌ಗೂ ಹೇಳ್ಬಿಡಿ. ನಾನು ಡೇಟಿಂಗ್ ಹೋಗ್ತೀನೀಂದ್ರೆ, ಅವರು ಬಿಪಿ ಕೌಂಟಿಂಗ್ ಏರಿಸ್ಕೋತಾರೆ'' ಎಂದಳು ಶಮ್ಮಿ.

''ನಿಮ್ಮ ಮೌತ್ ಕಡೆ ಸ್ವಲ್ಪ ಅಟೆನ್ಷನ್ ಕೊಡಿ,'' ಪಾಂಡು ಮಧ್ಯವಯಸ್ಕರಿಗೆ ನುಡಿದರು.

''ನೋ ಪ್ರಾಬ್ಲಂ ಡಾಕ್ಟರ್. ಇಂಶೂರೆನ್ಸ್ ಮಾಡ್ಸಿದೀನಿ, ವಿಲ್ ಬರ್ದಿದೀನಿ. ಮೌತ್ (ಸಾವು) ಯಾವಾಗ ಬಂದರೂ ವೆಲ್ಕಂ ಮಾಡಕ್ಕೆ ಸಿದ್ಧ'' ಎಂದರವರು.

'ಬಾಯಿಯ ಸ್ವಾಸ್ಥ್ಯವನ್ನು ನೋಡಿಕೊಳ್ಳಿ' ಎಂದು ಹೇಳುವುದೇ ಇಷ್ಟು ಕಷ್ಟವಾಗಿರುವಾಗ ಅದರ ಸ್ವಾಸ್ಥ್ಯವೇನು ಸುಲಭದ ಮಾತೇ? ನನಗಂತೂ ನನ್ನ ಮೌತು ಪಾರ್ಟ್ ಬೈ ಪಾರ್ಟ್ ತೊಂದರೆ ಕೊಡುತ್ತಲೇ ಇರುತ್ತದೆ.

ಮೌತ್ ಟ್ರಬಲ್ ಶುರುವಾಗುವುದು ತೊಟ್ಟಿಲಲ್ಲಿರುವ ಕಾಲದಿಂದಲೇ ಎನಿಸುತ್ತದೆ. ಮಗುವಿಗೆ ಅದು ತೊಂದರೆ ಎನಿಸದಿದ್ದರೂ, ಕಿಟ್ ಕಿಟ್ ಕಿಟಾರ್ ಎಂದೋ, ಛಿಟ್ ಛಿಟ್ ಛಿಟಾರ್ ಎಂದೋ ಮಲಗಿದ್ದಲ್ಲಿಂದಲೇ ಕಂಠಸಿರಿಯ ನಾದವನ್ನು ಮನೆಯ ಮೂಲೆಮೂಲೆಗೂ ತಲುಪಿಸಿದ ಕೂಡಲೆ ಹಿರಿಕಿರಿಕಿರಿಯರು ''ಸುಮ್ನಿರೋ ಬಾಯ್ಮಾಡ್ಬೇಡ'' ಎಂದು ಪ್ರೀತಿಯಿಂದ ಗದರುತ್ತಾರೆ. ಕಂಠದ ತಪ್ಪನ್ನು ತನ್ನದಾಗಿಸಿಕೊಂಡ ಬಾಯಿಯ ಮೊದಲ ಕಷ್ಟ ಶುರುವಾಗುವುದು ಕಕ್ಕುವಿಕೆಯು ಮೊದಲಾದಾಗ. ಜೇಡವು ತನ್ನ ಬಾಯಿಯಿಂದ ಹೊರಡಿಸಿದ ಜೊಲ್ಲು ಯಾವುದಾದರೂ ವಸ್ತುವನ್ನು ತಲುಪುವವರೆಗೆ ಬೆಳೆಯುವಂತೆಯೇ, ಮಗುವಿನ ಜೊಲ್ಲೂ ಮಗುವಿನದೇ ಮಂಡಿಯನ್ನೋ, ಅಂಗಿಯನ್ನೋ ಅಥವಾ ಎತ್ತಿಕೊಂಡವರ ಭುಜವನ್ನೋ ಮುಟ್ಟುವವರೆಗೆ ಬೆಳೆದು 'ಜೊಲ್ಲುಸೇತುವೆ'ಯನ್ನು ನಿರ್ಮಿಸುತ್ತದೆ. ಆಗಾಗ್ಗೆ ಒಸರುವ ಜೊಲ್ಲನ್ನು ಒರೆಸುವುದರಿಂದ ಕಪೋಲಕ್ಕೆ ಗುಲಾಬಿಯ ರಂಗು ಮೂಡುತ್ತದೆ.

ಮೌತ್ ಟ್ರಬಲ್‌ನಲ್ಲಿ ಮೂರು ವಿಧಗಳಿವೆ - ತುಟಿಗಳದು, ನಾಲಿಗೆಯದು ಮತ್ತು ಹಲ್ಲಿನದು. ನಾಲಿಗೆಯದರಲ್ಲಿ ಮತ್ತೆರಡು ವಿಧಗಳು - ಫಿಸಿಕಲ್ ಮತ್ತು ವರ್ಬಲ್.

ಮೊದಲಿಗೆ ತುಟಿಗಳ ತೊಂದರೆಗಳನ್ನು ಗಮನಿಸೋಣ. ಇವುಗಳು ಒಬ್ಬೊಬ್ಬರಿಗೆ ಒಂದೊಂದು ವಿಧದಲ್ಲಿ ಇರುತ್ತವೆಂದು ಕವಿಗಳು ನುಡಿಯುತ್ತಾರೆ. ''ಅಳುವ ಕಂದನ ತುಟಿಯು ಹವಳದ ಕುಡಿಹಂಗ'' ಎಂದು ಜನಪದರು ಹಾಡಿದ್ದಾರೆ. 'ಹವಳ ಬೆಲೆ ಬಾಳುತ್ತದೆ. ಅದಕ್ಕೆ ವಿಮೆ ಮಾಡಿಸಿ' ಎನ್ನುತ್ತಾ ವಿಮಾ ಏಜೆಂಟನೊಬ್ಬನು ಮೆಟರ್ನಿಟಿ ಹೋಂನ ಮುಂದೆಯೇ ಝೂಂಡಾ ಹೂಡಿದ್ದಾನಂತೆ. ಅವನನ್ನು ತಟಾಯಿಸಿಕೊಂಡು ಬರುವುದೇ ಕಷ್ಟವಂತೆ.

''ಅಧರಂ ಮಧುರಂ'' ಎನ್ನುತ್ತದೆ ಸುಭಾಷಿತ. ''ರಂ ಎಂದ ಮೇಲೆ ಅದು ಮಧುವೇ'' ಎಂದು ಕುಡುಕರು 'ಮಧುರಂ' ಅದನ್ನು ವಿಶ್ಲೇಷಿಸುತ್ತಾ, 'ಮೊದಲ ಪದವು 'ಆಧಾ ರಂ' ಎಂದಾಗಬೇಕು. ಹಾಫ್ ಬಾಟಲ್ ರಂ ಸಾಕಷ್ಟು ಕಿಕ್ ಕೊಡತ್ತೆ' ಎಂದೂ ನುಡಿದಿದ್ದಾರೆ. ಇವುಗಳ ಮೇಲೆ ಸತ್ಯವು ಮನೆ ಮಾಡಿರುತ್ತದೆ ಎನ್ನುವುದಕ್ಕೆ 'ಹೋಟೋಂಪೇಸಚ್ಚಾಯೀರೆಹತೀಹೈ' ಹಾಡೇ ಸಾಕ್ಷಿ. ಸತ್ಯಕ್ಕಿಂತಲೂ ಟ್ರಬಲ್ ಉಂಟೇ ಜಗದೊಳ್! ತುಟಿಗಳಲ್ಲಿರುವ ಸತ್ಯವನ್ನು ನಾಲಿಗೆಯು ಹೊತ್ತು ನುಡಿದರೆ ಎದೆನೋವು ಖಚಿತ ಎನ್ನಲು 'ಇದ್ದಿದ್ದಂಗ್ ಹೇಳಿದ್ರೆ ಎದ್ಬಂದೆದೆಗೊದ್ರಂತೆ' ಎಂಬ ಗಾದೆಯೇ ಇದೆ.

''ನಮ್ಮ ತುಟಿಗಳು ಹೆಚ್ಚೆಂದರೆ ಸೀಳಿಯಾವು, ಧೂಮಪಾನದಿಂದ ಕಪ್ಪಾದಾವು. ಇತರ ತುಟಿಗಳಿಂದಲೇ ನಮಗೆ ತೊಂದರೆ'' ಎಂದರೋಮಿಯೋ ರಂಗಣ್ಣ.

''ಇತರ ತುಟಿಗಳೆಂದರೆ?''

''ಸಿನಿಮಾ ನಟಿಯರ ಕ್ಲೋಸಪ್‌ನಲ್ಲಿ ಕಾಣುವ ಅರೆಬಿರಿದ ತುಟಿಗಳು; ಕಾಲೇಜ್ ಕನ್ಯೆಯರ ಬಿಂಬಾಧರಗಳು, ಆ ತುಟಿಗಳು ಹೊರಡಿಸುವ ಪಿಸುಮಾತುಗಳು; ಇವೆಲ್ಲವೂ ಹುಡುಗರು ಇನ್‌ಸೋಮ್ನಿಯಾದಿಂದ ಬಳಲಲು ಕಾರಣವಾಗಿವೆ'' ರಂಗಣ್ಣ ಉವಾಚ. ತುಟಿಸೀಳು, ಸೀಳುತುಟಿ, ತುಟಿಪುಡಿ (ಒಣಗಿದ ಚರ್ಮವು ಪುಡಿಯಾಗಿ ಉದುರುವುದು) ಇವಕ್ಕೆಲ್ಲ ವೈದ್ಯರಲ್ಲಿ ಪರಿಹಾರವಿದೆ. ಆದರೆ ಪ್ರೇಮವೆಂಬ 'ಅದುರುಹೃದಯರೋಗ'ವನ್ನು ಹರಡುವ 'ತುಟಿವೈರಸ್' ಅನ್ನು ನಿಯಂತ್ರಿಸಲು ಸುಂದರಾಧರೆ ಪ್ರೇಯಸಿಯಾಗುವುದೊಂದೇ ಔಷಧಿಯಂತೆ.

ತುಟಿಗಳನ್ನು ದಾಟಿಕೊಂಡು ನಾಲಿಗೆಯ ಸಾಮ್ರಾಜ್ಯಕ್ಕೆ ಬರೋಣ. 'ನಾಲಿಗೆಗೆ ಪಲ್ಯ ಮತ್ತು ಚಹಾ ಎರಡೂ ಬಹಳ ಪ್ರಿಯ. ಆದ್ದರಿಂದಲೇ 'ಜಿಹ್ವಾಚಾಪಲ್ಯ' ಎಂಬ ಪದಪುಂಜವು ಮೂಡಿರುವುದು' ಎಂದು 'ಪದಾರ್ಥ ಚಿಂತಾಗ್ರಣಿ'ಯೊಬ್ಬರು 'ನನ್ನ ಪ್ರಕಾರ' ಎಂಬ ವೆಬ್‌ಸೈಟಲ್ಲಿ ಬರೆದಿದ್ದಾರೆ. 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದು ದಾಸರು ಹೇಳಿದ್ದಾರೆ. ಆದರೆ ''ನೀಚ ಎನ್ನುವುದು ಉಚ್ಚ ಎನ್ನುವುದಕ್ಕೆ ವಿರುದ್ಧ ಪದ. ನೀಚ ಎಂದರೆ ಕೆಳಗೆ ಎಂದರ್ಥ. ಬಾಯಿಯಲ್ಲಿ ಮೇಲೆ ಅಂಗುಳವೂ, ಕೆಳಗೆ ನಾಲಿಗೆಯೂ ಇರಬೇಕಾದ್ದು ಸರಿಯಾದ ಕ್ರಮ. ದಾಸರು ಹೇಳಿದರೆಂದು ಬಾಯಿಯ ಮೇಲ್ಭಾಗದಿಂದ ನಾಲಿಗೆಯು ಅಲುಗಾಡುತ್ತಿದ್ದರೆ ಚೆನ್ನವೂ ಅಲ್ಲ, ಕೆಲಸಕ್ಕೂ ಬಾರದು. 'ನೀಚೇ' ಇರುವವರದು 'ಊಂಚಾ' ಬುದ್ಧಿ ಆಗುವುದು ಸಾಧ್ಯವೇ?'' ಎಂದು ನಾಲಿಗೆಪ್ರಿಯರ ಒಕ್ಕೂಟವು ಪ್ರಶ್ನಿಸಿದೆಯಂತೆ.

ನಾಲಿಗೆಯು ನುಡಿಯುವಾಗ ಪಾಂಡವರ ಬಗ್ಗೆಯೂ, ಕೃಷ್ಣನ ಬಗ್ಗೆಯೂ ಒಳ್ಳೆಯ ನುಡಿಗಳನ್ನೇ ಆಡಿದರೂ ಅದಕ್ಕೆ ನಿಜಕ್ಕೂ ಕೌರವರ ಮೇಲೆಯೇ ಹೆಚ್ಚು ಪ್ರೀತಿ. ಆದ್ದರಿಂದಲೇ ಆಗಾಗ್ಗೆ ನಾಲಿಗೆಯ ಮೇಲೆ 'ಕುರು'ಗಳು ಬಂದು ಆಶ್ರಯ ಪಡೆಯುವುದು. (ನಾನಂತೂ ದೊಡ್ಡ ಕುರುವನ್ನು 'ದುರ್ಯೋಧನ' ಎಂದೂ, ಕಾಣದ ಜಾಗದಲ್ಲಾದ ಕುರುವನ್ನು 'ಧೃತರಾಷ್ಟ್ರ' ಎಂದೂ ಕರೆಯುತ್ತೇನೆ.) ಬಂದಂತಹ ಕುರುಗಳಿಗೆ ಜೇನುತುಪ್ಪ ಸವರಿ, ಅಲೋವೆರಾದಿಂದ ಅಭಿಷೇಕ ಮಾಡಿ, ಬೆಚ್ಚನೆಯ ನೀರಿಗೆ ಉಪ್ಪು ಬೆರೆಸಿದ ಪಾನಕವನ್ನು ನೀಡಿ ಸತ್ಕರಿಸಿ, ವಾರ-ಎರಡುವಾರ ಆತಿಥ್ಯ ನೀಡಿದ ಮೇಲೆಯೇ ನಾಲಿಗೆಯು ಕುರುವಿಗೆ ಬೀಳ್ಕೊಡುವುದು ಸಾಮಾನ್ಯ ಸಂಪ್ರದಾಯ. 'ನಾಲಿಗೆಯದು ಕುಡುಕರ ನಡಿಗೆ. ಆದ್ದರಿಂದಲೇ ಆಗಾಗ್ಗೆ ತಪ್ಪುತ್ತಿರುತ್ತದೆ' ಎಂದು ಕೆಲವರು ನುಡಿದರೆ, 'ನಾಲಿಗೆ ಇರುವುದೇ ಒದ್ದೆ ಜಾಗದಲ್ಲಿ, ಒದ್ದೆ ಇರುವಲ್ಲಿ ಜಾರಿಕೆ ಸಹಜ' ಎಂದು ಸಮರ್ಥಿಸಿಕೊಳ್ಳುವವರೂ ಇದ್ದಾರೆ.

ಮಾಸ್ಟರ್ ಹಿರಣ್ಣಯ್ಯನವರಿಗೆ ನಾಲಿಗೆಯ ಮಹತ್ವದ ಮೇಲೆ ಅಪರಿಮಿತ ಗೌರವ. ತತ್ಕಾರಣವೇ ನಾಲಿಗೆಯ ಬಗ್ಗೆ ಆಗಾಗ್ಗೆ ಉಲ್ಲೇಖಿಸುತ್ತಿದ್ದರು. 'ಮೂರಿಂಚು ನಾಲಿಗೆ ಆರಡಿ ಮನುಷ್ಯನನ್ನು ಅಲ್ಲಾಡಿಸಿ ಕೆಡವಿಬಿಡುತ್ತದೆ', 'ನಾಯಿಯನ್ನು ಯಾರು ಬೇಕಾದರೂ ಸಾಕಬಹುದು. ನಾಲಿಗೆಯನ್ನು ಸಾಕಬೇಕು. ನಾಯಿಯನ್ನು ಸಾಕಿದರೆ ಮನೆಯನ್ನು ಕಾಯುತ್ತದೆ. ನಾಲಿಗೆಯನ್ನು ಸಾಕಿದರೆ ಮನೆತನವನ್ನೇ ಕಾಯುತ್ತದೆ' ಎನ್ನುತ್ತಿದ್ದರವರು. ಅವರು ಮಂಡಿಸುತ್ತಿದ್ದ 'ನಾಲಿಗೆ ಮತ್ತು ಹಲ್ಲುಗಳ ನಡುವಿನ ಸಂಭಾಷಣೆ'ಯೊಂದು ಹೀಗಿದೆ:

''ನೀನು ಒಂಟಿ. ನಾವು ಮೂವತ್ತೆರಡು. ಇದು ಪ್ರಜಾಪ್ರಭುತ್ವದ ಕಾಲ. ನಾವು ಹೇಳಿದಂತೆ ನೀನು ಕೇಳಿಕೊಂಡಿರಬೇಕು'' ಎಂದವು ಹಲ್ಲುಗಳು.

''ಸಂಖ್ಯೆ ಕಟ್ಕೊಂಡೇನ್ಮಾಡ್ತೀರೀ! ಪ್ರಭಾವ ಮುಖ್ಯ. ನಾನೇನಾದರೂ ಆಡಬಾರದ ಜಾಗದಲ್ಲಿ ಆಡಬಾರದ ಒಂದೇ ಒಂದು ಮಾತನ್ನು ಆಡಿಬಿಟ್ಟರೆ ನಿಮ್ಮ ಸಂಖ್ಯಾಬಲವಾದ ಮೂವತ್ತೆರಡನ್ನೂ ಜನರು ಉದುರಿಸಿ ಹೊರಗಿಟ್ಟುಬಿಡುತ್ತಾರೆ'' ಎಂದಿತು ನಾಲಿಗೆ!

ನಾಲಿಗೆ, ತುಟಿಗಳದು ಅದರ ಮಾಲಿಕರಿಗಷ್ಟೇ ತೊಂದರೆ ನೀಡುವ ಜಾಯಮಾನವಾದರೆ ಹಲ್ಲುಗಳು ಪರರಿಗೂ ಸಂಕಟ ನೀಡಬಲ್ಲವು. ಬಂದ ಸಂಬಳದ ಕೊಂಚ ಅಂಶವನ್ನು 'ಸೇವಿಂಗ್ಸ್ ಬ್ಯಾಂಕ್'ನಲ್ಲಿ ಡಿಪಾಸಿಟ್ ಮಾಡುವ ಮಂದಿಯಂತೆಯೇ ಹಲ್ಲುಗಳೂ ಬಾಯಿಗೆ ಸಂದ ಆಹಾರದಲ್ಲಿ ಕೆಲವನ್ನು ತಮ್ಮ ಸಂದಿಗಳಲ್ಲಿ ಡಿಪಾಸಿಟ್ ಮಾಡಿಕೊಳ್ಳುತ್ತವೆ. ಅವನ್ನು ದಿನಕ್ಕೆರಡು ಬಾರಿ ಬ್ರಷ್ಷು, ಪೇಸ್ಟು, ಮೌತ್‌ವಾಷ್‌ಗಳ ಮೂಲಕ ಖಾಲಿ ಮಾಡದಿದ್ದರೆ ಅದೇ ಡಿಪಾಸಿಟ್ಟುಗಳೇ 'ಫಿಕ್ಸೆಡ್ ಡಿಪಾಸಿಟ್'ಗಳಾಗಿಬಿಡುತ್ತವೆ. ಅಂತಹ ಡಿಪಾಸಿಟ್‌ಗಳಿಗೆ 'ಬಾಯಿಬ್ಯಾಂಕ್'ನ ಸಹಕಾರದಿಂದ 'ಬ್ಯಾಡ್ ಬ್ರೆತ್' ಎಂಬ ಬಡ್ಡಿಯನ್ನೂ ಕಂತಿನಲ್ಲಿ ಹೊರಬಿಡುತ್ತವೆ. ಈ ಬಡ್ಡಿಗಳೇ ಬಾಯಿಯ ಬಳಿ ಬಂದ ಇತರ ಮೂತಿಗಳು 'ಹೇಳೆನೋ ಹರಿತಾಳೆನೋ; ಹುಳ್ಕು ದಂತದೊಳೆದ್ದು ಹೊಟ್ಟೆ ತೊಳ್ಸೋ ವಿಷ್ಯಾನ; ಹೇಳೆನೋ ಹರಿ ತೇಳೆನೋ' ಎಂದು ಒಳಗೊಳಗೇ ನರಳುವಂತಾಗಿಸಿ, 'ಪರಕಷ್ಟಪ್ರದಾಯಕ'ವಾಗುತ್ತವೆ.

ದಂತರೋಗದ ಬಗ್ಗೆ ಇನ್ನೊಂದು ಲೇಖನವನ್ನೇ ಬರೆಯುವೆ. ಸದ್ಯದಲ್ಲಿ ಓರಲ್ ಹೆಲ್ತಿನ ಓವರಾಲ್ ಲುಕ್ಕಿಗಷ್ಟೇ ಈ ಲೇಖನವನ್ನು ಸೀಮಿತಗೊಳಿಸುವೆ. ನನಗೆ ಅತ್ಯಂತ ಕಷ್ಟ ನೀಡುವ 'ಓರಲ್ ಟ್ರಬಲ್' ಎಂದರೆ ಕೊರೆವಣಿಗೆ. ಕೇಳುಗರ ಕಿವಿಗಳನ್ನು ಅಪ್ಪಳಿಸಿ, ನಾಸ್ತಿಕರೂ 'ಪಾರುಗಾಣಿಸೈ ಪ್ರಭುವೆ' ಎನ್ನುವಂತೆ ಕೊರೆಯುವ ಡ್ರಿಲ್ಲಿಂಗ್ ಮಾಸ್ಟರ್‌ಗಳಿಂದ ಪಾರು ಮಾಡಲು ಒಂದು 'ಆಡಿಯೆನ್ಸ್ ವ್ಯಾಕ್ಸಿನ್' ಅತ್ಯಗತ್ಯ. 'ಓರಲ್ ಹೆಲ್ತ್ ದಿನ'ದಂದು ಮೆಡಿಕಲ್ ಮಂದಿ ಈ ಅತಿಘೋರ ಕರ್ಣಕಠೋರ 'ಭಾಷಣರೋಗ'ಕ್ಕೂ ಒಂದು ಮದ್ದು ಕಂಡುಹಿಡಿಯಲೆಂದು ಆಶಿಸೋಣ.

ಅಲ್ಲಿಯವರೆಗೆ, ವಿಶ್ ಯೂ 'ಗುಡ್ ಬಾಯ್!'

ಕೃತಕ ಬುದ್ಧಿಮತ್ತೆಯು ಪ್ರಯೋಜನಕಾರಿಯಾದಂತೆಯೆ ಅಪಾಯಕಾರಿಯೂ ಆಗಬಲ್ಲುದು. ಆದರೆ ಎಐ ಬೆಳವಣಿಗೆ ತಡೆಯುವ ಶಕ್ತಿ ನಮ್ಮಲ್ಲಿಲ್ಲ. ಬದಲಾಗಿ ಅದರ ಅಪಾಯ ತಡೆಯುವ ನಿಟ್ಟಿನಲ್ಲಿ ಎಚ್ಚರ ವಹಿಸುವುದು ಮುಖ್ಯ.

ಎಐ ಕ್ರಾಂತಿ ಮತ್ತು ಸೈಬರ್ ಸುರಕ್ಷತೆಯ ಸಮರ

ಡಾ. ಅನಂತ ಪ್ರಭು

ಅಲನ್ ಟೂರಿಂಗ್ 1950ರಲ್ಲಿ ತಮ್ಮ 'ಕಂಪ್ಯೂಟಿಂಗ್ ಮೆಶಿನರಿ ಇಂಟೆಲಿಜೆನ್ಸ್' ಪ್ರಬಂಧದಲ್ಲಿ ಒಂದು ಪ್ರಶ್ನೆ ಕೇಳಿದ್ದರು - ಯಂತ್ರಗಳು ಚಿಂತಿಸಬಲ್ಲವೇ? ಇದನ್ನು ಪರೀಕ್ಷಿಸಲು ಅವರು 'ಟೂರಿಂಗ್ ಟೆಸ್ಟ್' ಎಂಬ ಪ್ರಯೋಗ ನಡೆಸಿದ್ದರು. ಯಂತ್ರವು ಕೂಡಾ ಮನುಷ್ಯನಂತೆಯೇ ವ್ಯವಹರಿಸಬಲ್ಲುದೆ ಹಾಗೂ ಯಂತ್ರ ಮತ್ತು ಮನುಷ್ಯನ ನಡುವೆ ವ್ಯತ್ಯಾಸ ಗೊತ್ತಾಗದ ರೀತಿಯಲ್ಲಿ ವರ್ತಿಸಬಲ್ಲುದೆ ಎಂಬುದನ್ನು ಕಂಡುಕೊಳ್ಳುವುದು ಅವರ ಉದ್ದೇಶವಾಗಿತ್ತು. ಕೆಲ ವರ್ಷಗಳ ಬಳಿಕ ಅಂದರೆ 1956ರಲ್ಲಿ ಸಂಶೋಧನಾ ಸಮ್ಮೇಳನವೊಂದರಲ್ಲಿ ಕೃತಕ ಬುದ್ಧಿಮತ್ತೆ (ಎಐ) ಪದ ಬಳಕೆಗೆ ಬಂದಿತು. ಅಂದು ಸೈದ್ಧಾಂತಿಕ ಚರ್ಚೆಯಾಗಿ ಆರಂಭವಾದ ಕೃತಕ ಬುದ್ಧಿಮತ್ತೆ ವಿಷಯವು ಈಗ ನಮ್ಮ ಕಾಲದ ಅತ್ಯಂತ ಶಕ್ತಿಶಾಲಿ ತಂತ್ರಜ್ಞಾನ ಕ್ರಾಂತಿಯಾಗಿ ಬೆಳೆದು ನಿಂತಿದೆ. ಕೃತಕ ಬುದ್ಧಿಮತ್ತೆಯು ಇತ್ತೀಚಿನ ವಿದ್ಯಮಾನವೆಂಬಂತೆ ಕಂಡುಬರಬಹುದಾದರೂ ಅದರ ಮೂಲವು ದಶಕಗಳ ಹಿಂದೆಯೇ ಇದೆ.

ಕೃತಕ ಬುದ್ಧಿಮತ್ತೆ ವರ್ತಿಸುವ ರೀತಿ

ಕೃತಕ ಬುದ್ಧಿಮತ್ತೆಯನ್ನು ಉದಾಹರಣೆಯೊಂದರ ಮೂಲಕ ಅರ್ಥ ಮಾಡಿಕೊಳ್ಳೋಣ. ವಿಶ್ವದಲ್ಲಿ 336 ಬಗೆಯ ನಾಯಿ ತಳಿಗಳಿವೆ. ನಾವೆಲ್ಲರೂ ಬಹುತೇಕವಾಗಿ 30ರಿಂದ 40 ತಳಿಗಳನ್ನಷ್ಟೇ ನೋಡಿರಬಹುದು. ಈಗ ನೀವೊಂದು ರಸ್ತೆಯಲ್ಲಿ ಸಾಗುತ್ತಿರುವಾಗ ಹಠಾತ್ತನೆ ನಿಮ್ಮ ಮುಂದೆ ಈ ವರೆಗೆ ನೋಡಿರದ ಪ್ರಾಣಿಯೊಂದು ಓಡುತ್ತಾ ಬಂತೆಂದುಕೊಳ್ಳೋಣ. ಆ ತಳಿಯನ್ನು ನೀವು ಈ ವರೆಗೆಗೆ ನೋಡಿರದಿದ್ದರೂ ಒಂದೇ ಕ್ಷಣದಲ್ಲಿ ಅದು ನಾಯಿ ಎಂಬುದಾಗಿ ನೀವು ಅರಿತುಕೊಳ್ಳುತ್ತೀರಿ. ನಿಮ್ಮ ಮನಸ್ಸು ಅದನ್ನು ನಾಯಿಯೆಂದು ಅದರ ಕೆಲವು ಗುಣಲಕ್ಷಣಗಳಿಂದಲೇ ತೀರ್ಮಾನಿಸಿಬಿಡುತ್ತದೆ. ಅದರ ಬಾಲ, ಅದರ ಚಲನ, ಅದು ವರ್ತಿಸುವ ರೀತಿ ಇವೆಲ್ಲವೂ ನಿಮ್ಮ ಅನುಭವದ ಆಧಾರದಲ್ಲಿ ಅದನ್ನು ನಾಯಿ ಎಂದು ತೀರ್ಮಾನಿಸುತ್ತದೆ. ಇಷ್ಟು ಕ್ಷಿಪ್ರವಾಗಿ ಈ ತೀರ್ಮಾನಕ್ಕೆ ಬರುವುದನ್ನು ಬುದ್ಧಿಮತ್ತೆ ಎನ್ನುತ್ತೇವೆ.

ನೀವೀಗ ಕಂಪ್ಯೂಟರ್ ಪ್ರೋಗ್ರಾಂ ಒಂದನ್ನು ಬರೆಯುತ್ತಿದ್ದೀರಿ ಎಂದುಕೊಳ್ಳೋಣ. ನೀವು ಅದಕ್ಕೆ 30 ನಾಯಿ ತಳಿಗಳ ಚಿತ್ರಗಳನ್ನು ಫೀಡ್ ಮಾಡಿ 31ನೇ ತಳಿಯ ಚಿತ್ರವೊಂದನ್ನು ಅದಕ್ಕೆ ತೋರಿಸುತ್ತೀರಿ. ಹಳೆಯ ಪ್ರೋಗ್ರಾಂ ವ್ಯವಸ್ಥೆಯಲ್ಲಿ ಕಂಪ್ಯೂಟರ್ ಅದನ್ನು ಪತ್ತೆ ಹಚ್ಚಲು ವಿಫಲವಾಗುತ್ತದೆ. ಆದರ ಕುರಿತಂತೆ ನಿಮ್ಮ ಪ್ರೋಗ್ರಾಂನಲ್ಲಿ ವಿವರಗಳನ್ನು ನೀಡದ ಹೊರತು ಅದಕ್ಕೆ ಅದನ್ನು ಗುರುತು ಹಿಡಿಯಲು ಸಾಧ್ಯವಾಗದು. ಸಾಂಪ್ರದಾಯಿಕ ಕಂಪ್ಯೂಟರ್‌ಗಳು ನಾವು ಅದಕ್ಕೆ ಏನನ್ನು ಫೀಡ್ ಮಾಡಿರುತ್ತೇವೆಯೋ ಅಷ್ಟನ್ನೇ ಯೋಚಿಸುತ್ತದೆ. ಅದು ಕೇವಲ ಸೂಚನೆಯಷ್ಟೇ ಪಾಲಿಸುತ್ತದೆ. ತನ್ನ ಪ್ರೋಗ್ರಾಂನಿಂದ ಹೊರತಾಗಿ ತನ್ನದೇ ಆದ ಸ್ವಂತ ನಿರ್ಧಾರ ತಾಳಲು ಅದು ಹೋಗುವುದಿಲ್ಲ. ಕೃತಕ ಬುದ್ಧಿಮತ್ತೆಯು ಈ ಅಂತರವನ್ನು ತುಂಬಲು ಯತ್ನಿಸುತ್ತದೆ. ಯಂತ್ರಕ್ಕೆ ಪ್ರತಿಯೊಂದು ಹೆಜ್ಜೆಯ ಸೂಚನೆಯನ್ನು ನೀಡುವ ಬದಲಾಗಿ ಅದುವೇ ಪೂರ್ವ ನಿದರ್ಶನಗಳಿಂದ ಕಲಿಯುವಂತೆ ಮಾಡಲಾಗುತ್ತದೆ. ನಾವು ಅದಕ್ಕೆ ಡೇಟಾವನ್ನು ನೀಡುತ್ತೇವೆ. ಅದುವೇ ಅದರಲ್ಲಿ ನಿರ್ದಿಷ್ಟ ಪ್ಯಾಟರ್ನ್ ಕಂಡುಕೊಳ್ಳುತ್ತದೆ.

ತಂತ್ರಜ್ಞಾನವು ನಾವು ಕಲ್ಪಿಸಿಕೊಳ್ಳುವುದಕ್ಕಿಂತಲೂ ವೇಗವಾಗಿ ಬೆಳೆಯುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಕೃತಕ ಬುದ್ಧಿಮತ್ತೆ ಕುರಿತು ಹೆದರುವ ಸಮಯ ಇದಲ್ಲ. ಅದನ್ನು ಅರ್ಥ ಮಾಡಿಕೊಂಡು ಹೊಣೆಗಾರಿಕೆಯಿಂದ ಬಳಸಿಕೊಳ್ಳುವುದೇ ನಮ್ಮ ಮುಂದಿರುವ ಸವಾಲು. ಇನ್ನು ಮುಂದಕ್ಕೆ ಎಐ ಮತ್ತು ಸೈಬರ್ ಸೆಕ್ಯುರಿಟಿಯು ನಮ್ಮ ಖಾಸಗಿ ಭದ್ರತೆ, ನಮ್ಮ ಆರ್ಥಿಕ ಸುರಕ್ಷತೆ ಮತ್ತು ರಾಷ್ಟ್ರೀಯ ಸ್ಥಿರತೆಯನ್ನು ನಿರ್ಧರಿಸಬಲ್ಲುದು. ಸ್ಮಾರ್ಟ್ ಯಂತ್ರಗಳು ಮುಂದಕ್ಕೆ ಬರಲಿರುವುದು ಖಂಡಿತವಾಗಿದೆ. ಅವು ತಮ್ಮ ಆಂತರಿಕ ವ್ಯವಸ್ಥೆಯನ್ನು ಕಾಲಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಲ್ಲವು. ತಾವು ಹಿಂದೆ ನೋಡಿದ ವಿಷಯಕ್ಕೆ ಸಂಬಂಧಿಸಿದ ಹೊಸ ವಿಷಯಗಳನ್ನು ಕಂಡುಕೊಳ್ಳಬಲ್ಲವು. ಸರಳವಾಗಿ ಹೇಳಬೇಕೆಂದರೆ ಕೃತಕ ಬುದ್ಧಿಮತ್ತೆ ಎಂದರೆ ಯಂತ್ರಗಳು ಸುಮ್ಮನೆ ಆದೇಶಗಳನ್ನು ಪಾಲಿಸುವ ಬದಲಾಗಿ ತಮ್ಮ ಅನುಭವದಿಂದ ಪಾಠ ಕಲಿಯುವಂತೆ ಮಾಡುವುದು.

ಆಧುನಿಕ ಕೃತಕ ಬುದ್ಧಿಮತ್ತೆಯ ಹಿಂದಿರುವ ಪ್ರಮುಖ ತಂತ್ರಜ್ಞಾನವೆಂದರೆ ನರವ್ಯೂಹ ಜಾಲಗಳು. ಇದು ನಮ್ಮ ಮೆದುಳಿನಲ್ಲಿರುವ ನ್ಯೂರಾನ್‌ಗಳಿಂದ ಪ್ರೇರಿತವಾಗಿದೆ. ಡೇಟಾ ಸಂಗ್ರಹವನ್ನು ಬಳಸಿಕೊಂಡು ಅವು ಮುಖಗಳನ್ನು ಗುರುತಿಸಬಲ್ಲವು, ಭಾಷೆಯನ್ನು ತರ್ಜುಮೆ ಮಾಡಬಲ್ಲವು, ವಂಚನೆಯನ್ನು ಗುರುತಿಸಬಲ್ಲವು, ವೈದ್ಯರಿಗೆ ರೋಗ ಪತ್ತೆ ಹಚ್ಚಲು ನೆರವೀಯಬಲ್ಲವು.

ಜನರೇಟಿವ್ ಎಐ

ಈಗ ನಾವು ಬಳಸುತ್ತಿರುವ ಕೃತಕ ಬುದ್ಧಿಮತ್ತೆ ಸರಳವಾದುದು. ಅದು ನಿರ್ದಿಷ್ಟ ಕೆಲಸವನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತದೆ. ಉದಾಹರಣೆಗೆ ಸ್ಪಾಮ್ ಫಿಲ್ಟರ್ ಅನವಶ್ಯ ಇಮೇಲ್‌ಗಳನ್ನೆಲ್ಲಾ ಗುರುತಿಸುತ್ತದೆ. ನೇವಿಗೇಷನ್ ಆ್ಯಪ್ ಟ್ರಾಫಿಕ್‌ನ್ನು ಊಹಿಸುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯು ಶಂಕಾಸ್ಪದ ಹಣದ ವಿನಿಮಯವನ್ನು ಗುರುತಿಸುತ್ತದೆ.ನಂತರ ಬಂದುದು ಜನರೇಟಿವ್ ಕೃತಕ ಬುದ್ಧಿಮತ್ತೆ.





ಭಾರತ ಸರಕಾರವು ಈಗ ಎಐಯನ್ನು ಹೊಣೆಯರಿತು, ಸುರಕ್ಷಿತವಾಗಿ ಮತ್ತು ನೈತಿಕವಾಗಿ ಬಳಸುವಂತೆ ಮಾಡುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಿಗರಿಗೆ ಹಲವಾರು ನಿಯಮ ನಿಬಂಧನೆಗಳನ್ನು ಹೇರಿರುವುದು ಗಮನಾರ್ಹವಾಗಿದೆ.

ಚಾಟ್ ಜಿಪಿಟಿಯಂತಹ ಎಐ ವ್ಯವಸ್ಥೆ ಪ್ರಬಂಧ ಬರೆಯಬಲ್ಲದು. ಪ್ರಶ್ನೆಗಳಿಗೆ ಉತ್ತರಿಸಬಲ್ಲದು. ಸಂಭಾಷಣೆಯನ್ನು ಮುಂದುವರಿಸಬಲ್ಲದು. ಇಮೇಜ್ ಜನರೇಟ್‌ಗಳು ಸರಳ ವಿವರಣೆ ಯಿಂದಲೇ ದೊಡ್ಡ ಚಿತ್ರವನ್ನು ಬಿಡಿಸಬಲ್ಲವು. ಅಪಾರ ಪ್ರಮಾಣದ ಡೇಟಾಗಳನ್ನು ಆಧರಿಸಿ ಇವುಗಳಿಗೆ ತರಬೇತಿ ಕೊಡಲಾಗಿದೆ. ಅವು ಭಾಷೆ ಮತ್ತು ದ್ರಾಶ್ಯಿಕ ವಿಷಯದಲ್ಲಿ ಹುದುಗಿರುವ ಅಂಶಗಳನ್ನು ಗ್ರಹಿಸಬಲ್ಲವು.

ಅದರ ನಂತರದ ಪರಿಕಲ್ಪನೆ ಸೂಪರ್ ಎಐ. ಇದು ಎಲ್ಲಾ ವಿಧದಲ್ಲೂ ಮನುಷ್ಯನನ್ನು ಮೀರಿಸಬಲ್ಲ ಸೈದ್ಧಾಂತಿಕ ಕೃತಕ ಬುದ್ಧಿಮತ್ತೆ. ಸದ್ಯಕ್ಕೆ ಇದು ಕಲ್ಪನೆ ಮತ್ತು ಸಂಶೋಧನೆಯ ಸ್ಥಿತಿಯಲ್ಲಿದೆಯಷ್ಟೆ. ಆದರೆ ಇದು ನೈತಿಕತೆ ಮತ್ತು ಆಡಳಿತದ ಕುರಿತಂತೆ ಗಂಭೀರ ಪ್ರಶ್ನೆಗಳನ್ನೆತ್ತಿರುವುದು ನಿಜ.

ಸೈಬರ್ ಅಪರಾಧದಲ್ಲಿ ಎಐ ಬಳಕೆ

ಈಗ ಎಐ ಜನರ ಜೀವನದಲ್ಲಿ ಬಹಳಷ್ಟು ಬಳಕೆಯಾಗುತ್ತಿದೆ. ನಾವು ಗ್ರಹಿಸಿದ್ದಕ್ಕಿಂತಲೂ ಹೆಚ್ಚು ಎಐ ಜತೆ ವ್ಯವಹರಿಸುತ್ತೇವೆ. ರೈತರು ಮಣ್ಣಿನ ಫಲವತ್ತತೆ ಮತ್ತು ಬೆಳೆಯ ಆರೋಗ್ಯ ತಿಳಿಯಲು ಎಐ ಸಾಧನಗಳನ್ನು ಬಳಸುತ್ತಾರೆ. ಉದ್ಯಮಿಯೊಬ್ಬ ವಿಡಿಯೋ ಕಾಲ್ ಮಾಡುತ್ತಿದ್ದಾನೆಂದುಕೊಳ್ಳಿ. ಸ್ಕ್ರೀನ್‌ನಲ್ಲಿ ಕಾಣುವ ವ್ಯಕ್ತಿ ಫೈನಾನ್ಸ್ ಮ್ಯಾನೇಜರ್‌ನಂತೆಯೇ ಕಂಡುಬರಬಹುದು. ಧ್ವನಿಯೂ ಆತನನ್ನೇ ಹೋಲಬಹುದು. ತಕ್ಷಣವೇ ಹಣವನ್ನು ವರ್ಗಾಯಿಸ ಬೇಕೆಂಬ ಬೇಡಿಕೆ ಆತನಿಂದ ಬರಬಹುದು. ಉದ್ಯಮಿ ಯಾವುದೇ ಅನುಮಾನವಿಲ್ಲದೆ ಹಣ ವರ್ಗಾಯಿಸುತ್ತಾನೆ. ಬಳಿಕ ಆತನಿಗೆ ತನ್ನ ಫೈನಾನ್ಸ್ ಮ್ಯಾನೇಜರ್ ಬೇರೆಲ್ಲೋ ಇದ್ದಾನೆಂದು ತಿಳಿದುಬರುತ್ತದೆ. ಅಷ್ಟರಲ್ಲಾಗಲೆ ಅವನ ಹಣ ಹೋಗಿರುತ್ತದೆ. ಆ ವಿಡಿಯೋವನ್ನು ಡೀಪ್ ಫೇಕ್ ತಂತ್ರಜ್ಞಾನದಿಂದ ಸೃಷ್ಟಿಸಲಾಗಿರುತ್ತದೆ.

ಇದು ಸೈಬರ್ ಅಪರಾಧದ ನೂತನ ಅವತಾರ. ಮುಕ್ತ ಎಐ ಸಾಧನಗಳಿಂದ ಯಾರೂ ಬೇಕಾದರೂ ಏನನ್ನೂ ಸೃಷ್ಟಿಸಬಹುದಾದ ಪರಿಸ್ಥಿತಿ ಏರ್ಪಟ್ಟಿದೆ. ಈ ಮುಕ್ತ ಅವಕಾಶವು ಅಪರಾಧಿಗಳಿಗೆ ಅಪರಾಧ ವೆಸಗಲೂ ಅನುವು ಕಲ್ಪಿಸುತ್ತದೆ. ಈಗ ತಂತ್ರಜ್ಞಾನದ ಕುರಿತಂತೆ ಅಲ್ಪಜ್ಞಾನವುಳ್ಳವನೂ ಎಐ ಮಾರ್ಗದರ್ಶನದ ಮೂಲಕ ಸಂಕೀರ್ಣ ಹಾಗೂ ಆಧುನಿಕ ಸೈಬರ್ ದಾಳಿಗಳನ್ನು ನಡೆಸಬಹುದಾಗಿದೆ. ಭವಿಷ್ಯದತ್ತ ನೋಡುವುದಾದರೆ ಸೈಬರ್ ಬೆದರಿಕೆಯು ಇನ್ನು ಮುಂದೆ ಹೆಚ್ಚೆಚ್ಚು ವ್ಯಕ್ತಿಗತವಾಗಬಹುದು. ಎಐ ವ್ಯಕ್ತಿಯೊಬ್ಬನ ಕುರಿತಂತೆ ಸಾಕಷ್ಟು ಖಾಸಗಿ ಮಾಹಿತಿಗಳನ್ನು ಸಂಗ್ರಹಿಸಬಲ್ಲದು. ಹಾಗೂ ಆತನನ್ನು ವಂಚಿಸಲು ಪೂರಕವಾದ ಸಂದೇಶಗಳನ್ನು ಕಳಿಸಬಲ್ಲದು. ಧ್ವನಿ ಅನುಕರಣಾ ತಂತ್ರಜ್ಞಾನದಿಂದಾಗಿ ಯಾರದೇ ಧ್ವನಿಯನ್ನು ಈಗ ನಕಲು ಮಾಡಬಹುದಾಗಿದೆ. ನಿಮ್ಮ ವಾಸ್ತವಿಕ ಮಾಹಿತಿಗಳನ್ನೊಳಗೊಂಡ ನಕಲಿ ಸಂದೇಶವೊಂದು ಬಂದರೆ ಅದು ಸಾಚಾ ಎಂದೇ ಕಂಡುಬರುತ್ತದೆ. ಈ ಮೂಲಕ ವಂಚಕರು ಮಾನಸಿಕ ಒತ್ತಡ ಹೇರಿ ನಿಮ್ಮನ್ನು ಏಮಾರಿಸುತ್ತಾರೆ.

ಪಾರದರ್ಶಕತೆ ಮತ್ತು ದಾಯಿತ್ವ

ಎಐ ಈಗ ರಾಷ್ಟ್ರೀಯ ಆಯಾಮವನ್ನೂ ಪಡೆದಿದೆ. ವಿವಿಧ ರಾಷ್ಟ್ರಗಳು ಎಐ ಕುರಿತಂತೆ ಹೆಚ್ಚೆಚ್ಚು ಸಂಶೋಧನೆ ನಡೆಸಿ ಅದನ್ನು ತಮ್ಮ ಲಾಭಕ್ಕೆ ಬಳಸಲು ಯೋಚಿಸುತ್ತಿವೆ. ಎಐ ಆಧಾರಿತ ನಿಗಾ ವ್ಯವಸ್ಥೆ, ಸ್ವಯಂಚಾಲಿತ ವ್ಯವಸ್ಥೆ, ಸೈಬರ್ ಸಮರ ಸಾಮರ್ಥ್ಯ ಮುಂತಾದವು ದೇಶದ ಭದ್ರತೆಗೆ ಮತ್ತು ರಾಷ್ಟ್ರೀಯ ವ್ಯೂಹಾತ್ಮಕ ರಣತಂತ್ರಕ್ಕೆ ಮಹತ್ವದ್ದಾಗಿದೆ.

ಡಿಜಿಟಲ್ ಚಿತ್ರಣವನ್ನು ಎಐ ಮರುರೂಪಿಸುತ್ತಿದೆ. ಜನರೇಟಿವ್ ಎಐ ಪ್ರೇರಿತವಾದ ಅಪಪ್ರಚಾರವು ದೊಡ್ಡ ಮಟ್ಟದಲ್ಲಿ ಜನಾಭಿಪ್ರಾಯವನ್ನು ರೂಪಿಸಬಲ್ಲುದು. ಡಿಜಿಟಲ್ ಸಮರಾಂಗಣವು ಈಗ ಕೇವಲ ಸೈನಿಕರನ್ನು ಒಳಗೊಂಡಿರುವುದಲ್ಲ, ಅಲ್ಗರಿಥಮ್ ಮತ್ತು ನರೇಟಿವ್‌ಗಳನ್ನೂ ಒಳಗೊಂಡಿದೆ. ಇಂತಹ ಬೆಳವಣಿಗೆಯ ಸಂದರ್ಭದಲ್ಲಿ ನೈತಿಕತೆಯೆಂಬುದು ಅತ್ಯಂತ ಪ್ರಮುಖ ವಿಷಯವಾಗುತ್ತದೆ. ತಪ್ಪು ಮಾಹಿತಿಯ ಕಾರಣದಿಂದಾಗಿ ಎಐ ವ್ಯವಸ್ಥೆಯು ಗ್ರಾಹಕನೊಬ್ಬನಿಗೆ ಸಾಲ ನೀಡಲು ನಿರಾಕರಿಸಿದರೆ ಅದಕ್ಕೆ ಯಾರು ಹೊಣೆ? ಮುಖ ಗುರುತು ಹಿಡಿಯುವ ವ್ಯವಸ್ಥೆಯು ತಪ್ಪಾಗಿ ಯಾರನ್ನಾದರೂ ಗುರುತಿಸಿದರೆ ಅದಕ್ಕೆ ಯಾರು ಹೊಣೆ? ಎಐ ವ್ಯವಸ್ಥೆಯು ತನಗೆ ನೀಡಿದ ಮಾಹಿತಿಯನ್ನು ಆಧರಿಸಿಯೇ ವರ್ತಿಸುತ್ತದೆ. ಅದಕ್ಕೆ ನೀಡಿದ ಮಾಹಿತಿಯಲ್ಲಿಯೇ ಪೂರ್ವಗ್ರಹಪೀಡಿತ ತಪ್ಪುಗಳಿದ್ದರೆ ಅದರ ಪರಿಣಾಮ ಗಂಭೀರವಾದೀತು. ಆದ್ದರಿಂದಲೇ ಎಐ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ, ವಿವರಣೆ ಮತ್ತು ದಾಯಿತ್ವವಿರಬೇಕು ಎಂದು ಹೇಳುವುದು. ನಾವು ಈ ವ್ಯವಸ್ಥೆಯನ್ನು ನಿಗೂಢ 'ಬ್ಲಾಕ್‌ಬಾಕ್ಸ್'ನಂತೆ ಪರಿಗಣಿಸಲಾಗುವುದಿಲ್ಲ.

ಉದ್ಯೋಗದ ವಿಷಯವನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಎಐ ಒಂದೇ ದಿನ ಉದ್ಯೋಗವಕಾಶಗಳನ್ನು ಕಿತ್ತು ಹಾಕುವುದಿಲ್ಲ. ಅದು ಉದ್ಯೋಗದ ಸ್ವರೂಪ ಬದಲಿಸುತ್ತದಷ್ಟೆ. ಪುನರಪಿ ಮಾನಸಿಕ ಕೆಲಸಗಳು ಕಡಿಮೆಯಾಗಬಹುದು. ಕ್ರಿಯಾಶೀಲ ಉದ್ಯೋಗಗಳು ಹೆಚ್ಚಬಹುದು. ಭವಿಷ್ಯದ ಉದ್ಯೋಗಶಕ್ತಿಯು ಎಐ ಜತೆಗೆ ಸಮನ್ವಯ ಸಾಧಿಸಿಕೊಂಡು ಹೋಗಬೇಕೇ ಹೊರತು ಸ್ಪರ್ಧಿಸಬಾರದು. ಪರಿಸ್ಥಿತಿಗೆ ಹೊಂದಿಕೊಳ್ಳುವುದು ಮತ್ತು ನಿರಂತರ ಕಲಿಕೆ ವೃತ್ತಿಪರ ಯಶಸ್ಸಿಗೆ ಮಾನದಂಡ. ಜನರು ಎಐ ಸಾಧನಗಳನ್ನು ಉಪಯೋಗಿಸುವುದಷ್ಟೇ ಅಲ್ಲದೆ, ಅವುಗಳ ಮಿತಿಯನ್ನೂ ಅರಿತುಕೊಳ್ಳಬೇಕು. ಆಟೋಮೇಟೆಡ್ ಫಲಿತಾಂಶಗಳನ್ನು ಪರಾಮರ್ಶಿಸುವ, ಪ್ರಶ್ನಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಅಲ್ಗರಿಥಮ್ ನಿರ್ಧಾರಗಳ ಮೇಲೆ ಕುರುಡು ನಂಬಿಕೆ ಅಪಾಯಕಾರಿಯಾದೀತು.

ಸುರಕ್ಷತಾ ವ್ಯವಸ್ಥೆ

ಇದೀಗ ಭದ್ರತೆಯ ಕುರಿತು ಗಮನಹರಿಸೋಣ. ಪ್ರತಿಯೊಂದು ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿಯೂ ಭದ್ರತಾ ಸಾಫ್ಟ್‌ವೇರ್ ಅಳವಡಿಸುವುದು ಮತ್ತು ಅದನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡುವುದು ಅತ್ಯಗತ್ಯ. ಕಂಪ್ಯೂಟರ್ ವ್ಯವಸ್ಥೆಯನ್ನು ಕೂಡಾ ಸಕಾಲದಲ್ಲಿ ಅಪ್‌ಡೇಟ್ ಮಾಡುತ್ತಲೇ ಇರಬೇಕಾಗುತ್ತದೆ. ಸಾರ್ವಜನಿಕ ವೈಫೈ ಜಾಲವನ್ನು ಬಳಸುವಾಗ ಹೆಚ್ಚು ಎಚ್ಚರಿಕೆ ವಹಿಸಬೇಕು. ಮುಖ್ಯವಾಗಿ ಹಣಕಾಸು ವ್ಯವಹಾರ ನಡೆಸುವಾಗ ಸಾರ್ವಜನಿಕ ವೈಫೈ ಬಳಸದಿರುವುದೇ ಸೂಕ್ತ. ಪ್ರತಿಯೊಂದು ಡಿವೈಸಿಗೂ ಕಠಿಣ ಪಾಸ್‌ವರ್ಡ್ ಇಟ್ಟುಕೊಳ್ಳಬೇಕು.

ಭಾರತದ ನಾಗರಿಕರಿಗೆ ಹಲವಾರು ರಕ್ಷಣಾ ವ್ಯವಸ್ಥೆಯ ಅವಕಾಶವಿದೆ. ರಾಷ್ಟ್ರೀಯ ಸೈಬರ್ ಕ್ರೈಂ ಹೆಲ್ಪ್‌ಲೈನ್ 1930 ಆರ್ಥಿಕ ವಂಚನೆಯ ಕುರಿತು ಗಮನಹರಿಸುತ್ತದೆ.

ವಂಚನೆ ನಡೆದ ತಕ್ಷಣವೇ ದೂರು ನೀಡುವುದರಿಂದ ಬಹಳಷ್ಟು ಬಾರಿ ಹಣದ ವಂಚನೆಯನ್ನು ತಡೆಯಬಹುದು. ಆನ್‌ಲೈನ್‌ನಲ್ಲೇ ದೂರು ಸಲ್ಲಿಸಲೂ ಅವಕಾಶಗಳಿವೆ. ಸಂಚಾರ್ ಸಾಥಿ ಆ್ಯಪ್ ಜನರಿಗೆ ತಮಗೆ ಬಂದ ಕರೆಗಳ ಮಾಹಿತಿ ನೀಡುತ್ತದೆ ಹಾಗೂ ಫೋನ್‌ಗಳು ಕಳೆದುಹೋದರೆ ಅಥವಾ ಕಳವಾದರೆ ಅವುಗಳು ಕಾರ್ಯಾಚರಿಸದಂತೆ ಬ್ಲಾಕ್ ಮಾಡುತ್ತದೆ.

ಡೇಟಾ ಕಳ್ಳತನ ಕೂಡಾ ಅತ್ಯಂತ ಗಂಭೀರ ಅಪಾಯ. ವಿಶ್ವಾದ್ಯಂತ ದೊಡ್ಡ ದೊಡ್ಡ ಸಂಘಟನೆಗಳು, ಕಂಪೆನಿಗಳು ಇಂತಹ ಅಪಾಯ ಎದುರಿಸಿವೆ. ಇದರಿಂದಾಗಿ ಕೋಟ್ಯಂತರ ಬಳಕೆದಾರರ ದಾಖಲೆಗಳು ಬಹಿರಂಗವಾದುದಿದೆ. ಎಐ ಒಂದು ಮ್ಯಾಜಿಕ್ ಅಲ್ಲ, ಅದು ಒಂದು ರೀತಿಯಲ್ಲಿ ಉತ್ಕೃಷ್ಟ ಮಟ್ಟದಲ್ಲಿ ನಡೆಯುವ ಡೇಟಾ ಮತ್ತು ಗಣಿತದ ವ್ಯವಹಾರ. ಬ್ಯಾಂಕ್‌ಗಳು ಇದೇ ಎಐಯನ್ನು ತಮ್ಮ ಭದ್ರತೆಗೂ ಬಳಸಿಕೊಳ್ಳುತ್ತವೆ. ಹಣದ ಸಂಶಯಾಸ್ಪದ ವಿನಿಮಯ ನಡೆದ ಕೂಡಲೇ ಬ್ಯಾಂಕ್‌ಗಳಿಗೆ ಅರಿವಾಗುವಲ್ಲೂ ಎಐ ಕೊಡುಗೆಯಿದೆ.

ಜನರ ಅರಿವಿಗಿಂತ ಹೆಚ್ಚು ವೇಗದಲ್ಲಿ ತಂತ್ರಜ್ಞಾನವು ಅಭಿವೃದ್ಧಿಯಾಗುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಸವಾಲಿರುವುದು ಎಐ ಕುರಿತಂತೆ ಭೀತಿಪಡುವುದರಲ್ಲಲ್ಲ. ಅದಕ್ಕಿಂತಲೂ ಅದನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಜವಾಬ್ದಾರಿಯುತವಾಗಿ ಬಳಸಿಕೊಳ್ಳುವಲ್ಲಿ. ಮುಂದಿನ ದಿನಗಳಲ್ಲಿ ಎಐ ಹೆಚ್ಚೆಚ್ಚು ಪ್ರಗತಿ ಸಾಧಿಸಿದಂತೆಯೇ ಸೈಬರ್ ಸೆಕ್ಯೂರಿಟಿ ನಮ್ಮ ವೈಯಕ್ತಿಕ ಭದ್ರತೆ, ನಮ್ಮ ಆರ್ಥಿಕತೆ ಮತ್ತು ನಮ್ಮ ರಾಷ್ಟ್ರೀಯ ಸ್ಥಿರತೆಯ ವಿಷಯವನ್ನೂ ಒಳಗೊಳ್ಳಲಿದೆ. ಒಟ್ಟಿನಲ್ಲಿ ಸ್ಮಾರ್ಟ್ ಯಂತ್ರಗಳ ಆವಿಷ್ಕಾರಗಳನ್ನು ತಡೆಯಲಾಗದು. ಅದು ಅನಿವಾರ್ಯ ಪ್ರಕ್ರಿಯೆ. ಪ್ರಶ್ನೆಯಿರುವುದು ನಾವು ಕುಶಲ ಡಿಜಿಟಲ್ ನಾಗರಿಕರಾಗಬಲ್ಲೆವೆ ಎಂಬ ಕುರಿತು.

ತೈಲ ಹೊತ್ತು ಮಂಗಳೂರಿಗೆ ಬಂತು ಬೃಹತ್ ಹಡಗು...!

ಮಂಗಳೂರು: ಅಂತೂ ಇಂತೂ ಮಂಗಳೂರು ಬಂದರಿಗೊಂದು ಬೃಹತ್ ಹಡಗು ಬಂದಿದೆ. ಶನಿವಾರ ರಾತ್ರಿ ಕಚ್ಚಾ ತೈಲ ಹೊತ್ತು ಬಂದ ಈ ಹಡಗಿನಿಂದಾಗಿ ಕರಾವಳಿಯ ಮಂದಿ ನಿಟ್ಟುಸಿರು ಬಿಡುವಂತಾಗಿದೆ. ದೇಶದ ಇಂಧನ ಬೇಡಿಕೆ ಪೂರೈಸುವಲ್ಲಿ ಮಂಗಳೂರಿಗೆ ಬಂದ ಬೃಹತ್ ತೈಲ ಮಹತ್ತರ ಪಾತ್ರ ವಹಿಸಲಿದೆ.

» ಅಕ್ವಾ ಟೈಟಾನ್ ಹಡಗಿನಿಂದ 96 ಸಾವಿರ ಮೆಟ್ರಿಕ್ ಟನ್ ಕಚ್ಚಾ ತೈಲ ಅನ್‌ಲೋಡ್

ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ಮಂಗಳೂರು ಬಂದರಿಗೆ ಆಗಮಿಸಿದ್ದು, ಇದರಿಂದ ಸುಮಾರು 96 ಸಾವಿರ ಮೆಟ್ರಿಕ್ ಟನ್ ನಷ್ಟು ಕಚ್ಚಾ ತೈಲವನ್ನು ಎಂಆರ್‌ಪಿಎಲ್ ತೈಲ ಸಂಸ್ಕರಣಾ ಘಟಕಕ್ಕೆ ಅನ್ ಲೋಡ್ ಮಾಡಲಾಗುತ್ತಿದೆ. ಈ ಸರಕು ಹಡಗು ಜನವರಿ ಅಂತ್ಯದ ವೇಳೆಗೆ ರಷ್ಯಾದಲ್ಲಿ ಕಚ್ಚಾ ತೈಲವನ್ನು ಲೋಡ್ ಮಾಡಿಕೊಂಡಿತ್ತು. ಚೀನಾಕ್ಕೆ ತೆರಳುವ ಗುರಿ ಹೊಂದಿದ್ದ ಈ ಹಡಗು ಕಾರಣಾಂತರಗಳಿಂದಾಗಿ ಆಗ್ನೇಯ ಏಷ್ಯಾದ ಜಲ ಪ್ರದೇಶಕ್ಕೆ ಬರುತ್ತಿದ್ದಂತೆ ಈ ಹಡಗಿನ ಪಥ ಬದಲಿಸಲಾಗಿದ್ದು, ಮಂಗಳೂರು ತಲುಪಿದೆ.

ಸೂಕ್ತ ವ್ಯವಸ್ಥೆ: ಮಂಗಳೂರು ಬಂದರಿಗಿಂತ ಸ್ವಲ್ಪ ದೂರದಲ್ಲಿ ಸಮುದ್ರ ಮಧ್ಯದಿಂದ ಎಂಆರ್‌ಪಿಎಲ್ ತೈಲ ಶುದ್ಧೀಕರಣ ಘಟಕಕ್ಕೆ ಪೈಪ್‌ಲೈನ್ ಮೂಲಕ ಈ ತೈಲವನ್ನು ಅನ್‌ಲೋಡ್ ಮಾಡಲಾಗುತ್ತದೆ. ಭಾನುವಾರ ಬೆಳಗ್ಗೆ ಈ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಪ್ರಕ್ರಿಯೆ ಮುಗಿಯಲು ಒಂದು- ಒಂದೂವರೆ ದಿನ ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷಾರ್ಥಿಗಳಿಗೆ ಪ್ರೋತ್ಸಾಹ: ಸಚಿವ



ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದ ಅಭ್ಯರ್ಥಿಗಳು ಯುಪಿಎಸ್ಸಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ. ಗ್ರಾಮೀಣ ಪ್ರದೇಶದವರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಹೇಳಿದ್ದಾರೆ.

ಇಂಡಿಯಾ ಫಾರ್ ಐಎಎಸ್ ಅಕಾಡೆಮಿ ವತಿಯಿಂದ ಸೋಮವಾರ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಯೋಜಿಸಿದ್ದ 2025-26 ರ ಯುಪಿಎಸ್ಸಿ ಪರೀಕ್ಷೆಯಲ್ಲಿ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಲ್ಲಿ ಆಯ್ಕೆಯಾದ ರಾಜ್ಯದ 19 ಸಾಧಕರನ್ನು ಅಭಿನಂದಿಸಿ ಮಾತನಾಡಿದ ಅವರು, ನಾಗರಿಕ ಸೇವೆ ಅತ್ಯಂತ ಶ್ರೇಷ್ಠ ಮತ್ತು ಪರಮೋಚ್ಚ ಅವಕಾಶವಾಗಿದೆ. ಪ್ರಧಾನಿ ನೇತೃತ್ವದಲ್ಲಿ ಕೈಗೊಂಡ ತೀರ್ಮಾನವನ್ನು ಆದೇಶದ ಮೂಲಕ ಜಾರಿ ಮಾಡುವವರು ಅಧಿಕಾರಿಗಳು. ಅಧಿಕಾರಿಗಳಿಗೆ ಸಂವಿಧಾನ ಅಷ್ಟೊಂದು ಪರಮಾಧಿಕಾರ ನೀಡಿದೆ.

ನಾಗರಿಕ ಸೇವೆಯಿಂದ ಬಹಳಷ್ಟು ಜನ ಉತ್ತಮ ಕೆಲಸ ಮಾಡಿದ್ದಾರೆ ಎಂದರು. ಅಧಿಕಾರಿಗಳು ಸಾಮಾನ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು. ಜನ ಸಾಮಾನ್ಯರಿಗೆ ಸೇವೆ ಸಲ್ಲಿಸಲು ನಿಮಗೆ ಆಕಾಶವೇ ಮಿತಿಯಾಗಿದೆ. ತಾಳ್ಮೆಯಿಂದ, ವಿವೇಚನೆಯಿಂದ ಕೆಲಸ ಮಾಡಬೇಕು. ಉತ್ತಮ ವಿಧಾನಗಳನ್ನು ಅಳವಡಿಸಿಕೊಂಡರೆ ಉತ್ತಮ ಕೆಲಸ ಮಾಡಲು ನೆರವಾಗಲಿದೆ ಎಂದು ಕಿವಿ ಮಾತು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷ ಡಾ.ಸಿ.ಎಸ್ ಕೇದಾರ್, ಉಪಾಧ್ಯಕ್ಷ ಡಾ.ಜಿ.ಎನ್ ಶ್ರೀ ಕಂಠಯ್ಯ, ಶ್ರೀ ನಿವಾಸ್ ಪಿ.ಸಿ ಇದ್ದರು.

ಇರಾನ್ ಮೇಲಿನ ತೈಲ ನಿರ್ಬಂಧ ಸಡಿಲಿಸಿದ ಅಮೆರಿಕ

ಪುಟ ೧➡ ಚೀನಾದ ಸ್ವತಂತ್ರ, ಸಂಸ್ಕರಣಾಗಾರಗಳಲ್ಲದೆ, ಇರಾನ್ ತೈಲದ ಪ್ರಮುಖ ಗ್ರಾಹಕರಾದ ಭಾರತ, ಜಪಾನ್ ಮತ್ತು ದಕ್ಷಿಣ ಕೊರಿಯಾ ಈಗ ಈ ಪೂರೈಕೆಯನ್ನು ಪಡೆಯುವ ಸಾಧ್ಯತೆಯಿದೆ. ಉತ್ತರ ಕೊರಿಯಾ, ಕ್ಯೂಬಾ ಮತ್ತು ಕ್ರಿಮಿಯಾವನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ. ಈ ಮಾರಾಟದಿಂದ ಬರುವ ಆದಾಯವನ್ನು ಪಡೆಯಲು ಇರಾನ್‌ಗೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ತಿಳಿದುಬಂದಿದೆ. ಅಮೆರಿಕದ ಬಂದರುಗಳ ನಡುವೆ ಇಂಧನ ಸಾಗಿಸಲು ವಿದೇಶಿ ಹಡಗುಗಳಿಗೆ ಅನುವು ಮಾಡಿಕೊಡಲು 'ಜೋನ್ಸ್ ಕಾಯ್ದೆ'ಯನ್ನೂ 60 ದಿನಗಳ ಕಾಲ ಸಡಿಲಿಸಲಾಗಿದೆ.

ಹೆಚ್ಚುವರಿ ತೈಲ ಲಭ್ಯತೆ ನಿರಾಕರಿಸಿದ ಇರಾನ್

ಪುಟ ೧➡ ಮಾರ್ಚ್ 20ರ ಮೊದಲು ಹಡಗುಗಳಲ್ಲಿ ತುಂಬಲಾದ ಇರಾನ್ ಮೂಲದ ಕಚ್ಚಾ ತೈಲದ ಮಾರಾಟಕ್ಕೆ ಅಮೆರಿಕದ ಖಜಾನೆ ಇಲಾಖೆ ತಾತ್ಕಾಲಿಕ ಅನುಮತಿ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಚೀನಾ ಅಗ್ಗದ ದರದಲ್ಲಿ ಸಂಗ್ರಹಿಸಿಟ್ಟಿರುವ ತೈಲ ಪೂರೈಕೆಯನ್ನು ಮುಕ್ತಗೊಳಿಸುವ ಮೂಲಕ ಜಾಗತಿಕ ಇಂಧನ ಬೆಲೆಗಳನ್ನು ಸ್ಥಿರಗೊಳಿಸುವ ತಂತ್ರ ಇದಾಗಿದೆ ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಬಣ್ಣಿಸಿದ್ದರು.

ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಬೆಂಗಳೂರು: ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್ (ಪಿಜಿಸಿಇಟಿ-2026) ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಮಾ.23 ರಿಂದ ಏ. 8ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಶುಲ್ಕ ಪಾವತಿಗೆ ಏ.10 ಕೊನೆ ದಿನ. ವಿವಿಧ ಕೋರ್ಸ್‌ಗಳ ಲಿಖಿತ ಪರೀಕ್ಷೆ ಮೇ 23 ಮತ್ತು 24 ರಂದು ನಡೆಸಲಾಗುವುದು ಎಂದು ಹೇಳಿದ್ದಾರೆ.

ದಿನ ಭವಿಷ್ಯ

ಮೇಷ
ಯಶ ಸಾಧಿಸಲು ತಾಳ್ಮೆ ಅವಶ್ಯ. ದುಡುಕಿನ ನಡೆ ಬೇಡ. ಆರ್ಥಿಕ ಹಿನ್ನಡೆ ಬಾಧಿಸಬಹುದು. ಮನೆಯವರ ಸಂಗದಲ್ಲಿ ಸಮಾಧಾನ.

ವೃಷಭ
ದಿನವಿಡೀ ಕೆಲಸ. ವಿರಾಮ ಸಿಗದು. ಖಾಸಗಿ ವಿಚಾರದಲ್ಲಿ ಪ್ರತಿಕೂಲ ಬೆಳವಣಿಗೆ. ಅದನ್ನು ನಾಜೂಕಿನಿಂದ ಸರಿಪಡಿಸಿ. ಬಂಧು ಜತೆ ವಿರಸ.

ಮಿಥುನ
ನಿಮ್ಮ ಪಾಲಿಗೆ ಶುಭಕರ ಬೆಳವಣಿಗೆ. ಕ್ಲಿಷ್ಟವಾಗಿದ್ದ ಪರಿಸ್ಥಿತಿ ತಿಳಿಯಾಗಲಿದೆ. ಅನಿರೀಕ್ಷಿತ ದಿಕ್ಕಿನಿಂದ ಬೆಂಬಲ. ಆರ್ಥಿಕ ಉನ್ನತಿ.

ಕಟಕ
ಇತರರ ಜತೆ ವ್ಯವಹಾರದಲ್ಲಿ ಇಂದು ಎಚ್ಚರದಿಂದಿರಿ. ಮೋಸ ಹೋಗುವ ಸಾಧ್ಯತೆ. ಭಾವನಾತ್ಮಕ ಏರುಪೇರು ಉಂಟಾದೀತು.

ಸಿಂಹ
ದಿನವಿಡೀ ಏನೇನೋ ಅಡ್ಡಿಗಳು. ಮಹತ್ವದ ಕೆಲಸ ಮುಂದೂಡಿ. ದೊಡ್ಡ ಸಮಸ್ಯೆಗೆ ಸರಳ ಪರಿಹಾರವಿದೆ, ಅತ್ತ ಗಮನ ಹರಿಸಿರಿ.

ಕನ್ಯಾ
ಯಶಸ್ವೀ ದಿನ. ಮೆಚ್ಚಿನ ಹವ್ಯಾಸದಲ್ಲಿ ಆನಂದ ಪಡೆಯುವಿರಿ. ಆರೋಗ್ಯ ಸಮಸ್ಯೆ ನಿವಾರಣೆ. ಕೌಟುಂಬಿಕ ಚಿಂತೆ ಪರಿಹಾರ.

ತುಲಾ
ಕೆಲ ಸಮಯದಿಂದ ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಿಗಲಿದೆ. ಸೂಕ್ತ ನೆರವೂ ಸಿಗಲಿದೆ. ಮನೆಯಲ್ಲಿ ವಾಗ್ವಾದಕ್ಕೆ ಆಸ್ಪದ ನೀಡಬೇಡಿ.

ವೃಶ್ಚಿಕ
ಇಂದು ಅತೃಪ್ತಿ ತರುವ ಬೆಳವಣಿಗೆಯೇ ಹೆಚ್ಚು. ಬಂದುದನ್ನು ಸಮಾಧಾನದಿಂದ ಸ್ವೀಕರಿಸಿ. ದುಡುಕಿನ ವರ್ತನೆ ತೋರದಿರಿ.

ಧನು
ಕೆಲದಿನಗಳ ಕಷ್ಟದ ಬಳಿಕ ಖುಷಿ ತರುವ ಹೊಸ ಬೆಳವಣಿಗೆ. ಕೈಗೊಂಡ ನಿರ್ಧಾರದಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಸಮಾಧಾನಕರ.

ಮಕರ
ಸಮಸ್ಯೆಯೊಂದು ಮನಃಶಾಂತಿ ಕೆಡಿಸಲಿದೆ. ಅದರ ಪರಿಹಾರವೂ ಕಷ್ಟವೆನಿಸುವುದು. ಆತುರ ಬೇಡ. ಕಾದುನೋಡುವ ತಂತ್ರ ಅನುಸರಿಸಿ.

ಕುಂಭ
ಪ್ರತಿಕೂಲ ಪರಿಸ್ಥಿತಿ ಎದುರಿಸಿದರೂ ಅದನ್ನು ನಿಮ್ಮ ಪರವಾಗಿ ಬದಲಿಸಿಕೊಳ್ಳಿ. ಕೌಟುಂಬಿಕ ಸಾಮರಸ್ಯ ಕೆಡದಂತೆ ನೋಡಿಕೊಳ್ಳಿ.

ಮೀನ
ನೆಗೆಟಿವ್ ಚಿಂತನೆ ಬಾಧಿಸಲಿದೆ. ಸಂಗಾತಿ ಜತೆ ಜಗಳಕ್ಕೆ ಆಸ್ಪದ ನೀಡದಿರಿ. ಹೊಂದಾಣಿಕೆ ಬದುಕಿಗೊಳಿತು. ಮಕ್ಕಳ ಸಾಧನೆಯ ತೃಪ್ತಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 2,8,0,1

ಶಕಾವತಾರ ಕಾಫಿಟೇಬಲ್ ಪುಸ್ತಕ ಲೋಕಾರ್ಪಣೆ
ಶಿವಾಜಿ ಶ್ರೇಷ್ಠ ಆಡಳಿತಗಾರ

ಬೆಳಗಾವಿ: ವಿಕ್ರಮ ವಾರಪತ್ರಿಕೆ ಹೊರ ತಂದಿರುವ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ರೋಮಾಂಚಕ ಹಾಗೂ ಸ್ಫೂರ್ತಿದಾಯಕ ಬದುಕು ಮತ್ತು ಸಾಧನೆಗಳ ಕುರಿತಾಗಿ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಹೊರ ತರಲಾಗಿರುವ ಶಕಾವತಾರ ವಿಶೇಷ ಕಾಫಿ ಟೇಬಲ್ ಪುಸ್ತಕ ಶನಿವಾರ ಸಂಜೆ

ಕೆ.ಎಲ್.ಇಯ ಡಾ.ಬಿ.ಎಸ್.ಜಿರಗೆ ಸಭಾಭವನದಲ್ಲಿ ನಡೆದ ಸುಂದರ ಸಮಾರಂಭದಲ್ಲಿ ಲೋಕಾರ್ಪಣೆಗೊಂಡಿತು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಆರ್‌ಎಸ್‌ಎಸ್ ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖರಾದ ಅನಿಲ್ ಓಕ್ ಛತ್ರಪತಿ ಶಿವಾಜಿ ಅವರ ಜೀವನ, ಯುದ್ಧ ಕೌಶಲ್ಯ, ಆಡಳಿತ ನಿರ್ವಹಣೆ, ಅರ್ಥಶಾಸ್ತ್ರ, ಧರ್ಮ ಸ್ಥಾಪನೆಯಲ್ಲಿ ಅವರ ಪಾತ್ರದ ಕುರಿತಾಗಿ ಸುದೀರ್ಘ ಮಾತನಾಡಿದರು.

ಶಿವಾಜಿ ಅವರ ಯುದ್ಧ ನೀತಿ ಅತಿ ಶ್ರೇಷ್ಠವಾಗಿತ್ತು. ದಾಳಿಯೇ ಅತಿದೊಡ್ಡ ರಕ್ಷಣಾ ತಂತ್ರ ಎಂದು ಅವರು ನಂಬಿದ್ದರು. ಅವರ ಅರ್ಥ ನೀತಿಯೂ ಶ್ರೇಷ್ಠವಾಗಿತ್ತು. ಆಡಳಿತ ಶೈಲಿ ಮಾದರಿಯದ್ದು. ಶಿವಾಜಿಯನ್ನು ಭಾರತದ ನೌಕಾಸೇನೆಯ ಸೃಷ್ಟಿಕರ್ತ ಎನ್ನಲಾಗುತ್ತದೆ. ವಾಣಿಜ್ಯ ನೌಕಾದಳದ ಸೃಷ್ಟಿಕರ್ತರೂ ಹೌದು. ಇಂದಿಗೂ ನೌಕಾದಳದವರು ಶಿವಾಜಿಯನ್ನು ಫಾದರ್ ಆಫ್ ನೌಕಾಸೇನಾ ಎಂದು ನಂಬುತ್ತಾರೆ ಎಂದು ಅನಿಲ್ ಓಕ್ ವರ್ಣಿಸಿದರು. ಬೆಂಗಳೂರಿನ ಗವಿಪುರಂನ ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಪ.ಪೂ ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ



> ದೇಶದ ಕಠಿಣ ಪರಿಸ್ಥಿತಿಯಲ್ಲಿ ಶಿವಾಜಿ ಮಹಾರಾಜರ ಅವತಾರ ಆಗಿತ್ತು. ಧರ್ಮ ವಿರೋಧಿ, ಜನ ವಿರೋಧಿ ಜನರನ್ನು ದಮನಿಸಿ ಧರ್ಮ ರಕ್ಷಿಸಿದ ಕೀರ್ತಿ ಶಿವಾಜಿ ಅವರದ್ದು. ಶಿವಾಜಿ ನಮ್ಮ ರಾಷ್ಟ್ರಪುರುಷ
> ■ ಮಂಜುನಾಥ ಭಾರತಿ ಸ್ವಾಮೀಜಿ

ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಮಾಜಿ ರಾಜ್ಯಸಭಾ ಸದಸ್ಯರಾದ ಪ್ರಭಾಕರ ಕೋರೆ, ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಉಪಸ್ಥಿತರಿದ್ದರು. ಆರ್‌ಎಸ್‌ಎಸ್ ಕರ್ನಾಟಕ ಉತ್ತರದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕ ಮಾತನಾಡಿದರು.

ವಿಕ್ರಮ ಸಂಪಾದಕ ರಮೇಶ ದೊಡ್ಡಾಪುರ ಸ್ವಾಗತಿಸಿ ಪರಿಚಯಿಸಿದರು. ಜ್ಞಾನಭಾರತಿ ಪ್ರಕಾಶನದ ನಿರ್ದೇಶಕ ದು.ಗು.ಲಕ್ಷ್ಮಣ ಮಾತನಾಡಿ, ಶಿವಾಜಿ ಕಾಫಿಟೇಬಲ್ ಬುಕ್ ಕುರಿತಾಗಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶ್ರೀಗಳಿಗೆ ಪ್ರಭಾಕರ ಕೋರೆ, ಅರವಿಂದರಾವ್ ದೇಶಪಾಂಡೆ ಅವರನ್ನು ದು.ಗು. ಲಕ್ಷ್ಮಣ ಸನ್ಮಾನಿಸಿದರು. ಮಂಗೇಶ ಭೇಂಡೆ, ಅನಿಲ್ ಓಕ್ ಅವರನ್ನು ಪ್ರಭಾಕರ ಕೋರೆ ಸನ್ಮಾನಿಸಿದರು. ದು.ಗು.ಲಕ್ಷ್ಮಣ ಅವರನ್ನು ನಾ.ನಾಗರಾಜ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಲೇಖಕರಿಗೆ ಅಥಿತಿಗಳು ಸನ್ಮಾನಿಸಿ ಗೌರವಿಸಿದರು.

ಹೊಸ ದಿಗಂತ ಹುಬ್ಬಳ್ಳಿ ಬ್ಯೂರೊ ಹೆಡ್ ವಿಠ್ಠಲದಾಸ ಕಾಮತ್ ವಂದಿಸಿದರು. ಮಾನಸಿ ಗೋಖಲೆ ಕಾರ್ಯಕ್ರಮ ನಿರ್ವಹಿಸಿದರು. ಪ್ರಾರಂಭದಲ್ಲಿ ಭರತನಾಟ್ಯ, ಸ್ವಾಗತ ಗೀತೆ, ಶಿವಾಜಿ ಕುರಿತಾದ ಕಿರುಚಿತ್ರ ಪ್ರದರ್ಶನ ನಡೆಯಿತು. ಕೊನೆಯಲ್ಲಿ ಚೈತ್ರಾ ಹೆಗಡೆ ವಂದೇ ಮಾತರಂ ಗೀತೆ ಹಾಡಿದರು.

ಬಗೆಹರಿಯದ ಕೈ ಟಿಕೆಟ್ ಗೊಂದಲ

ಪುಟ೧➡ ಇನ್ನೊಂದೆಡೆ ಈ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಆಡಳಿತ ವಿರೋಧಿ ಅಲೆ ಇದೆ ಎಂದು ಸಾಬೀತುಪಡಿಸಿ, ಹೈಕಮಾಂಡ್‌ನಿಂದ ಭೇಷ್ ಎನ್ನಿಸಿಕೊಂಡು ವಿಶ್ವಾಸ ಉಳಿಸಿಕೊಳ್ಳಬೇಕೆಂಬ ಶತಪ್ರಯತ್ನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದಾರೆ. ಬಾಗಲಕೋಟೆ ಕ್ಷೇತ್ರಕ್ಕಿಂತ ದಾವಣಗೆರೆ ಕ್ಷೇತ್ರದ ಟಿಕೆಟ್ ಘೋಷಣೆಯೇ ಕಾಂಗ್ರೆಸ್‌ಗೆ ಸಮಸ್ಯೆಯಾಗಿದೆ, ಇಲ್ಲಿ ಶಾಮನೂರು ಕುಟುಂಬವನ್ನು ಬಿಡುವಂತಿಲ್ಲ, ಮುಸ್ಲಿಂ ನಾಯಕರ ಬೇಡಿಕೆಯನ್ನು ತಳ್ಳಿ ಹಾಕುವಂತಿಲ್ಲ.

ಮುಸ್ಲಿಂ ಸಮುದಾಯದ ಸಚಿವರು ಮತ್ತು ಶಾಸಕರು ಟಿಕೆಟ್ ಬೇಕೆ, ಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಶಾಮನೂರು ಕುಟುಂಬದ ಸಚಿವ ಎಸ್.ಎಸ್ ಮಲ್ಲಿಕಾರ್ಜುನ ಪುತ್ರ, ನಾಮಪತ್ರ ಸಲ್ಲಿದ್ದಾರೆ. ಈ ಬಗ್ಗೆಯೂ ಹೈಕಮಾಂಡ್ ಗಮನಕ್ಕೆ ತರಲಾಗಿದೆ. ಲಿಂಗಾಯತ ನಾಯಕರು ಶಾಮನೂರು ಕುಟುಂಬಕ್ಕೆ ಬೆಂಬಲ ಸೂಚಿಸಿರುವುದು ಪಕ್ಷದಲ್ಲಿ ಗೊಂದಲ ಇದೆ ಎಂದು ಸ್ಪಷ್ಟಪಡಿಸಿದೆ.

ಸುರ್ಜೇವಾಲಾ ನೇತೃತ್ವದಲ್ಲಿ ಮಹತ್ವದ ಸಭೆ: ಟಿಕೆಟ್ ಹಂಚಿಕೆ ಸಂಬಂಧ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ರಾಜ್ಯ ನಾಯಕರ ಜೊತೆ ಮಹತ್ವದ ಸಭೆ ನಡೆಸಿದ್ದು, ಈ ಸಭೆಯಲ್ಲಿ ಕಾಂಗ್ರೆಸ್ ನಾಯಕ, ಸಚಿವ ಜಮೀರ್ ಅಹ್ಮದ್ ಸೇರಿದಂತೆ ಹಲವು ಮುಸ್ಲಿಂ ನಾಯಕರು ರಾಜೀನಾಮೆ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ಹೇಳಲಾಗಿದೆ.



> ಕಾಂಗ್ರೆಸ್ ಒಂದೇ ಸಮುದಾಯವನ್ನು ನೆಚ್ಚಿಕೊಂಡಿಲ್ಲ. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲುವ ವಿಶ್ವಾಸವಿದೆ. ಟಿಕೆಟ್ ಹಂಚಿಕೆಯನ್ನು ಅಂತಿಮವಾಗಿ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ.
> ■ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

> ಜಮೀರ್ ಅಹ್ಮದ್ ಅವರು ದಾವಣಗೆರೆಯಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡಬೇಕು. ಇಲ್ಲವಾದರೆ ರಾಜೀನಾಮೆ ಕೊಡುವ ಬೆದರಿಕೆ ಒಡ್ಡಿದ್ದಾರೆ. ಇದಕ್ಕೆ ಕಾಂಗ್ರೆಸ್ ಯಾವುದೇ ಸೊಪ್ಪು ಹಾಕಿಲ್ಲ. ಇದು ಕಾಂಗ್ರೆಸ್ ಅಲ್ಪಸಂಖ್ಯಾತರ ಮೇಲಿನ ಪ್ರೀತಿ ತೋರಿಸುತ್ತದೆ.
> ■ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ಭಾನುವಾರ ಬೆಳಗ್ಗೆ ಟಿಕೆಟ್ ಘೋಷಣೆ ಆಗುತ್ತೆ. ಸೋಮವಾರದವರೆಗೆ ನಾಮಪತ್ರ ಸಲ್ಲಿಕೆಗೆ ಸಮಯವಿದೆ ಎಂದರು.

ಭಯೋತ್ಪಾದನೆಯಲ್ಲಿ ಪಾಕಿಸ್ತಾನ ನಂ.1

ಪುಟ ೧➡ ಇದುವರೆಗೆ ಆ ಸ್ಥಾನದಲ್ಲಿದ್ದ ಬುರ್ಕಿನಾ ಫಾಸೋವನ್ನು ಪಾಕಿಸ್ತಾನ ಹಿಂದಿಕ್ಕಿದೆ. ಇದು ಕೇವಲ ಅಂಕಿಅಂಶಗಳ ಏರಿಳಿತವಲ್ಲ, ಪಾಕಿಸ್ತಾನದ ಒಳಭಾಗದಲ್ಲಿ ಮತ್ತೆ ಬಲಿಷ್ಠವಾಗುತ್ತಿರುವ ಉಗ್ರ ಮೂಲ ವಲಯಗಳ ಪ್ರತಿಬಿಂಬವಾಗಿದೆ.

ಏಕೆ ಪಾಕ್ ಮತ್ತೆ ಅಗ್ರ ಸ್ಥಾನಕ್ಕೆ?
- ಅಫ್ಘಾನ್ ಗಡಿ ಅಸ್ಥಿರತೆ
- ಟಿಟಿಪಿ ಪುನರುತ್ಥಾನ
- ಬಲೂಚ್ ಉಗ್ರ ಚಟುವಟಿಕೆ
- ಭದ್ರತಾ ವೈಫಲ್ಯ
- ಪ್ರಾದೇಶಿಕ ರಾಜಕೀಯ ಅಶಾಂತಿ

ವಿಶೇಷವಾಗಿ ಅಫ್ಘಾನಿಸ್ತಾನ ಗಡಿ ಭಾಗ, ಖೈಬರ್ ಪಖ್ತುನ್ಖ್ವಾ ಪ್ರದೇಶ, ಬಲೂಚಿಸ್ತಾನ ಪ್ರದೇಶಗಳಲ್ಲಿ ದಾಳಿಗಳ ಪ್ರಮಾಣ ಹೆಚ್ಚಿರುವುದು ವರದಿಯಲ್ಲಿ ಉಲ್ಲೇಖವಾಗಿದೆ.

ಟಿಟಿಪಿ ದಾಳಿ: ಈ ಏರಿಕೆಯ ಹಿಂದೆ ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಪ್ರಮುಖ ಕಾರಣವಾಗಿ ಗುರುತಿಸಲಾಗಿದೆ. 2024ರೊಂದಿಗೆ ಹೋಲಿಸಿದರೆ 2025ರಲ್ಲಿ ಟಿಟಿಪಿ ದಾಳಿಗಳು ಗಮನಾರ್ಹವಾಗಿ ಹೆಚ್ಚಿವೆ. ಪಾಕಿಸ್ತಾನದಲ್ಲೇ ನಡೆದ ಈ ದಾಳಿಗಳು ಗಡಿ ಭದ್ರತೆ, ಆಂತರಿಕ ಭದ್ರತಾ ವ್ಯವಸ್ಥೆ ಮತ್ತು ರಾಜಕೀಯ ಸ್ಥಿರತೆ ಮೂರು ಕ್ಷೇತ್ರಗಳ ಮೇಲೂ ಪ್ರಶ್ನಾರ್ಥಕ ಚಿಹ್ನೆ ಎತ್ತಿವೆ. ಜಾಗತಿಕ ಮಟ್ಟದಲ್ಲಿ ನೋಡಿದರೆ, ಉಗ್ರದಾಳಿಗಳಿಂದಾಗುವ ಸಾವುಗಳು ಮತ್ತು ದಾಳಿಗಳ ಸಂಖ್ಯೆ ಕಡಿಮೆಯಾಗಿರುವುದು ಸ್ವಲ್ಪ ಸಮಾಧಾನಕರ ಬೆಳವಣಿಗೆ.

ಜಾಗತಿಕ ಉಗ್ರಸೂಚ್ಯಂಕ 2026

ಅಂಶ	ವಿವರ
ಅತ್ಯಂತ ಬಾಧಿತ ದೇಶ	ಪಾಕಿಸ್ತಾನ
ಪಾಕಿಸ್ತಾನದ ಅಂಕ	8.574
ಪಾಕ್ ಉಗ್ರ ಸಾವು	1,139
ಪಾಕ್ ಗಾಯಾಳುಗಳು	1,595
ಪಾಕ್ ಉಗ್ರ ಘಟನೆಗಳು	1,045
ಜಾಗತಿಕ ಉಗ್ರ ಸಾವು	5,582
ಹಿಂದಿನ ವರ್ಷ	7,714
ಜಾಗತಿಕ ಇಳಿಕೆ	ಸುಮಾರು 28%
ಜಾಗತಿಕ ದಾಳಿಗಳ ಇಳಿಕೆ	ಸುಮಾರು 22%
ಟಿಟಿಪಿ ದಾಳಿಗಳು	481ರಿಂದ 595ಕ್ಕೆ
ಟಿಟಿಪಿ ಏರಿಕೆ	24%
ಬುರ್ಕಿನಾ ಫಾಸೋಗೆ	2ನೇ ಸ್ಥಾನ

ಚಾಮುಂಡೇಶ್ವರಿಗೆ ನಮೋ ಭಕ್ತಿನಮನ

ಪುಟ ೧➡ ಇದರೊಂದಿಗೆ ಕನ್ನಡ ಭಕ್ತಿಗೀತೆಯ ಯೂಟ್ಯೂಬ್ ಲಿಂಕ್ ಹಂಚಿಕೊಂಡಿದ್ದರು. ಇದೇ ವೇಳೆ ಡಾ.ರಾಜ್‌ಕುಮಾರ್ ಹ್ಯಾಶ್‌ಟ್ಯಾಗ್ ಸಹ ಎಕ್ಸ್‌ನಲ್ಲಿ ಟ್ರೆಂಡ್ ಆಗಿದೆ. ಕನ್ನಡ ಭಕ್ತಿಗೀತೆಯನ್ನು ಎಕ್ಸ್ ಪೋಸ್ಟ್‌ನಲ್ಲಿ ಹಂಚಿಕೊಳ್ಳುವ ವೇಳೆ ಸಂದೇಶವನ್ನು ಹಿಂದಿಯಲ್ಲಿ ಬರೆದಿರುವ ಮೋದಿ ಭಕ್ತಿಗೆ ಯಾವುದೇ ಭಾಷೆಯ ವ್ಯತ್ಯಾಸ ಇರುವುದಿಲ್ಲ ಎಂಬ ಸಂದೇಶ ಸಾರಿದ್ದಾರೆ. ಹಲವು ಬಾರಿ ಬಸವಣ್ಣನವರು ಸೇರಿ ಕನ್ನಡ ಸಾಂಸ್ಕೃತಿಕ, ಆಧ್ಯಾತ್ಮಿಕ ಪರಂಪರೆಯನ್ನು ಕೊಂಡಾಡಿರುವ ಮೋದಿ ಕರುನಾಡಿನ ನಾಡದೇವತೆ ಮೇಲಿನ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಶಕ್ತಿ ಉಪಾಸನೆ ಮಹತ್ವ: ಚಾಮುಂಡೇಶ್ವರಿ ಅಮ್ಮನವರ ಕನ್ನಡ ಭಕ್ತಿಗೀತೆ ಹಂಚಿಕೊಳ್ಳುವ ಮೂಲಕ ದೇಶದ ಆಧ್ಯಾತ್ಮಿಕ ಪರಂಪರೆ ಮತ್ತು ಶಕ್ತಿ ಉಪಾಸನೆಯ ಮಹತ್ವವನ್ನು ಮೋದಿ ತಿಳಿಸಿಕೊಟ್ಟಿದ್ದಾರೆ. ಹಾಡಿನಲ್ಲಿ ಚಾಮುಂಡೇಶ್ವರಿ ದೇವಿಯ ಶಕ್ತಿ, ಮಹಿಮೆ ಮತ್ತು ಕರುಣೆಯನ್ನು ಕೊಂಡಾಡುತ್ತದೆ. ಈ ಹಾಡಿನಲ್ಲಿ ದೇವಿಯನ್ನು ಜಗಜ್ಜನನಿ (ವಿಶ್ವಮಾತೆ) ಎಂದು ಕರೆಯಲಾಗಿದೆ.

ಡಾ.ರಾಜ್ ಚಿತ್ರದ ಗೀತೆ!: 1970ರಲ್ಲಿ ಬಿಡುಗಡೆಯಾದ ಡಾ.ರಾಜಕುಮಾರ್ ಅಭಿನಯದ ಶ್ರೀಕೃಷ್ಣದೇವರಾಯ ಚಿತ್ರದ ಗೀತೆ ಇದಾಗಿದ್ದು, ಕನ್ನಡದ ಅತ್ಯಂತ ಜನಪ್ರಿಯ ದೇವಿ ಹಾಡುಗಳಲ್ಲಿ ಇದೂ ಒಂದಾಗಿದೆ. ಚೈತ್ರ ನವರಾತ್ರಿ ಸಂದರ್ಭ ನಾಡದೇವತೆ ಶ್ರೀಚಾಮುಂಡೇಶ್ವರಿ ಆರಾಧಿಸುವ ಮೂಲಕ ಮೋದಿ ಕನ್ನಡ ಕುಲದ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಜಗತ್ತಿಗೆ ಸಾರುವ ಕೆಲಸ ಮಾಡಿದ್ದಾರೆ. ಅಲ್ಲದೆ ಕನ್ನಡಿಗರ ಆರಾಧ್ಯ ದೈವ ಡಾ.ರಾಜ್ ಅಭಿನಯದ ಚಿತ್ರದ ಹಾಡನ್ನು ಮೋದಿ ಪೋಸ್ಟ್ ಮಾಡಿದ್ದು, ಕನ್ನಡಿಗರ ಮನಸ್ಸು ಗೆದ್ದಿದ್ದಾರೆ.

ಸಂಸದ ಯದುವೀರ್ ಕೃತಜ್ಞತೆ: ಕನ್ನಡ ಭಕ್ತಿಗೀತೆ ಹಂಚಿಕೊಂಡ ಮೋದಿಯವರಿಗೆ ಬಿಜೆಪಿ ಸಂಸದ ಯದುವೀರ್ ಒಡೆಯರ್ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ. ತಾಯಿ ಚಾಮುಂಡೇಶ್ವರಿ ಕುರಿತ ಅಮೋಘವಾದ ಗೀತೆ ಹಂಚಿಕೊಂಡ ಪ್ರಧಾನಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಎಂದು ಹೇಳಿದ್ದಾರೆ.

ಅಧ್ಯಕ್ಷರಾಗಿ ಕಿಶೋರ್ ಆಳ್ವ ನೇಮಕ

ಬೆಂಗಳೂರು: ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಇಂಡಸ್ಟ್ರಿ ಆಫ್ ಇಂಡಿಯಾ 2026-27ರ ಕರ್ನಾಟಕ ರಾಜ್ಯ ಮಂಡಳಿಯ ಅಧ್ಯಕ್ಷರಾಗಿ ಕಿಶೋರ್ ಆಳ್ವ ನೇಮಕಗೊಂಡಿದ್ದಾರೆ. ಮೂರು ದಶಕಗಳಿಗೂ ಹೆಚ್ಚು ಅನುಭವ ಹೊಂದಿರುವ ಅನುಭವಿ ಉದ್ಯಮ ಕಾರ್ಯನಿರ್ವಾಹಕರಾದ ಅವರು, ಇಂಧನ, ಮೂಲಸೌಕರ್ಯ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಕಿಶೋರ್ ಆಳ್ವ ಅವರು ಕೈಗಾರಿಕಾ ಸಂಘಗಳು ಮತ್ತು ಶೈಕ್ಷಣಿಕ ಆಡಳಿತದಲ್ಲಿಯೂ ಪ್ರಮುಖ ಪಾತ್ರವಹಿಸಿದ್ದಾರೆ. 2018-19ರ ಅವಧಿಯಲ್ಲಿ ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿಗೆ ಸೇವೆ ಸಲ್ಲಿಸಿದರು. ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಅಲ್ಲಿ ಅವರು ಉದ್ಯಮ ನೇತೃತ್ವದ ಉಪಕ್ರಮಗಳು, ನೀತಿ ಸಂವಾದ ಮತ್ತು ಪಾಲುದಾರರ ನಿಶ್ಚಿತಾರ್ಥವನ್ನು ಸಕ್ರಿಯವಾಗಿ ಉತ್ತೇಜಿಸಿದ್ದಾರೆ. ಪ್ರಸ್ತುತ, ಅವರು ಕರ್ನಾಟಕದಲ್ಲಿ ಅದಾನಿ ಗ್ರೂಪ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದಲ್ಲದೆ, ಅವರು ರಾಜ್ಯದ ವಿಶ್ವವಿದ್ಯಾಲಯ ಮಂಡಳಿಗಳ ಮುಖ್ಯಸ್ಥರಾಗುವ ಮೂಲಕ ಉನ್ನತ ಶಿಕ್ಷಣ ಆಡಳಿತಕ್ಕೆ ಕೊಡುಗೆ ನೀಡಿದ್ದಾರೆ.



ತೀರ್ಥಹಳ್ಳಿ: ಮಂಗನ ಕಾಯಿಲೆಗೆ ಮಹಿಳೆ ಬಲಿ

ಪುಟ ೧➡ ಈ ಮೊದಲು ಕಟಗಾರು ಆಸ್ಪತ್ರೆ ವ್ಯಾಪ್ತಿಯ ಹೊನ್ನೇಕೇರಿಯ ಯುವಕ ಕೆಎಫ್‌ಡಿ ಸೋಂಕಿನಿಂದ ಸಾವಿಗೀಡಾಗಿದ್ದ. ತಾಲೂಕಿನಲ್ಲಿ 29 ಪ್ರಕರಣ ದಾಖಲಾಗಿದ್ದು, ಜನವರಿಯಿಂದ ಈವರೆಗೆ ಇಬ್ಬರು ಮೃತಪಟ್ಟಿದ್ದಾರೆ. ಪ್ರಸ್ತುತ ಸರ್ಕಾರಿ ಜೆಸಿ ಆಸ್ಪತ್ರೆಯಲ್ಲಿ 5 ಮತ್ತು ಮಣಿಪಾಲ ಆಸ್ಪತ್ರೆಯಲ್ಲಿ ಮೂವರು ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಾಲೂಕು ವೈದ್ಯಾಧಿಕಾರಿ ಡಾ. ಅನಿಕೇತನ್ ತಿಳಿಸಿದ್ದಾರೆ.

ಜೆಸಿ ಆಸ್ಪತ್ರೆಯಲ್ಲಿ 5 ರೋಗಿಗಳಿದ್ದು, ಗುಣಮುಖರಾಗಿ ಮನೆಗೆ ಹೋಗಿದ್ದ ಇಬ್ಬರು ಮತ್ತೆ ಜ್ವರ ಮರುಕಳಿಸಿದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಜೆಸಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಅರವಿಂದ್ ತಿಳಿಸಿದ್ದಾರೆ.

ಭಕ್ತರ ಸಾಲಲ್ಲಿ ನಿಂತು ತಿರುಮಲ ದರ್ಶನ ಪಡೆದ ಸಿಎಂ ನಾಯ್ಡು

ಪುಟ ೧➡ ಈ ವೇಳೆ ಟಿಟಿಡಿಯ ಹಲವು ಅಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಹಾಗೂ ಶಾಸಕರು ಅವರ ಜತೆಯಲ್ಲಿದ್ದರು. ಈ ಅಭ್ಯಾಸವನ್ನು ಹಲವು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ. ಸಾಮಾನ್ಯ ಭಕ್ತನಂತೆ ದರ್ಶನಕ್ಕೆ ಹೋಗುವ ಹಾದಿಯಲ್ಲಿ ಅವರು ಚಂದ್ರಬಾಬು ನಾಯ್ಡು ಅವರು ತಿರುಮಲ ತಿರುಪತಿ ದೇವಸ್ಥಾನಗಳು (ಟಿಟಿಡಿ) ಮಾಡಿದ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಭಕ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸಿದರು. ಅವರು ಸರತಿ ಸಾಲಿನಲ್ಲಿ ಪ್ರಸಾದ ವಿತರಣೆ, ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಸೌಲಭ್ಯಗಳನ್ನು ಪರಿಶೀಲಿಸಿದರು. ತಿರುಪತಿ ಮತ್ತು ತಿರುಮಲದಲ್ಲಿ ಯಾತ್ರಿಕರ ವಸತಿ ಸೌಕರ್ಯಗಳನ್ನು ತಕ್ಷಣವೇ ಸುಧಾರಿಸುವಂತೆ ಮುಖ್ಯಮಂತ್ರಿ ನಾರಾ ಚಂದ್ರಬಾಬು ನಾಯ್ಡು ಶುಕ್ರವಾರ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಉಪನ್ಯಾಸಕರಿಂದ ಅರ್ಜಿ

ಬೆಂಗಳೂರು: ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಎಂ.ಟೆಕ್ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಶಿಕ್ಷಣಶಾಸ್ತ್ರ ವಿಷಯವನ್ನು ಬೋಧಿಸಲು ಅತಿಥಿ ಉಪನ್ಯಾಸಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಎಂ.ಇಡಿ ಪದವಿ ಅಥವಾ ಶಿಕ್ಷಣ ವಿಷಯದಲ್ಲಿ ಪಿಎಚ್‌ಡಿ ಹೊಂದಿರಬೇಕು. ಎನ್.ಇ.ಟಿ, ಎಸ್.ಎಲ್.ಇ.ಟಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ನೇಮಕಾತಿಯು ಎಐಸಿಟಿಇ / ಯುಜಿಸಿ ನಿಯಮಗಳಿಗನುಸಾರವಾಗಿ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ವಿವಿ ವೆಬ್‌ಸೈಟ್ www.uvce.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಕುಲಸಚಿವರ ಕಚೇರಿ, ಯುವಿಸಿಇ, ಕೆ.ಆರ್. ವೃತ್ತ, ಬೆಂಗಳೂರು ವಿಳಾಸಕ್ಕೆ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮಾ.23ರಂದು ಕೊನೆಯ ದಿನಾಂಕವಾಗಿದೆ. ಸಂದರ್ಶನದ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಅಥವಾ ಅರ್ಹ ಅಭ್ಯರ್ಥಿಗಳಿಗೆ ನೇರವಾಗಿ ತಿಳಿಸಲಾಗುವುದು ಎಂದು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ, ಕುಲಸಚಿವರು (ಪ್ರಭಾರ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೋರಕ್ಷಕ ಬಾಬಾ ಹತ್ಯೆಗೆ ಆಕ್ರೋಶ

ಪುಟ ೧➡ ತನಿಖೆ ಜಾರಿಯಲ್ಲಿದೆ ಎಂದು ಮಥುರಾದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ಲೋಕ್ ಕುಮಾರ್ ಹೇಳಿದ್ದಾರೆ.

ಗೋಶಾಲೆಯಲ್ಲಿ ಅಂತಿಮ ದರ್ಶನ: ಬಾಬಾ ಪಾರ್ಥಿವ ಶರೀರವನ್ನು ಸ್ಥಳೀಯ ಗೋರಕ್ಷಕರು ಬರ್ಸಾನಾದ ಗೋಶಾಲೆಗೆ ಸ್ಥಳಾಂತರಿಸಿದ್ದು, ಸಾರ್ವಜನಿಕರು ಮತ್ತು ಭಕ್ತರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಸ್ತೆ ಅಪಘಾತವಲ್ಲ, ಹತ್ಯೆ: ಶನಿವಾರ ಮುಂಜಾನೆ 4 ಗಂಟೆಯ ವೇಳೆ ಮಥುರಾದ ನವೀಪುರ ಗ್ರಾಮದಲ್ಲಿ ಗೋರಕ್ಷಕ ಚಂದ್ರಶೇಖರ್ ಅವರ ಹತ್ಯೆ ನಡೆದಿದೆ. ಇದರಿಂದ ಸ್ಥಳೀಯರು, ಬಾಬಾ ಬೆಂಬಲಿಗರು ಮತ್ತು ಸ್ಥಳೀಯ ಗೋರಕ್ಷಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಇದು ಅಪಘಾತವಲ್ಲ, ಇದು ಗೋವುಗಳ ಕಳ್ಳಸಾಗಾಣಿಕೆಗಾರರು ನಡೆಸಿದ ಹತ್ಯೆಯೆಂದು ಆರೋಪಿಸಿದ್ದಾರೆ.

ಎಐ ನ್ಯಾಯಾಂಗ ಆಳಬಾರದು: ಸಿಜೆಐ

ಪುಟ ೧➡ ತೀರ್ಪು ಪ್ರಕಟಿಸುವಿಕೆಯ ಹಂತದ ಮೇಲೆ ಎಐ ಸಾಧನಗಳಿಗೆ ಹಿಡಿತ ಸಾಧಿಸಲು ಆಸ್ಪದ ಮಾಡಿಕೊಟ್ಟರೆ ಪಾರದರ್ಶಕವಲ್ಲದ ಹಾಗೂ ಉತ್ತರದಾಯಿಯಲ್ಲದ ವ್ಯವಸ್ಥೆ ನಿರ್ಮಾಣವಾಗಲು ನಾವು ಅವಕಾಶ ಮಾಡಿ ಕೊಟ್ಟಂತಾಗುತ್ತದೆ ಎಂದು ಎಚ್ಚರಿಸಿದರು. ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ನ್ಯಾಯಾಂಗ ವ್ಯವಸ್ಥೆಯನ್ನು ಎಐ ಪ್ರವೇಶಿಸಿರುವ ಈ ಸಂದರ್ಭದಲ್ಲಿ, ಮನುಷ್ಯನ ನಿರ್ಧಾರ ತಳೆಯುವ ಶಕ್ತಿಗೆ ಎಐ ಸಹಾಯಕನಂತೆ ವರ್ತಿಸುತ್ತಿದೆಯೇ ಅಥವಾ ಮನುಷ್ಯನ ಉಪಸ್ಥಿತಿಯ ಅಗತ್ಯವೇ ಇಲ್ಲದ ಪರ್ಯಾಯದಂತೆ ಗೋಚರಿಸುತ್ತಿದೆಯೇ, ಇದು ಜನರಿಗೆ ನ್ಯಾಯಿಕ ವ್ಯವಸ್ಥೆಯನ್ನು ಇನಷ್ಟು ಸುಲಭವಾಗಿ ಲಭ್ಯವಾಗಿಸುತ್ತದೆಯೇ ಅಥವಾ, ಹೊಸ ಸ್ವರೂಪದ ಅಸಮಾನತೆ ಗಳನ್ನು ಹಾಗೂ ಅಪಾರದರ್ಶಕತೆಯನ್ನು ಉಂಟು ಮಾಡುತ್ತದೆಯೇ? ಎನ್ನುವ ಪ್ರಶ್ನೆಗಳು ಈಗ ಎದುರಾಗಿವೆ ಎಂದರು. ನ್ಯಾಯಾಂಗ ಸ್ವಾತಂತ್ರ್ಯ, ಪಾರದರ್ಶಕತೆ ಹಾಗೂ ಕಾನೂನುಬದ್ಧತೆಯ ಅಂಶಗಳು ಈಗ ಅತ್ಯಂತ ಪ್ರಮುಖವಾಗಿ ಪರಿಣಮಿಸಿವೆ. ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಎಐ ಬಳಕೆಯು ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ತತ್ತ್ವಗಳು ಹಾಗೂ ಸೂಕ್ತ ರಕ್ಷಣೆಗಳೊಂದಿಗೆ ನಿರ್ದೇಶಿತವಾಗಬೇಕು. ವಕೀಲರು ಕೂಡ ಎಐ ಟೂಲ್‌ಗಳ ಮಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ನ್ಯಾಯಾಂಗ ವ್ಯವಸ್ಥೆಯ ಪ್ರಧಾನ ಘಟಕಗಳಾದ ಪ್ರಾಮಾಣಿಕತೆ ಮತ್ತು ಜವಾಬ್ದಾರಿಗಳು ಅಬಾಧಿತವಾಗಿ ಮುಂದುವರಿಯಬೇಕು ಎಂದರು.

ನ್ಯಾಯಾಂಗ ಸುಧಾರಣಾ ಆಯೋಗ ರಚಿಸಿ

ನ್ಯಾಯಾಲಯಗಳಲ್ಲಿ ಹೆಚ್ಚುತ್ತಿರುವ ಬಾಕಿ ಪ್ರಕರಣಗಳನ್ನು ಕಡಿಮೆ ಮಾಡಲು ನ್ಯಾಯಾಂಗ ಸುಧಾರಣಾ ಆಯೋಗ ರಚಿಸಬೇಕು. ಒಬ್ಬ ವಕೀಲ ಅಥವಾ ವಕೀಲರು ವಿಚಾರಣೆ ಮುಂದೂಡಿಕೆ ಮತ್ತು ಮುಂದೂಡಿಕೆಯನ್ನು ಇಷ್ಟಪಡುತ್ತಾರೆ. ಏಕೆಂದರೆ ಅವರು ವಿಚಾರಣೆಯ ಪ್ರತಿ ಹಾಜರಾತಿಯಿಂದ ಪ್ರಯೋಜನ ಪಡೆಯುತ್ತಾರೆ. ಸರ್ಕಾರಿ ಇಲಾಖೆಯು ಸೋಲನ್ನು ಒಪ್ಪಿಕೊಳ್ಳುವ ಬದಲು ಮೇಲ್ಮನವಿ ಸಲ್ಲಿಸುವ ಮೂಲಕ ಅಧಿಕಾರಶಾಹಿ ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಸುಪ್ರೀಂ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದರು.

ಎಐನಿಂದ ಸ್ಥಳೀಯ ಭಾಷೆಗೆ ಅನುವಾದ: ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಅಧ್ಯಕ್ಷ ಪ್ರಶಾಂತ್ ಕುಮಾರ್ ಮಾತನಾಡಿ, ಎಐ ತಂತ್ರಜ್ಞಾನದಿಂದಾಗಿ ನ್ಯಾಯಾಲಯದ ತೀರ್ಪುಗಳನ್ನು ತ್ವರಿತವಾಗಿ ಸ್ಥಳೀಯ ಭಾಷೆಗಳಿಗೆ ಅನುವಾದ ಮಾಡುವುದು ಸಾಧ್ಯವಾಗುತ್ತಿದ್ದು, ಇದರಿಂದಾಗಿ ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಆಸಕ್ತಿಯಿರುವ ಹಳ್ಳಿಯ ಜನರೂ ಓದಬಹುದಾಗಿದೆ. ಇದು ವಕೀಲರಿಗೆ ತಮ್ಮ ಕಕ್ಷಿದಾರರೊಂದಿಗೆ ವ್ಯವಹರಿಸಲು ಅನುಕೂಲ ಕಲ್ಪಿಸಲಿದೆ ಎಂದರು.

ಸುಪ್ರಿಂ ಕೋರ್ಟ್‌ನ ನಿ.ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಯುಐಎ ಇಂಡಿಯಾ ಅಧ್ಯಕ್ಷ ಎ.ಕೆ. ಗಂಗೂಲಿ ಉಪಸ್ಥಿತರಿದ್ದರು.

ಮನುಷ್ಯರದೇ ನಿರ್ಣಾಯಕ ಪಾತ್ರವಿರಲಿ: ನ್ಯಾಯಾಂಗ ಪ್ರಕ್ರಿಯೆಯ ಅಂತಿಮ ಘಟ್ಟವಾದ ತೀರ್ಪು ಪ್ರಕಟಿಸುವಿಕೆಯಲ್ಲಿ ಮನುಷ್ಯರೇ ನಿರ್ಣಾಯಕ ಪಾತ್ರ ವಹಿಸುವಂತಿರಬೇಕು. ಅಂದರೆ, ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರುಗಳೇ ತರ್ಕ ಶಕ್ತಿ ಹಾಗೂ ಅನುಭವಗಳ ವಿಶ್ಲೇಷಣೆಯ ಬೆಳಕಿನಲ್ಲಿ ತೀರ್ಪುಗಳನ್ನು ಪ್ರಕಟಿಸಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ತರುವ ಪ್ರಯೋಜನಗಳು ಮಾರ್ಗಗಳಾಗಿ ಮಾತ್ರವೇ ಬಳಕೆಯಾಗಬೇಕು. ಆದರೆ, ಯಾವ ದಿಕ್ಕಿನತ್ತ ಸಾಗಬೇಕು ಎಂಬ ದಿಕ್ಸೂಚಿಯ ಪಾತ್ರವನ್ನು ಮನುಷ್ಯನ ಬುದ್ಧಿಯೇ ನಿರ್ಧರಿಸಬೇಕು ಎಂದು ನ್ಯಾ.ಸೂರ್ಯಕಾಂತ್ ಅಭಿಪ್ರಾಯಪಟ್ಟರು.

ವ್ಯಕ್ತಿತ್ವ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 2023-24ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ಸಂಬಂಧಿಸಿದಂತೆ ನಡೆಸಲು ಉದ್ದೇಶಿಸಿದ್ದ ವ್ಯಕ್ತಿತ್ವ ಪರೀಕ್ಷೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸದ್ಯಕ್ಕೆ ಮುಂದೂಡಲಾಗಿದೆ ಎಂದು ಆಯೋಗ ತಿಳಿಸಿದೆ.

ಕಳೆದ ಮಾ.10 ರಂದು ಆಯೋಗದ ಜಾಲತಾಣದಲ್ಲಿ ಪ್ರಕಟಿಸಲಾಗಿದ್ದ ವೇಳಾಪಟ್ಟಿಯಂತೆ, ಅರ್ಹ ಅಭ್ಯರ್ಥಿಗಳಿಗೆ ಮಾ.23 ರಿಂದ ಮೇ 4 ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಅನಿವಾರ್ಯ ಆಡಳಿತಾತ್ಮಕ ಕಾರಣಗಳಿಂದಾಗಿ ಈ ವೇಳಾಪಟ್ಟಿಯನ್ನು ಈಗ ಹಿಂಪಡೆಯಲಾಗಿದೆ. ವ್ಯಕ್ತಿತ್ವ ಪರೀಕ್ಷೆಯ ಪರಿಷ್ಕೃತ ದಿನಾಂಕಗಳು ಮತ್ತು ಸಮಯದ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ಆಯೋಗದ ವೆಬ್‌ಸೈಟ್‌ನಲ್ಲಿ ಶೀಘ್ರವಾಗಿ ಪ್ರಕಟಿಸಲಾಗುವುದು ಎಂದು ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ವಿಜೃಂಭಣೆಯ ವೇದವ್ಯಾಸ ತೀರ್ಥರ ಆರಾಧನೆ

ಹೊಳೆನರಸೀಪುರ: ಭಕ್ತಿ ವರ್ಧನ ಕ್ಷೇತ್ರ ವಾದ ಹೊಳೆನರಸೀಪುರ ಉತ್ತರಾದಿ ಮಠದಲ್ಲಿ ಉತ್ತರಾದಿ ಮಠದ ಪರಂಪರೆಯಲ್ಲಿ 15ನೇ ಯತಿಗಳಾದ ಆಂಧ್ರಪ್ರದೇಶದ ಪೆನುಗೊಂಡದಲ್ಲಿ ಮೂಲ ವೃಂದಾವನ ಇರುವ ಶ್ರೀ ವೇದವ್ಯಾಸ ತೀರ್ಥರ ಆರಾಧನೆ ವಿಜೃಂಭಣೆಯಿಂದ ಜರುಗಿತು. ಮುಂಜಾನೆ 5ಗಂಟೆ ಗೆ ಪ್ರಾರಂಭ ವಾದ ಪೂಜಾ ಕೈಂಕರ್ಯ ವು ಅರ್ಚಕರು ಮತ್ತು



ವ್ಯವಸ್ಥಾಪಕರಾದ ಸುಜಯ್ ಆಚಾರ್ ನೇತೃತ್ವದಲ್ಲಿ ನೆಡೆಯಿತು ಕಾರ್ಯಕ್ರಮ ದಲ್ಲಿ ಪಂಡಿತ್ ಆನಂದಚಾರ್ಯ ಗುಮಾಸ್ತೇ ಇವರ ಅಭೂತ ಪೂರ್ವ ಪ್ರವಚನ ಜನರನ್ನು ಭಕ್ತಿ ಸಾಗರದಲ್ಲಿ ಮುಳುಗಿಸಿತು ಮತ್ತು ಮಹಿಳಾ ಹರಿದಾಸ ಸಂಘದ ವರ ಭಜನೆ ಕಾರ್ಯಕ್ರಮಕ್ಕೆ ಮೆರಗು ತಂದಿತು ಸಂಘದ ಸದಸ್ಯೆಯರಾದ ಗಾಯಿತ್ರಿ ಹೆಬ್ಬಾರ್ ,ಮಂಜುಳಾ ರಮೇಶ್, ರೋಹಿಣಿ ಶ್ರೀಶ ಭಟ್, ವಿದ್ಯಾ, ಭವಾನಿ, ಸರಸ್ವತಿ, ಹರಿಣಿ, ವಾಸುಕಿ, ಪ್ರೇಮ, ಪಾರ್ವತಮ್ಮ, ಪದ್ಮಿನಿ, ಇಂದಿರಾ ಇನ್ನಿತರರು ಹಾಜರಿದ್ದರು.

ಹಾಲ್ಕುರಿಕೆಯಲ್ಲಿ ವೀರಭದ್ರೇಶ್ವರ, ಪಾರ್ಥೇಶ್ವರ ಜಾತ್ರಾ ಮಹೋತ್ಸವಕ್ಕೆ ಚಾಲನೆ

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ಹಾಲ್ಕುರಿಕೆ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಹಾಗೂ ಶ್ರೀ ಪಾರ್ಥೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವು ಮಾರ್ಚ್ 22ರಿಂದ 26ರವರೆಗೆ ನಡೆಯಲಿದೆ. ಮಾರ್ಚ್ 22ರಂದು ಕಂಕಣಧಾರಣೆಯೊಂದಿಗೆ ಜಾತ್ರೆಗೆ ಚಾಲನೆ ನೀಡಲಾಗುತ್ತದೆ. ಮಾರ್ಚ್ 23ರಂದು ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ. ಮಾರ್ಚ್ 24ರಂದು ರೇವಣಸಿದ್ದೇಶ್ವರ, ಕೆಂಪಮ್ಮ ದೇವಿ ಮತ್ತು ಪ್ಲೇಗಿನಮ್ಮ ದೇವಿಯ ಸಮ್ಮುಖದಲ್ಲಿ ಬಸವ ಉತ್ಸವ, ಅಗ್ನಿಕುಂಡೋತ್ಸವ ಹಾಗೂ ಗುರುಪರ ಕಾರ್ಯಕ್ರಮಗಳು ನೆರವೇರಲಿವೆ. ಮಾರ್ಚ್ 25ರಂದು ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಲಿದ್ದು, ಮಾರ್ಚ್ 26ರಂದು ಲಿಂಗಬೀರ ಕುಣಿತ, ಓಕಳಿ ಸೇವೆ ಮತ್ತು ನಂದಿ ಧ್ವಜದ ಕುಣಿತದೊಂದಿಗೆ ಜಾತ್ರಾ ಮಹೋತ್ಸವ ಸಮಾರೋಪಗೊಳ್ಳಲಿದೆ. ಜಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸುವಂತೆ ದೇವಾಲಯದ ಧರ್ಮದರ್ಶಿ ಎಚ್.ಇ. ಪರಮೇಶ್ವರಯ್ಯ ಮನವಿ ಮಾಡಿದ್ದಾರೆ.

ಜಾತ್ರಾ ಸಂಭ್ರಮ

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ಹಾಲ್ಕುರಿಕೆ ಗ್ರಾಮದ ಕೆಂಪಮ್ಮ ದೇವಿ ಪ್ಲೇಗಿನಮ್ಮ ದೇವಿ ಹಾಗೂ ವೀರಭದ್ರೇಶ್ವರ ಪಾರ್ಥೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಮಾ.20ರಿಂದ 26ರವರೆಗೆ ನಡೆಯಲಿದೆ. ಮಾ.20ರಂದು ಆರತಿಬಾನ ಕಾರ್ಯಕ್ರಮದಿಂದ ಜಾತ್ರೆಗೆ ಚಾಲನೆ ಸಿಗಲಿದ್ದು, ಮಾರ್ಚ್ 21ರಂದು ಗಂಗಾಸ್ನಾನ, ವಿಶೇಷ ಪುಷ್ಪಾಲಂಕಾರ, ಕೋಲಾಟ, ತಮಟೆ ವಾದ್ಯ ಮತ್ತು ಕೀಲುಕುದುರೆ ನರ್ತನದೊಂದಿಗೆ ಜಾನಪದ ಮೆರವಣಿಗೆ ಹಾಗೂ ರಾತ್ರಿ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಮಾ.22ರಂದು ರಥೋತ್ಸವ, ಬನ್ನಿಮರ ಹತ್ತಿಸುವ ಸಂಪ್ರದಾಯ, ಅನ್ನಸಂತರ್ಪಣೆ, ಭದ್ರಕಾಳಿ ಕುಣಿತ ಮತ್ತು ಚಿಟ್ಟಿ ಮೇಳ ಕಾರ್ಯಕ್ರಮಗಳು ನಡೆಯಲಿವೆ. ಮಾರ್ಚ್ 23ರಂದು ಸಿಡಿ ಉತ್ಸವದೊಂದಿಗೆ ಕೆಂಪಮ್ಮ ದೇವಿ ಮತ್ತು ಪ್ಲೇಗಿನಮ್ಮ ದೇವಿಯ ಜಾತ್ರಾ ಮಹೋತ್ಸವವು ಸಮಾರೋಪಗೊಳ್ಳಲಿದೆ.

ನಾಲ್ಕು ದಿನಗಳ ಧಾರ್ಮಿಕ ಸಂಭ್ರಮ

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ಹಾಲ್ಕುರಿಕೆ ಗ್ರಾಮದಲ್ಲಿ ಶ್ರೀ ಕೆಂಪಮ್ಮ ದೇವಿ ಹಾಗೂ ಶ್ರೀ ಪ್ಲೇಗಿನಮ್ಮ ದೇವಿಯ ಜಾತ್ರಾ ಮಹೋತ್ಸವವು ಮಾರ್ಚ್ 20ರಿಂದ 23ರವರೆಗೆ ಭಕ್ತಿಭಾವದೊಂದಿಗೆ ನಡೆಯಲಿದೆ. ಜಾತ್ರೆಗೆ ಪೂರ್ವಭಾವಿಯಾಗಿ ಮಾರ್ಚ್ 18 ಮತ್ತು 19ರಂದು ಮದವಣಗಿತ್ತಿ ಶಾಸ್ತ್ರ ಹಾಗೂ ಕಂಕಣಧಾರಣೆ ವಿಧಿಗಳು ವಿಜೃಂಭಣೆಯಿಂದ ನೆರವೇರಿದವು. ಮಾರ್ಚ್ 20ರಂದು ಅಮ್ಮನವರ ಆರತಿಬಾನ ಕಾರ್ಯಕ್ರಮದಿಂದ ಜಾತ್ರೆಗೆ ಅಧಿಕೃತ ಚಾಲನೆ ಸಿಗಲಿದೆ. ಮಾರ್ಚ್ 21ರಂದು ಗಂಗಾಸ್ನಾನ ನಡೆಯಲಿದ್ದು, ವಿಶೇ? ಪು?ಪಾಲಂಕಾರ, ಕೋಲಾಟ, ತಮಟೆ ವಾದ್ಯ ಹಾಗೂ ಕೀಲುಕುದುರೆ ನರ್ತನದೊಂದಿಗೆ ಜಾನಪದ ಕಲಾತಂಡಗಳ ಮೆರವಣಿಗೆ ನಡೆಯಲಿದೆ. ಅದೇ ದಿನ ರಾತ್ರಿ ರಸಮಂಜರಿ (ಆರ್ಕೆಸ್ಟ್ರಾ) ಕಾರ್ಯಕ್ರಮವೂ ಏರ್ಪಡಿಸಲಾಗಿದೆ. ಮಾರ್ಚ್ 22ರಂದು ರಥೋತ್ಸವ ನಡೆಯಲಿದ್ದು, ಬಳಿಕ ಬನ್ನಿಮರ ಹತ್ತಿಸುವ ಸಂಪ್ರದಾಯ ಜರುಗಲಿದೆ. ಇದೇ ಸಂದರ್ಭದಲ್ಲಿ ಅನ್ನಸಂತರ್ಪಣೆ, ಭದ್ರಕಾಳಿ ಕುಣಿತ ಮತ್ತು ಚಿಟ್ಟಿ ಮೇಳ ಕಾರ್ಯಕ್ರಮಗಳು ಭಕ್ತರನ್ನು ರಂಜಿಸಲಿವೆ. ಮಾರ್ಚ್ 23ರಂದು ಸಿಡಿ ಉತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ಸಮಾರೋಪ ನಡೆಯಲಿದೆ.

ಲಕ್ಷ್ಮೀನಾರಾಯಣಸ್ವಾಮಿ ಉತ್ಸವ | ಮಹಾಂಕಾಳೇಶ್ವರಿ, ಚಂದ್ರಮೌಳೇಶ್ವರನಿಗೆ ಪೂಜೆ

ಪಾಂಡವಪುರದಲ್ಲಿ ಯುಗಾದಿ ಸಂಭ್ರಮ

ಎನ್.ಕೃಷ್ಣೇಗೌಡ ಪಾಂಡವಪುರ

ದಿಗಂತ ವಿಶೇಷ

ಪಾಂಡವಪುರ: ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಪರಾಭವ ನಾಮ ಹೊಸ ಸಂವತ್ಸರದ ಯುಗಾದಿ ಹಬ್ಬವನ್ನು ಬಹಳ ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಶಾಂತಿನಗರದಲ್ಲಿರುವಶ್ರೀಮಹಾಂಕಾಳೇಶ್ವರಿ ದೇವಸ್ಥಾನ, ಶ್ರೀ ಗಣಪತಿ ದೇವಸ್ಥಾನ, ನಾಗಮಂಗಲ ವೃತ್ತದ ಬಳಿ ಇರುವ ಶ್ರೀ ಚಂದ್ರ ಮೌಳೇಶ್ವರಿ ದೇವಸ್ಥಾನ, ಪಟ್ಟಣದ ಹಾರೋಹಳ್ಳಿ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಸ್ಥಾನ ಸೇರಿದಂತೆ ತಾಲೂಕಿನ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ಜರುಗಿದವು. ಬಳಿಕ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಿತು.

ಪರಾಭವ ನಾಮ ಹೊಸ ಸಂವತ್ಸರವನ್ನು ಸಡಗರದಿಂದಲೇ ಸ್ವಾಗತಿಸಿದಜನತೆಪ್ರತಿಮನೆಯಲ್ಲಿಯೂತಳಿರು-ತೋರಣಗಳನ್ನು ಕಟ್ಟಿ ಮನೆಮಂದಿಯೆಲ್ಲರೂ ಹೊಸ ಬಟ್ಟೆ ಧರಿಸಿಕೊಂಡು ಸಂಭ್ರಮಿಸಿದರಲ್ಲದೇ, ಬೇವು-ಬೆಲ್ಲ ತಿಂದು, ಒಬ್ಬಟ್ಟನ್ನು ಸವಿದು ಹೊಸ ವರ್ಷದ ಮೊದಲ ಹಿಂದು ಹಬ್ಬವೂ ಆಗಿರುವ ಯುಗಾದಿ ಹಬ್ಬವನ್ನು ಮೂರು ದಿನಗಳವರೆಗೆ ಬಹಳ ವಿಜೃಂಭಣೆಯಿಂದಲೇ ಆಚರಣೆ ಮಾಡಿದರು.



ವರ್ಷದೊಡಕು ಜೋರು

ವರ್ಷದ ಮೊದಲ ಹಬ್ಬವಾದ ಯುಗಾದಿ ಹಿನ್ನೆಲೆಯಲ್ಲಿ ಶುಕ್ರವಾರ ವರ್ಷದ ಒಡಕು ಬಹಳ ಜೋರಾಗಿಯೇ ನಡೆಯಿತು. ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಗುಡ್ಡೆ ಮಾಂಸಕ್ಕೆ (ಗುಡ್ಡೆ ಬಾಡು) ಎಲ್ಲೆಲ್ಲೂ ಡಿಮ್ಯಾಂಡೋ ಡಿಮ್ಯಾಂಡು. ಜನತೆ ವರ್ಷದ ತೊಡಕನ್ನು ವಿಜೃಂಭಣೆಯಿಂದಲೇ ನೆರವೇರಿಸಿದರು. ಆ ಮೂಲಕ ಯುಗಾದಿ ಹಬ್ಬಕ್ಕೆ ತೆರೆ ಬಿದ್ದಿತು.

ಯುಗಾದಿ ಹಬ್ಬದ ಆಚರಣೆ ಮೂಲಕ ಹಿಂದೂ ಸಂಪ್ರದಾಯದವರಿಗೆ ಹೊಸ ವರ್ಷ ಆರಂಭ. ಹೊಸ ಸಂವತ್ಸರಕ್ಕೆ ಕಾಲಿಡುತ್ತಿದ್ದೇವೆ.

ಎಂದಿನಂತೆ ಈ ವರ್ಷವೂ ಯುಗಾದಿ ಹಬ್ಬದ ಇಸ್ಪೀಟ್ ಅಖಾಡ ಬಲು ಜೋರಾಗಿಯೇ ನಡೆಯಿತು. ಬಿಸಿಲು ಹಾಗೂ ಪೊಲೀಸರ ನಿರ್ಬಂಧದ ನಡುವೆಯೂ ಪಟ್ಟಣದ ವಿವಿಧೆಡೆ ಕದ್ದುಮುಚ್ಚಿ, ಇನ್ನೂ ಕೆಲವೆಡೆ ಮಹಡಿ ಮೇಲೆ ಶಾಮಿಯಾನದ ಅಡಿಯಲ್ಲಿ ಜೂಜಾಟದ ಅಖಾಡ ಜೋರಾಗಿ ನಡೆದಿತ್ತು. ಮೂರು ದಿನಗಳ ಕಾಲ ಅಖಾಡದಲ್ಲಿ ತೊಡಗಿದ್ದ ಜನತೆ 10ರೂ.ನಿಂದ ಹಿಡಿದು ಲಕ್ಷದವರೆಗೆ ಪಣಕ್ಕಿಟ್ಟು ಜೂಜಾಟವಾಡಿದರು. ಇಸ್ಪೀಟ್ ಅಖಾಡದಲ್ಲಿ ಸೋತವರು ಸಪ್ಪೆ ಮೊರೆಯೊಂದಿಗೆ ತಮ್ಮ ಮನೆಗಳತ್ತ ಸಾಗಿದರೆ, ಗೆದ್ದವರು ಖುಷಿಯಿಂದಲೇ ಹೊರನಡೆದರು. ಮಹಿಳೆಯರು ತಮ್ಮ ಮನೆಯ ಜಗುಲಿಗಳ ಮುಂದೆ ಚೌಕಾಭರ, ಘಟ್ಟಮನೆ ಸೇರಿದಂತೆ ಇತರೆ ಆಟಗಳನ್ನು ಆಡಿದರು.

ಹಾರೋಹಳ್ಳಿ ದೇವಸ್ಥಾನದಲ್ಲಿ ಉತ್ಸವ

ಯುಗಾದಿ ಹಬ್ಬದ ಪ್ರಯುಕ್ತ ಪಟ್ಟಣದ ಹಾರೋಹಳ್ಳಿ ಗ್ರಾಮದಲ್ಲಿರುವ ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದಲ್ಲಿ ಅರ್ಚಕ ರಾಜು ಹಾಗೂ ನಿತ್ಯಾನಂದ ಅವರ ನೇತೃತ್ವದಲ್ಲಿ ವಿಶೇಷ ಪೂಜೆ-ಪುನಸ್ಕಾರಗಳು ನಡೆದವು. ಜತೆಗೆ ರಾತ್ರಿ ಗ್ರಾಮದ ಪ್ರತಿ ಬೀದಿ ಬೀದಿಗಳಲ್ಲೂ ಶ್ರೀಲಕ್ಷ್ಮೀನಾರಾಯಣಸ್ವಾಮಿಯ ಉತ್ಸವ ಬಹಳ ವಿಜೃಂಭಣೆಯಿಂದ ಜರುಗಿತು. ಭರ್ಜರಿ ಜೋಡೆತ್ತುಗಳ ಎತ್ತಿನ ಗಾಡಿ ಮೇಲೆ ವಿರಾಜಮಾನನಾಗಿದ್ದ ಶ್ರೀಲಕ್ಷ್ಮೀನಾರಾಯಣಸ್ವಾಮಿಯನ್ನು ಗ್ರಾಮದ ಪ್ರತಿ ಬೀದಿ ಬೀದಿಗಳಲ್ಲಿಯೂ ಮೆರೆಸಲಾಯಿತು. ಈ ವೇಳೆ ಮಹಿಳೆಯರು ಪೂಜೆ ಸಲ್ಲಿಸಿದರು. ಜತೆಗೆ ಕೆಲ ಮಹಿಳೆಯರು ಬಾಯಿ ಬೀಗದ ಹರಕೆಯನ್ನೂ ತೀರಿಸಿದರು.

ಬೈಕ್ ವ್ಹೀಲಿಂಗ್‌ಗೆ ಪೊಲೀಸರ ಬ್ರೇಕ್

7 ಬೈಕ್ ವಶ, ನಾಲ್ವರ ವಿರುದ್ಧ ಪ್ರಕರಣ



ಹೊಸಕೋಟೆ: ನಗರದ ಮಧ್ಯಬಾಗದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75ರ ಕೊಳತೂರು ಗೇಟ್ ಬಳಿ ರಾತ್ರಿ ಸಮಯದಲ್ಲಿ ಬೈಕ್ ವ್ಹೀಲಿಂಗ್ ಮಾಡುತಿದ್ದ 7 ಬೈಕ್‌ಗಳನ್ನು ನಗರದ ಸಂಚಾರಿ ಪೊಲೀಸರು ವಶಪಡಿಸಿ ಕೊಂಡು ನಾಲ್ವರು ಬೈಕ್ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.


ರಾತ್ರಿ ಸಮಯದಲ್ಲಿ ಬೈಕ್ ವ್ಹೀಲಿಂಗ್ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತಿದ್ದು, ರಾಷ್ಟ್ರೀಯ ಹೆದ್ದಾರಿ ಯಲ್ಲಿ ಸಾಗುವ ವಾಹನಗಳಿಗೆ ಸಮಸ್ಯೆ ಆಗುತಿತ್ತು. ಸಣ್ಣ ಪುಟ್ಟ ವಾಹನ ಸವಾರರು ಪ್ರಶ್ನಿಸಿದಲ್ಲಿ ಅವರ ಮೇಲೆ ಹಲ್ಲೆಗೆ ಯತ್ನಗಳು ನಡೆದ ಉದಾಹರಣೆಗಳಿದ್ದು ಈ ಬಗ್ಗೆ ಸಂಚಾರಿ ಪೊಲೀಸರ ಗಮನಕ್ಕೆ ಬಂದ ಕಾರಣ ಪೊಲೀಸರು ರಾತ್ರಿ ಗಸ್ತನ್ನು ಹೆಚ್ಚು ಮಾಡಿ ಈ ಬೈಕ್ ವ್ಹೀಲಿಂಗ್ ಮಾಡುತಿದ್ದ ಪುಂಡರನ್ನು ಸೆರೆಹಿಡಿಯ ಲಾಗಿದೆ. ಈ ಸಂದರ್ಭದಲ್ಲಿ ಬೈಕ್ ಚಲಾಯಿಸುತಿದ್ದ ಅಬ್ಬು ಸೋಫಿಯಾನ್ (24) ಕೆಜಿಎಫ್, ಇಂಬ್ರಾನ್ ಖಾನ್ (24), ಕೆಆರ್‌ಪುರಂ, ಮಹಮದ್ ಇರ್ಫಾನ್, ವಾಣಿ ನಗರ ಬೆಂಗಳೂರು ಹಾಗೂ ಮಹಮದ್ ಶಮಿ(28), ಕೆ.ಆರ್.ಪುರದ ನಿವಾಸಿಗಳಾಗಿದ್ದು ಇನ್ನುಳಿದವರು ಪರಾರಿಯಾಗಿದ್ದಾರೆ, ಇವರ ವಿರುದ್ಧ ಹಾಗೂ ವಾಹನ ಮಾಲೀಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಚಲುವನಾರಾಯಣಸ್ವಾಮಿಗೆ ಪ್ರಥಮ ತೆಪ್ಪೋತ್ಸವ

ಮೇಲುಕೋಟೆ: ಭವ್ಯವಾಗಿ ಅಲಂಕೃತ ವಾದ ತೆಪ್ಪೋತ್ಸವ ಮಂಟಪದಲ್ಲಿ ಶ್ರೀ ಚಲುವ ನಾರಾಯಣಸ್ವಾಮಿಗೆ ಪ್ರಥಮ ತೆಪ್ಪೋತ್ಸವ ಶನಿವಾರ ರಾತ್ರಿ ಸಂಭ್ರಮದಿಂದ ನೆರವೇರಿತು. ಶ್ರೀ ಪರಾಭವ ಸಂವತ್ಸರದ ವೈರಮುಡಿ ಬ್ರಹ್ಮೋತ್ಸವಕ್ಕೆ ಮುನ್ನುಡಿಯಾಗಿ ಕಲ್ಯಾಣಿಯಲ್ಲಿ ನಡೆದ ಚಲುವನ ಜಲ ವಿಹಾರದ ವೈಭವವನ್ನು ನೂರಾರು ಭಕ್ತರು ಕಣ್ತುಂಬಿಕೊಂಡರು.

ಪಾಂಡವಪುರ ಖಜಾನೆಯಿಂದ ತಂದ ಅಮೂಲ್ಯ ಮುತ್ತುಮುಡಿ ಹಾಗೂ ಮುತ್ತಗಳ ಹಾರಗಳೊಂದಿಗೆ ಚಲುವನಾರಾಯಣ ಸ್ವಾಮಿ ಯನ್ನು ಅಲಂಕರಿಸಿ ಸಂಜೆ ವೈಭವದ ಉತ್ಸವ ನೆರವೇರಿಸಲಾಯಿತು. ಮಹೂರ್ತ ಪಠಣದ ನಂತರ ತೆಪ್ಪಮಂಟಪದಲ್ಲಿ ಶ್ರೀದೇವಿ-ಭೂದೇವಿ ಸಮೇತನಾದ ಚಲುವನಾರಾಯಣಸ್ವಾಮಿ ಮತ್ತು ರಾಮಾನುಜಾಚಾರ್ಯರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ಕಲ್ಯಾಣಿ ಯಲ್ಲಿ ಮೂರು ಪ್ರದಕ್ಷಿಣೆ ನಡೆಯುವು ದರೊಂದಿಗೆ ಪ್ರಥಮ ತೆಪ್ಪೋತ್ಸವ ರಾತ್ರಿ ಮುಕ್ತಾಯವಾಯಿತು. ಮೇಲುಕೋಟೆ ಪೊಲೀಸರು ಭದ್ರತೆ ನೀಡಿದ್ದರು.





ಮೇಲುಕೋಟೆ ಕಲ್ಯಾಣಿಯಲ್ಲಿ ವೈರಮುಡಿ ಬ್ರಹ್ಮೋತ್ಸವಕ್ಕೂ ಪೂರ್ವಭಾವಿಯಾಗಿ ಶನಿವಾರ ರಾತ್ರಿ ಪ್ರಥಮ ತೆಪ್ಪೋತ್ಸವ ವೈಭವದಿಂದ ನೆರವೇರಿತು 5 ಚೆಲುವನಾರಾಯಣಸ್ವಾಮಿಯನ್ನು ಅಮೂಲ್ಯ ಮುತ್ತುಮುಡಿ ಕಿರೀಟದಿಂದ ಅಲಂಕರಿಸಿ ಉತ್ಸವ ನೆರವೇರಿಸಲಾಯಿತು.

ಕಂಗೊಳಿಸಿದ ಸಹಸ್ರದೀಪೋತ್ಸವ ಕೈಂಕರ್ಯ

ಹಲವು ವರ್ಷಗಳ ನಂತರ ಚಲುವನಾರಾಯಣ ಸ್ವಾಮಿ ಪ್ರಥಮ ತೆಪ್ಪೋತ್ಸವದ ವೇಳೆ ಕಲ್ಯಾಣಿಯ ಸೋಪಾನಗಳ ಮೇಲೆ ಹಣತೆಗಳನ್ನು ಹಚ್ಚಿ ದೀಪೋತ್ಸವ ಆಚರಿಸಲಾಯಿತು. ವಿದ್ವಾನ್ ಶ್ರೀರಂಗಂ ರಾಮಪ್ರಿಯ ನೇತೃತ್ವದಲ್ಲಿ ಕೈಂಕರ್ಯಪರರು ಹಾಗೂ ನಾಗರಿಕರು ಹಣತೆಗಳನ್ನು ಹಚ್ಚಿ ಚಲುವನಾರಾಯಣ ಸ್ವಾಮಿಗೆ ದೀಪಾರಾಧನೆಯ ಸೇವೆ ಮಾಡಿದರು.

ಯುಗಾದಿ ಜಾತ್ರಾ ಮಹೋತ್ಸವ, ಎದುರು ಸೇವೆ ಸಂಪನ್ನ

ಭಕ್ತರಿಗೆ ಮಂಟೇಸ್ವಾಮಿ ಗದ್ದುಗೆ ದರ್ಶನ

ಮಳವಳ್ಳಿ: ಪವಿತ್ರ ಪುಣ್ಯಕ್ಷೇತ್ರ ರಾಜ ಬೊಪ್ಪೇಗೌಡನಪುರ (ಬಿ.ಜಿ.ಪುರ) ಗ್ರಾಮದಲ್ಲಿ ಮಂಟೇಸ್ವಾಮಿ ಯುಗಾದಿ ಜಾತ್ರಾ ಮಹೋತ್ಸವ ಹಾಗೂ ಮಠಕ್ಕೆ ನುಗ್ಗುವ(ಎದುರು) ಸೇವೆ ಬುದವಾರ ಸಂಜೆ ಲಕ್ಷಾಂತರ ಭಕ್ತರು ಶ್ರೀ ಮಂಟೇಸ್ವಾಮಿ ಗದ್ದುಗೆ ದರ್ಶನ ಪಡೆದು ಮಾದಲಿ ಪ್ರಸಾದ್, ಕಪ್ಪು ದೂಳತ ಪಡೆಯುವ ಮೂಲಕ ಸಂಪನ್ನಗೊಂಡಿತು.

ತಾಲ್ಲೂಕಿನ ಬಿ.ಜಿ.ಪುರ ಗ್ರಾಮದ ಶ್ರೀ ಮಂಟೇಸ್ವಾಮಿ ಮಠಕ್ಕೆ ಯುಗಾದಿ ಹಬ್ಬದ ಮುನ್ನಾ ದಿನ ಗದ್ದುಗೆ ದರ್ಶನ ಪಡೆಯಲು ರಾಜ್ಯದ ವಿವಿಧ ಭಾಗದಿಂದ ಭಕ್ತರು ಕಪ್ಪಡಿಯಿಂದ ಮಂಗಳವಾರ ಬಂದು ಹುಲ್ಲಂಬಳ್ಳಿ, ಪೂರಿಗಾಲಿ, ಬಳ್ಳಗೆರೆ ತೋಪು, ಸರಗೂರು, ಮುಟ್ಟನಹಳ್ಳಿ ತೋಪುಗಳಲ್ಲಿ ವಾಸ್ತವ್ಯ ಹೂಡಿದ್ದರು. ಬುಧವಾರ ಬೆಳಿಗ್ಗೆ ಸರದಿಯಲ್ಲಿ ಮುಟ್ಟನಹಳ್ಳಿ ದೊಡ್ಡಮ್ಮತಾಯಿ ದೇವಿಯ ದರ್ಶನ ಪಡೆದು ನಂತರ ನಡೆದು ಕೊಂಡು ಬಂದು ಮಂಟೇಸ್ವಾಮಿ ಮಠದ ಗದ್ದುಗೆಯ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಯುಗಾದಿ ಸಂಭ್ರಮ: ಯುಗಾದಿಯಂದು ಜಾತ್ರೆ ಹಾಗೂ 5 ಪಂಕ್ತಿ ಸೇವೆಗಳು ನಡೆಯುವುದು ವಾಡಿಕೆ. ಮಂಟೇಸ್ವಾಮಿ ಐಕ್ಯವಾದ ಗದ್ದುಗೆ ದರ್ಶನ ಪಡೆಯಲು ಉರಿ ಬಿಸಿಲಿನಲ್ಲಿ ದಣಿದು ಬಂದ ಭಕ್ತರಿಗೆ ಹರಕೆ ಹೊತ್ತ ಜನರು ನೀರು, ಪಾನಕ, ಮಜ್ಜಿಗೆಯನ್ನು ನೀಡಿ ದಣಿವು ನಿವಾರಿಸಿದರು. ಪಂಚಾಯಿತಿ ನಾಲ್ಕು ಟ್ಯಾಂಕರ್‌ಗಳ ಮೂಲಕ ರಸ್ತೆಗೆ ನೀರು ಸಿಂಪಡಿಸಿ ತಂಪು ವಾತಾವರಣ ಸೃಷ್ಟಿಸಿದರು. ಚಿಕ್ಕಲ್ಲೂರಿನ ಸಿದ್ದಪ್ಪಾಜಿ ಜಾತ್ರೆಗೆ ಹೋಗಿ ಮತ್ತೆ ಒಂದು ತಿಂಗಳ ಕಾಲ ಕಪ್ಪಡಿ ಜಾತ್ರೆಗೆ ಹೋಗಿದ್ದು, ಅಲ್ಲಿಂದ ವಾಪಸ್ ಬಂದು ಬುಧವಾರ ಸಂಜೆ ಬಿ.ಜಿ.ಪುರ ಮಠ ನುಗ್ಗಲು ಬಂದು ಮುಟ್ಟನಹಳ್ಳಿ ತೋಪಿನ ದೊಡ್ಡಮ್ಮ ತಾಯಿ ದೇವಸ್ಥಾನದಲ್ಲಿತಂಗಿದ್ದ ಮಳವಳ್ಳಿ ಮಠದ ಪೀಠಾಧಿಪತಿಗಳಾದ ಶ್ರೀ ಎಂ.ಎಲ್. ವರ್ಚಸ್ವಿ ಸಿದ್ದಲಿಂಗರಾಜೇಅರಸು ಅವರನ್ನು ಸಂಪ್ರದಾಯದಂತೆ ಬಸವ, ಕೊಂಬು, ಕಹಳೆ, ಪೆಂಜು, ಹತ್ತಾರು ಕಠಾಯ, ಸತ್ತಿಗೆ, ಛತ್ರಿ ಚಾಮರ ಸೇರಿದಂತೆ ನೂರಾರು ನೀಲಗಾರರು ಬಿದಿರು (ಬೆತ್ತ) ಜೋಳಿಗೆ ಜತೆ ತಮಟೆ, ಕೊಂಬು ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಕರೆತಂದರು. ಅವರು ದೊಡ್ಡಮ್ಮತಾಯಿ ದೇವಸ್ಥಾನದ ಉರಿಗದ್ದುಗೆ ಮೇಲೆ ಕುಳಿತು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ ಮಾಡಿದರು.



ಎದುರು ಸೇವೆ ಸಂಪನ್ನ ಮಳವಳ್ಳಿ ಮತ್ತು ಬಿ.ಜಿ.ಪುರ ಬಸವಗಳು ಮುಂದೆ ಸಾಗಿ ಬರುವಾಗ ಬಿ.ಜಿ.ಪುರ ಮಠದ ಪೀಠಾಧಿಪತಿ ಶ್ರೀ ಜ್ಞಾನ ನಂದ ಚೆನ್ನಾರಾಜೇ ಅರಸ್ ಬಂದು ಕಪ್ಪಾಡಿ ಯಿಂದ ಬಂದ ಮಳವಳ್ಳಿ ಸ್ವಾಮಿ ಗಳನ್ನು ಹೂವಿನ ಹಾರ ಹಾಕಿ ಬರಮಾಡಿಕೊಂಡರು ನಂತರ ಮಠದ ಒಳಗೆ ನುಗ್ಗಿದರು ಇದನ್ನೇ ಎದುರು ಸೇವೆ ಎನ್ನುತ್ತಾರೆ.

ಜನಸಾಗರ: ಮಠ ನುಗ್ಗುವ (ಎದುರು ಸೇವೆ) ಹಾಗೂ ಜಾತ್ರಾ ಮಹೋತ್ಸ ವಕ್ಕೆ ಬೆಳಿಗ್ಗೆ ಯಿಂದ ಸಂಜೆ ವರೆಗೆ ಲಕ್ಷಾಂತರ ಭಕ್ತರು ಸೇರಿದ್ದರು.

ಭದ್ರತೆ: ಡಿವೈಎಸ್ಪಿ ಯಶವಂತ ಕುಮಾರ್ ನೇತೃತ್ವದಲ್ಲಿ ಸಿಪಿಐ ಬಿ.ಎಸ್. ಶ್ರೀಧರ್, ಪಿಎಸ್‌ಐ ಬಿ.ವಿ.ಪ್ರಕಾಶ್ ಬಂದೋಬಸ್ತ್ ಕಲ್ಪಿಸಿದ್ದರು. ತಾಲ್ಲೂಕು ಆಡಳಿತ, ಆರೋಗ್ಯ ಇಲಾಖೆ ಸಿಬ್ಬಂದಿ ಕಾರ್ಯನಿರ್ವಹಿಸಿದರು. ಗ್ರಾಮ ಪಂಚಾಯಿತಿ ಪಿಡಿಒ, ಕಾರ್ಯದರ್ಶಿ, ಮತ್ತು ಸಿಬ್ಬಂದಿ ಗಳು ಕಾರ್ಯ ನಿರ್ವಹಿದರು, ಹಾಗೂ ಸೆಸ್ಕ್ ಅಧಿಕಾರಿಗಳು ಎರಡು ದಿನ ನಿರಂತರ ವಿದ್ಯುತ್ ಸೌಲಭ್ಯ ಒದಗಿಸಲಾಗಿತ್ತು. ಜಾತ್ರೆಯಲ್ಲಿ ಮಕ್ಕಳು ಸಿಹಿ ತಿಂಡಿ, ತಿನಿಸು, ಆಟಿಕೆ ವಸ್ತುಗಳನ್ನು ಖರೀದಿಸಿ ಸಂಭ್ರಮಿಸಿದರು.

ಪೂರ್ವ ಮುಂಗಾರು ಮಳೆ-ವಿದ್ಯುತ್ ಸುರಕ್ಷತಾ ಕ್ರಮಕ್ಕೆ ಬೆಸ್ಕಾಂ ಮನವಿ

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಮಳೆ ಪ್ರಾರಂಭಗೊಂಡಿದ್ದು, ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ಬೆಸ್ಕಾಂ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಗಾಳಿ-ಮಳೆಗೆ ವಿದ್ಯುತ್ ಕಂಬಗಳು ತುಂಡಾಗಿದ್ದರೆ, ವಾಲಿದ್ದರೆ, ಅಥವಾ ಮರಗಳ ಕೊಂಬೆಗಳು ವಿದ್ಯುತ್ ಕಂಬಗಳ ಮೇಲೆ ಬಿದ್ದಿದ್ದು ಕಂಡು ಬಂದಲ್ಲಿ ಅವುಗಳ ಸಮೀಪ ಹೋಗದೆ ಹತ್ತಿರದ ಬೆಸ್ಕಾಂ ಉಪ ವಿಭಾಗ ಕಚೇರಿಗೆ ಮಾಹಿತಿ ನೀಡಬೇಕು. ಅಥವಾ ಬೆಸ್ಕಾಂ 1912 ಸಹಾಯವಾಣಿಗೆ ಕರೆ ಮಾಡಲು ಬೆಸ್ಕಾಂ ವಿನಂತಿಸಿದೆ.

ಪೂರ್ವ ಮುಂಗಾರಿನ ಭಾರೀ ಗಾಳಿ-ಮಳೆಗೆ ವಿದ್ಯುತ್ ವಾಹಕಗಳು ತುಂಡಾಗಿ ಬೀಳುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಗಾಳಿ -ಮಳೆ ಸಂದರ್ಭದಲ್ಲಿ ವಿದ್ಯುತ್ ಕಂಬಗಳು ಹಾದು ಹೋಗಿರುವ ಮರಗಳ ಕೆಳಗೆ ನಿಲ್ಲಬಾರದು ಹಾಗೂ ವಿದ್ಯುತ್ ಪರಿವರ್ತಕಗಳ ಬಳಿ ನಿಲ್ಲಬಾರದು ಎಂದು ಬೆಸ್ಕಾಂ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಗಾಳಿ-ಮಳೆ ಸಂದರ್ಭದಲ್ಲಿ ಕರೆಗಳ ಒತ್ತಡದಿಂದ ಬೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಕೆಲವೊಮ್ಮೆ ಲಭ್ಯವಾಗುವುದಿಲ್ಲ, ಹೀಗಾಗಿ ಬೆಸ್ಕಾಂ ವಾಟ್ಸ್ ಆಪ್ ಸಂಖ್ಯೆಗಳಿಗೆ ವಿದ್ಯುತ್ ಸಮಸ್ಯೆ ಕುರಿತ ಸಂದೇಶಗಳನ್ನು ಕಳುಹಿಸಲು ಬೆಸ್ಕಾಂ ತಿಳಿಸಿದೆ.

ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ ವಾಟ್ಸ್ ಆಪ್ ಸಂಖ್ಯೆಗಳ ವಿವರ

- **ಬೆಂಗಳೂರು ನಗರ ಜಿಲ್ಲೆ:** ದಕ್ಷಿಣ ವೃತ್ತ : 8277884011, ಪಶ್ಚಿಮ ವೃತ್ತ: 8277884012, ಪೂರ್ವ ವೃತ್ತ-:8277884013 , ಉತ್ತರ ವೃತ್ತ :8277884014,
- **ಕೋಲಾರ ಜಿಲ್ಲೆ** : 8277884015, **ಚಿಕ್ಕಬಳ್ಳಾಪುರ ಜಿಲ್ಲೆ** : 8277884016, **ಬೆಂಗಳೂರು ಗ್ರಾಮಾಂತರ ಜಿಲ್ಲೆ** : 8277884017, ★**ರಾಮನಗರ ಜಿಲ್ಲೆ** : 8277884018, **ತುಮಕೂರು ಜಿಲ್ಲೆ** : 8277884019, **ಚಿತ್ರದರ್ಗ ಜಿಲ್ಲೆ** : 8277884020, **ಮತ್ತು ದಾವಣಗೆರೆ ಜಿಲ್ಲೆ** : 8277884021

ಅಕ್ಕ ಸಮ್ಮೇಳನಕ್ಕೆ ರಿಷಬ್ ಶೆಟ್ಟಿ ರಾಯಭಾರಿ

ಬೆಂಗಳೂರು: ಅಮೆರಿಕಾದಲ್ಲಿರುವ ಕನ್ನಡಿಗರ ಅಕ್ಕ ಸಂಸ್ಥೆಯ 25ನೇ ವರ್ಷದ ರಜತ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ಅಕ್ಕ ವಿಶ್ವ ಕನ್ನಡ ಸಮ್ಮೇಳನ - ಫಿಲಡೆಲ್ಫಿಯಾ 2026 ಐತಿಹಾಸಿಕ ಮಹೋತ್ಸವಕ್ಕೆ, ಕನ್ನಡ ಚಿತ್ರರಂಗದ ನಟ, ನಿರ್ದೇಶಕ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ರಿಷಬ್ ಶೆಟ್ಟಿ ಅವರು ಸಾಂಸ್ಕೃತಿಕ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಸೆ. 4 ರಿಂದ 6ರವರೆಗೆ ನಡೆಯಲಿರುವ ಅಕ್ಕ ವಿಶ್ವ ಕನ್ನಡ ಸಮ್ಮೇಳನ - ಫಿಡೆಲ್ಫಿಯಾ 2026ಕ್ಕೆ ರಿಷಬ್ ಶೆಟ್ಟಿ ಅವರು ಸಾಂಸ್ಕೃತಿಕ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ವಿಶ್ವದಾದ್ಯಂತ ಕನ್ನಡದ ಹೆಮ್ಮೆ ಹೆಚ್ಚಿಸಿದ ಸಾಧನೆಗಳ ಮೂಲಕ ರಿಷಬ್ ಶೆಟ್ಟಿ ಅವರು ಕನ್ನಡಿಗರ ಹೃದಯದಲ್ಲಿ ವಿಶೇಷ ಸ್ಥಾನ ಪಡೆದಿದ್ದಾರೆ.

ಪದ್ಮಶ್ರೀ ಪುರಸ್ಕೃತೆ ಡಾ.ಎಸ್.ಜಿ.ಸುಶೀಲಮ್ಮ ಹೇಳಿಕೆ

ಸ್ತ್ರೀ ಎಂಬುದು ಕೇವಲ ಹೆಸರಲ್ಲ, ಅದಮ್ಯ ಶಕ್ತಿ

ಬೆಂಗಳೂರು: ಸ್ತ್ರೀ ಎಂಬುದು ಕೇವಲ ಹೆಸರಲ್ಲ, ಅದೊಂದು ಅದಮ್ಯ ಶಕ್ತಿ. ಕುಟುಂಬದ ಸುಖ-ಶಾಂತಿ ಹಾಗೂ ಸಮಾಜದ ಏಳಿಗೆಯಲ್ಲಿ ಮಹಿಳೆಯರ ಪಾತ್ರ ಅನನ್ಯವಾದುದು ಎಂದು ಪದ್ಮಶ್ರೀ ಪುರಸ್ಕೃತೆ ಸಾಮಾಜಿಕ ಕಾರ್ಯಕರ್ತೆ ಡಾ.ಎಸ್.ಜಿ.ಸುಶೀಲಮ್ಮ ಹೇಳಿದರು.

ನಗರದ ಕಾಚರಕನಹಳ್ಳಿಯ ಸಾಯಿ ಕಲ್ಯಾಣ ಮಂಟಪದಲ್ಲಿ ಕೇಶವ ಸೇವಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಮಾತೃ ಸಂಗಮ 2026 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಮೆರಿಕಾದಲ್ಲಿ ಮಹಿಳೆಯರು ಸಮಾನ ವೇತನ ಮತ್ತು ಹಕ್ಕುಗಳಿಗಾಗಿ ನಡೆಸಿದ ಹೋರಾಟದ ಫಲವಾಗಿ ಜಗತ್ತಿನಾದ್ಯಂತ ಮಹಿಳಾ ದಿನವಾಗಿ ಆಚರಿಸಲಾಗುತ್ತಿದೆ. ಮಹಿಳೆಯರು ಶಿಕ್ಷಣ, ರಾಜಕೀಯ ಮತ್ತು ಆಡಳಿತ ರಂಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿಕೊಳ್ಳಬೇಕು. ಶೇ. 30ರಷ್ಟು ಮೀಸಲಾತಿ ಜಾರಿಯಲ್ಲಿದ್ದರೂ, ಇನ್ನೂ ಹೆಚ್ಚಿನ ಸಹಭಾಗಿತ್ವದ ಅಗತ್ಯವಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಕುಟುಂಬಗಳಲ್ಲಿ ಸಣ್ಣಪುಟ್ಟ ಕಾರಣಗಳಿಗೆ ಕಲಹಗಳು ಉಂಟಾಗುತ್ತಿವೆ. ಇವುಗಳನ್ನು ಹೋಗಲಾಡಿಸಲು ಕುಟುಂಬ ಆಪ್ತ ಸಮಾಲೋಚನೆ ಅತ್ಯಗತ್ಯ. ಸಂಸಾರದಲ್ಲಿ ನಾನು ಹೆಚ್ಚು, ನೀನು ಹೆಚ್ಚು ಎಂಬ ಅಹಂ ಬಿಟ್ಟು, ಅನ್ಯೋನ್ಯತೆಯಿಂದ ಬಾಳಿದಾಗ ಮಾತ್ರ ನೆಮ್ಮದಿ ಸಾಧ್ಯ. ಈ ನಿಟ್ಟಿನಲ್ಲಿ ಮಹಿಳಾ ಮುಖಂಡರು ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಬೇಕು ಎಂದು ಕರೆ ನೀಡಿದರು.



ಶುದ್ಧ ಭಕ್ತಿ ಮತ್ತು ನಂಬಿಕೆಯಿಂದ ಭಗವಂತನನ್ನು ಪ್ರಾರ್ಥಿಸಿದರೆಕಷ್ಟಗಳು ದೂರವಾಗುತ್ತವೆ. ಮೌನವಾಗಿ ದೇವನನ್ನು ಸ್ಮರಿಸುವುದು ಆರೋಗ್ಯ ಮತ್ತು ಮಾನಸಿಕ ನೆಮ್ಮದಿಗೆ ಪೂರಕ ಎಂದು ಹೇಳಿದರು.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೆರೆಮರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ ಸೇವೇ ನನ್ನ ಧರ್ಮ - ಸೇವಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಂಗನವಾಡಿ ಕಾರ್ಯಕರ್ತೆಯರು, ಪೌರ ಕಾರ್ಮಿಕರು, ಪೋಸ್ಟ್ ವುಮನ್ ಹಾಗೂ ಬಿಸಿ ಊಟದ ಕಾರ್ಯಕರ್ತೆಯರು ಈ ಅಭಿನಂದನೆಗೆ ಪಾತ್ರರಾದರು. ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಜವಾಬ್ದಾರಿ ಮತ್ತು ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಆರ್ಥಿಕ ಸಬಲೀಕರಣದ ಕುರಿತು ವಿಶೇಷ ಮಾರ್ಗದರ್ಶನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಕೇಶವ ಸೇವಾ ಸಮಿತಿಯ ಟ್ರಸ್ಟಿ ಭಾರತಿ ರೆಡ್ಡಿ, ಸಂಸ್ಥೆಯ ನಿರ್ದೇಶಕಿ ಪರಿಮಳಾ ಮೂರ್ತಿ, ಕರ್ನಾಟಕ ದಕ್ಷಿಣ ಪ್ರಾಂತದ ಕಾರ್ಯದರ್ಶಿ ಡಾ. ಜಯಪ್ರಕಾಶ್, ಬಿಂದು ವೇಣುಗೋಪಾಲ್ ಹಾಗೂ ರಾಷ್ಟ್ರ ಸೇವಿಕಾ ಸಮಿತಿಯ ವಸುಧಾ ಶ್ರೀನಿವಾಸ್ ಉಪಸ್ಥಿತರಿದ್ದರು.

ಪೋಷಕರು ತಮ್ಮ ಮಕ್ಕಳ ಬಗ್ಗೆ ಜಾಗೃತಿ ವಹಿಸಬೇಕು: ಕುಲಪತಿ ಡಾ.ಭಗವಾನ್

ಮಾದಕದ್ರವ್ಯದಿಂದ ಯುವ ಸಮೂಹ ಹಾಳು

ಕೆಂಗೇರಿ: ಸಮಾಜದಲ್ಲಿ ಯುವ ಸಮೂಹ ಮಾದಕ ದ್ರವ್ಯದಿಂದ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿವೆ. ಪೋಷಕರು ತಮ್ಮ ಮಕ್ಕಳ ಬಗ್ಗೆ ಜಾಗೃತಿ ವಹಿಸಬೇಕಾಗಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಹೇಳಿದರು.

ಮೈಸೂರು-ಬೆಂಗಳೂರು ಮುಖ್ಯ ರಸ್ತೆಯಲ್ಲಿರುವ ರಾಜರಾಜೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಗಳ , ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ಮತ್ತು ದಿಶಾ ಬೋದ್ ಪ್ರತಿಷ್ಠಾನದ ಸಹಯೋಗದಲ್ಲಿ ಆಯೋಜಿಸಿದ್ದ, ನಾಶ ಮುಕ್ತ ಭಾರತ ಅಭಿಯಾನ ರೇಸಿಂಗ್ ಡೇ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಮಾದಕವಸ್ತು ಮುಕ್ತ ಸಮಾಜ ನಿರ್ಮಿಸಲು ಶಾಲಾ ಕಾಲೇಜು ಗಳಲ್ಲಿ ಜಾಗೃತಿ ಅಭಿಯಾನ ಮೂಡಿಸುವ ನಿಟ್ಟಿನಲ್ಲಿ ಮಾದಕ ವಸ್ತುಗಳ ಮುಕ್ತ ಭಾರತವಾಗಿ ನಿರ್ಮಾಣ ಮಾಡಲು ಸಾಧ್ಯ ಎಂದು ತಿಳಿಸಿದರು.

ಭಾರತದ ನಾರ್ಕೋಟಿಕ್ಸ್ ನಿಯಂತ್ರಣ ವಲಯದ ನಿರ್ದೇಶಕ ಸಚಿನ್ ಘೋರ್ಪಡೆ ಮಾತನಾಡಿ, ಗಾಂಜಾ ಅಫೀಮು ನಂತಹ ರಾಸಾಯನಿಕ ವಸ್ತುಗಳನ್ನು ಉಪಯೋಗಿ ಸುವ ಮಾದಕ ವ್ಯಸನಿಗಳು ದೇಶದಲ್ಲಿ ದಿನೇ ದಿನೇ ಹೆಚ್ಚಾ ಗುತ್ತಿದ್ದಾರೆ. ಯುವಕರು, ವಿದ್ಯಾರ್ಥಿಗಳು ಮಾದಕ ದ್ರವ್ಯಕ್ಕೆ ದಾಸರಾಗಿ ತಮ್ಮ ಭವಿಷ್ಯವನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ತಮ್ಮ ಕುಟುಂಬದ ಅಧೋ ಗತಿಗೆ ಕಾರಣರಾಗುತ್ತಿದ್ದಾರೆ. ಆದ್ದರಿಂದ ಮಾದಕ ವಸ್ತುಗಳ ಸೇವನೆ ಅನಾರೋಗ್ಯಕ್ಕೆ ಹಾನಿಕರ ತಮ್ಮ ಪ್ರಾಣದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಜಾಗೃತಿ ಅಭಿಯಾನ ಮಾಡುವ ಮೂಲಕ ಎಚ್ಚರಿಸುವ ಕೆಲಸ ಆಗಬೇಕು ಎಂದು ತಿಳಿಸಿದರು.



ಭಾರತ ಸರ್ಕಾರದ ಸಾರ್ವಜನಿಕ ಅಭಿಯೋಜಕ ಮಧು ಎನ್.ರಾವ್, ಡಾ. ವಿಜಯನಂದ್, ಸಿಇಒ ಸಿ.ಎನ್. ಸೀತಾರಾಮ್, ಡಾ.ಬಿ.ಸತ್ಯಮೂರ್ತಿ, ಡಾ.ನವೀನ್, ಪ್ರಾಂಶುಪಾಲ ಡಾ.ಬಸವರಾಜ್ ಬಂಡಾರೆ, ಡಾ,ಜಗದೀಶ್, ಡಾ.ನಳಿನಿ, ಡಾ.ಲತಾ, ಡಾ. ಪ್ರವೀಣ್ ಕುಮಾರ್, ಡಾ.ಟಿ. ಬಾಲ ಸುಬ್ರಹ್ಮಣಿಯನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇರುವ ಶೌಚಾಲಯದ ಬಳಿಯೇ ಮತ್ತೆ ನಿರ್ಮಾಣ | ನೀರಿನ ವ್ಯವಸ್ಥೆ ಇಲ್ಲದೆ ನಾಥ

ಜಿಬಿಎ ನಡೆಗೆ ಸಾರ್ವಜನಿಕರ ಆಕ್ರೋಶ



ಮಹಿಳೆಯರ ಸುರಕ್ಷತೆಯ ಬಗ್ಗೆ ಆತಂಕ

ಇತ್ತೀಚೆಗೆ ಬಿಎನ್‌ಪಿ ಪಕ್ಷ ನಗರದ ಶೌಚಾಲಯಗಳ ಆಡಿಟ್ ವರದಿಯನ್ನು ಬಿಡುಗಡೆ ಮಾಡಿತ್ತು ಅದರ ಪ್ರಕಾರ ನಗರದಲ್ಲಿ ಶೇ. 45ರಷ್ಟು ಶೌಚಾಲಯಗಳು ಮಾತ್ರ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ, ಶೇ.100ರಷ್ಟು ಶೌಚಾಲಯಗಳು ಟ್ಯಾಂಕರ್ ನೀರಿನ ಮೇಲೆ ಅವಲಂಬಿತವಾಗಿವೆ. ಶೇ. 82ರಷ್ಟು ಕಡೆಗಳಲ್ಲಿ ರಸೀದಿ ಇಲ್ಲದೆ ಹಣ ವಸೂಲಿ ಮಾಡಲಾಗುತ್ತಿದೆ ಮತ್ತು ಶೇ. 71ರಷ್ಟು ಸೌಲಭ್ಯಗಳಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಆತಂಕಗಳಿವೆ ಎಂದು ತಿಳಿಸಿತ್ತು. ಸಾರ್ವಜನಿಕ ಶೌಚಾಲಯ ಆಡಿಟ್ ನ ಪ್ರಮುಖ ಅಂಶಗಳನ್ನು ಜಿಬಿಎ ಮುಖ್ಯ ಆಯುಕ್ತರಿಗೂ ಹಸ್ತಾಂತರಿಸಿತ್ತು. ಈ ವರದಿಯಲ್ಲಿ ಬೆಂಗಳೂರಿನ 21 ವಾರ್ಡ್‌ಗ 38 ಸಾರ್ವಜನಿಕ ಶೌಚಾಲಯಗಳ ಮಾಹಿತಿ ಒಳಗೊಂಡಿದ್ದು, ಹೆಚ್ಚಿನ ಶೌಚಾಲಯಗಳು ತಾಂತ್ರಿಕವಾಗಿ ತೆರೆದಿದ್ದರೂ, ಅವುಗಳ ಬಳಕೆಯ ಯೋಗ್ಯತೆ, ಘನತೆ ಮತ್ತು ನಾಗರಿಕರ ಸುರಕ್ಷತೆಯ ವಿಷಯದಲ್ಲಿ ಪರಿಸ್ಥಿತಿ ಆತಂಕಕಾರಿಯಾಗಿದೆ ಎಂದು ವರದಿಯು ತಿಳಿಸಿದೆ.

◆ **ಬೆಂಗಳೂರು:** ನಗರದಲ್ಲಿ ಇರುವ ಹಲವು ಶೌಚಾಲಯಗಳು ನಿರ್ವಹಣೆ ಇಲ್ಲದೆ ಪಾಳುಬಿದ್ದಿದೆ. ಮತ್ತೊಂದೆಡೆ ಇರುವ ಶೌಚಾಲಯದ ಬಳಿಯ ಜಾಗದಲ್ಲಿ ಅನಗತ್ಯವಾಗಿ ಹೊಸ ಶೌಚಾಲಯಗಳನ್ನು ನಿರ್ಮಿಸಲು ಮುಂದಾಗಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ನಡೆಗೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೇಕ್ರಿ ಸರ್ಕಲ್ ಸಮೀಪದ ಐತಿಹಾಸಿಕ ಕೆಂಪೇಗೌಡ ಟವರ್ ಪಾರ್ಕ್‌ನಲ್ಲಿ ಈಗಾಗಲೇ ಎರಡು ಶೌಚಾಲಯಗಳಿವೆ. ಆದರೆ, ಇವುಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದ್ದು, ಸರಿಯಾದ ನೀರಿನ ವ್ಯವಸ್ಥೆ ಇಲ್ಲದೆ ಗಬ್ಬು ನಾರುತ್ತಿವೆ. ಹೀಗಿದ್ದರೂ, ಜಿಬಿಎ ಇರುವ ಶೌಚಾಲಯಗಳನ್ನು ದುರಸ್ತಿ ಮಾಡುವ ಬದಲು, ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಹೊಸ ಶೌಚಾಲಯಗಳನ್ನು ನಿರ್ಮಿಸುವ ಬಗ್ಗೆ ಬ್ಯಾನರ್ ಹಾಕಿರುವ ಬಗ್ಗೆ ಸ್ಥಳೀಯ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ್ದಾರೆ.

ಇನ್ನೊಂದೆಡೆ, ತಲಘಟ್ಟಪುರ ಕೆರೆಯ ಸೌಂದರ್ಯ ಸವಿಯಲು ಬರುವ ಜನರಿಗೆ ಸಿಮೆಂಟ್, ಕಾಂಕ್ರೀಟ್ ಕಾಟ ಶುರುವಾಗಿದೆ ಎಂದು ಸ್ಥಳೀಯರೊಬ್ಬರು ಆರೋಪಿಸಿದ್ದಾರೆ. ತಲಘಟ್ಟಪುರ ಕೆರೆಯ ಬಳಿ ಸುಮಾರು 56 ಲಕ್ಷ ರೂ. ವೆಚ್ಚದ ಟೆಂಡರ್ ಮೂಲಕ ಶೌಚಾಲಯ, ಸ್ನಾನದ ಗೃಹ, ಮಲ್ಟಿಪಲ್ ಸಿಂಕ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಅತ್ಯಲ್ಪ ಸಂಖ್ಯೆಯ ಜನ ಬರುವ ಈ ಜಾಗದಲ್ಲಿ ಸ್ನಾನದ ಗೃಹ, ಮಲ್ಟಿಪಲ್ ಸಿಂಕ್‌ಗಳ ಅಗತ್ಯವಿರಲಿಲ್ಲ ಎಂದು ಸ್ಥಳೀಯ ಅಭಿಪ್ರಾಯವಾಗಿದೆ.

ತಲಘಟ್ಟಪುರ ಕೆರೆಯ ಬಳಿ ಶೌಚಾಲಯ ನಿರ್ಮಾಣಕ್ಕಾಗಿ ಹಸಿರು ಮರಗಳನ್ನು ಕಡಿಯಲಾಗಿದೆ. ಅಷ್ಟೇ ಅಲ್ಲದೆ, ಗುತ್ತಿಗೆದಾರರು ನಿರ್ಮಾಣದ ನಂತರ ಉಳಿದ ಪ್ಲಾಸ್ಟಿಕ್ ಪಟ್ಟಿಗಳು ಮತ್ತು ಕಟ್ಟಡದ ಅವಶೇಷಗಳನ್ನು ಕೆರೆಯ ಪಕ್ಕದಲ್ಲೇ ರಾಶಿ ಹಾಕಿದ್ದಾರೆ. ಇವು ಮಣ್ಣಿನಲ್ಲಿ ಬೆರೆತು ಮೈಕ್ರೋ ಪ್ಲಾಸ್ಟಿಕ್ ಆಗಿ ಕೆರೆ ಸೇರುತ್ತಿದ್ದು, ಜಲಚರಗಳ ಜೀವಕ್ಕೆ ಕಂಟಕ ತಂದೊಡ್ಡುತ್ತಿವೆ ಎಂದು ಹಲವರು ಆರೋಪಿಸಿದ್ದಾರೆ.

ಇತ್ತೀಚೆಗೆ ಪ್ರತೀ ಪಾರ್ಕ್‌ನಲ್ಲೂ ಶೌಚಾಲಯ ನಿರ್ಮಿಸುವಂತೆ ಜಿಬಿಎ ಮುಖ್ಯ ಆಯುಕ್ತರು ಸೂಚಿಸಿದ್ದಾರೆ. ಆದರೆ ಹಲವು ಪಾರ್ಕ್‌ಗಳಲ್ಲಿ ಶೌಚಾಲಯವಿದ್ದು, ಅದನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಸಾಕೆಂದು ನಗರದ ಜನತೆ ಹೇಳುತ್ತಿದ್ದಾರೆ.

ಪೊಲೀಸರ ಸಮ್ಮುಖದಲ್ಲಿ ಶಾಂತಿ ಸಂಧಾನ: ಪ್ರಾರ್ಥನೆಗೆ ಅನುವು

◆ **ಪಿರಿಯಾಪಟ್ಟಣ:** ರಂಜಾನ್ ಹಬ್ಬದ ದಿನದಂದೆ ಎರಡು ಮುಸ್ಲಿಂ ಗುಂಪುಗಳ ನಡುವೆ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವ ವಿಷಯವಾಗಿ ವೈಮನಸ್ಸು ತಲೆದೋರಿ ಆಡಳಿತಾಧಿಕಾರಿ ಮಸೀದಿಗೆ ಬೀಗ ಜಡಿದು ಪೊಲೀಸರ ಸಮ್ಮುಖದಲ್ಲಿ ಶಾಂತಿ ಸಂಧಾನ ನಡೆದ ಘಟನೆ ನಡೆದಿದೆ.

ಪಟ್ಟಣದ ಮೇದರ್ ಬ್ಲಾಕಿನಲ್ಲಿರುವ ಅಹಲೆ ಸುನ್ನತ್ ವಲ್ ಜಮತ್ ಮಸೀದಿಯಲ್ಲಿ ಸೂಫಿ ಮತ್ತು ತಗ್ಲಿಬ್ ಎಂಬ ಎರಡು ಮುಸ್ಲಿಂ ಪಂಗಡಗಳ ನಡುವೆ ಪ್ರತಿದಿನ ನಮಾಜ್ ಹಾಗೂ ಶುಕ್ರವಾರದ ನಮಾಜ್ ಸೇರಿದಂತೆ ಹದೀಸ್ ಮತ್ತು ಸಲಾಮ್ ಓದುವ ವಿಷಯವಾಗಿ ಗೊಂದಲ ಉಂಟಾಗಿ ಈ ಪ್ರಕರಣವು ನ್ಯಾಯಾಲಯ ಮೆಟ್ಟಿಲೇರಿತ್ತು. ಈ ವಿಷಯವಾಗಿ ಮೈಸೂರು ಜಿಲ್ಲಾಧಿಕಾರಿಗಳು ಈ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರ ಶಾಂತಿ ಮತ್ತು ನೆಮ್ಮದಿಗೆ ಭಂಗ ಉಂಟಾಗದಂತೆ ಪಿರಿಯಾಪಟ್ಟಣ ತಾಲೂಕು ದಂಡಾಧಿಕಾರಿಗಳು ಸೆಕ್ಷನ್ 107 ರ ಅಡಿಯಲ್ಲಿ ಕ್ರಮ ಜರುಗಿಸಿ ಶಾಂತಿ ಮತ್ತು ನೆಮ್ಮದಿಗೆ ಭಂಗ ಉಂಟುಮಾಡದಂತೆ ಸೂಕ್ತ ಮುಚ್ಚಳಿಕೆ ಬಾಂಡ್ ಪಡೆದುಕೊಳ್ಳುವಂತೆ ಆದೇಶ ಮಾಡಿ



ಈದ್ ಮಿಲಾದ್ ಹಬ್ಬದ ಅಂಗವಾಗಿ ಗಲಾಟೆ ಮಾಡದಂತೆ ಎಲ್ಲಾ ಮುಸ್ಲಿಂ ಮುಖಂಡರನ್ನು ಕರೆಯಿಸಿ ಶಾಂತಿ ಸಭೆ ನಡೆಸಿದ್ದರು. ಇದರ ನಡುವೆ ಶನಿವಾರ ರಂಜಾನ್ ಹಬ್ಬದ ಅಂಗವಾಗಿ ಮಸೀದಿಯಲ್ಲಿ ಪ್ರಾರ್ಥನೆ ಮಾಡಬೇಕು ಎಂದು ಒಂದು ಗುಂಪು ಹಾಗೆ ಮಸೀದಿಯಲ್ಲಿ ಪ್ರಾರ್ಥನೆಗೆ ಅವಕಾಶ ನೀಡಬಾರದು ಎಂದು ಮತ್ತೊಂದು ಗುಂಪು ಮಸೀದಿಯ ಮುಂಭಾಗ ಜಮಾವಣೆಗೊಂಡು ಪ್ರತಿಭಟನೆಗೆ ಮುಂದಾದವು. ಇದಕ್ಕೂ ಮೊದಲು ಮಸೀದಿಯ ಆಡಳಿತಾಧಿಕಾರಿ ಸ?ಯದ್ ಮುದಾಸೀರ್ ಮಸೀದಿಗೆ ಭೀಗ ಜಡಿದು ಹೊರ ನಡೆದರು ಇದರಿಂದ ರೊಚ್ಚಿಗೆದ್ದ ಒಂದು ಗುಂಪು ನಮಗೆ ಮಸೀದಿಯಲ್ಲೇ ಪ್ರಾರ್ಥನೆ ನಡೆಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಮಸೀದಿ ಗೇಟ್ ಬಳಿ ಪ್ರತಿಭಟನೆಗಿಳಿದರು ಸ್ಥಳಕ್ಕೆ ಬಂದ ಡಿವೈಎಸ್ಪಿ ರವಿ, ಪೊಲೀಸ್ ಉಪ ನಿರೀಕ್ಷಕರಾದ ಗೋವಿಂದರಾಜು, ದೀಪಕ್, ಪ್ರಸನ್ನಕುಮಾರ್ ರವರ ನೇತೃತ್ವದಲ್ಲಿ ಬೆಳಗ್ಗೆಯಿಂದ ಮದ್ಯಾಹ್ನ 3 ಗಂಟೆವರೆಗೆ ಎರಡು ಗುಂಪುಗಳ ನಡುವೆ ಸಂಧಾನ ನಡೆಸಿ ಶಾಂತಿ ಸಭೆ ನಡೆಸಿದ ನಂತರ ಘಟನೆ ಸುಖಾಂತ್ಯಗೊಂಡು ಪ್ರಾರ್ಥನೆ ಮಾಡಲು ಅನುವು ಮಾಡಿಕೊಡಲಾಯಿತು. ಈ ಸಂದರ್ಭದಲ್ಲಿ ಪೊಲೀಸ್ ಸಬ್‌ಇನ್ಸ್ಪೆಕ್ಟರ್ ಜಗದೀಶ್, ಮಸೀದಿ ಮಾಜಿ ಕಾರ್ಯದರ್ಶಿ ಅಕ್ಮಲ್, ಎರಡು ಗುಂಪುಗಳ ಮುಖಂಡರಾದ ಅಮಾನ್ ಜಾಕಿರ್ ಅಹಮದ್ ಪರ್ವೇಜ್, ಗಾಫರ್ ಅಮದ್, ಸಯದ್ ಇಷ್ರಾಫ್, ಮುಜಮಿಲ್ ಪಾಷಾ, ಸಯದ್ ಸಾಧಿಕ್, ನೌಷದ್, ಅಬ್ದುಲ್ ಸಿರಾಜ್, ಅಹಮದ್, ಸಮ್ಮು ಸುಹೇಲ್ ಅಹಮದ್, ಮುಜ್ಜ್, ಆರಿಫ್ ಅಮ್ಮು ಜೈನ್ ಅಪಾನ್ ಜಾವೇದ್ ಇರ್ಫಾನ್ ರಫಿ ಮಹಮದ್ ಜಬಿತಾಜ್, ನೌಫೀ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೊಸ ಕಸ್ಟಮರ್ ಅಪ್ಲಿಕೇಶನ್ ಸೆಂಟರ್ ಆರಂಭಿಸಿದ ಹೆನ್ಕೆಲ್

◆ **ಬೆಂಗಳೂರು:** ಹೆನ್ಕೆಲ್ ಸಂಸ್ಥೆಯು ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ಎಲೆಕ್ಟ್ರಾನಿಕ್ಸ್ ಉತ್ಪಾದನಾ ವಲಯಕ್ಕೆ ನೆರವಾಗುವ ನಿಟ್ಟಿನಲ್ಲಿ, ತನ್ನ ಹೊಸ ಕಸ್ಟಮರ್ ಅಪ್ಲಿಕೇಶನ್ ಸೆಂಟರ್‌ಅನ್ನು ಆರಂಭಿಸಿದೆ. ಈ ನೂತನ ಘಟಕವು ಸಹಯೋಗದ ಆವಿಷ್ಕಾರ ಕೇಂದ್ರವಾಗಿ (ಕೊಲ್ಯಾಬೊರೇಟಿವ್ ಇನ್ನೋವೇಷನ್ ಹಬ್) ಕಾರ್ಯನಿರ್ವಹಿಸಲಿದ್ದು, ಇಲ್ಲಿ ಹೆನ್ಕೆಲ್ ತಜ್ಞರು ಮತ್ತು ಗ್ರಾಹಕರು ಸೇರಿ ಮುಂದಿನ ಪೀಳಿಗೆಯ ಎಲೆಕ್ಟ್ರಾನಿಕ್ಸ್ ಉತ್ಪನ್ನ ಉತ್ಪಾದನೆಗಾಗಿ ಸುಧಾರಿತ ಅದೆಸಿವ್ ಮತ್ತು ಶಾಖ ನಿರ್ವಹಣಾ ಉತ್ಪನ್ನಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸಿ, ಪರೀಕ್ಷಿಸಬಹುದು ಮತ್ತು ಮೌಲ್ಯೀಕರಿಸಬಹುದಾಗಿದೆ. ಈ ಹೊಸ ಕೇಂದ್ರವು ಭಾರತ, ಮಧ್ಯಪ್ರಾಚ್ಯ ಮತ್ತು ಆಫ್ರಿಕಾ (ಐಎಂಇಎ) ವಲಯದಲ್ಲಿ ಹೆನ್ಕೆಲ್ ಸಂಸ್ಥೆಯ ಅತ್ಯಂತ ಪ್ರಮುಖ ಅಪ್ಲಿಕೇಶನ್ ಎಂಜಿನಿಯರಿಂಗ್ ಘಟಕಗಳಲ್ಲಿ ಒಂದಾಗಿದ್ದು, ಇದನ್ನು ಭಾರತದ ಎಲೆಕ್ಟ್ರಾನಿಕ್ಸ್ ಮೌಲ್ಯವರ್ಧಿತ ಸರಣಿಯಲ್ಲಿನ ಒಂದು ಪ್ರಮುಖ ಕೊರತೆಯನ್ನು ನೀಗಿಸಲು ವಿನ್ಯಾಸಗೊಳಿಸಲಾಗಿದೆ. ಆ ಕೊರತೆ ಏನೆಂದರೆ, ಈವರೆಗೆ ಸುಧಾರಿತ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮತ್ತು ಅವುಗಳ ಗುಣಮಟ್ಟ ಪರೀಕ್ಷಿಸಲು ಉತ್ಪನ್ನಗಳನ್ನು ವಿದೇಶಗಳಿಗೆ ಕಳುಹಿಸಬೇಕಿತ್ತು. ಇದೀಗ ಈ ಹೊಸ ಮೂಲಸೌಕರ್ಯವು ಈ ಪ್ರಕ್ರಿಯೆಗೆ ತಗಲುವ ಸಮಯಕ್ಕೆ ಮತ್ತು ವೆಚ್ಚವನ್ನು ಉಳಿಸಿ, ತಯಾರಕರು ಸ್ಥಳೀಯವಾಗಿಯೇ ವಿಶ್ವದರ್ಜೆಯ ಪರೀಕ್ಷೆ ಮತ್ತು ಮೌಲ್ಯೀಕರಣ ನಡೆಸಲು ಅನುವು ಮಾಡಿಕೊಡುತ್ತದೆ. ಕಳೆದ ದಶಕದಲ್ಲಿ ಭಾರತದ ಎಲೆಕ್ಟ್ರಾನಿಕ್ಸ್ ಉತ್ಪಾದನಾ ವಲಯವು ಸುಮಾರು ಆರು ಪಟ್ಟು ಬೆಳೆದಿದೆ. ಡೇಟಾ ಸೆಂಟರ್ ಮತ್ತು ಎಐ ಕಂಪ್ಯೂಟಿಂಗ್ ಮೂಲಸೌಕರ್ಯಗಳ ಕ್ಷಿಪ್ರ ನಿರ್ಮಾಣ, 5ಜಿ ಮತ್ತು ಫೈಬರ್ ನೆಟ್ ವರ್ಕ್ ವಿಸ್ತರಣೆ, ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ವ್ಯವಸ್ಥೆಗಳು, ಕೈಗಾರಿಕಾ ಆಟೊಮೇಷನ್ ಹಾಗೂ ಸುಧಾರಿತ ವೈದ್ಯಕೀಯ ಉಪಕರಣಗಳಿಂದಾಗಿ ಈ ವೇಗವು ಮತ್ತಷ್ಟು ಜಾಸ್ತಿಯಾಗುತ್ತಿದೆ. ಈ ಪ್ರತಿಯೊಂದು ವಲಯಗಳೂ ಉನ್ನತ ದರ್ಜೆಯ ಅದೆಸಿವ್, ಶಾಖ ನಿರ್ವಹಣಾ ಸಾಮಗ್ರಿಗಳು ಮತ್ತು ರಕ್ಷಣಾತ್ಮಕ ಲೇಪನಗಳ (ಪ್ರೊಟೆಕ್ಟಿವ್ ಕೋಟಿಂಗ್ಸ್) ಮೇಲೆ ಬಹಳವಾಗಿ ಅವಲಂಬಿತವಾಗಿವೆ.

ಪುರಸಭೆ ಬಜೆಟ್ ಪೂರ್ವಭಾವಿ ಸಭೆ



◆ **ತಿ.ನರಸೀಪುರ:** ಪಟ್ಟಣದ ಪುರಸಭೆ 2026-27ನೇ ಸಾಲಿನ ಬಜೆಟ್ ಪೂರ್ವಭಾವಿ ಸಭೆಯನ್ನು ಪುರಸಭೆ ಮುಖ್ಯಾಧಿಕಾರಿ ಸಿ.ಶ್ರೀನಿವಾಸ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪುರಸಭೆ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಹಲವು ಸಂಘ - ಸಂಸ್ಥೆಗಳು,ಸಂಘಟನೆಗಳ ಮುಖಂಡರು,ಪುರಸಭೆ ಕೆಲ ವಾರ್ಡ್‌ಗಳ ಜನರು ಭಾಗವಹಿಸಿ ಮುಂಬರುವ ಬಜೆಟ್‌ನಲ್ಲಿ ಬಹುಮುಖ್ಯ ಕೆಲಸಗಳಿಗೆ ಅನುದಾನವನ್ನು ಮೀಸಲಿರಿಸುವಂತೆ ಸಲಹೆ ನೀಡಿದರು. ದಸಂಸ ಮುಖಂಡ ಆಲಗೂಡು ಶಿವಕುಮಾರ್ ಮಾತನಾಡಿ,ಪಟ್ಟಣ ಸಂಪರ್ಕಿಸುವ ನಾಲ್ಕು ರಸ್ತೆಗಳಿಗೂ ಸ್ವಾಗತ ಕಾಮಾನು ನಿರ್ಮಿಸುವಂತೆ ಬಹಳಷ್ಟು ಬಾರಿ ಚರ್ಚೆ ಆಗಿದೆ. ಆದರೆ, ಈ ಯಾರೂ ಕೆಲಸವನ್ನು ಮಾಡಿಲ್ಲ. ಬಂಗಾರಪ್ಪ ಬಡಾವಣೆಯಲ್ಲಿ ಆರ್ಥಿಕ ಸ್ಥಿತಿವಂತರಿಗೆ ನಿವೇಶನ ಹಂಚಲಾಗುತ್ತಿದೆ ಎಂಬ ಮಾಹಿತಿಯಿದ್ದು,ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ ಪಟ್ಟಣದ ವ್ಯಾಪ್ತಿಯ ಬೈರಾಪುರ, ಗೋಪಾಲಪುರ ಮತ್ತು ಆಲಗೂಡು ಸೇರಿದಂತೆ ಇತರೆ ಕಡೆ ವಾಸಿಸುತ್ತಿರುವ ಬಡ ವಸತಿ ಮತ್ತು ನಿವೇಶನ ರಹಿತರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಗೋಪಾಲಪುರ ಎಂ.ಎಸ್.ರವೀಂದ್ರ ಮಾತನಾಡಿ, ಪುರಸಭೆಗೆ ಸೇರಿದ ವಾಣಿಜ್ಯ ಮಳಿಗೆಗಳ ಬಾಡಿಗೆ 2 ಕೋಟಿಗೂ ಹೆಚ್ಚು ಬಾಕಿಯಿದ್ದು,ಅಲ್ಲದೆ ಹಲವು ವರ್ಷಗಳಿಂದ ಮರು ಟೆಂಡರ್ ಕರೆದಿಲ್ಲ. ಹಾಗಾಗಿ ಪುರಸಭೆ ವಾಣಿಜ್ಯ ಮಳಿಗೆಗಳ ಬಾಕಿ ವಸೂಲಿ ಮಾಡಿದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಮತ್ತಷ್ಟು ಅಭಿವೃದ್ಧಿ ಆಗಲಿದೆ ಎಂದರು. ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿ, ಎಸ್ ಎಫ್ ಸಿ ಯೋಜನೆಯಡಿಯಲ್ಲಿ ಲಿಂಕ್ ರಸ್ತೆಗೆ ಎರೆಡರಡು ಬಾರಿ ಭೂಮಿ ಪೂಜೆ ನಡೆಸಲಾಗಿದೆ.

ಬಹುಮುಖ್ಯ ಕೆಲಸಗಳಿಗೆ ಅನುದಾನ ಮೀಸಲಿಸಲು ಸಲಹೆ

ಆದರೆ ಇನ್ನೂ ಕಾಮಗಾರಿ ನಡೆದಿಲ್ಲ. ಶಾಸಕ ಯತೀಂದ್ರ ಅವರು ತಿ.ನರಸೀಪುರ ಪುರಸಭೆಗೆ ಎಸ್ ಎಫ್ ಸಿ ಯೋಜನೆಯಡಿ 10 ಕೋಟಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ, ಲಿಂಕ್ ರಸ್ತೆಗೆ ಎರಡು ಬಾರಿ ಭೂಮಿಪೂಜೆಯಾದರೂ ಕೆಲಸ ಆಗಿಲ್ಲ. ಹಾಗಾಗಿ ಈ ಬಾರಿ ಆಯವ್ಯಯದಲ್ಲಿ ಲಿಂಕ್ ರಸ್ತೆ ಡಾಂಬರೀಕರಣಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ದಸಂಸ ಮುಖಂಡ ಆಲಗೂಡು ಚಂದ್ರಶೇಖರ್ ಮಾತನಾಡಿ, ಬಂಗಾರಪ್ಪ ಬಡಾವಣೆಯಲ್ಲಿ ಪೌರ ಕಾರ್ಮಿಕರಿಗೆ 1ಎಕರೆ ಮತ್ತು ಬಸವ ಭವನ ನಿರ್ಮಾಣಕ್ಕೆ 2 ಎಕರೆ ಜಮೀನು ಮೀಸಲಿರಿಸಿರುವ ಬಗ್ಗೆ ಮಾಹಿತಿ ಇದ್ದು, ಈಗಾಗಲೇ ಬಂಗಾರಪ್ಪ ಬಡಾವಣೆ ಲೇಔಟ್ ಕಾರ್ಯವೂ ಪ್ರಗತಿಯಲ್ಲಿದೆ. ಈ ಬಗ್ಗೆ ಸಾಕಷ್ಟು ಗೊಂದಲಗಳಿದ್ದು, ಕಾನೂನು ರೀತ್ಯಾ ಕ್ರಮವಹಿಸುವಂತೆ ಸಲಹೆ ನೀಡಿದರು. ಸಭೆಯಲ್ಲಿ ಕಿರಿಯ ಅಭಿಯಂತರರಾದ ಸಿದ್ದಪ್ಪ, ಕುಮಾರ್, ಚಂದ್ರಶೇಖರ್, ಸಮುದಾಯ ಸಂಘಟನಾಧಿಕಾರಿ ಆರ್. ಪಿ.ನಳಿನಿ,ಕಂದಾಯಾಧಿಕಾರಿ ಕೆ.ಸಿ.ತ್ರಿವೇಣಿ, ಲೆಕ್ಕಿಗ ವಿನಯ್ ಕುಮಾರ್, ಆರೋಗ್ಯಧಿಕಾರಿ ಚಂಪಾಶ್ರೀ, ಕಂದಾಯ ನಿರೀಕ್ಷಕ ಅಶೋಕ,ಮಾಜಿ ಸದಸ್ಯರಾದ ಎಲ್. ಮಂಜುನಾಥ್, ಕೆ.ನಂಜುಂಡಸ್ವಾಮಿ,ಲೋಕೇಶ್, ಸೋಮು,ಪ್ರಕಾಶ್, ಸಿ.ಮಹದೇವ, ತುಂಬಲ ಪ್ರಕಾಶ್, ಮುಖಂಡರಾದ ಮರಯ್ಯ,ಬನ್ನಹಳ್ಳಿ ಸೋಮಣ್ಣ, ಈ.ರಾಜು ಇತರರು ಇದ್ದರು.

ಜನರ ಆಶೋತ್ತರಗಳಿಗೆ ಪೂರಕ ಬಜೆಟ್

ಸಭೆಯ ನಂತರ ಮಾತನಾಡಿದ ಮುಖ್ಯಾಧಿಕಾರಿ ಸಿ.ಶ್ರೀನಿವಾಸ, ಎಲ್ಲ ವಾರ್ಡ್ ಸಮಸ್ಯೆಗಳು, ಸಂಘ ಸಂಸ್ಥೆಗಳು, ಸಂಘಟನೆಗಳ ಸಲಹೆ ಸೂಚನೆಗಳನ್ನು ಆಲಿಸಿದ್ದು, 2026-27ನೇ ಸಾಲಿಗೆ ಪುರಸಭೆ ಎಲ್ಲ ಜನರು ಆಶೋತ್ತರಗಳಿಗೆ ಪೂರಕವಾದ ಆಯವ್ಯಯವನ್ನು ನೀಡುವ ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಉತ್ತಮ ಬಜೆಟ್ ಭರವಸೆ

ಎಲ್ಲ ವಾರ್ಡ್ ಗಳ ಸಮಸ್ಯೆ, ಸಂಘ ಸಂಸ್ಥೆಗಳು, ಸಂಘಟನೆಗಳ ಸಲಹೆ ಸೂಚನೆಗಳನ್ನು ಆಲಿಸಿದ್ದು, 2026-27ನೇ ಸಾಲಿಗೆ ಪುರಸಭೆಯ ಎಲ್ಲ ಜನರು ಅಶೋತ್ತರಗಳಿಗೆ ಪೂರಕವಾದ ಆಯವ್ಯಯವನ್ನು ನೀಡುವ ಆತ್ಮವಿಶ್ವಾಸವನ್ನು ಮುಖ್ಯಾಧಿಕಾರಿ ಸಿ. ಶ್ರೀನಿವಾಸ ವ್ಯಕ್ತಪಡಿಸಿದರು.

ನೈಸ್ ರಸ್ತೆಗೆ ನೇರ ಸಂಪರ್ಕ ಕಲ್ಪಿಸುವ ಬಹುಕಾಲದ ಕನಸು ನನಸು

ಹೊಸ ರಸ್ತೆ ಸಾರ್ವಜನಿಕರಿಗೆ ಮುಕ್ತ


ಬೆಂಗಳೂರು: ದೀಪಾಂಜಲಿ ನಗರದಿಂದ ಹೊಸಕೆರೆಹಳ್ಳಿಯ ಪಿಇಎಸ್ ಕಾಲೇಜು ಬಳಿಯ ನೈಸ್ ರಸ್ತೆ ಜಂಕ್ಷನ್‌ಗೆ ಸಂಪರ್ಕ ಕಲ್ಪಿಸುವ ಹೊಸ ರಸ್ತೆ ಉದ್ಘಾಟನೆಗೊಂಡಿದೆ. ಇದರಿಂದ ಮೈಸೂರು ರಸ್ತೆಯ ನಾಯಂಡಹಳ್ಳಿ ಮತ್ತು ಸುತ್ತಮುತ್ತಲಿನ ಸಂಚಾರ ದಟ್ಟಣೆಯಲ್ಲಿ ಸಿಲುಕಿ ಪರದಾಡುವ ವಾಹನ ಸವಾರರು ನಿರಾಳರಾಗಿದ್ದಾರೆ.

ವಾಹನ ಸವಾರರು ನೈಸ್ ರಸ್ತೆ ಪ್ರವೇಶಿಸಲು ನಾಯಂಡಹಳ್ಳಿ ರಿಂಗ್ ರಸ್ತೆ ಮೂಲಕ ಸಾಗಿ ವೀರಭದ್ರನಗರ ಸಿಗ್ನಲ್ ದಾಟಬೇಕಿತ್ತು. ಈಗ ಹೊಸ 1.5 ಕಿ.ಮೀ ಲಿಂಕ್ ರಸ್ತೆಯಿಂದಾಗಿ ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ ಮತ್ತು ಜ್ಞಾನಭಾರತಿ ಜಂಕ್ಷನ್‌ಗಳ ಟ್ರಾಫಿಕ್ ತಪ್ಪಿಸಬಹುದು. ಈ ಮಾರ್ಗದ ಬಳಕೆಯಿಂದ ಸುಮಾರು 15 ರಿಂದ 20 ನಿಮಿಷಗಳ ಪ್ರಯಾಣದ ಸಮಯ ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ. ದೀಪಾಂಜಲಿ ನಗರದಿಂದ ಕೇವಲ 10 ನಿಮಿಷಗಳಲ್ಲಿ ಪಿಇಎಸ್ ಕಾಲೇಜು ಜಂಕ್ಷನ್ ತಲುಪಬಹುದು.

ಈ ರಸ್ತೆಯು ಮೈಸೂರು ರಸ್ತೆಯಿಂದ ನೇರವಾಗಿ ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬನ್ನೇರುಘಟ್ಟ ರಸ್ತೆ ಮತ್ತು ತುಮಕೂರು ರಸ್ತೆಯ ಕಡೆಗೆ ಸಾಗುವವರಿಗೆ ದೊಡ್ಡ ವರದಾನವಾಗಲಿದೆ.

ಹೊಸ ಲಿಂಕ್ ರಸ್ತೆಯ ಮೊದಲ 1.5 ಕಿ.ಮೀ ವರೆಗೆ ಯಾವುದೇ ಟೋಲ್ ಶುಲ್ಕ ಇರುವುದಿಲ್ಲ. ಪಿಇಎಸ್ ಕಾಲೇಜು ಬಳಿಯ ಮುಖ್ಯ ನೈಸ್ ರಸ್ತೆಯನ್ನು ಪ್ರವೇಶಿಸಿದ ನಂತರವಷ್ಟೇ ಶುಲ್ಕ ಅನ್ವಯವಾಗಲಿದೆ.

ಭೂ ಸ್ವಾಧೀನದ ಸಮಸ್ಯೆಯಿಂದಾಗಿ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈ ಯೋಜನೆ ಈಗ ಪೂರ್ಣಗೊಂಡಿದ್ದು, ಸಾರ್ವಜನಿಕರಿಗೆ ರಸ್ತೆ ಮುಕ್ತವಾಗಿದೆ.



- ದೀಪಾಂಜಲಿ ನಗರ – ನೈಸ್ ರೋಡ್ ಲಿಂಕ್ ಸಾರ್ವಜನಿಕರಿಗೆ ಮುಕ್ತ
- ದೀಪಾಂಜಲಿ ನಗರದಿಂದ ನೈಸ್ ರಸ್ತೆಗೆ ನೇರ ಸಂಪರ್ಕ ಕಲ್ಪಿಸುವ ಬಹುಕಾಲದ ಕನಸು ನನಸು
- ನಾಯಂಡಹಳ್ಳಿ ಮತ್ತು ಸುತ್ತಮುತ್ತಲಿನ ಸಂಚಾರ ದಟ್ಟಣೆಯಲ್ಲಿ ಪರದಾಡುವ ವಾಹನ ಸವಾರರಿಗೆ ಶುಭ ಸುದ್ದಿ


ಲಾರಿ ಚಕ್ರ ಹರಿದು ಮಗು ಸಾವು

ಬೆಂಗಳೂರು: ನಗರದ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಹನುಮಂತೇಗೌಡನ ಪಾಳ್ಯದಲ್ಲಿ ಲಾರಿಯ ಚಕ್ರ ಹರಿದು ತಾಯಿ ಕಣ್ಣುದುರಲ್ಲೇ ಪುಟ್ಟ ಬಾಲಕಿ ಮೃತಪಟ್ಟಿದ್ದಾಳೆ.

ರಾಜೇಂದ್ರ – ಲಾವಣ್ಯಾ ದಂಪತಿ ಪುತ್ರಿ ನಿಶಿಕಾ (4) ಮೃತ ಬಾಲಕಿ. ಯುಗಾದಿ ಹಬ್ಬದ ಪ್ರಯುಕ್ತ ತನ್ನ ತಾಯಿ ಜತೆಗೆ ದೇವಸ್ಥಾನಕ್ಕೆ ತೆರಳುತ್ತಿದ್ದ ವೇಳೆ ದುರ್ಘಟನೆ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ. ಲಾವಣ್ಯಾ ನಿಶಿಕಾಳನ್ನು ಕೈ ಹಿಡಿದುಕೊಂಡು ಮತ್ತೊಂದು ಮಗುವನ್ನು ಕಂಕುಳಲ್ಲಿ ಕೂರಿಸಿಕೊಂಡು ತೆರಳುತ್ತಿದ್ದರು. ಹನುಮಂತೇಗೌಡನ ಪಾಳ್ಯದ ಬಳಿ, ಕಂಟೈನರ್ ಲಾರಿ ಅತೀ ವೇಗವಾಗಿ ಆಗಮಿಸಿ ಮೊದಲು ಬಾಲಕಿಗೆ ಡಿಕ್ಕಿಯಾಗಿದೆ. ಕೆಳಗೆ ಬಿದ್ದ ಬಾಲಕಿಯ ಮೇಲೆಯೇ ಲಾರಿಯ ಚಕ್ರಗಳು ಹರಿದಿವೆ. ಇದರ ಪರಿಣಾಮ ಬಾಲಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ ಎಂದು ಪೊಲೀಸರು ಹೇಳಿದರು.

ಮಾದನಾಯಕನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ನೆಲಮಂಗಲ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮಗುವಿನ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಅಮಿತ್ ಶಾ ಭೇಟಿ



ಹೊಸದಿಲ್ಲಿಯಲ್ಲಿ ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಪ್ರಸಕ್ತ ರಾಜ್ಯ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದರು.

ಕಿರುಸುದ್ದಿ

ಅರ್ಜಿ ಆಹ್ವಾನ ಅವಧಿ ವಿಸ್ತರಣೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಚನ ಕಲ್ಯಾಣ ಎಂಬ ಅಹೋರಾತ್ರಿ (9 ಗಂಟೆಗಳ) ನಾಟಕವನ್ನು ಸಿದ್ಧಪಡಿಸಿ ರಾಜ್ಯಾದ್ಯಂತ ಪ್ರದರ್ಶಿಸಲು ಉದ್ದೇಶಿಸಲಾಗಿರುವ ಯೋಜನೆಯಲ್ಲಿ ಭಾಗವಹಿಸಲು, ಆಸಕ್ತ ಮತ್ತು ಅನುಭವಿ ರಂಗಕಲಾವಿದರು ಹಾಗೂ ಗಾಯಕರಿಂದ ಅರ್ಜಿಗಳನ್ನು ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದ್ದು, ಮಾ.27ರವರೆಗೆ ಅವಕಾಶ ನೀಡಲಾಗಿದೆ.

ಆಸಕ್ತರು 18 ರಿಂದ 40 ವರ್ಷಗಳ ವಯೋಮಿತಿಯಲ್ಲಿರಬೇಕು. ರಂಗಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಆದ್ಯತೆ ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು 3 ತಿಂಗಳ ಕಾಲ ಪೂರ್ಣಕಾಲಿಕವಾಗಿ ತರಬೇತಿ ಮತ್ತು ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಾಗಿದೆ. ಆಯ್ಕೆಯಾದ ಕಲಾವಿದರಿಗೆ ಮಾಸಿಕ ಗೌರವಧನ ಹಾಗೂ ಊಟ-ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

ಅರ್ಜಿ ನಮೂನೆಯನ್ನು ಇಲಾಖೆಯ ಅಧಿಕೃತ ವೆಬ್ ಸೈಟ್ kannadasiri.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಮಾ.27ರ ಒಳಗಾಗಿ ಸದಸ್ಯ ಕಾರ್ಯದರ್ಶಿ, ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು –56 ಇವರಿಗೆ ಸಲ್ಲಿಸುವುದು ಅಥವಾ ಇ-ಮೇಲ್: kanaka-researchcentre@gmail.com ಮೂಲಕವೂ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ವಚನ ಕಲ್ಯಾಣ ನಾಟಕದ ನಿರ್ದೇಶಕರಾದ ಸಿ. ಬಸವಲಿಂಗಯ್ಯ ಅವರ ಮೊಬೈಲ್: 9448538620 ಅನ್ನು ಸಂಪರ್ಕಿಸಬಹುದು. ಸಂದರ್ಶನಕ್ಕೆ ಹಾಜರಾಗುವ ಕಲಾವಿದರಿಗೆ ಇಲಾಖೆಯ ವತಿಯಿಂದ ಯಾವುದೇ ಭತ್ಯೆ ನೀಡುವವುದಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಲಿಗೆಕೋರರ ಬಂಧನ

ಬೆಂಗಳೂರು: ಆಟೋ ಚಾಲಕರನ್ನು ಗುರಿಯಾಗಿಸಿಕೊಂಡು ಅವರ ಬಳಿಯಿದ್ದ ಹಣ, ಮೊಬೈಲ್, ಬೆಳ್ಳಿ ಸರ ಸೇರಿದಂತೆ ಇತರೆ ಮೌಲ್ಯವಾಗಿರುವ ವಸ್ತುಗಳನ್ನು ಸುಲಿಗೆ ಮಾಡಿದ್ದ ಕಾನೂನು ಸಂಘರ್ಷಕ್ಕೊಳಗಾದವ ಸೇರಿ ನಾಲ್ವರು ಆರೋಪಿಗಳನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಲಸೂರಿನ ಎಂ.ವಿ. ಗಾರ್ಡನ್ ನಿವಾಸಿಗಳಾದ ಚರಣ್ (21), ರಾಜೇಶ್ ಅಲಿಯಾಸ್ ಇಡ್ಲಿ (20) ಮತ್ತು ವಿಷ್ಣು (20) ಬಂಧಿತರು. ಮತ್ತೊಬ್ಬ ಕಾನೂನು ಸಂಘರ್ಷಕ್ಕೊಳಗಾದವನನ್ನು ವಶಕ್ಕೆ ಪಡೆದು ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳು ಮಾ.1 ರಂದು ರಾತ್ರಿ 11 ಗಂಟೆ ಸುಮಾರಿಗೆ ಆಟೋ ಚಾಲಕರೊಬ್ಬರು ಹಲಸೂರು ಹಳೇ ಮದ್ರಾಸ್ ರಸ್ತೆಯಿಂದ ಗುರುದ್ವಾರದ ಕಡೆ ಬರುತ್ತಿದ್ದರು. ಆ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಆರೋಪಿಗಳು, ಆಟೋ ಚಾಲಕನನ್ನು ಅಡ್ಡಗಟ್ಟಿ 1 ಮೊಬೈಲ್ ಹಾಗೂ 3,500 ರೂ. ನಗದು ದೋಚಿ ಪರಾರಿಯಾಗಿದ್ದರು. ಈ ಸಂಬಂಧ ಆಟೋ ಚಾಲಕ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಮಾ.14 ರಂದು ನಾಲ್ವರು ಆರೋಪಿಗಳನ್ನು ಬಂಧಿಸಲಾಗಿತ್ತು.

ಇನ್ನು ಆರೋಪಿಗಳ ವಿಚಾರಣೆಯಲ್ಲಿ ಹಳೇ ಮದ್ರಾಸ್ ರಸ್ತೆಯಲ್ಲಿ ಮಾತ್ರವಲ್ಲದೆ, ಬೈಯಪ್ಪನಹಳ್ಳಿ ಮೆಟ್ರೋ ನಿಲ್ದಾಣದ ಬಳಿ ಆಟೋದಲ್ಲಿ ಕುಳಿತಿದ್ದ ಮತ್ತೊಬ್ಬ ಚಾಲಕನ ಮೇಲೂ ಹಲ್ಲೆ ಮಾಡಿ ಬೆಳ್ಳಿಯ ಸರ ದರೋಡೆ ಮಾಡಿರುವುದಾಗಿ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸರು ಹೇಳಿದರು. ಈ ಸಂಬಂಧ ಹಲಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೀರ್ಘಕಾಲದಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಕ್ರಮ

ಏಪ್ರಿಲ್‌ನಿಂದ ಒಟಿಎಸ್ ಯೋಜನೆ ಜಾರಿ

ಬೆಂಗಳೂರು: ನಗರದ ನಾಗರಿಕರಿಗೆ ಜಲಮಂಡಳಿ ಸಿಹಿ ಸುದ್ದಿ ನೀಡಿದ್ದು, ದೀರ್ಘಕಾಲದಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಅನುಕೂಲ ಕಲ್ಪಿಸಲು, ಒನ್ ಟೈಮ್ ಸೆಟಲ್‌ಮೆಂಟ್(ಒಟಿಎಸ್) ಯೋಜನೆಯನ್ನು ಬರುವ ಏಪ್ರಿಲ್ ತಿಂಗಳಿನಿಂದ ಜಾರಿಗೊಳಿಸಲಿದೆ. 2026–ಏಪ್ರಿಲ್‌ನಿಂದ 2026–ಜೂನ್ ವರೆಗೆ ಅಂದರೆ 3 ತಿಂಗಳು ಒಟಿಎಸ್ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ) ವ್ಯಾಪ್ತಿಯಲ್ಲಿರುವ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. 2026ರ ಫೆಬ್ರವರಿ ಅಂತ್ಯದ ಮಾಹಿತಿಯಂತೆ, ಒಟ್ಟು ಬಾಕಿ ಮೊತ್ತ 851.33 ಕೋಟಿ ರೂ.ಗಳಾಗಿದ್ದು, ಇದರಲ್ಲಿ ಅಸಲು ಮೊತ್ತ 539.43 ಕೋಟಿ ರೂ. ಹಾಗೂ ಬಡ್ಡಿ ರೂ. 311.90 ಕೋಟಿ ಸೇರಿದೆ. ಬಾಕಿಯನ್ನು ಸುಲಭವಾಗಿ ಪಾವತಿಸಲು ಹಾಗೂ ಗ್ರಾಹಕರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು, ಏಪ್ರಿಲ್ ನಿಂದ



ಜೂನ್ ವರೆಗೆ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಶೇ 100 ರಷ್ಟು ಬಡ್ಡಿ ಮನ್ನಾ: 3 ತಿಂಗಳ ಯೋಜನೆ ಅವಧಿಯಲ್ಲಿ ಗ್ರಾಹಕರು ತಮ್ಮ ಅಸಲು ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿದರೆ, 2026–ಏಪ್ರಿಲ್‌ವರೆಗೆ ಸಂಗ್ರಹವಾಗಿರುವ ಸಂಪೂರ್ಣ ಬಡ್ಡಿಯನ್ನು (ಶೇ.100ರಷ್ಟು) ರಿಬೇಟ್ ರೂಪದಲ್ಲಿ ಮನ್ನಾ ಮಾಡಲಾಗುತ್ತದೆ.



ನಗರದ 5.11 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಆರ್ಥಿಕ ನೆರವು ನೀಡುವ ಹಾಗೂ ಮಂಡಳಿಯ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ಉದ್ದೇಶದಿಂದ ಈ ಕೊಡುಗೆಯನ್ನು ಜಾರಿಗೊಳಿಸಲಾಗುತ್ತಿದೆ. ಬರೋಬ್ಬರಿ 311 ಕೋಟಿ ರೂ.ಗಳ ಬಡ್ಡಿ ಮನ್ನಾ ಮಾಡುವ ಮೂಲಕ ನಾಗರಿಕರ ಮೇಲಿನ ಹೊರೆಯನ್ನು ಗಣನೀಯವಾಗಿ ಇಳಿಸಲಾಗುತ್ತಿದೆ. ಸಾರ್ವಜನಿಕರು ಮುಂಬರುವ 3 ತಿಂಗಳ ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.

■ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಪಾವತಿ ಪ್ರಕ್ರಿಯೆ

ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಪ್ರತಿ ಬಾಕಿದಾರರಿಗೆ ಅವರ ಆರ್‌ಆರ್ ಸಂಖ್ಯೆ, ಅಸಲು ಮೊತ್ತ, ಮನ್ನಾ ಆಗುವ ಬಡ್ಡಿ ಮೊತ್ತ ಹಾಗೂ ಪಾವತಿಸಬೇಕಾದ ಅಂತಿಮ ಮೊತ್ತದ ವಿವರಗಳನ್ನು ಒದಗಿಸಲಾಗುವುದು. ಗ್ರಾಹಕರು ಬಿಡಬ್ಲ್ಯೂಎಸ್‌ಎಸ್‌ಬಿ ಕಿಯೋಸ್ಕ್, ಆನ್‌ಲೈನ್ ಪೋರ್ಟಲ್ ಹಾಗೂ ವಿವಿಧ ಡಿಜಿಟಲ್ ಪಾವತಿ ಧಾನಗಳ ಮೂಲಕ ಸುಲಭವಾಗಿ ಹಣ ಪಾವತಿಸಬಹುದು ಎಂದು ಜಲಮಂಡಳಿ ತಿಳಿಸಿದೆ.

ಯಾರಿಗೆಲ್ಲ ಅನುಕೂಲ: ಈ ಯೋಜನೆಯು ಗೃಹ, ವಾಣಿಜ್ಯ, ಕೈಗಾರಿಕಾ ವಲಯ ಸೇರಿದಂತೆ ಬಿಡಬ್ಲ್ಯೂಎಸ್‌ಎಸ್‌ಬಿಯ ಎಲ್ಲ ವರ್ಗದ ಗ್ರಾಹಕರಿಗೂ ಅನ್ವಯವಾಗಲಿದೆ. ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳ ಬಾಕಿಗಳಿಗೂ ಲೆಕ್ಕಪತ್ರ ಸಮನ್ವಯದ ಮೂಲಕ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಡಾಗ್ ಸತೀಶ್ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ಬಿಗ್ ಬಾಸ್ ಮಾಜಿ ಸ್ಪರ್ಧಿ ಮತ್ತು ಶ್ವಾನ ಪ್ರೇಮಿ ಸತೀಶ್ ಕ್ಯಾಡಬಾಮ್ಸ್ (ಡಾಗ್ ಸತೀಶ್) ರೌಡಿಶೀಟರ್‌ಗಳ ಜತೆ ರೀಲ್ಸ್ ಮಾಡಿ, ಆ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವ ಕುರಿತು ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಮಾರ್ಚ್ 13ರಂದು ಆರ್.ಟಿ.ನಗರದ ಪಾರ್ಟಿ ಹಾಲ್‌ವೊಂದರಲ್ಲಿ ಜ್ಞಾನಭಾರತಿ ಠಾಣೆಯ ರೌಡಿಶೀಟರ್ ಆಗಿರುವ ಪಿ. ಮೂರ್ತಿ ಎಂಬಾತನ ಜನ್ಮದಿನದ ಪಾರ್ಟಿ ಆಯೋಜಿಸಲಾಗಿತ್ತು. ಆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಸತೀಶ್ ರೀಲ್ಸ್ ಮಾಡಿದ್ದರು. ಮತ್ತು ಆ ವೀಡಿಯೋ ಸತೀಶ್ ಬಾಸ್ ಸತೀಶ್ ಬಾಸ್ ಎಂಬ ಫೇಸ್‌ಬುಕ್ ಖಾತೆಯಿಂದ ಅಪ್‌ಲೋಡ್ ಮಾಡಲಾಗಿತ್ತು. ಅದರಲ್ಲಿ ರೌಡಿಶೀಟರ್‌ಗಳಾದ ಪಿ.ಮೂರ್ತಿ ಮತ್ತು ದಾಸ ಎಂಬವರ ಜತೆ ಸತೀಶ್ ಕಾಣಿಸಿಕೊಂಡಿದ್ದರು. ವಿಡಿಯೋ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತಿರುವ ಸಿಸಿಬಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ರೌಡಿಶೀಟರ್‌ಗಳ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದ ಸಿಸಿಬಿ ಸಂಘಟಿತ ಅಪರಾಧ ನಿಯಂತ್ರಣ ದಳದ ಇನ್ಸ್‌ಪೆಕ್ಟರ್ ಮಹದೇವಯ್ಯ ಈ ವಿಡಿಯೋ ವನ್ನು ಗಂಭೀರವಾಗಿ ಪರಿಗಣಿಸಿ ದ್ದಾರೆ. ಕೂಡಲೇ ಜ್ಞಾನಭಾರತಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸದ್ಯ ಪ್ರಕರಣದ ಕುರಿತು ಎನ್‌ಸಿಆರ್ ದಾಖಲಾಗಿದೆ. ಸತೀಶ್ ಹಾಗೂ ರೌಡಿಶೀಟರ್ ಪಿ.ಮೂರ್ತಿಗೆ ಶೀಘ್ರದಲ್ಲೇ ನೋಟಿಸ್ ನೀಡಿ ವಿವರಣೆ ಪಡೆಯಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಕಾದಂಬರಿ ಬಿಡುಗಡೆ ಕಾರ್ಯಕ್ರಮದಲ್ಲಿ ಶತಾವಧಾನಿ ಡಾ. ಆರ್.ಗಣೇಶ್ ಬೇಸರ

ಉತ್ತಮ ಗುಣಗಳು ಈಗ ದೋಷಗಳಾಗಿವೆ

ಬೆಂಗಳೂರು: ಒಂದು ಕಾಲದಲ್ಲಿ ಯಾವ ಅಂಶಗಳು ಉತ್ತಮ ಗುಣಗಳಾಗಿದ್ದವೋ, ಇಂದು ಆ ಉತ್ತಮ ಗುಣಗಳೇ ದೋಷಗಳಾಗಿವೆ ಎಂದು ಶತಾವಧಾನಿ ಡಾ. ಆರ್.ಗಣೇಶ್ ಬೇಸರ ವ್ಯಕ್ತಪಡಿಸಿದರು.

ಸ್ನೇಹ ಬುಕ್ ಹೌಸ್ ವತಿಯಿಂದ ನಗರದ ಬಿಎಂಶ್ರೀ ಕಲಾಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಶಾರದಾ ಚೈತ್ರ ಅವರ ನಿಗಳ ಕಾದಂಬರಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ವಿಜ್ಞಾನ ಓದುತ್ತಿದ್ದ ಒಂದು ಹುಡುಗಿ, ತಾನು ಸೈನ್ಸ್ ಓದಿದರೆ ನನ್ನನ್ನು ಗಂಡಿನಂತ ಹುಡುಗಿ ಎಂದು ಭಾವಿಸಿ ಬಾಯ್‌ಫ್ರೆಂಡ್ ಸಿಗುವುದಿಲ್ಲವೆಂದು ಭಾವಿಸಿ, ಕಡಿಮೆ ಅಂಕ ಪಡೆಯುವತ್ತಾಳೆ. ಹೆಣ್ಣಾಗಿ ಕಾಣಿಸಿಕೊಳ್ಳಲು ಸೈನ್ಸ್, ಟೆಕ್ನಾಲಜಿ ಓದಬಾರದು ಎಂಬ ಸ್ಥಿತಿ ಕಾದಂಬರಿಯಲ್ಲಿ ಕಾಣಸಿಗುತ್ತದೆ. ಅಂತೆಯೇ, ಇಂದು ಕುಡಿಯುವ, ಸಿಗರೇಟ್ ಸೇದುವ,



ವ್ಯಭಿಚಾರದಂತ ಅಭ್ಯಾಸಗಳಿಲ್ಲದವರು ಗಂಡೇ ಅಲ್ಲ ಎಂಬ ಭಾವನೆಯಿದ್ದು, ಒಂದು ಕಾಲದ ಉತ್ತಮ ಗುಣಗಳು, ಇಂದಿಗೆ ದೋಷವಾಗಿವೆ ಎಂದರು.

ಡಾ.ಶಾರದಾ ಚೈತ್ರ ಅವರು ವೈದ್ಯಕೀಯ ವೃತ್ತಿಯಿಂದ ಸಾಹಿತ್ಯ ಕ್ಷೇತ್ರಕ್ಕೆ ಬಂದಿರುವುದು ಸಾಹಿತ್ಯ ಕ್ಷೇತ್ರಕ್ಕೆ ಆಗಿರುವ ಲಾಭ. ಕಾದಂಬರಿಯಲ್ಲಿ ಒಳ್ಳೆಯ ಭಾಷೆ ಬಳಸಿದ್ದು, ಪಾತ್ರಗಳ ಸಂಭಾಷಣೆಯಲ್ಲಿ ಸಮೃದ್ಧವಾದ ಇಂಗ್ಲಿಷ್ ಸಹಿತ ಅತ್ಯಾಧುನಿಕ ಉಚ್ಚರಣೆಯನ್ನು ಕಾಣಬಹುದು. ಇಲ್ಲಿ ಮೂಡಿಬಂದಿರುವ ಭಾಷೆಗೂ ಇಂದಿನ ಬೆಂಗಳೂರಿನ ಭಾಷೆಗೂ ವ್ಯತ್ಯಾಸ ಕಾಣುವುದಿಲ್ಲ. ಕೃತಿಯ ಲೇಖಕರು ಯಾವ ಸಂಕೋಚವೂ ಇಲ್ಲದಂತೆ ಬರವಣಿಗೆ ಪ್ರಸ್ತುತಪಡಿಸಿದ್ದು, ಸಂಯಮವನ್ನು ಮಾತ್ರ ಬಿಟ್ಟಿಲ್ಲ ಎಂಬುದು ವಿಶೇಷ ಎಂದು ಶ್ಲಾಘಿಸಿದರು.

ಮನುಷ್ಯ ಅಷ್ಟಾಗಿ ಮುಂದುವರೆದಿಲ್ಲ: ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ, ಮನುಷ್ಯ ಅಷ್ಟಾಗಿ ಮುಂದುವರೆದಿಲ್ಲ. ನನ್ನ ಹಣೆ ಮೇಲಿರುವ ವಿಭೂತಿ, ನನ್ನ ಪಂಚೆ ನೋಡಿ, ನಾನು ಕಂದಾಚಾರಿ ಎಂದು ಭಾವಿಸಬಹುದು. ಆದರೆ, ನಾನು ಕಂದಾಚಾರಿಯಲ್ಲ. ವಾಸ್ತವದಲ್ಲಿ ಸಾಮಾಜಿಕ, ವೈಜ್ಞಾನಿಕ, ತಾಂತ್ರಿಕವಾದ ಮಾರ್ಪಾಡುಗಳಷ್ಟು ವೇಗವಾಗಿ ಭಾವನಾತ್ಮಕ ಮಾರ್ಪಾಡುಗಳು ಸಂಭವಿಸುವುದಿಲ್ಲ ಎಂದು ತಿಳಿಸಿದರು.

ಈ ವೇಳೆ ವಕೀಲೆ ಮೀರಾಬಾಯಿ ಫಡ್ಕೆ, ಕೃತಿಯ ಲೇಖಕಿ ಡಾ. ಶಾರದಾ ಚೈತ್ರ ಉಪಸ್ಥಿತರಿದ್ದರು.

ಅತಿ ವೇಗವಾಗಿ ಕಾರು ಚಾಲನೆ: ಚಾಲಕನ ವಿರುದ್ಧ ಪ್ರಕರಣ

ಬೆಂಗಳೂರು: ನಗರದ ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತದ ಸಮೀಪ ಶುಕ್ರವಾರ ತಡರಾತ್ರಿ 2 ಗಂಟೆ ಸುಮಾರಿಗೆ ಐಷಾರಾಮಿ ಲಾಂಬೋರ್ಗಿನಿ ಕಾರು ಡ್ರಿಫ್ಟಿಂಗ್ ಮಾಡಿ ಅತೀ ವೇಗವಾಗಿ ಚಾಲನೆ ಮಾಡಿರುವ ಸಂಬಂಧ ಅಪರಿಚಿತ ಕಾರು ಚಾಲಕನ ವಿರುದ್ಧ ಕಬ್ಬನ್ ಪಾರ್ಕ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಾಂಬೋರ್ಗಿನಿ ಕಾರು ಚಾಲಕ ಅನಿಲ್ ಕುಂಬ್ಳೆ ವೃತ್ತದ ಬಳಿ ಬಂದು, ಏಕಾಏಕಿ ಕಾರನ್ನು ಡ್ರಿಫ್ಟಿಂಗ್ ಮಾಡಿದ್ದಾನೆ. ಇದನ್ನು ಕಂಡು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಈ ವಿಡಿಯೋವನ್ನು ಆಧರಿಸಿ ಕಬ್ಬನ್ ಪಾರ್ಕ್ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಿಸಿಟಿವಿ ಪರಿಶೀಲನೆ ವೇಳೆ ಕೆಎ–05 ಎನ್‌ಆರ್ 0009 ಸಂಖ್ಯೆಯ ಲ್ಯಾಂಬೋರ್ಗಿನಿ ಕಾರು ಎಂಬುದು ಗೊತ್ತಾಗಿದೆ. ಕಾರಿನ ಮಾಲೀಕರನ್ನು ಪತ್ತೆ ಮಾಡಲಾಗುತ್ತಿದ್ದು, ಅಜಾಗರೂಕತೆ ಹಾಗೂ ಅಪಾಯಕಾರಿ ಚಾಲನೆಯ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಈ ಕುರಿತು ಪಶ್ಚಿಮ ವಿಭಾಗದ ಸಂಚಾರ (ಪ್ರಭಾರ) ಡಿಸಿಪಿ ಸಾಹಿಲ್ ಬಾಂಗ್ಲಾ ಪ್ರತಿಕ್ರಿಯಿಸಿ, ಲ್ಯಾಂಬೋರ್ಗಿನಿ ಕಾರಿನ ಮಾಲೀಕರು ಯಾರು ಎಂಬುದರ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಅಪಾಯಕಾರಿಯಾಗಿ ವಾಹನ ಚಾಲನೆ ಮಾಡುವಂತಿಲ್ಲ. ಪ್ರಕರಣ ಸಂಬಂಧ ಆರ್‌ಸಿ ರದ್ದು ಮಾಡಲು ಆರ್‌ಟಿಒಗೆ ಪತ್ರ ಬರೆದು ಶಿಫಾರಸು ಮಾಡಲಾಗುವುದು ಎಂದು ತಿಳಿದ್ದಾರೆ.

ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಸ್ಮಿತಾ ರೆಡ್ಡಿ ಅಭಿಪ್ರಾಯ

ಇತಿಹಾಸ ಅರಿಯಲು ಶಾಸನ ವಿಶ್ವಾಸಾರ್ಹ ಮೂಲ

ಬೆಂಗಳೂರು: ಶಾಸನಗಳು (ಶಿಲಾ ಶಾಸನ ಹಾಗೂ ತಾಮ್ರ ಶಾಸನ) ಪ್ರಾಚೀನ ಇತಿಹಾಸವನ್ನು ನಿಖರವಾಗಿ ತಿಳಿಯಲು ವಿಶ್ವಾಸಾರ್ಹ ಮೂಲವಾಗಿದೆ ಎಂದು ಡಾ.ಸ್ಮಿತಾ ರೆಡ್ಡಿ ಅಭಿಪ್ರಾಯಪಟ್ಟರು.

ಜೈನ ಮಿಲನ್, ಬೆಂಗಳೂರು ಸೆಂಟ್ರಲ್ ಹಾಗೂ ಜಯನಗರದ ಶ್ರೀಚಕ್ರೇಶ್ವರಿ ಮಹಿಳಾ ಸಮಾಜದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜೈನ ಸಾಹಿತ್ಯ ಸಿರಿ ಕಾರ್ಯಕ್ರಮದ ತಿಂಗಳ ಉಪನ್ಯಾಸದಲ್ಲಿ ಮಾತನಾಡಿದ ಅವರು, ಶ್ರವಣಬೆಳಗೊಳ ವೊಂದರಲ್ಲಿಯೇ ಪ್ರಮುಖವಾದ 450 ಶಾಸನಗಳು ಸಿಕ್ಕಿವೆ.

ಕವಿ ರಾಜಮಾರ್ಗಕಾರ ತಿಳಿಸುವಂತೆ ಕರ್ನಾಟಕದಿಂದ ಗುಜರಾತಿನವರೆಗೆ ಕರ್ನಾಟಕವು ಹರಡಿತ್ತು. ನಮಗೆ ತೆಲಂಗಾಣದ ಕುಕ್ಕಾಲದಲ್ಲಿ ಸಿಕ್ಕಿರುವ ಪಂಪನ ತಮ್ಮ ಜಿನವಲ್ಲಭ ಬರೆದಿರುವ ಶಾಸನವು 1966ರಲ್ಲಿ ಸಿಕ್ಕಿತು. ತೆಲುಗು ಕನ್ನಡ ಹಾಗೂ ಸಂಸ್ಕೃತ



ಭಾಷೆಯಲ್ಲಿರುವ ಶಾಸನವಿದು. ಆತ ತನ್ನ ಬಗ್ಗೆ ಹಾಗೂ ತನ್ನ ಅಣ್ಣ ಪಂಪನ ಬಗ್ಗೆ ಸವಿಸ್ತಾರವಾಗಿ ತಿಳಿಸಿದ ನಂತರ ಅಲ್ಲಿಯವರೆಗೆ ಪಂಪನ ಬಗ್ಗೆ ಇದ್ದ ಅನೇಕ ಸಂಶಯಗಳು ಈ ಶಾಸನದಿಂದ ದೂರವಾದವು ಎಂದು ವಿವರಿಸಿದರು.

ಪಟಣಾಚೆಲುವ ಆಂಧ್ರದಲ್ಲಿದ್ದು ಅಲ್ಲಿ 3 ಶಾಸನ ಸಿಕ್ಕಿದ್ದು ಅದು ನರ ಶಸ್ತ್ರ ಚಿಕಿತ್ಸಕ ಅಗ್ಗಳಯ್ಯ ಎಂಬ ಮನುಷ್ಯ ಹಾಗೂ ಪ್ರಾಣಿ ವೈದ್ಯ ಜೈನಧರ್ಮದ ಪ್ರಸಾರದಲ್ಲಿಯೂ ಪ್ರಮುಖ ಪಾತ್ರ ವಹಿಸಿದ ಬಗ್ಗೆ ಶಾಸನಗಳು ತಿಳಿಸುತ್ತವೆ. ಮತ್ತೊಂದು ಪ್ರಾತಿನಿಧಿಕ ಶಾಸನ ಅತ್ತಿಮಬ್ಬೆಯ ಶಾಸನದ ಬಗ್ಗೆ ತಿಳಿಸುತ್ತಾ ಜೈನ ಮಹಿಳೆಯರಿಗೆ ಆ ಕಾಲದಲ್ಲಿ ಹೆಚ್ಚಿನ ಸ್ವಾತಂತ್ರ್ಯ ವಿತ್ತು. ಅತ್ತಿಮಬ್ಬೆಯನ್ನು ಲಕ್ಕುಂಡಿ ಶಾಸನ ದಾನ ಚಿಂತಾಮಣಿ ಜಿನಶಾಸನ ದೀಪಿಕೆ ಮುಂತಾದ ರೀತಿಯಲ್ಲಿ ವರ್ಣಿಸಿದೆ ಎಂದು ಅವರು ಶಾಸನಗಳ ಬಗ್ಗೆ ವಿವರಣೆ ನೀಡಿದರು.

ಧರ್ಮಸ್ಥಳ ಸುರೇಂದ್ರಕುಮಾರ ಅವರು ಮಾತನಾಡಿ, ಸಾಹಿತ್ಯ ಸಿರಿಯ ಮೂಲಕ ಕನ್ನಡ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ದಾಟಿಸುವ ಕೆಲಸವಾಗುತ್ತಿದೆ. ಶಾಸನಗಳ ಮೂಲಕ ಯಾವುದೇ ವಿಷಯವನ್ನು ನಿಖರವಾಗಿ ತಿಳಿಯಲು ಸಾಧ್ಯ ಎಂದರು.

ಬೀದಿ ವ್ಯಾಪಾರ ನಿಷೇಧಕ್ಕೆ ಜಿಬಿಎ ಹೊಸ ನೀತಿ

ಬೆಂಗಳೂರು: ನಗರದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಬೀದಿ ವ್ಯಾಪಾರವನ್ನು ನಿಷೇಧಿಸಲು ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರೂಪಿಸುತ್ತಿರುವ ನೀತಿಯನ್ನು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ ತೀವ್ರವಾಗಿ ಖಂಡಿಸಿದ್ದು, ಆ ನೀತಿ ಹಿಂಪಡೆಯದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದೆ.

ಬೀದಿ ವ್ಯಾಪಾರಿಗಳು (ಜೀವನೋಪಾಯದ ರಕ್ಷಣೆ ಮತ್ತು ನಿಯಂತ್ರಣ) ಕಾಯಿದೆ 2014ರ ಸೆಕ್ಷನ್ 2(ಎಲ್) ಪ್ರಕಾರ, ಬೀದಿ, ಫುಟ್‌ಪಾತ್, ರಸ್ತೆ, ಸಾರ್ವಜನಿಕ ಸ್ಥಳಗಳಲ್ಲಿ ವಸ್ತುಗಳು ಅಥವಾ ಸೇವೆಗಳನ್ನು ಮಾರಾಟ ಮಾಡುವ ಯಾರನ್ನಾದರೂ ಬೀದಿ ವ್ಯಾಪಾರಿ ಎಂದು ಪರಿಗಣಿಸಲಾಗುತ್ತದೆ. ಆದರೆ, ಈ ಕಾಯಿದೆ ಜಾರಿಯಾಗಿ ದಶಕ ಕಳೆದರೂ ಸಮಗ್ರ ಸಮೀಕ್ಷೆಗಳು ಪೂರ್ಣಗೊಂಡಿಲ್ಲ. ಎಲ್ಲ ವ್ಯಾಪಾರಿಗಳಿಗೆ ಗುರುತಿನ ಚೀಟಿಗಳನ್ನು

- ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘ ಖಂಡನೆ
- ಉಗ್ರ ಹೋರಾಟದ ಎಚ್ಚರಿಕೆ

ನೀಡಿಲ್ಲ. ಅಲ್ಲದೆ, ಸಾವಿರಾರು ವ್ಯಾಪಾರಿಗಳನ್ನು ಪಟ್ಟಿಯಿಂದ ಹೊರಗಿದ್ದಾರೆ ಎಂದು ಸಂಘವು ಆಕ್ರೋಶ ಹೊರಹಾಕಿದೆ.

ರಸ್ತೆಗಳ ವರ್ಗಗಳನ್ನು ಆಧರಿಸಿ ಬೀದಿ ವ್ಯಾಪಾರ ನಿಷೇಧಿಸುವುದು ಕಾನೂನುಬಾಹಿರ ಕ್ರಮ. ಜತೆಗೆ, ಕಾಯಿದೆ ಪ್ರಕಾರ ಎಲ್ಲಿ ವ್ಯಾಪಾರ ಮಾಡಬಹುದು ಅಥವಾ ಮಾಡಬಾರದು ಎಂಬ ತೀರ್ಮಾನವನ್ನು ಟೌನ್ ವೆಂಡಿಂಗ್ ಸಮಿತಿಗಳಲ್ಲಿ ಕೈಗೊಳ್ಳಬೇಕು ಎಂದರು.

ಸುಪ್ರೀಂಕೋರ್ಟ್ ಸಹ ಹಲವಾರು ತೀರ್ಪುಗಳಲ್ಲಿ ಬೀದಿ ವ್ಯಾಪಾರ ಜೀವನೋಪಾಯದ ಮೂಲಭೂತ ಹಕ್ಕಿನ ಭಾಗವೆಂದು ಸ್ಪಷ್ಟಪಡಿಸಿದ್ದು, ನಮ್ಮ ಹಕ್ಕನ್ನು ಕಿತ್ತುಕೊಳ್ಳುವ ಕಾಯಿದೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಸಂಘ ಒತ್ತಾಯಿಸಿದೆ.

ಸಿರಸಿ ಸರ್ಕಲ್‌ನಿಂದ ಕಿಮ್ಕೊ ಜಂಕ್ಷನ್‌ವರೆಗೆ ಹೊಸ ಫ್ಲೈಓವರ್

ಬೆಂಗಳೂರು: ನಗರದ ಅತಿ ಹೆಚ್ಚು ವಾಹನ ದಟ್ಟಣೆ ಹೊಂದಿರುವ ರಸ್ತೆಗಳಲ್ಲಿ ಒಂದಾದ ಮೈಸೂರು ರಸ್ತೆಯ ಸಂಚಾರ ದಟ್ಟಣೆಗೆ ಫ್ಲೈಓವರ್ ನಿರ್ಮಿಸಲು ಸರ್ಕಾರ ಚಿಂತನೆ ನಡೆಸಿದೆ.

ಭೂಸ್ವಾಧೀನ ಸೇರಿದಂತೆ ಒಟ್ಟು ಅಂದಾಜು 810 ಕೋಟಿ ರೂ. ವೆಚ್ಚದಲ್ಲಿ ಚಾಮರಾಜಪೇಟೆಯ ಸಿರಸಿ ಸರ್ಕಲ್‌ನಿಂದ ಬಿಎಚ್‌ಇಎಲ್ ಕಿಮ್ಕೊ ಜಂಕ್ಷನ್‌ವರೆಗೆ ಹೊಸ ಫ್ಲೈಓವರ್ ನಿರ್ಮಿಸಲು ಯೋಜಿಸಲಾಗಿದ್ದು, ಇದರಿಂದ ಸಂಚಾರ ದಟ್ಟಣೆಗೆ ಶಾಶ್ವತ ಪರಿಹಾರ ಸಿಗುವ ನಿರೀಕ್ಷೆಯಿದೆ.

ಈಗಾಗಲೇ ನಗರಾಭಿವೃದ್ಧಿ ಇಲಾಖೆಯು ಈ ಸಂಬಂಧ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುತ್ತಿದ್ದು, ವಿನ್ಯಾಸ ಮತ್ತು ಕಾರ್ಯಸಾಧ್ಯತೆಯ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಮೈಸೂರು ರಸ್ತೆಯ ಈ ನಿರ್ದಿಷ್ಟ ಭಾಗದಲ್ಲಿ ದಿನದ ಬಹುತೇಕ ಸಮಯದಲ್ಲಿ ವಾಹನಗಳು ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುವುದು ಸಾಮಾನ್ಯವಾಗಿದೆ.

- ಸಂಚಾರ ದಟ್ಟಣೆಗೆ ಮುಕ್ತಿಗೆ 810 ಕೋಟಿ ರೂ. ವೆಚ್ಚದಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಚಿಂತನ

ಚಾಮರಾಜಪೇಟೆಯ ಮೂಲಕ ಹಾದು ಹೋಗುವ ಈ ರಸ್ತೆಯಲ್ಲಿ ಸಂಚಾರ ದಟ್ಟಣೆ ವಿಪರೀತವಾಗಿದ್ದು, ದೈನಂದಿನ ಪ್ರಯಾಣಿಕರು ಹೈರಾಣಾಗುತ್ತಿದ್ದಾರೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಈಗ ಹೊಸ ಮೇಲ್ಸೇತುವೆ ನಿರ್ಮಾಣಕ್ಕೆ ಮುಂದಾಗಿದೆ.

ಫ್ಲೈಓವರ್ ನಿರ್ಮಾಣವಾದಲ್ಲಿ ಮೈಸೂರು ರಸ್ತೆಯ ಕಡೆಯಿಂದ ನಗರದ ಒಳಭಾಗಕ್ಕೆ ಬರುವ ಮತ್ತು ಹೊರಹೋಗುವ ವಾಹನಗಳಿಗೆ ಸುಗಮ ಹಾದಿ ನಿರ್ಮಾಣವಾಗಲಿದೆ. ಈ ಮೂಲಸೌಕರ್ಯ ಅಭಿವೃದ್ಧಿಯು ಬೆಂಗಳೂರಿನ ಪ್ರಮುಖ ರಸ್ತೆಗಳ ಸಂಚಾರ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತರಲಿದೆ ಎಂದು ಹೇಳಲಾಗುತ್ತಿದೆ.

ಚಂದನದಲ್ಲಿ ಕುಂವೀಯವರ ಅರಮನೆ ಕೃತಿ ಆಧಾರಿತ ಧಾರಾವಾಹಿ

ಬೆಂಗಳೂರು: ದೂರದರ್ಶನ ಚಂದನ ವಾಹಿನಿಯು, ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಕೃತಿಗಳನ್ನು ಕಿರುತೆರೆಯ ಮೇಲೆ ತರುವ ತನ್ನ ಸುದೀರ್ಘ ಪರಂಪರೆಯನ್ನು ಮುಂದುವರಿಸುತ್ತಿದೆ. ಈ ನಿಟ್ಟಿನಲ್ಲಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಾದಂಬರಿ, ನಾಡೋಜ ಡಾ. ಕುಂ. ವೀರಭದ್ರಪ್ಪ ಅವರ ವಿಶಿಷ್ಟ ಕೃತಿ ಅರಮನೆ ಈಗ ಮೆಗಾ ಧಾರಾವಾಹಿಯಾಗಿ ಮೂಡಿಬರುತ್ತಿದೆ.

ಈ ಧಾರವಾಹಿಯು ಮಾ.25 ರಿಂದ ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 7.30 ಗಂಟೆಗೆ ದೂರದರ್ಶನದ ಚಂದನ ವಾಹಿನಿಯಲ್ಲಿ ಪ್ರಸಾರವಾಗಲಿದೆ. ದೂರದರ್ಶನ ಚಂದನವು ಮೊದಲಿನಿಂದಲೂ ಖ್ಯಾತ ಸಾಹಿತಿಗಳ ಕಥೆ-ಕಾದಂಬರಿಗಳನ್ನು ಆಧರಿಸಿದ ಧಾರಾವಾಹಿಗಳ ಮೂಲಕ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಅಪಾರ ಕೊಡುಗೆ ನೀಡಿದೆ. ಇದೀಗ ಅದೇ ಕಟಿಬದ್ಧತೆಯೊಂದಿಗೆ, ಆಧುನಿಕ ತಂತ್ರಜ್ಞಾನ ಮತ್ತು ರಂಗ ಭೂಮಿಯ ಸತ್ವವನ್ನು ಬೆರೆಸಿ ಅರಮನೆ ಕಾದಂಬರಿ ಯನ್ನು ದೃಶ್ಯ ರೂಪಕ್ಕೆ ಇಳಿಸಲಾಗಿದೆ.

ತಾಂತ್ರಿಕ ಮತ್ತು ಕಲಾತ್ಮಕ ತಂಡ

ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿ ವಿಜೇತ ಭರವಸೆಯ ಯುವ ನಿರ್ದೇಶಕ ಮನ್ಸೋರೆ ಅವರು ಈ ಧಾರಾವಾಹಿಯನ್ನು ನಿರ್ದೇಶಿಸುತ್ತಿದ್ದಾರೆ. ಹಿರಿಯ ನಟಿ, ಪದ್ಮಶ್ರೀ ಪುರಸ್ಕೃತೆ ಬಿ. ಜಯಶ್ರೀ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈ ಸರಣಿಯ ವಿಶೇಷ ಆಕರ್ಷಣೆ. ಬಿ.ಎಂ. ಗಿರಿರಾಜ್, ವೆಂಕಟೇಶ್ ಪ್ರಸಾದ್, ಚಂದನಾ, ಸಿತಾರ ನೀನಾಸಂ, ಬಿಂದು ರಕ್ಷಿದಿ, ವಿನಯ್ ಕೃಷ್ಣಸ್ವಾಮಿ, ಗುಂಡಣ್ಣ, ಮಂಜುನಾಥ ಜಂಬೆ ಮುಂತಾದ ಚಿತ್ರರಂಗ ಮತ್ತು ರಂಗಭೂಮಿಯ ಖ್ಯಾತ ಕಲಾವಿದರು ಪ್ರಮುಖ ಪಾತ್ರಗಳಲ್ಲಿದ್ದಾರೆ.

ಇಂದು ನಗರದಲ್ಲಿ...

- ಈ ಹೊತ್ತಿಗೆ ಟ್ರಸ್ಟ್: ಹೊನಲು ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಕಪ್ಪಣ್ಣ ಅಂಗಳ, ಎ ಮುಖ್ಯರಸ್ತೆ, ಟಿಎಂಸಿ ಲೇಔಟ್, ಜೆ.ಪಿ ನಗರ 1ನೇ ಹಂತ. ಬೆಳಗ್ಗೆ 10
- ಬಿ.ಪ್ಯಾಕ್ ಸಂಸ್ಥೆ: ಬೆಂಗಳೂರಿನ ಮಹಿಳಾ ಆಟೊ ಚಾಲಕಿಯರೊಂದಿಗೆ ಮಹಿಳಾ ದಿನಾಚರಣೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಬೆಳಗ್ಗೆ 11
- ಗಾಂಪರ ಗುಂಪು ಕನ್ನಡ ನಾಟಕ ಪ್ರದರ್ಶನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ. ಬೆಳಗ್ಗೆ 11.30
- ನಿರುದ್ಯೋಗಿಗಳ ಅವಾಂತರ ಸಾಮಾಜಿಕ ನಗೆ ನಾಟಕ ಪ್ರದರ್ಶನ. ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಗ್ರಂಥದ ಗುಡಿ, ಕುಮಾರಸ್ವಾಮಿ ಬಡಾವಣೆ ಶಾಖೆ. ಸಂಜೆ 5.30

ಕಿರುಸುದ್ದಿ

ಜೂನ್‌ನಲ್ಲಿ ಭಾರತದ ಐರ್ಲೆಂಡ್ ಪ್ರವಾಸ

ಮುಂಬೈ: ವಿಶ್ವಕಪ್ ಮುಡಿಗೇರಿಸಿಕೊಂಡಿರುವ ಭಾರತ ಟಿ20 ತಂಡವು ಜೂನ್‌ನಲ್ಲಿ ಎರಡು ಪಂದ್ಯಗಳ ಟಿ20 ಸರಣಿಗಾಗಿ ಐರ್ಲೆಂಡ್ ಪ್ರವಾಸ ಮಾಡಲಿದೆ.

ಇತ್ತೀಚೆಗಷ್ಟೇ ಮುಕ್ತಾಯಗೊಂಡಿರುವ ವಿಶ್ವಕಪ್‌ನಲ್ಲಿ ಗೆಲುವು ಸಾಧಿಸಿರುವ ಸೂರ್ಯ ಪಡೆ ಸದ್ಯ ಐಪಿಎಲ್‌ನಲ್ಲಿ ವ್ಯಸ್ತವಾಗಿದೆ. ಐಪಿಎಲ್ ಮುಗಿದ ನಂತರ ಇಂಗ್ಲೆಂಡ್ ಪ್ರವಾಸವಿದ್ದು ಟೆಸ್ಟ್ ಪಂದ್ಯಗಳು ನಡೆಯಲಿವೆ. ಈ ಬಳಿಕ ಭಾರತ ಜೂನ್‌ನಲ್ಲಿ ಎರಡು ಪಂದ್ಯಗಳ ಸರಣಿಗಾಗಿ ಐರ್ಲೆಂಡ್‌ಗೆ ಹೋಗುವ ಬಗ್ಗೆ ಬಿಸಿಸಿಐ ಅಧಿಕೃತ ಪ್ರಕಟಣೆ ಹೊರಡಿಸಿದೆ. ಜೂನ್ 26ರಂದು ಬೆಲ್ಫಾಸ್ಟ್‌ನಲ್ಲಿ ಮೊದಲ ಟಿ20 ಪಂದ್ಯವನ್ನಾಡಲಿದೆ. 28ರಂದು ಎರಡನೇ ಪಂದ್ಯವಾಡಲಿದೆ. ಜೂನ್‌ವರೆಗೂ ಭಾರತ ಯಾವುದೇ ಟಿ20 ಪಂದ್ಯಗಳನ್ನಾಡುವುದಿಲ್ಲ. ಎಲ್ಲರೂ ಐಪಿಎಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ವಿಶ್ವ ಯು-20 ಅಥ್ಲೆಟಿಕ್ಸ್‌ಗೆ ಪಿಯುಶ್ ಆಯ್ಕೆ

ತಿರುವನಂತಪುರ: ವಿಶ್ವ ಯು-20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 400 ಮೀ. ಓಟಕ್ಕಾಗಿ ಬಿಹಾರದ ಪಿಯುಶ್ ರಾಜ್ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಶನಿವಾರ ದಂದು ತಿರುವನಂತಪುರದಲ್ಲಿ ನಡೆದಿರುವ ಇಂಡಿಯನ್ ಓಪನ್ 400 ಮೀ. ಮೀಟ್ ಕೂಟದಲ್ಲಿ ಚಿನ್ನದ ಪದಕ ಗೆದ್ದು ಮುಂಬರಲಿರುವ ಅಂತಾರಾಷ್ಟ್ರೀಯ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡುವ ಭರವಸೆ ಮೂಡಿಸಿದ್ದಾರೆ. ಶನಿವಾರದ ಆ ಕೂಟದಲ್ಲಿ ಅತ್ಯಂತ ಪ್ರಬಲರಿದ್ದ ಸ್ಪರ್ಧೆ ಯಲ್ಲಿ ಅವರು ನಿರೀಕ್ಷಿತ ಪ್ರದರ್ಶನ ನೀಡಿದರು. 47.11 ಸೆಕೆಂಡುಗಳಲ್ಲಿ ಮಾತ್ರೆ 400 ಮೀ. ದೂರವನ್ನು ವೇಗವಾಗಿ ಕ್ರಮಿಸಿ ಗೆಲುವು ಸಾಧಿಸಿದರು. ಬೆಳ್ಳಿ ಪದಕ ಗೆದ್ದ ಉತ್ತರಾಖಂಡದ ಸಾಹಿಲ್ ಮಲಿಕ್ ಕೂಡ ತಮ್ಮ ದೂರದ ಕ್ರಮವನ್ನು ವೇಗದಲ್ಲಿ ಉತ್ತಮ ಪಡಿಸಿಕೊಮಡರು. ಅವರು 47.28 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಕೇರಳದ ಇಡ್ವಿನ್ ಮ್ಯಾಥೆವ್ 47.65 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಗಿಟ್ಟಿಸಿಕೊಂಡರು. 2026 ವಿಶ್ವ ಯು-20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಟವು ಆಗಸ್ಟ್ 5ರಿಂದ 9ರವರೆಗೆ ನಡೆಯಲಿದೆ.

ಕ್ವಾರ್ಟರ್-ಮೈಲರ್ ಸ್ನೇಹ್‌ಗೆ ನಿಷೇಧ ಬಿಸಿ

ಹೊಸದಿಲ್ಲಿ: ಭಾರತದ ಕ್ವಾರ್ಟರ್ ಮೈಲರ್ ಸ್ನೇಹ ಕೊಳ್ಳೇರಿ ಅವರಿಗೆ ಡೋಪಿಂಗ್ ಪ್ರಕರಣದಲ್ಲಿ ಮೂರು ವರ್ಷಗಳ ನಿಷೇಧ ವಿಧಿಸಲಾಗಿದೆ. ಕಳೆದ ವರ್ಷ ಏಷ್ಯನ್ ಚಾಂಪಿಯನ್‌ಶಿಪ್ ತಂಡದಿಂದ ಡೋಪ್ ಪರೀಕ್ಷೆಯಲ್ಲಿ ವಿಫಲವಾದ ಕಾರಣ ಹೊರಗಿಡಲಾಗಿದ್ದ 26 ವರ್ಷದ ಕೊಚ್ಚಿ ಮೂಲದ ಆಟಗಾರ್ತಿಗೆ ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್ ಮೂರು ವರ್ಷದ ನಿಷೇಧ ಹೇರಿದೆ. ಮಾಲಿನ್ಯಗೊಂಡ ಪೂರಕ ಆಹಾರದಿಂದ ಪರೀಕ್ಷಾ ಫಲಿತಾಂಶ ತಪ್ಪಾಗಿದೆ ಎಂಬ ಅವರ ವಾದವನ್ನು ಯೂನಿಟ್ ತಳ್ಳಿಹಾಕಿದೆ. ಇದಲ್ಲದೆ, ಚಂಡೀಗಢದಲ್ಲಿ ಸಂಗ್ರಹಿಸಲಾಗಿದ್ದ ಮಾದರಿಯ ಮರುಪರಿಶೀಲನೆ ವೇಳೆ, ದಿಲ್ಲಿಯಲ್ಲಿ ನಡೆದ ಪರೀಕ್ಷೆಯಲ್ಲಿ ನೆಗೆಟಿವ್ ಬಂದಿದ್ದರೂ, ನಂತರ ಅದು ನಿಷೇಧಿತ ಅನಾಬಾಲಿಕ್ ಸ್ಟೆರಾಯ್ಡ್ ಸ್ಟಾನೋಜೋಲಾಲ್ ಇರುವುದಾಗಿ ಪತ್ತೆಯಾಯಿತು. ಇದರಿಂದಾಗಿ ತಾತ್ಕಾಲಿಕ ಅಮಾನತು ಅವಧಿಯಲ್ಲೇ ಅವರ ವಿರುದ್ಧ ಮತ್ತೊಂದು ಡೋಪಿಂಗ್ ಆರೋಪವೂ ಸೇರಿಸಲಾಯಿತು. ಸ್ನೇಹ ಕೊಳ್ಳೇರಿ ಮೇ 10ರಂದು ಚೀನಾದ ಗ್ವಾಂಗ್‌ಜೌನಲ್ಲಿ ಸ್ಪರ್ಧೆಯ ವೇಳೆ ಪರೀಕ್ಷೆಗೆ ಒಳಪಟ್ಟಿದ್ದರು. ಭಾರತದಲ್ಲಿ ನಡೆದ ಹಲವು ಪರೀಕ್ಷೆಗಳಲ್ಲಿ ನೆಗೆಟಿವ್ ಫಲಿತಾಂಶ ಬಂದಿದ್ದರೂ, ಈ ಪರೀಕ್ಷೆಯಲ್ಲಿ ಸ್ಟಾನೋಜೋಲಾಲ್ ಪಾಸಿಟಿವ್ ಕಂಡುಬಂದಿತ್ತು. ಅಮಾನತು ಅವಧಿಯಲ್ಲಿ ಸ್ನೇಹ ಅವರು ಯಾವುದೇ ತಪ್ಪು ಮಾಡಿಲ್ಲ ಎಂದು ನಿರಾಕರಿಸಿದ್ದರು.



ಮಾರ್ಚ್ 28ಕ್ಕೆ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ತಂಡದ ಮಾಲಿಕ ಸಂಜೀವ್ ಗೋಯೆಂಕಾ, ನಾಯಕ ರಿಷಭ್ ಪಂತ್, ವೇಗಿ ಪ್ರಿನ್ಸ್ ಯಾದವ್ ಸೇರಿದಂತೆ ವಿವಿಧ ಆಟಗಾರರು ಅಯೋಧ್ಯೆಯ ರಾಮಲಲಾ ದರ್ಶನ ಪಡೆದರು.

ಬೆಂಗಳೂರಿನ ಥನುಷ್-ಧನುಷ್ ಏಷ್ಯಾ ಆಯ್ಕೆ

ಕಿರಿಯರ ಟೆನಿಸ್: ಭಾರತ ತಂಡದಲ್ಲಿ 2 ಕನ್ನಡಿಗರು

ಬೆಂಗಳೂರು: ಕನ್ನಡಿಗರಾದ 2ನೇ ಶ್ರೇಯಾಂಕಿತ ಥನುಷ್ ಶೇಖರ್ ಬಿ.ಸಿ. ಮತ್ತು ಮೂರನೇ ಶ್ರೇಯಾಂಕದ ಧನುಷ್ ಎಸ್.ಎಮ್ ಏಪ್ರಿಲ್ 13ರಿಂದ 17ರವರೆಗೆ ನೇಪಾಳದಲ್ಲಿ ನಡೆಯಲಿರುವ ಏಷ್ಯಾ ಅಂಡರ್-12 ಮತ್ತು ಅಂಡರ್ ಟೀಮ್ ಸ್ಪರ್ಧೆಗಳಲ್ಲಿ ಆಯ್ಕೆಯಾಗಿದ್ದಾರೆ. ಕರ್ನಾಟಕದ ಟೆನಿಸ್ ಪಟುಗಳು ವಿಶ್ವಾದ್ಯಂತ ಸದ್ದು ಮಾಡುತ್ತಿರುವುದು ಗೋಚರಿಸಿದೆ. ಮುಂದಿನ ತಿಂಗಳು ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಈ ಕೂಟದಲ್ಲಿ ಭಾರತದಿಂದ ಮೂರೇ ಜನರು ಆಯ್ಕೆಯಾಗಿದ್ದಾರೆ. ಅದರಲ್ಲೂ ಇಬ್ಬರು ಕನ್ನಡಿಗರು ಇದರಲ್ಲಿರುವುದು ಕರ್ನಾಟಕದ ಪಾರುಪತ್ಯ ಎತ್ತಿಹಿಡಿಯುತ್ತದೆ.

ಅಂಡರ್-12 ವಿಭಾಗದ ನಂಬರ್-1 ಸ್ಥಾನದಲ್ಲಿರುವ ರಿಯಾನ್ ಅತುಲ್ ನಂದನಕರ್ ಅವರು ಆಯ್ಕೆಯಾದವರಲ್ಲಿದ್ದಾರೆ. ಏಷ್ಯಾದ ಚಾಂಪಿಯನ್‌ಶಿಪ್ ಅನ್ನಿಸಿಕೊಳ್ಳುವ ಈ ಕೂಟಕ್ಕಾಗಿ ಅಗ್ರ ಶ್ರೇಯಾಂಕ ಹೊಂದ ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ. ಸದ್ಯ ಮೊದಲ ಮೂರು ಸ್ಥಾನಗಳಲ್ಲಿರುವ ಕನ್ನಡಿಗರಿಬ್ಬರೂ ಇದರಲ್ಲಿ ಆಯ್ಕೆಯಾಗಿದ್ದಾರೆ.

ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆ(ಐಟಿಎಫ್) ಮತ್ತು ಏಷ್ಯನ್ ಟೆನಿಸ್ ಸಂಸ್ಥೆ(ಎಟಿಎಫ್) ಮಾನ್ಯತೆಯೊಂದಿಗೆ ಭವಿಷ್ಯದ ಸ್ಟಾರ್‌ಗಳಿಗೆ ಪ್ರೋತ್ಸಾಹದ ರೂಪವಾಗಿ ಈ ಕೂಟವನ್ನು ಆಯೋಜಿಸಲಾಗುತ್ತದೆ. ಇದರಲ್ಲಿ 12 ವಯೋಮತಿ ಒಳಗಿನವರೇ ಇರುತ್ತಾರೆ. ಮಾದರಿಗೆ ಬಂದರೆ ಪಂದ್ಯವನ್ನು ನಿರ್ಧರಿಸುವಲ್ಲಿ ಮೂವರೂ ಆಟಗಾರರು ತಂಡವಾಗಿ ಆಟಬೇಕಾಗುತ್ತದೆ. ಅಂದರೆ ತಂಡದ ಪಂದ್ಯಾವಳಿ ಇದಾಗಿದೆ. ಎದುರಾಗುವ ಎರಡೂ ತಂಡಗಳಿಂದಲೂ ಇಬ್ಬರು ಸಿಂಗಲ್ಸ್ ಪಂದ್ಯಗಳನ್ನಾಡಿದರೆ, ಒಂದು ಡಬಲ್ಸ್ ಪಂದ್ಯ ಕೂಡ ಮೂವರಲ್ಲಿ ಇಬ್ಬರು ಆಡಬೇಕಾಗುತ್ತದೆ. ಹೆಚ್ಚಿನ ಪಂದ್ಯ ಗೆಲ್ಲುವ ತಂಡ ವಿಜೇತವಾಗುತ್ತದೆ. ದಕ್ಷಿಣ ಏಷ್ಯಾದ ಕ್ವಾಲಿಫೈ ಆಗುವ ತಂಡಗಳು ವರ್ಷಾಂತ್ಯದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಅಂಡರ್-12 ಮತ್ತು ಅಂಡರ್ ಟೀಮ್ ಚಾಂಪಿಯನ್‌ಶಿಪ್ ಫೈನಲ್‌ಗೆ ಅರ್ಹತೆ ಪಡೆಯುತ್ತವೆ.





> ಥನುಷ್ ಮತ್ತು ಧನುಷ್ ಅವರಿಗೆ ಈ ದೊಡ್ಡ ಸಾಧನೆಗಾಗಿ ಅಭಿನಂದನೆಗಳು. ಕರ್ನಾಟಕದ ಯುವ ಆಟಗಾರರು ದೇಶವನ್ನು ಪ್ರತಿನಿಧಿಸುತ್ತಿರುವುದು ವಿಶೇಷ. ಇಂತಹ ಪಂದ್ಯಾವಳಿಗಳಲ್ಲಿ ಭಾಗವಹಿಸುವುದರಿಂದ ಆಟಗಾರರಿಗೆ ಭರವಸೆ ಮೂಡುತ್ತದೆ. ಸಿನಿಯರ್ ಮಟ್ಟದಲ್ಲಿ ಮಿಂಚಲು ಅನುವು ಮಾಡಿಕೊಡುತ್ತದೆ.
>
> ■ ಸುನಿಲ್ ಯಜಮಾನ, ಜಂಟಿ ಕಾರ್ಯದರ್ಶಿ ಕೆಎಸ್‌ಎಲ್‌ಟಿಎ

ಕೋಲ್ಕತ್ತಾ ನೈಟ್ ರೈಡರ್ಸ್ ಪಡೆಗೆ ಭಾರೀ ಪೆಟ್ಟು

ಆಟಗಾರರು ಅಲಭ್ಯ ತಂಡಗಳಿಗೆ ಗಾಯ





ಕೋಲ್ಕತ್ತಾ: ಹರಾಜಿನಲ್ಲಿ ಗುಣಮಟ್ಟದ ಪಸ್‌ರ್ನೊಂದಿಗೆ ವಿವಿಧ ಬಲಿಷ್ಠ ವೇಗಿಗಳನ್ನು ಆಯ್ಕೆ ಮಾಡಿಕೊಂಡಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಆಟಗಾರರ ಅಲಭ್ಯತೆ ಭಾರೀ ಹಿನ್ನಡೆ ತರುತ್ತಿದೆ.

ಗಾಯಗೊಂಡು ಪಂದ್ಯಾವಳಿಯಿಂದ ಹೊರಬೀಳುತ್ತಿರುವ ಆಟಗಾರರ ಸಂಖ್ಯೆ ಹೆಚ್ಚಾಗುತ್ತಿದೆ. ಕೆಕೆಆರ್ ತಂಡಕ್ಕೆ ಇದು ದೊಡ್ಡ ಆಘಾತ ನೀಡಿದೆ. ಆಕಾಶ್ ದೀಪ್ ಅವರ ಅಲಭ್ಯತೆ ಕೆಕೆಆರ್ ತಂಡಕ್ಕೆ ತೀರಾ ಆಘಾತ ನೀಡಿದೆ. ಹರ್ಷಿತ್ ರಾಣಾ, ಮಥೀಶಾ ಪಥಿರಾಣ ಪಂದ್ಯಾವಳಿಯಿಂದ ಆಗಲೇ ಹೊರಬಿದ್ದಿದ್ದಾರೆ. ಇದೀಗ ಮತ್ತೊಬ್ಬ ವೇಗಿ ಆಕಾಶ್‌ದೀಪ್ ಕೂಡ ಹಿನ್ನಡೆ ಅನುಭವಿಸಿದ್ದು, ತಂಡದ ವೇಗ ವಿಭಾಗದ ಮೇಲೆ ಪರಿಣಾಮಕಾರಿ ಪೆಟ್ಟು ಬಿದ್ದಂತಿದೆ.

ಪಂದ್ಯಾವಳಿಯಿಂದ ತಂಡದ ಮೂರನೇ ವೇಗಿ ಔಟ್

ಬಂಗಾಳದ ಆಕಾಶ್‌ದೀಪ್ ಈ ಹಿಂದೆ ನಡೆದಿದ್ದ ರಣಜಿ ಪಂದ್ಯಾವಳಿಯ ವೇಳೆ ಗಾಯಗೊಂಡಿದ್ದರು. ಹಲವು ದಿನಗಳಿಂದ ಚೇತರಿಕಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದ ಅವರು, ಸದ್ಯ ಬೆಂಗಳೂರಿನ ಶ್ರೇಷ್ಠತಾ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿದ್ದಾರೆಂದು ವರದಿಯಾಗಿದೆ. ಆದಾಗ್ಯೂ, ಮೂಲಗಳ ಪ್ರಕಾರ ಅವರು ಇನ್ನೂ ಫಿಟ್ ಆಗಬೇಕಿರುವದಿರಂದ ಪಂದ್ಯಾವಳಿಯಿಂದ ಹೊರಬೀಳುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.

ಅಭಿಷೇಕ್ ನಾಯರ್ ಈ ಬಗ್ಗೆ ಮಾತನಾಡಿದ್ದು, ಈ ವರೆಗೆ ಮೂವರು ಹೊರಬಿದ್ದಿದ್ದಾರೆ. ಇವರ ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬೇಕಿದೆ ಎಂದು ಸುಳಿವು ನೀಡಿದ್ದಾರೆ.

ವೇಗದ ವಿಭಾಗದಲ್ಲಿ ಈಗಾಗಲೇ ರೆಹಮಾನ್, ಹರ್ಷಿತ್ ರಾಣಾ ಮತ್ತು ಆಕಾಶ್‌ದೀಪ್ ಹೊರಬಿದ್ದಿದ್ದಾರೆ. ಇವರ ಬದಲಿಗೆ ಬಿಕರಿಯಾಗದ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಫ್ರಾಂಚೈಸಿ ಮುಂದಾಗಬಹುದು.

ಅಭ್ಯಾಸಕ್ಕೆ ಬಾರದ ಆರ್‌ಸಿಬಿ ವೇಗಿ ದಯಾಳ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ವೇಗಿ ಯಶ್ ದಯಾಳ್ ಅಭ್ಯಾಸಕ್ಕೆ ಹಾಜರಾಗಿಲ್ಲ. ಮುಂದಿನ ವಾರ ಬೆಂಗಳೂರಿನಲ್ಲೇ ನಡೆಯಲಿರುವ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ತಂಡಗಳು ಎದುರಾಗಲಿವೆ. ಇಂಡಿಯನ್ ಪ್ರೀಮಿಯರ್ ಲೀಗ್ ಹತ್ತಿರ ಬರುತ್ತಿದ್ದಂತೆ ಎಲ್ಲಾ ತಂಡದ ಆಟಗಾರರು ತಮ್ಮ ತಮ್ಮ ಕ್ಯಾಂಪ್‌ಗಳಿಗೆ ಸೇರಿಕೊಂಡಿದ್ದಾರೆ. ಅಭ್ಯಾಸ ಜೋರಾಗಿದೆ. ಇತ್ತ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲೂ ಅಭ್ಯಾಸದ ಕಹಳೆ ಜೋರಾಗಿದೆ. ಹಾಲಿ ಚಾಂಪಿಯನ್ ಆರ್‌ಸಿಬಿ ತಂಡದ ಎಲ್ಲಾ ಆಟಗಾರರು ಮೈದಾನ ಸೇರಿಕೊಂಡಿದ್ದಾರೆ. ಆದರೆ ಕಳೆದ ಬಾರಿ ಪ್ರಮುಖ ಪಾತ್ರ ವಹಿಸಿದ್ದ ಯಶ್ ದಯಾಳ್ ಮಾತ್ರ ಶುಕ್ರವಾರದ ಅಭ್ಯಾಸದ ವೇಳೆ ಕಾಣಿಸಿಕೊಂಡಿಲ್ಲ, ಲೈಂಗಿಕ ದೌರ್ಜನ್ಯದ ಪ್ರಕರಣವನ್ನು ಎದುರಿಸುತ್ತಿರುವ ಅವರು, ಎರಡು ಕೇಸುಗಳಿಂದ ಇನ್ನೂ ಸಂಪೂರ್ಣವಾಗಿ ಮುಕ್ತಾಗಬೇಕಿದೆ. ಇದಲ್ಲದೆ ಇತ್ತೀಚೆಗಷ್ಟೇ ದಯಾಳ್ ಮದುವೆ ಮಾಡಿಕೊಂಡಿದ್ದಾರೆ. ಈ ಮಧ್ಯೆ ತಂಡದಲ್ಲಿ ಕಾಣಿಸಿಕೊಳ್ಳದಿರುವುದು ಆರ್‌ಸಿಬಿ ಅಭಿಮಾನಿಗಳಲ್ಲಿ ನಿಗೂಢ ಪ್ರಶ್ನೆಯೊಂದನ್ನಿಟ್ಟಿದೆ. ಇದಲ್ಲದೆ, ಬೆಂಗಳೂರಿನ ಆಟಗಾರರನ್ನು ಸ್ಥಳಾಂತರಿಸುವ ಬಸ್ ಮೇಲೆ ಎಲ್ಲಾ ಆಟಗಾರರ ಚಿತ್ರವಿದ್ದರೂ ಯಶ್ ದಯಾಳ್ ಅವರ ಚಿತ್ರ ಇಲ್ಲದಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ.

ಲಂಕಾ ಕ್ರಿಕೆಟಿಗರ ಫಿಟ್ನೆಸ್ ಟೆಸ್ಟ್

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ತನ್ನ ದೇಶದ ಆಟಗಾರರಿಗೆ ನಿರಾಕ್ಷೇಪಣಾ ಪತ್ರ ನೀಡುವ ಮೊದಲು ಕೆಲವು ಆಟಗಾರರಿಗೆ ಫಿಟ್ನೆಸ್ ಪರೀಕ್ಷೆಗೆ ಒಳಗಾಗಿಸಲಿದೆ. ಕೆಕೆಆರ್ ತಂಡಕ್ಕೆ ಆಯ್ಕೆಯಾಗಿರುವ ಮತೀಶ ಪಥಿರಾಣ, ಲಖನೌ ತಂಡದ ವನಿಂದು ಹಸ್ರಂಗಾ, ಹೈದರಾಬಾದ್‌ನ ಈಶಾನ್ ಮಾಲಿಂಗಾ ಮತ್ತು ಬೆಂಗಳೂರು ತಂಡದ ತುಷಾರಾ ನಿರಾಕ್ಷೇಪಣಾ ಪತ್ರ ಪಡೆಯಬೇಕಿದೆ. ಸೋಮವಾರ ಮತ್ತು ಮಂಗಳವಾರದಂದು ಶ್ರೀಲಂಕಾ ಕ್ರಿಕೆಟ್ ಸಂಸ್ಥೆ ವಿವಿಧ ಆಟಗಾರರ ಫಿಟ್ನೆಸ್ ಪರೀಕ್ಷೆ ತೆಗೆದುಕೊಳ್ಳಲಿದೆ. ಮೇಲಿನ ಆಟಗಾರರೆಲ್ಲರೂ ಇದರಲ್ಲಿ ಭಾಗಿಯಾಗಲಿದ್ದಾರೆ. ಚಮೀರಾ, ನಿಸ್ಸಂಕಾ ಮತ್ತು ಮೆಂಡೀಸ್ ಮಾತ್ರ ಈಗಾಗಲೇ ಫಿಟ್ನೆಸ್ ಪ್ರಮಾಣ ಪಡೆದುಕೊಂಡಿದ್ದಾರೆ. ಅವರಿಗೆ ಸಂಸ್ಥೆ ನಿರಾಕ್ಷೇಪಣಾ ಪತ್ರ ಕೂಡ ನೀಡಿದೆ.

ವಿಂಬಲ್ಡನ್‌ಗೂ ಬಂತು ಡಿಆರ್‌ಎಸ್ ವ್ಯವಸ್ಥೆ!

ಲಂಡನ್: ಅಂಪೈರ್‌ಗಳ ನಿರ್ಣಯವನ್ನು ಮರುಪರಿಶೀಲನೆ ಮಾಡುವ ವಿಡಿಯೋ ರಿವೀವ್ ವ್ಯವಸ್ಥೆ ಇದೀಗ ಟೆನಿಸ್‌ಗೂ ಬಂದಿದೆ. ಇದೇ ಮೊದಲ ಬಾರಿಗೆ ಈ ವರ್ಷದ ವಿಂಬಲ್ಡನ್ ಗ್ರ್ಯಾಂಡ್‌ಸ್ಲಾಮ್ ಪಂದ್ಯಾವಳಿಗೆ ಕ್ಯಾಮರಾ ರಿವೀವ್ ಇರುವುದಾಗಿ ಸಂಸ್ಥೆ ಶನಿವಾರ ತಿಳಿಸಿದೆ.

ಇಂಗ್ಲೆಂಡ್‌ನಲ್ಲಿ ನಡೆಯುವ ದೊಡ್ಡ ಗ್ರ್ಯಾಂಡ್‌ಸ್ಲಾಮ್ ಅನ್ನಿಸುವ ವಿಂಬಲ್ಡನ್‌ನಲ್ಲಿ ಇಷ್ಟು ವರ್ಷ ಚೇರ್ ಅಂಪೈರ್ ನೀಡುವ ನಿರ್ಧಾರವೇ ಅಂತಿಮವಾಗಿತ್ತು. ಆದರೆ ಮೊದಲ ಬಾರಿಗೆ ಅಂಪೈರ್‌ಗಳ ನಿರ್ಣಯವನ್ನು ಪ್ರಶ್ನಿಸುವ ಅಧಿಕಾರ ಆಟಗಾರರಿಗೆ ನೀಡಲಾಗಿದೆ. ಇದಕ್ಕೆ ಎಲೆಕ್ಟ್ರಾನಿಕ್ ಲೈನ್ ಕಾಲಿಂಗ್ ಎಂಬ ಹೆಸರನ್ನಿಡಲಾಗಿದೆ. ಎರಡು ಬಾರಿ ಬಾಲು ನೆಲಕ್ಕೆ ಪುಟದಿರುವ ವಿಚಾರ, ಆಟಗಾರರಿಗೆ ತಾಗಿದ ವಿಚಾರವನ್ನು ಮರುಪರಿಶೀಲನೆ ನಡೆಸುವ ಹಂತಕ್ಕೇರಬಹುವುದು.

ಆಟಗಾರರು ಪಾಯಿಂಟ್-ಎಂಡಿಂಗ್ ಕರೆಯ ಸಮಯದಲ್ಲಿ, ಆಟಗಾರನು ತಕ್ಷಣವೇ ಆಟವನ್ನು ನಿಲ್ಲಿಸಿದಾಗ ಅಥವಾ ಪಾಯಿಂಟ್ ಪೂರ್ಣಗೊಂಡ ತಕ್ಷಣ (ಅಡೆತಡೆಯ ಸಂದರ್ಭದಲ್ಲಿ) ಚೇರ್ ಅಂಪೈರ್ ಮಾಡಿದ ನಿರ್ದಿಷ್ಟ ತೀರ್ಪಿನ ಕರೆಗಳನ್ನು (ಉದಾಹರಣೆಗೆ, 'ನಾಟ್-ಅಪ್', 'ಫೌಲ್ ಶಾಟ್', 'ಟಚ್') ಪರಿಶೀಲಿಸಲು ಅನುಮತಿಸಲಾಗುತ್ತದೆ, ಎಂದು ಆಲ್ ಇಂಗ್ಲೆಂಡ್ ಲಾನ್ ಟೆನಿಸ್ ಮತ್ತು ಕ್ರೋಕೆಟ್ ಕ್ಲಬ್ ಹೇಳಿಕೆಯಲ್ಲಿ ತಿಳಿಸಿದೆ.

ಮಾ.24ರಿಂದ ರಾಷ್ಟ್ರ ಮಟ್ಟದ ಪವರ್ ಲಿಫ್ಟಿಂಗ್

ಮಂಗಳೂರು: ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಶನ್ ಆಶ್ರಯದಲ್ಲಿ, ಕಶಾರ್ಪ್ ಫಿಟ್ನೆಸ್ ವತಿಯಿಂದ ರಾಷ್ಟ್ರಮಟ್ಟದ ಸೀನಿಯರ್ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಮಾ.24ರಿಂದ 28ರವರೆಗೆ ಮಂಗಳೂರಿನ ಟಿ.ವಿ.ರಮಣ ಪೈ ಸಭಾಂಗಣದಲ್ಲಿ ನಡೆಯಲಿದೆ.

ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ವಿಜೇತರು ಲಿಥುವೇನಿಯಾದಲ್ಲಿ ಜೂನ್‌ನಲ್ಲಿ ನಡೆಯಲಿರುವ ವಿಶ್ವ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಲಿದ್ದಾರೆ. ಸ್ಪರ್ಧೆಯಲ್ಲಿ ಸ್ಕ್ವಾಟ್, ಬೆಂಚ್‌ಪ್ರೆಸ್ ಮತ್ತು ಡೆಡ್‌ಲಿಫ್ಟ್ ವಿಭಾಗಗಳಿದ್ದು, ಮಾ.24ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆ ನಡೆಯಲಿದೆ ಎಂದು ಚಾಂಪಿಯನ್‌ಶಿಪ್‌ನ ನಿರ್ದೇಶಕ ಸತೀಶ್ ಕುಮಾರ್ ಕುದ್ರೋಳಿ ತಿಳಿಸಿದ್ದಾರೆ.



5 ದಿನಗಳ ಈ ಚಾಂಪಿಯನ್‌ಶಿಪ್‌ನಲ್ಲಿ ವಿವಿಧ ರಾಜ್ಯಗಳ 300ಕ್ಕೂ ಅಧಿಕ ಪುರುಷ ಹಾಗೂ ಮಹಿಳಾ ಪವರ್ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಮಾನದಂಡಗಳಡಿ ಈ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದ್ದು, ಎಲ್ಲಾ ರೀತಿಯ ಸೌಲಭ್ಯಗಳನ್ನು ಸಂಸ್ಥೆ ವತಿಯಿಂದ ಒದಗಿಸಲಾಗುವುದು ಎಂದು ಕಶಾರ್ಪ್ ಫಿಟ್ನೆಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಪ್ರದೀಪ್ ಕುಮಾರ್ ತಿಳಿಸಿದರು.ಬೇರೆ ಕ್ರೀಡೆಗಳಿಗೆ ಹೋಲಿಸಿದರೆ ಪವರ್ ಲಿಫ್ಟಿಂಗ್ ಭಾರತದಲ್ಲಿ ಅಧಿಕ ಪದಕಗಳನ್ನು ತರುವ ಕ್ರೀಡೆಯಾಗಿದೆ. ಈ ಕ್ರೀಡೆಗೆ ಇನ್ನಷ್ಟು ಬೆಂಬಲದ ಅಗತ್ಯವಿದೆ ಎಂದು ಅವರು ಹೇಳಿದರು.

ಸವಾಲುಗಳನ್ನೆದುರಿಸಲು ಸಜ್ಜು: ಕೊಹ್ಲಿ | ಹೊಸಬರಿಗೆ ಸ್ವಾಗತ

ಕಪ್ ಉಳಿಸಿಕೊಳ್ಳಲು ಸನ್ನದ್ಧ

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಟ್ರೋಫಿ ಉಳಿಸಿಕೊಳ್ಳಲು ಸಜ್ಜಾಗಿದೆ. ಶಿಸ್ತು ಬದ್ಧ ಅಭ್ಯಾಸ ಆರಂಭಿಸಿರುವ ತಂಡವು ವಿಶೇಷ ಸೆಷನ್‌ಗಳನ್ನು ನಡೆಸಿತು.

ನಾವು ಟ್ರೋಫಿ ಉಳಿಸಿಕೊಳ್ಳಲು ಪಡಬೇಕಾದ ಶ್ರಮವನ್ನು ಪಟ್ಟಿದ್ದೇವೆ. ಕಳೆದ ಎರಡು-ಮೂರು ದಿನಗಳಲ್ಲಿ ನಾವು ಹೆಚ್ಚಿನ ಅಭ್ಯಸವನ್ನೂ ಮಾಡಿದ್ದೇವೆ, ಕಳೆದ ಬಾರಿ ಮಾಡಿದ ಸಾಧನೆ ಮತ್ತೊಮ್ಮೆ ಮಾಡಲು ನಾವು ಸಿದ್ಧವಾಗಿದ್ದೇವೆ ಎಂದು ಅಭ್ಯಾಸದ ವೇಳೆ ತಂಡದೊಂದಿಗೆ ಮಾತನಾಡುತ್ತಾ ವಿರಾಟ್ ಕೊಹ್ಲಿ ಹೇಳಿದರು. ಟ್ರೋಫಿ ಸಾಧಿಸುವುದಕ್ಕೆ ಕೇವಲ ಸಾಮಾನ್ಯ ಅಭ್ಯಾಸ ಮಾಡಿದರೆ ಸಾಲದು. ನಾವು ಗುಣಮಟ್ಟದ ಅಭ್ಯಾಸ ಮಾಡಬೇಕಿದೆ, ಒಂದೇ ಒಂದು ಕ್ಷಣವನ್ನೂ ನಾವು ಸುಮ್ಮನಿರಲಾಗಲ್ಲ. ಕಪ್‌ಗಾಗಿ ನಾವು ನಮ್ಮ 120 ರಷ್ಟು ಶ್ರಮವನ್ನು ಪಡಬೇಕು ಎಂದು ಹೇಳಿದ್ದಾರೆ.

ಹೊಸ ಆಟಗಾರರಿಗೆ ಸ್ವಾಗತ:

ಇದೇ ಮೊದಲ ಬಾರಿಗೆ ತಂಡ ಸೇರಿಕೊಂಡ ಆಟಗಾರರನ್ನು ಪ್ರಮುಖ ಕೋಚ್ ಆ್ಯಂಡಿ ಫ್ಲಾವರ್ ಸ್ವಾಗತಿಸಿದರು. ವೆಂಕಟೇಶ್ ಅಯ್ಯರ್, ಮಂಗೇಶ್ ಯಾದವ್, ಜಾರ್ಡನ್ ಕಾಕ್ಸ್, ವಿಕಿ ಓಸ್ತವಾಲ್, ಸಾತ್ವಿಕ್ ದೇಶ್ವಾಲ್, ಮತ್ತು ವಿಶೇಷವಾಗಿ ಅಂಡರ್-19 ತಂಡದಲ್ಲಿ ಗಮನ ಸೆಳೆದಿರುವ ಕನಿಷ್ಕ್ ಚೌಹಾಣ್ ಮತ್ತು ವಿಹಾನ್ ಮಲಹೋತ್ರಾ ಅವರನ್ನು ಉದ್ದೇಶಿಸಿ ಮಾತನಾಡಿದ ಆ್ಯಂಡಿ, ನಾವು ಹರಾಜಿನಲ್ಲಿ ಅತ್ಯುತ್ತಮ ಆಟಗಾರರನ್ನು ಖರೀದಿಸಿದ್ದೇವೆ. ಕಳೆದ ಬಾರಿಯ ತಂಡವನ್ನು ಇನ್ನಷ್ಟು ಬಲಿಷ್ಠಗೊಳಿಸಿದ್ದೇವೆ. ಮುಖ್ಯವಾಗಿ ಯುವ ಆಟಗಾರರನ್ನು ಒಗ್ಗೂಡಿಸಿದ್ದೇವೆ. ವಿರಾಟ್ ಕೊಹ್ಲಿ ಮತ್ತು ರಜತ್ ಪಾಟಿದಾರ್ ಅವರ ನಾಯಕತ್ವದಲ್ಲಿ ಅವರಿಗೆ ಸ್ವಾಗತಿಸುತ್ತೇನೆ ಎಂದರು.

> ಎಲ್ಲರೂ ಒಬ್ಬರಿಗೊಬ್ಬರನ್ನು ಭೇಟಿ ಮಾಡಲು ಉತ್ಸುಕರಾಗಿದ್ದೆವು. ಹೊಸ ಮುಖಗಳನ್ನು ನಾವು ತಂಡದಲ್ಲಿ ಸ್ವಾಗತಿಸುತ್ತೇವೆ, ನಾನು ವೈಯಕ್ತಿಕವಾಗಿ ನೆಟ್ಸ್‌ನಲ್ಲಿ ಆಡಲು ಉತ್ಸುಕನಾಗಿದ್ದೆ. ನನಗೆ ಹೆಚ್ಚಿನ ಬ್ಯಾಟಿಂಗ್ ಸಿಗಲಿದೆ. ನೆಟ್ಸ್‌ನಲ್ಲಿ ಕೋಚ್‌ಗಳ ಮಧ್ಯೆ ಹೊಸ ಕಲಿಕೆ ಸಿಗಲಿದೆ.
>
> ■ ಜಿತೇಶ್ ಶರ್ಮ, ವಿಕೆಟ್ ಕೀಪರ್-ಬ್ಯಾಟರ್



ಈ ವರ್ಷ ಆಟವೇ ಬೇರೆಯದ್ದು. ಹೊಸ ಆಟಗಾರರನ್ನು ಹೊಂದಿರುವುದು ಸಮಸ್ತ ಆರ್‌ಸಿಬಿ ಅಭಿಮಾನಿಗಳಿಗೆ ಹೆಮ್ಮೆ ತಂದಿದೆ. ಕಪ್ ಕೂಡ ನಮ್ಮದಾಗಿಸಿಕೊಂಡಿದ್ದೇವೆ. ಆದರೆ ಕಾಲ ಮುಗಿದಿದೆ. ಇದು ಹೊಸ ಆವೃತ್ತಿ, ನಾವು ಹೊಸ ಹೊಸ ಸವಾಲುಗಳನ್ನು ಎದುರಿಸಲಿದ್ದೇವೆ. ಅದೇ ನಮಗೆ ತುಂಬಾ ರೋಮಾಂಚನಕಾರಿಯಾದ ವಿಷಯ. ಈ ಬಾರಿಯ ಐಪಿಎಲ್ ಅನ್ನೂ ಗೆಲ್ಲಲು ನಾವು ಇಲ್ಲಿದ್ದೇವೆ ಎಂದರು.

ಇಂಡಿಯನ್ ಓಪನ್‌ನಲ್ಲಿ ಸ್ಥಳೀಯರದ್ದೇ ದರ್ಬಾರ್

ಸ್ಕ್ವ್ಯಾಷ್: ಸೆಮಿಗೆ 4 ಭಾರತೀಯರು

ಮುಂಬೈ: ಭಾರತದ ಪ್ರಮುಖ ಸ್ಕ್ವ್ಯಾಷ್ ಆಟಗಾರರಾದ ಅಭಯ್ ಸಿಂಗ್, ವೀರ್ ಚೆಟ್ರೋನಿ, ಅನಹತ್ ಸಿಂಗ್ ಹಾಗೂ ತನ್ವಿ ಕುಮಾರ್ ತಮ್ಮ ಪ್ರಾಬಲ್ಯ ಮುಂದುವರಿಸಿ ಸೆಮಿಗೇರಿದ ನಂತರ ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವ್ಯಾಷ್ ಪಂದ್ಯಾವಳಿಯಲ್ಲಿ ಭಾರತದ ಪಾರುಪತ್ಯ ಮುಂದೆ ಸಾಗಿದೆ.

ಪ್ರಾಬಲ್ಯಭರಿತ ಪ್ರದರ್ಶನದೊಂದಿಗೆ ಮಿಂಚಿದ ಭಾರತದ ಪ್ರಮುಖ ಆಟಗಾರರು ಕ್ವಾರ್ಟರ್‌ಫೈನಲ್‌ನಲ್ಲಿ ಕರಾರುವಾಕ್ ಪ್ರದರ್ಶನೊಂದಿಗೆ ಭಾರೀ ಗೆಲುವು ಸಾಧಿಸಿದರು.

ಅಭಯ್ ಮಿಂಚಿನಾಟ: ಜೀವಾ ಇಜಿಪ್ಟ್‌ನ ಇಬ್ರಾಹಿಂ ಎಲ್ ಕಬ್ಬಾನಿ ಅವರನ್ನು ಎದುರಿಸಿ 3-0(11-8, 11-7, 11-8) ರಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು. ಇಜಿಪ್ಟ್‌ನ ಯಾಸ್ಸಿನ್ ಶೋಹ್ದಿ ಅವರನ್ನು ಎದುರಿಸಿದ್ದ ಭಾರತದ ಭರವಸೆಯ ಆಟಗಾರ ಅಭಯ್ ಸಿಂಗ್ ಕರಾರುವಾಕ್ ಪ್ರದರ್ಶನದೊಂದಿಗೆ 3-1 (11-8, 7-11, 11-5, 11-7) ರಿಂದ ಗೆದ್ದರು. ಅತ್ಯುತ್ತಮ ಆರಂಭ ಪಡೆದ ಭಾರತದ ಹಿರಿಯ ಆಟಗಾರ ಅಭಯ್ ಎದುರಾಳಿಗೆ ಮೊದಲಿನಿಂದಲೂ ಕಡಿವಾಣ ಹಾಕಿದರು. ಮೊದಲನೇ ಸೆಟ್‌ನಲ್ಲಿ ನಿಯಂತ್ರಿತ ಪ್ರದರ್ಶನದೊಂದಿಗೆ 11-8ರಿಂದ ಗೆದ್ದ ಅಭಯ್ ಎರಡನೇ ಸುತ್ತಿನಲ್ಲಿ ನಿರಾಸೆ ಅನುಭವಿಸಿದರೂ ಮೂರನೇ ಸುತ್ತಿನಲ್ಲಿ ಮತ್ತೆ ಪುಟಿದೆದ್ದರು. ಐದನೇ ಸೆಟ್‌ಗೆ ಕೊಂಡೊಯ್ಯದೆ ನಾಲ್ಕು ಸೆಟ್‌ಗಳಲ್ಲೇ ಪಂದ್ಯ ಮುಗಿಸಿದ ಅವರು, ಸೆಮಿಗೆ ಸಿದ್ಧರಾದರು. ಇದಕ್ಕೂ ಮೊದಲು ಚೆಟ್ರೋನಿ ತಮ್ಮ ಆಕ್ರಮಣಕಾರಿ ಆಟದೊಂದಿಗೆ ಮಿಂಚಿದರು. ಇಜಿಪ್ಟ್‌ನ ಮೊಹಮ್ಮದ್ ಶರಫ್ ಅವರನ್ನು ಎದುರಿಸಿದ್ದ ಅವರು, ಮೂರೇ ಮೂರು ಸೆಟ್‌ಗಳಲ್ಲಿ ಕ್ಲೀನ್‌ಸ್ವಿಪ್ ಮಾಡಿದರು. ನಿಯಂತ್ರಿತ ಆಟದೊಂದಿಗೆ ಮೊದಲಿನ ಸೆಟ್‌ನಲ್ಲಿ 11-9, ಎರಡನೇ ಸೆಟ್‌ನಲ್ಲಿ 11-8, ಹಾಗೂ ಮೂರನೇ ಸೆಟ್‌ನಲ್ಲಿ 11-2ರಿಂದ ಭರ್ಜರಿ ಗೆಲುವು ಸಾಧಿಸಿ ಸೆಮಿಫೈನಲ್‌ಗೇರಿದರು.



ಮಹಿಳೆಯರಲ್ಲೂ ಪ್ರಾಬಲ್ಯ: ಯುವ ಆಟಗಾರ್ತಿ ಅನಾಹತ್ ಸಿಂಗ್ ಮತ್ತು ಶ್ರೇಯಾಂಕ ರಹಿತ ಆಟಗಾರ್ತಿ ತನ್ವಿ ಖನ್ನಾ ಅವರು ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿದರು. ಮೊದಲಿನೇ ಸುತ್ತಿನ ಪಂದ್ಯದಿಂದಲೂ ಈ ಇಬ್ಬರೂ ಕರಾರುವಾಕ್ ಪ್ರದರ್ಶನವನ್ನೇ ನೀಡುತ್ತಾ ಬಂದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಲೇಷ್ಯಾದ ಸೆಹವೀತ್ರಾ ಕುಮಾರ್ ಅವರನ್ನು ಎದುರಿಸಿದ್ದ ಅನಾಹತ್ ಸಿಂಗ್ 30 (11-2, 11-6, 11-4)ರಿಂದ ಭರ್ಜರಿ ಗೆಲುವು ಸಾಧಿಸಿದರು. ಮೊದಲಿನಿಂದಲೂ ಪಂದ್ಯದಲ್ಲಿ ಹಿಡಿತ ಸಾಧಿಸಿದ ಅವರು, ಕೊನೆಯವರೆಗೂ ಎದುರಾಳಿಗೆ ಅವಕಾಶವೇ ನೀಡಲಿಲ್ಲ, ನಾಲ್ಕನೇ ಸೀಡ್‌ನ ಐನಾ ಅಮಾನಿ ಅವರನ್ನು ಎದುರಿಸಿದ್ದ ತನ್ವಿ 3-1ರಿಂದ ಗೆಲುವು ಸಾಧಿಸಿ ಮುನ್ನಡೆದರು. ಜೋಶ್ನಾ ಕ್ವಾರ್ಟರ್‌ಫೈನಲ್‌ನಲ್ಲಿ ಹಿನ್ನಡೆ ಅನುಭವಿಸಿದರು.

ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಕೂಟಕ್ಕೆ ಸಿದ್ಧತೆ

ತುಮಕೂರಲ್ಲಿ ಅಂತಾರಾಷ್ಟ್ರೀಯ ಟೆನಿಸ್

ಬೆಂಗಳೂರು: ಇಲ್ಲಿನ ವಿಶ್ವವಿದ್ಯಾಲಯ ಆವರಣದ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿ ನಡೆಯಲಿದೆ. ಮೇ 4ರಿಂದ 10ರವರೆಗೆ ತುಮಕೂರಿನಲ್ಲಿ ಟೆನಿಸ್ ಹಬ್ಬ ನೆರವೇರಲಿದೆ. ಸುಮಾರು 30,000 ಡಾಲರ್ ಬಹುಮಾನ ಮೊತ್ತದ ಈ ಸ್ಪರ್ಧೆ ತುಮಕೂರಿನ ಇತಿಹಾಸದಲ್ಲೇ ಮೊದಲ ಮಹಿಳಾ ಐಟಿಎಫ್ ಟೂರ್ನಿಯಾಗಿದ್ದು, ಎರಡು ದಶಕಗಳ ನಂತರ ಮತ್ತೆ ಅತಾರಾಷ್ಟ್ರೀಯ ಟೆನಿಸ್ ಕ್ರೀಡೆಗೆ ವೇದಿಕೆಯಾಗುತ್ತಿದೆ.

ಈ ಸ್ಪರ್ಧೆಯಲ್ಲಿ 32 ಆಟಗಾರ್ತಿಯರ ಮುಖ್ಯ ಡ್ರಾ ಹಾಗೂ ಅರ್ಹತಾ ಸುತ್ತುಗಳ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಯುವ ಆಟಗಾರ್ತಿಯರು ಮತ್ತು ಭಾರತದ ಶ್ರೇಷ್ಠ ಆಟಗಾರ್ತಿಯರು ಭಾಗವಹಿಸಲಿದ್ದಾರೆ. ಇದು ವಿಶ್ವ ಟೆನಿಸ್ ಸಂಘಟನೆಯ ಸರ್ಕ್ಯೂಟ್‌ನ ಭಾಗವಾಗಿದ್ದು, ಆಟಗಾರ್ತಿಯರಿಗೆ ರ್‍ಯಾಂಕಿಂಗ್ ಅಂಕಗಳನ್ನು ಗಳಿಸಲು ಅವಕಾಶ ಒದಗಿಸುತ್ತದೆ.




ವರ್ಷಗಳ ನಂತರ ಟೆನಿಸ್: 2003ರಲ್ಲಿ ತುಮಕೂರಿನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೂರ್ನಿಯ ನಂತರ ಇದೇ ಮೊದಲ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಾಗಿದೆ. ಆ ಸಂದರ್ಭದಲ್ಲಿ ರೋಹನ್ ಬೋಪಣ್ಣ, ಪ್ರಕಾಶ್ ಅಮೃತರಾಜ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಜರ್ಮನಿಯ ಫಿಲಿಪ್ ಕೊಹ್ಲ್‌ಶ್ರೈಬರ್ ಪ್ರಶಸ್ತಿ ಗೆದ್ದಿದ್ದು, ಮಾರ್ಕೋಸ್ ಬಾಗ್ದಾತಿಸ್ ಸೆಮಿಫೈನಲ್ ತಲುಪಿದ್ದರು. ಸಚಿವ ಪ್ರಿಯಾಂಕ್ ಖರ್ಗೆ ಅವರು, ತುಮಕೂರಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿ ಆಯೋಜನೆ ನಮ್ಮ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಇದು ರಾಜ್ಯದ ಯುವ ಪ್ರತಿಭೆಗಳಿಗೆ ಪ್ರೇರಣೆ ನೀಡಲಿದೆ ಎಂದು ಹೇಳಿದರು. ಒಟ್ಟಿನಲ್ಲಿ, ದೇಶ-ವಿದೇಶದ ಆಟಗಾರ್ತಿಯರು ಭಾಗವಹಿಸುವ ಈ ಐಟಿಎಫ್ ಡಬ್ಲ್ಯು35 ಟೂರ್ನಿ ತುಮಕೂರಿನ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವ ನಿರೀಕ್ಷೆಯಿದೆ ಎಂದಿದ್ದಾರೆ.

ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅವರು, ಇದು ತುಮಕೂರಿಗೆ ಹೆಮ್ಮೆಯ ಕ್ಷಣ. ಎರಡು ದಶಕಗಳ ನಂತರ ಇಂತಹ ದೊಡ್ಡ ಮಟ್ಟದ ಟೂರ್ನಿ ಆಯೋಜನೆ ನಮ್ಮ ಜಿಲ್ಲೆಯ ಕ್ರೀಡಾ ಅಭಿವೃದ್ಧಿಯ ಪ್ರತೀಕವಾಗಿದೆ. ಯುವಕರಿಗೆ ಹೆಚ್ಚಿನ ಅವಕಾಶಗಳನ್ನು ನೀಡಲು ಇದು ಸಹಕಾರಿ ಎಂದು ಹೇಳಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5930

ಎಡದಿಂದ ಬಲಕ್ಕೆ
1.ಕೆಲಸಕ್ಕೆ ಪ್ರಯತ್ನಿಸು-ತೊಡಗು (4)
3.ಮಾರುವಿಕೆಯಿಲ್ಲಿ ತಿರುಗಿದೆ (3)
5.ಕಸುವಿನ ನಡುವೆ ಪಡ್ಡೆ ಜಾನುವಾರಿದೆ (3)
7.ಕಡಮೆ-ಅಭಾವದ ಸಮಾನಪದ (3)
8.ಬಿಡುಗಡೆಗಾಗಿ ತೋರುತ್ತಿರುವ ಅವಸರ (4)
10.ಬೇಡಿಕೆಯ ಪತ್ರದ ಮೊದಲು ದರವಿದೆ (4)
12.ತಳದ ನಡುವೆ ಅಡಗಿ ಕುಳಿತ ಹುಡುಗ (3)
14.ಸುತನು ಹೀಗೆ ಒಳ್ಳೆಯ ಚಾರಿತ್ರ್ಯದವನು (3)
15.ಸಂಪ್ರದಾಯ-ರೂಢಿಯಿದು (3)
16.ಮತದ ನಡುವೆ ಅಡಗಿದ ವ್ಯಥೆ (4)

ಮೇಲಿನಿಂದ ಕೆಳಕ್ಕೆ
1.ಅಭ್ಯುದಯ-ಏಳಿಗೆಯಿದು (3)
2.ಸುಲಭವಾಗಿರುವಿಕೆ-ದಯಾಪರತೆ (4)
4.ತಡೆ-ನಿಗ್ರಹಿಸು ಎಂಬರ್ಥದ ಶಬ್ದ (4)
6.ಭೂಮಿ ಕೊರೆದು ಮಾಡಿದ ದಾರಿ (3)
7.ಸಿಂಗರಿಸಿಕೊಂಡ ಕಮಾನುಬಂಡಿ (3)
9.ಕಲಚೂರಿ ವಂಶದ ಅರಸನೀತ (3)
10.ದರಿಯ ನಡುವೆ ಹಿಡಿಯುವಿಕೆಯಿದೆ (4)
11.ಹೊಗಳು-ಕೊಂಡಾಡುವಿಕೆ (3)
12.ಮತ-ತರ ಒಳಗೊಂಡ ಮೇಲುಕೀಳು (4)
13.ಅಸಂಖ್ಯವಾದುದು (3)

5929 ಉತ್ತರ

ಎಡದಿಂದ ಬಲಕ್ಕೆ:
1.ಭಗವದ್ಗೀತೆ
3.ಕುಟುಕು 5.ರಮೇಶ
6.ನಕುಲ 8.ಚಿತ್ರಕ
9.ಸಾಕ್ಷರ 13.ಮಣಕ
15.ತಮಾಳ 16.ನಮನ
17.ಕುಮುದಾಕರ

ಮೇಲಿನಿಂದ ಕೆಳಕ್ಕೆ :
1.ಭವನ 2.ತೆರಳು
3.ಕುಶಲ 4.ಕುತ್ಸಿಕಾಚಾರ
7.ಕುತಂತ್ರ 8.ಚಿರನೂತನ
10.ಕ್ಷಪಣ 11.ವೇತನ
12.ಬೆಳಕು 14.ಕಠೋರ

ಮಾರ್ನಿಂಗ್ ಶೋ

ಭಾನುವಾರ, 22 ಮಾರ್ಚ್ 2026
ಬೆಂಗಳೂರು

ನಮ್ಮ ಮಧ್ಯೆ ಬಿರುಕುಂಟಾದಾಗ ಸಂಭ್ರಮಿಸಿದವರೇ ಹೆಚ್ಚು ...

ನಮ್ಮಿಬ್ಬರ ಮಧ್ಯೆ, ಬಿರುಕು ಬಿಟ್ಟಾಗ ಸಂಭ್ರಮಿಸಿದವರೇ ಹೆಚ್ಚು. ಕೋಪ, ಯಶಸ್ಸು, ಈಗೋ ಇವೆಲ್ಲಾ ಬಂದಾಗ ಸಹಜವಾಗಿ ಬಿರುಕು ಮೂಡುತ್ತೆ. ಅದು ನಿನ್ನಿಂದ ಗೆದ್ನೋ, ನಿನ್ನಿಂದ ಗೆದ್ನೋ ಅನ್ನೋ ಪರೀಕ್ಷೆ ಬರುತ್ತೆ. ಅದು ಜೀವನದ ಒಂದು ಭಾಗ. ಈಗ ಅದರ ವ್ಯಾಲ್ಯೂ ಗೊತ್ತಾಗ್ತಿದೆ ಎಂದು ಹಂಸಲೇಖ ರವಿಚಂದ್ರನ್ ಮಧ್ಯೆ ಬಿರುಕು ಮೂಡಲು ಕಾರಣವೇನು ಅನ್ನೋದನ್ನು ರವಿಚಂದ್ರನ್ ಅವರೇ ರಿವೀಲ್ ಮಾಡಿದ್ದಾರೆ.



80-90ರ ದಶಕದಲ್ಲಿ ರವಿಚಂದ್ರನ್ ಮತ್ತು ಹಂಸಲೇಖ ಜೋಡಿಯ ಚಿತ್ರಗಳು ದೊಡ್ಡಮಟ್ಟದ ಯಶಸ್ಸು ಕಂಡಿದ್ದವು. ಅಂಥ ಜನಪ್ರಿಯ ಜೋಡಿ 2000ದ ನಂತರ ಕಾರಣಾಂತರಗಳಿಂದ ಜೊತೆಯಾಗಿ ಕೆಲಸ ಮಾಡದಿರಬಹುದು. ಆದರೆ, ಇಂದಿಗೂ ಅವರ ಹಾಡುಗಳ ಮೋಡಿಯಿಂದ ಕನ್ನಡಿಗರು ಹೊರಬಂದಿಲ್ಲ.

ಅವರೀಗ ಜೊತೆಯಾಗಿ ಕೆಲಸ ಮಾಡದಿದ್ದರೂ, ಅವರನ್ನು ಸಂಭ್ರಮಿಸುವ ಕೆಲಸ ನಡೆದಿದೆ, ಇವರಿಬ್ಬರ ನಾಲ್ಕು ದಶಕಗಳ ಪಯಣವನ್ನು ಸಂಭ್ರಮಿಸುವ ಸಲುವಾಗಿ, ಪ್ರಸ್ತುತ್ ಇನ್ನೋವೇಟಿವ್ ಸಂಸ್ಥೆ ಮೇ 30ರಂದು ಕ್ರೇಜಿಬ್ರಹ್ಮ ಎಂಬ ಬೃಹತ್ ಕಾರ್ಯಕ್ರಮ ಆಯೋಜಿಸಿದೆ. ಇದರಲ್ಲಿ ರವಿಚಂದ್ರನ್ ಮತ್ತು ಹಂಸಲೇಖ ಜೋಡಿಯ ಪ್ರಮುಖ ಹಾಡುಗಳ ಗಾಯನದ ಜೊತೆಗೆ ಮರುಸೃಷ್ಟಿ ಮಾಡಲಾಗುತ್ತಿದೆ. ದಕ್ಷಿಣ ಭಾರತದ ಹಲವು ಜನಪ್ರಿಯ ಕಲಾವಿದರು ಭಾಗವಹಿಸುವುದರ ಜೊತೆಗೆ, ರವಿಚಂದ್ರನ್ ಅವರಜೊತೆ ನಟಿಸಿದ ಹಲವು ನಟಿಯರು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಕೆಂಗೇರಿಯ ಜೆಕೆ ಗ್ರಾಂಡ್ ಅರೇನಾದಲ್ಲಿ ಆರು ತಾಸುಗಳ ಈ ಬೃಹತ್ ಕಾರ್ಯಕ್ರಮ ನಡೆಯಲಿದೆ. ಪತ್ರಿಕಾಗೋಷ್ಠಿಯಲ್ಲಿ ಪ್ರಸ್ತುತ್ ಇನ್ನೋವೇಟಿವ್ ಕ್ರಿಯೇಷನ್ಸ್ ಮತ್ತು ಸಲ್ಯೂಷನ್ಸ್‌ನ ನಿರ್ದೇಶಕ ನ.ವಿನಯ್, ರವಿಚಂದ್ರನ್ ಮತ್ತು ಹಂಸಲೇಖ ಭಾಗವಹಿಸಿದ್ದರು.


ಮೇ 30ರಂದು ಕ್ರೇಜಿಬ್ರಹ್ಮ, ರವಿಚಂದ್ರನ್-ಹಂಸಲೇಖ ಜೋಡಿಯ 40 ವರ್ಷಗಳ ಸಂಗೀತ ಪಯಣದ ಸಂಭ್ರಮ

ಕ್ರೇಜಿಬ್ರಹ್ಮ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ವಿವರಣೆ ನೀಡಿದ ನ.ವಿನಯ್, ರವಿಚಂದ್ರನ್ ಮತ್ತು ಹಂಸಲೇಖ ಜೋಡಿಯಲ್ಲಿ ಮೂಡಿಬಂದ ಎವರ್‌ಗ್ರೀನ್ ಹಾಡುಗಳನ್ನು ಮರುಸೃಷ್ಟಿ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಆ ಕಾಲದಲ್ಲಿ ನಾವು ಏನು ನೋಡಿದ್ದೆವೋ ಅದನ್ನು ಮರುಸೃಷ್ಟಿ ಮಾಡಬೇಕು ಎನಿಸಿದಾಗ ಹುಟ್ಟಿಕೊಂಡಿದ್ದೇ ಕ್ರೇಜಿಬ್ರಹ್ಮ ಕಾನ್ಸೆಪ್ಟ್. ಈ ವರ್ಣರಂಜಿತ ಕಾರ್ಯಕ್ರಮದಲ್ಲಿ 10 ಸಾವಿರ ಜನ ಭಾಗವಹಿಸುವ ನಿರೀಕ್ಷೆಯಿದ್ದು, ಚಿರಂಜೀವಿ, ಶಿಲ್ಪಾಶೆಟ್ಟಿ ಸೇರಿದಂತೆ ಜನಪ್ರಿಯ ನಟ-ನಟಿಯರನ್ನು ಆಹ್ವಾನಿಸಲಾಗುತ್ತಿದೆ ಎಂದರು. ರವಿಚಂದ್ರನ್ ಮಾತನಾಡಿ, ಒಂದು ಸಂಬಂಧದಲ್ಲಿ ಬಿರುಕು ಬಿಟ್ಟಾಗ, ಸಂಭ್ರಮಿಸುವವರು ಜಾಸ್ತಿ. ಆದರೆ, ನಮ್ಮನ್ನು ಸೇರಿಸುವುದಕ್ಕೆ ಹಲವರು ಪ್ರಯತ್ನ ಮಾಡುತ್ತಿದ್ದಾರೆ. ಕೋಪ, ಇಗೋ, ಯಶಸ್ಸು ಇದ್ದಾಗ ಬಿರುಕು ಸಹಜ. ಗೆಲುವು ಯಾರಿಂದ ಎಂಬ ಪರೀಕ್ಷೆ ಬಂದೇಬರುತ್ತದೆ. ಅದು ಜೀವನದ ಒಂದು ಭಾಗ. ಅದರಿಂದ ನಮ್ಮಿಬ್ಬರ ಜೋಡಿಯ ಮೌಲ್ಯ ಗೊತ್ತಾಗುತ್ತಿದೆ. ಹಾಗಾಗಿ, ಆ ಬಿರುಕು ಬೇಕಾಗಿತ್ತೇನೋ ಎಂದು ಕೆಲವೊಮ್ಮೆ ಅನಿಸುತ್ತದೆ. ನಮ್ಮಿಬ್ಬರದ್ದು ಚಿತ್ರರಂಗ ಕಂಡ ಬೆಸ್ಟ್‌ಜೋಡಿ. ಜೊತೆಗೆ ಕೆಲಸ ಮಾಡದಿದ್ದರೂ, ಒಳ್ಳೆಯ ಸ್ನೇಹಿತರಾಗಿದ್ದೇವೆ. 40 ವರ್ಷಗಳ ಹಿಂದೆ ನನಗೆ ಏನೂ ಗೊತ್ತಿರಲಿಲ್ಲ. ಹಂಸಲೇಖ ಬರೆದುಕೊಟ್ಟಾಗಲೇ ಅದನ್ನು ಹೇಗೆ ತೆಗೆಯಬೇಕು ಎಂದು ಗೊತ್ತಾಗಿದ್ದು. ನನ್ನನ್ನು ಕ್ರೇಜಿಸ್ಟಾರ್ ಮಾಡಿದ್ದು ಅವರೇ. ನಾವು ಸಿನಿಮಾ ಮಾಡದಿರಬಹುದು. ಆದರೆ, ಯಾವತ್ತೂ ಕಿತ್ತಾಡಿಲ್ಲ, ಕಾರಣಾಂತರಗಳಿಂದ ನಮ್ಮ ನಡುವೆ ಬಿರುಕು ಮೂಡಿರಬಹುದು. ಆದರೆ, ನಾವು ಜಗಳ ಆಡಿಲ್ಲ. ಇವತ್ತಿಗೂ ನಾನು ಹೆಚ್ಚು ನಗುತ್ತೇನೆ ಎಂದರೆ, ಅದು ಅವರ ಜೊತೆಗೆ ಮಾತ್ರ. ಆ ನಗುವೇ ನಮ್ಮನ್ನು ಇಷ್ಟು ದೂರ ಕರೆದುಕೊಂಡು ಬಂದಿದೆ. ಆ ನಗುವಿನಿಂದಲೇ ನಾವು ಇಷ್ಟೊಂದು ಸಿನಿಮಾ ಮಾಡೋಕೆ ಸಾಧ್ಯವಾಗಿದ್ದು. ನಮ್ಮ ಸ್ನೇಹ ಪರದೆ ಮೇಲೆ ಕಾಣುತ್ತದೆ. ಯಾವುದೇ ಕಲ್ಮಶವಿಲ್ಲದೆ ಮನಃಪೂರ್ವಕವಾಗಿ ಕೆಲಸ ಮಾಡಿದ್ದೇವೆ' ಎಂದರು.

ನೀವಿಬ್ಬರೂ ಯಾಕೆ ಸಿನಿಮಾ ಮಾಡೋಕೆ ಆಗುತ್ತಿಲ್ಲ ಎಂದು ಹಲವರು ಕೇಳಿದ್ದಾರೆ ಎಂದ ಹಂಸಲೇಖಾ, ನಾವಿಬ್ಬರೂ ವೇದಿಕೆಯಲ್ಲಿ ಒಟ್ಟಾಗಿ ಇರುವುದರ ಜೊತೆಗೆ, ನಾವು ಮಾಡಿದ ಕೆಲಸಗಳನ್ನು ನೆನಪಿಸಿಕೊಳ್ಳುತ್ತೇವೆ. ಆ ನೆನಪಿನ ದೋಣಿಯಲ್ಲಿ ಅಭಿಮಾನಿಗಳನ್ನು ತೇಲಿಸುವ ಕೆಲಸ ಮಾಡುತ್ತೇವೆ. ಈ ಕಾರ್ಯಕ್ರಮವನ್ನು ವಿನಯ್ ಅಚ್ಚುಕಟ್ಟಾಗಿ ಸ್ಕ್ರಿಪ್ಟ್ ಮಾಡಿಕೊಂಡು ಬಂದಿದ್ದಾರೆ. ಇದು ಯಶಸ್ವಿಯಾದರೆ ಇಡೀ ರಾಜ್ಯದಲ್ಲಿ ಇನ್ನಷ್ಟು ಕಾರ್ಯಕ್ರಮಗಳನ್ನು ಮಾಡಬಹುದು ಎಂದರು.

ಸರ್ವಾಂತರ್ಯಾಮಿ ಚಿತ್ರದ ಮತ್ತೊಂದು ಹಾಡು

ರಂಗಭೂಮಿ ಹಿನ್ನೆಲೆ ಇರುವ ರಂಗಸ್ವಾಮಿ ಕಪಿನಿಪಾಳ್ಯ ನಿರ್ದೇಶನದ, ಹಿತ ಆರ್ ಗೌಡ ನಿರ್ಮಾಣದ ಸರ್ವಾಂತರ್ಯಾಮಿ ಚಿತ್ರದ ಮೊದಲ ಹಾಡು ಇತ್ತೀಚೆಗೆ ಬಿಡುಗಡೆಯಾಗಿ ಜನಪ್ರಿಯವಾಗಿದೆ. ಈಗ ಯುಗಾದಿ ಹಬ್ಬದ ಸಂದರ್ಭದಲ್ಲಿ ಚಿತ್ರದ ಮತ್ತೊಂದು ಹಾಡು ಅನಾವರಣವಾಗಿದೆ. ಜೀವನದ ಕಹಿ ಸತ್ಯವನ್ನು ಈ ಹಾಡಿನ ಮೂಲಕ ಹೇಳಲಾಗಿದೆ. ನಿರ್ದೇಶಕ ರಂಗಸ್ವಾಮಿ ಕಪನಿಪಾಳ್ಯ ಅವರೆ ಈ ಹಾಡನ್ನು ಬರೆದಿದ್ದಾರೆ. ರವೀಂದ್ರ ಸೊರಗಾವಿ ಹಾಡಿರುವ, ರಮೇಶ್ ಕೃಷ್ಣ ಸಂಗೀತ ಸಂಯೋಜಿಸಿರುವ ಈ ಹಾಡು ವೇದಸ್ಯ ಮ್ಯೂಸಿಕ್ ಯೂಟ್ಯೂಬ್ ಚಾನಲ್ ನಲ್ಲಿ ಲಭ್ಯವಿದೆ. ಅಭಿನವ ಕೆಂಪೇಗೌಡ ಡಾ॥ಎಚ್ ಎಂ ಕೃಷ್ಣಮೂರ್ತಿ ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ಆಟೋ ನಾಗರಾಜ್, ತೇಜಸ್ವಿನಿ, ಮಾಯಾರಾ, ಅಮೂಲ್ಯ, ರಂಗಸ್ವಾಮಿ, ವಿಕ್ಟರಿ ವಾಸು, ಪೃಥ್ವಿ, ರಾಗ ಸುಬ್ರಹ್ಮಣ್ಯ, ನಿಖಿತ ಗೌಡ, ರಘು, ನಂದನ್ ಮುಂತಾದವರ ತಾರಾಬಳಗವಿರುವ ಈ ಚಿತ್ರಕ್ಕೆ ರಾಜು ಹೆಮ್ಮಿಗೆಪುರ ಛಾಯಾಗ್ರಹಣ ಹಾಗೂ ದೀಪು.ಸಿ.ಎಸ್ ಅವರ ಸಂಕಲನವಿದೆ. ಪೃಥ್ವಿರಾಜ್ ಸಂಭಾಷಣೆ ಬರೆದಿದ್ದಾರೆ. ನಿರ್ದೇಶಕ ಹಾಗೂ ಗೀತರಚನೆಕಾರ ರಾಮ್ ನಾರಾಯಣ್ ಸಹಕಾರ ನೀಡುತ್ತಿದ್ದಾರೆ.



ಸ್ಪಾರ್ಕ್ ಸತ್ಯಶೋಧಕ್ಕಾಗಿ ಪತ್ರಕರ್ತನ ಹೋರಾಟ

ಸ್ಪಾರ್ಕ್ ಎಂದರೆ ಎಲ್ಲರ ಮನಸ್ಸಿನಲ್ಲಿರುವ ಕಿಡಿ. ಏನೇ ಹಗರಣ, ಏನೇ ಘಟನೆಗಳು ನಡೆದರೂ ಮೊದಲು ಧ್ವನಿ ಎತ್ತುವುದು ನಾಡಿನ ಪತ್ರಕರ್ತರು. ಅವರಿಗೆ ಸಿಗುವ ಗೌರವ ಹಾಗೂ ಗುರುತಿಸುವಿಗೆ ಇತ್ತೀಚೆಗೆ ಎಲ್ಲೋ ಮಿಸ್ ಆಗುತ್ತಿದೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ, ಈ ಚಿತ್ರದಲ್ಲಿ ಮೊದಲಬಾರಿಗೆ ನಾನೊಬ್ಬ ಪತ್ರಕರ್ತನ ಪಾತ್ರವನ್ನು ನಿರ್ವಹಿಸಿದ್ದೇನೆ. ಇದೊಂದು ದೊಡ್ಡ ಜವಾಬ್ದಾರಿ ಕೂಡ. ಹಗರಣದ ಸುತ್ತ ನಡೆಯುವ ಕಥಾಹಂದರ ಈ ಚಿತ್ರದಲ್ಲಿದೆ.

ರಿಯಲ್‌ಸ್ಟಾರ್ ಉಪೇಂದ್ರ, ಅವರ ಸಹೋದರ ಸುಧೀಂದ್ರ, ಅವರ ಪುತ್ರ ನಿರಂಜನ್ ಸುಧೀಂದ್ರ, ನಾಯಕನಾಗಿ ನಟಿಸುತ್ತಿರುವ ಚಿತ್ರ ಸ್ಪಾರ್ಕ್. ಜೇಮ್ಸ್, ಭರಾಟೆ, ಕನಕ ಸೇರಿದಂತೆ 15ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಕೋ ಡೈರೆಕ್ಟರ್ ಆಗಿ ಕೆಲಸ ಮಾಡಿರುವ ಡಿ.ಮಹಾಂತೇಶ್ ಹಂದ್ರಾಳ್ ಅವರು ಸ್ಪಾರ್ಕ್ ಮೂಲಕ ಮೊದಲಬಾರಿಗೆ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ಮಹಂತೇಶ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರವೀಗ ಬಿಡುಗಡೆಯ ಹಂತದಲ್ಲಿದೆ. ಈ ಚಿತ್ರದಲ್ಲಿ ನಟ ನಿರಂಜನ್ ಸುಧೀಂದ್ರ ಅವರು ಒಬ್ಬ ಪತ್ರಕರ್ತನಾಗಿ ಕಾಣಿಸಿಕೊಂಡಿದ್ದು, ಚಿತ್ರದ ಮತ್ತೊಂದು ವಿಶಿಷ್ಟ ಪಾತ್ರದಲ್ಲಿ ನೆನಪಿರಲಿ ಪ್ರೇಮ್ ಅವರು ಬಣ್ಣ ಹಚ್ಚಿದ್ದಾರೆ. ಒಂದು ಹಗರಣದ ಸುತ್ತ ಸಾಗುವ ಕುತೂಹಲಕಾರಿ ಕಥಾಹಂರವನ್ನು ಈ ಚಿತ್ರದ ಮೂಲಕ ಕಟ್ಟಿಕೊಡಲಾಗಿದೆ. ಸತ್ಯಕ್ಕಾಗಿ ನಾಯಕ ನಿರಂಜನ್ ಅವರ ಹೋರಾಟವೇ ಸ್ಪಾರ್ಕ್ ಚಿತ್ರದ ಕಥಾವಸ್ತು,





ಚಿತ್ರದ ಕುರಿತಂತೆ ನಿರ್ದೇಶಕ ಮಹಾಂತೇಶ್ ಮಾತನಾಡುತ್ತ ನೆನಪಿರಲಿ ಪ್ರೇಮ್ ಅವರ ಡೆಡಿಕೇಷನ್, ಪಾತ್ರಕ್ಕೆ ತಯಾರಾಗುವ ರೀತಿಯನ್ನು ನೋಡಿಯೇ ನಾನು ಸ್ಫೂರ್ತಿ ಪಡೆದುಕೊಂಡೆ. ನಿರಂಜನ್ ಅವರು ತುಂಬಾ ಹಂಬಲ್ ನಟ. ಒಬ್ಬ ಹೊಸ ನಿರ್ದೇಶಕನಿಗೆ ಆರ್ಟಿಸ್ಟ್ ಹಾಗೂ ಟೆಕ್ನಿಷಿಯನ್ಸ್ ಸಪೋರ್ಟ್ ಚೆನ್ನಾಗಿ ಸಿಗಬೇಕು. ಅದು ಈ ಚಿತ್ರದಲ್ಲಿ ನನಗೆ ಸಿಕ್ಕಿದೆ. ಸ್ಪಾರ್ಕ್ ಒಂದು ಸ್ಕ್ಯಾಮ್ ಸುತ್ತ ನಡೆಯುವ ಘಟನೆಗಳ ಬಗ್ಗೆ ಹೇಳಲಿರುವ ಚಿತ್ರ ಎಂದರು.

ನಾಯಕನಟ ನಿರಂಜನ್ ಸುಧೀಂದ್ರ, ತನ್ನ ಪಾತ್ರದ ಕುರಿತಂತೆ ಮಾತನಾಡುತ್ತ ಸ್ಪಾರ್ಕ್ ಎಂದರೆ ಎಲ್ಲರ ಮನಸ್ಸಿನಲ್ಲಿರುವ ಕಿಡಿ. ಏನೇ ಹಗರಣ, ಏನೇ ಘಟನೆಗಳು ನಡೆದರೂ ಮೊದಲು ಧ್ವನಿ ಎತ್ತುವುದು ಪತ್ರಕರ್ತರು. ಅವರಿಗೆ ಸಿಗುವ ಗೌರವ ಹಾಗೂ ಗುರುತಿಸುವಿಗೆ ಇತ್ತೀಚೆಗೆ ಎಲ್ಲೋ ಮಿಸ್ ಆಗುತ್ತಿದೆ. ನಾನು ಈ ಚಿತ್ರದಲ್ಲಿ ನಾನು ಮೊದಲಬಾರಿಗೆ ಒಬ್ಬ ಪತ್ರಕರ್ತನ ಪಾತ್ರವನ್ನು ನಿರ್ವಹಿಸಿದ್ದೇನೆ. ಇದೊಂದು ದೊಡ್ಡ ಜವಾಬ್ದಾರಿ ಕೂಡ. ಇದರಲ್ಲಿ ಬರವಣಿಗೆ ತುಂಬಾ ಸ್ಟ್ರಾಂಗ್ ಆಗಿದ್ದು, ಹಗರಣದ ಸುತ್ತ ನಡೆಯುವ ಕಥಾಹಂದರ ಈ ಚಿತ್ರದಲ್ಲಿದೆ ಎಂದರು.

ನೆನಪಿರಲಿ ಪ್ರೇಮ್ ಮಾತನಾಡಿ, ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ಹೀರೋಗಳಿದ್ದಾರೆ. ಅದಕ್ಕೆ ಹೊಸ ಸೇರ್ಪಡೆ ನಿರಂಜನ್ ಎನ್ನಬಹುದು. ಕನ್ನಡದ ಮೇಲಿರುವ ಅಭಿಮಾನದಿಂದ ನಿರ್ಮಾಪಕರು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ನಾನು ಕೂಡ ಇಂಡಸ್ಟ್ರಿಗೆ ಮಾಸ್ ಹೀರೋ ಆಗಬೇಕೆಂದು ಬಂದವನು. ಆದರೆ ಬ್ಯಾಕ್ ಟು ಬ್ಯಾಕ್ ಲವ್‌ಸ್ಟೋರಿ ಸಿನಿಮಾಗಳನ್ನೇ ಮಾಡಿದಾಗ ನನ್ನನ್ನು ಕ್ಲಾಸ್ ಹೀರೋ ಎಂದು ಪ್ರಿಂಟ್ ಹೊಡೆದುಬಿಟ್ಟರು. ನನ್ನಲ್ಲಿರುವ ಸ್ಪಾರ್ಕ್ ಗಮನಿಸಿದ ನಿರ್ದೇಶಕ ಮಹಾಂತೇಶ್ ನನಗೆ ಒಂದು ಮಾಸ್ ಕ್ಯಾರೆಕ್ಟರ್‌ನ್ನು ಕೊಟ್ಟಿದ್ದಾರೆ ಎಂದರು. ಸ್ಪಾರ್ಕ್ ಚಿತ್ರದ ನಾಯಕಿಯಾಗಿ ರಚನಾ ಇಂದರ್ ಅವರು ಕಾಣಿಸಿಕೊಂಡಿದ್ದಾರೆ. ಜತೆಗೆ ರಮೇಶ್ ಇಂದಿರಾ, ಧರ್ಮಣ್ಣ ಕಡೂರು, ಸಾಧು ಕೋಕಿಲಾ, ಬಲ ರಾಜವಾಡಿ, ನರೇಂದ್ರಬಾಬು ಹಾಗೂ ಗಣೇಶ್‌ರಾವ್ ಅವರುಗಳೂ ನಟಿಸಿದ್ದಾರೆ. ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಸ್ಪಾರ್ಕ್ ಚಿತ್ರವನ್ನು ಡಾ.ಗರಿಮಾ ಅವಿನಾಶ್ ವಸಿಷ್ಠ ಅವರ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ನಾಲ್ಕು ಹಾಡುಗಳಿಗೆ ಸಚಿನ್ ಬಸ್ರೂರ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಸ್ವಾಮಿ ಜೆ.ಗೌಡ ಅವರ ಛಾಯಾಗ್ರಹಣ, ಮಧು ಅವರ ಸಂಕಲನ ಈ ಚಿತ್ರಕ್ಕಿದೆ.



ಸ್ಟಾರ್‌ಗಳು ಕನ್ನಡ ಬೆಳೀಬೇಕು ಅನ್ನೋದು ಬರೀ ಬಾಯಿ ಮಾತಲ್ಲಷ್ಟೇ

ಅಂಗವಿಕಲ ಬಾಲಕಿ ಹಾಗೂ ನಾಯಿಯೊಂದರ ನಡುವಿನ ಭಾವನಾತ್ಮಕ ಹಾಗೂ ಸುಂದರ ಪಯಣದ ಸುತ್ತ ನಡೆಯುವ ಕಥಾಹಂದರ ಒಳಗೊಂಡ ಚಿತ್ರ ಯಾವ ಮೋಹನ ಮುರಳಿ ಕರೆಯಿತು. ವಿಶ್ವಾಸ್ ಕೃಷ್ಣ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಭ ಇತ್ತೀಚೆಗೆ ನಡೆಯಿತು. ನಾಯಿ ರಾಣಾ ಮೂಲಕವೇ ಟ್ರೈಲರ್ ಅನಾವರಣಗೊಳಿಸಲಾಯಿತು,

ಪ್ರಕೃತಿ ಪ್ರೊಡಕ್ಷನ್ಸ್ ಮೂಲಕ ಶರಣಪ್ಪ ಗೌರಮ್ಮ ಅವರ ನಿರ್ಮಾಣದ ಈ ಚಿತ್ರಕ್ಕೆ ವಿಶ್ವಾಸ್‌ಕೃಷ್ಣ ಅವರೇ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ನಿರ್ಮಾಪಕರ ಪುತ್ರಿ ಬೇಬಿ ಪ್ರಕೃತಿ, ವರುಣ್‌ರಾಜು ಪಟೇಲ್ ಹಾಗೂ ಸ್ವಪ್ನ ಶೆಟ್ಟಿಗಾರ್ ಜತೆಗೆ ರಾಕಿ ಎಂಬ ನಾಯಿ ಕೂಡ ಅಭಿನಯಿಸಿದೆ. 2019ರಲ್ಲಿ ನಡೆದ ಕಿಕ್ ಬಾಕ್ಸಿಂಗ್‌ನಲ್ಲಿ ವರ್ಡ್ಲ್ ಕಪ್ ಗೆದ್ದಿರುವ ಶರಣಪ್ಪ ಅವರೊಬ್ಬ ಲಾಯರ್ ಕೂಡ ಹೌದು, . ಇದೇ ತಿಂಗಳ 27ರಂದು ಈ ಚಿತ್ರವನ್ನು ವಿಜಯ್ ಸಿನಿಮಾಸ್‌ನ ವಿಜಯಕುಮಾರ್ ಅವರ 50ರಿಂದ 60 ಥೇಟರ್‌ಗಳಲ್ಲಿ ರಿಲೀಸ್ ಮಾಡುತ್ತಿದ್ದಾರೆ,


ಮೋಹನ ಮುರಳಿ ಕರೆಯಿತು ಟ್ರೈಲರ್ ಬಿಡುಗಡೆ

ವೇದಿಕೆಯಲ್ಲಿ ಚಿತ್ರದ ಕುರಿತಂತೆ ಮಾತನಾಡಿದ ನಿರ್ಮಾಪಕ ಶರಣಪ್ಪ ಮಗಳಿಗೋಸ್ಕರಾನೇ ನಾನೀ ಚಿತ್ರ ಮಾಡಿದೆ, 10 ದಿನಗಳ ಶೂಟಿಂಗ್ ಬಾಕಿ ಇರುವಾಗಲೇ ಚಿತ್ರದಲ್ಲಿ ಅಭಿನಯಿಸುತ್ತಿದ್ದ ನಾಯಿ ರಾಕಿ, ರಸ್ತೆ ಅಪಘಾತದಲ್ಲಿ ಮರಣ ಹೊಂದಿತು, ಆಗ ರಾಣಾ ಚಿಕ್ಕ ನಾಯಯಾಗಿತ್ತು, ಅದು ಬೆಳೆಯುವವರೆಗೆ ಕಾಯಲೇಬೇಕಾಗಿತ್ತು, ಹಾಗಾಗಿ ಚಿತ್ರದ ಬಿಡುಗಡೆ ಒಂದೆರಡು ವರ್ಷ ತಡವಾಯಿತು, ಕ್ಲೈಮ್ಯಾಕ್ಸ್ ಭಾಗದಲ್ಲಿ ರಾಣಾ ಆಕ್ಟ್ ಮಾಡಿದ್ದಾನೆ, ವಿಶ್ವಾಸ್ ಒಳ್ಳೇ ಕಥೆ ಮಾಡಿಕೊಂಡಿದ್ದರು, ಚಿತ್ರಕ್ಕೆ ಕರ್ನಾಟಕದ ವಿವಿಧ ಲೊಕೇಶನ್‌ಗಳಲ್ಲಿ ಒಂದೇ ಹಂತದಲ್ಲಿ ಶೂಟಿಂಗ್ ನಡೆಸಿದ್ದೇವೆ, ಪ್ರಾಣಿ ಪ್ರಿಯರಿಗೆ ಈ ಚಿತ್ರ ಎಮೋಷನಲಿ ತುಂಬಾ ಕನೆಕ್ಟ್ ಆಗುತ್ತದೆ, ಸೆಂಟಿಮೆಂಟ್ ಜತೆಗೆ ಸಸ್ಪೆನ್ಸ್ ಥ್ರಿಲ್ಲರ್ ಕೂಡ ಚಿತ್ರದಲ್ಲಿದೆ, ನಟ ಯೋಗಿ, ಉಮಾಪತಿ ಗೌಡ ಅವರು ನಮಗೆ ತುಂಬಾ ಸಪೋರ್ಟ್ ಮಾಡಿದ್ದಾರೆ, ಆದರೆ ಕನ್ನಡದ ಸ್ಟಾರ್ ಎನಿಸಿಕೊಂಡವರು ಅವರ ಮನೆ ಬಾಗಿಲಿಗೆ ಎಷ್ಟು ಅಲೆದರೂ ಟ್ರೈಲರ್ ಲಾಂಚ್ ಮಾಡಿಕೊಡಲು ಬರಲಿಲ್ಲ, ಪ್ರೊಮೋಷನ್‌ಗೆ ಸಹಕರಿಸಲಿಲ್ಲ, ಕನ್ನಡ ಚಿತ್ರರಂಗ ಬೆಳೀಬೇಕು ಅಂತ ಅವರೆಲ್ಲ ಹೇಳೋದು ಬಾಯಿ ಮಾತಲ್ಲಷ್ಟೇ ಎಂದು ತುಸು ಬೇಸರದಿಂದಲೇ ಹೇಳಿಕೊಂಡರು. ನಿರ್ಮಾಪಕರ ಪುತ್ರಿ ಬೇಬಿ ಪ್ರಕೃತಿ ಹಾಗೂ ಆಕೆಯ ಮುದ್ದಿನ ನಾಯಿಯ ಮೇಲೆ ರಚಿಸಲಾಗಿರೋ ಹಾಡಿಗೆ ವಿ.ನಾಗೇಂದ್ರ ಪ್ರಸಾದ್ ಅವರು ಸಾಹಿತ್ಯ ರಚಿಸಿದ್ದು, ಗಾಯಕ ಹರಿಚರಣ್ ಅವರು ದನಿಯಾಗಿದ್ದಾರೆ. ಅನಿಲ್ ಸಿ.ಜೆ. ಅವರು ಸಂಗೀತ ಸಂಯೋಜಿಸಿದ್ದಾರೆ. ಚಿತ್ರದ ಎರಡು ಗೀತೆಗಳಿಗೆ ಸಾಹಿತಿ ಡಾ.ವಿ. ನಾಗೇಂದ್ರಪ್ರಸಾದ್ ಸಾಹಿತ್ಯ ರಚಿಸಿದ್ದರೆ, ಮತ್ತೊಂದು ಹಾಡಿಗೆ ಗೌಸ್‌ಪೀರ್ ಸಾಹಿತ್ಯ ಬರೆದಿದ್ದಾರೆ. ಆನಂದ್ ಆಡಿಯೋ ಈ ಚಿತ್ರದ ಹಾಡುಗಳನ್ನು ಹೊರತಂದಿದೆ. ನಿರ್ದೇಶಕ ವಿಶ್ವಾಸ್ ಕೃಷ್ಣ ಮಾತನಾಡಿ ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಒಂದು ಮಗು ಹಾಗೂ ನಾಯಿಯೊಂದರ ಸುತ್ತ ನಡೆಯುವ ಎಮೋಷನಲ್ ಜರ್ನಿಯೇ ಈ ಚಿತ್ರ.. ಜತೆಗೆ ಫ್ಯಾಮಲಿ ಸೆಂಟಿಮೆಂಟ್ ಕೂಡ ಚಿತ್ರದಲ್ಲಿದೆ, ಒಂದು ನಾಯಿ ಮತ್ತು ಅಂಗವಿಕಲ ಹುಡುಗಿಯ ಸುತ್ತ ನಡೆಯುವ ಭಾವನಾತ್ಮಕ ಕಥೆಯೊದಿ, ನಾಯಿಗೂ ಒಂದು ಮನಸಿದೆ ಅಂತ ಚಿತ್ರದಲ್ಲಿ ತೋರಿಸಿದ್ದೇವೆ ಎಂದರು. ಈ ಚಿತ್ರದ ನಾಯಕ ಮಾದವ್ ಮಾತನಾಡಿ ಅಂಗವಿಕಲ ಮಗುವಿನ ತಂದೆಯಾಗಿ ಕಾಣಿಸಿಕೊಂಡಿರುವುದಾಗಿ ಹೇಳಿದರು. ಚಿತ್ರದ ಮತ್ತೊಬ್ಬ ನಾಯಕನಾಗಿ ಪಟೇಲ್ ವರುಣ್‌ರಾಜ್, ನಾಯಕಿಯಾಗಿ ಸ್ವಪ್ನ ಶೆಟ್ಟಿಗಾರ್ ನಟಿಸಿದ್ದಾರೆ, ಈ ಚಿತ್ರಕ್ಕೆ ಕೀರ್ತನ್ ಪೂಜಾರಿ ಅವರ ಛಾಯಾಗ್ರಹಣವಿದೆ.

ಪ್ರಾಣಿ ಪ್ರಿಯರಿಗೆ ನಮ್ಮ ಚಿತ್ರ ಎಮೋಷನಲಿ ತುಂಬಾ ಕನೆಕ್ಟ್ ಆಗುತ್ತದೆ, ಸೆಂಟಿಮೆಂಟ್ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕಂಟೆಂಟ್ ಕೂಡ ಚಿತ್ರದಲ್ಲಿದೆ, ನಟ ಯೋಗಿ, ಉಮಾಪತಿ ಗೌಡ ಅವರು ನಮಗೆ ತುಂಬಾ ಸಪೋರ್ಟ್ ಮಾಡಿದ್ದಾರೆ, ಆದರೆ, ಕನ್ನಡದ ಸ್ಟಾರ್ ನಟರು ಎನಿಸಿಕೊಂಡವರ ಮನೆ ಬಾಗಿಲಿಗೆ ಎಷ್ಟು ಅಲೆದರೂ ಟ್ರೈಲರ್ ರಿಲೀಸ್ ಅಥವಾ ಪ್ರೊಮೋಷನ್‌ಗೆ ಸಹಕರಿಸಲಿಲ್ಲ, ಕನ್ನಡ ಚಿತ್ರರಂಗ ಬೆಳೀಬೇಕು ಅಂತ ಅವರೆಲ್ಲ ಹೇಳೋದು ಬಾಯಿ ಮಾತಲ್ಲಷ್ಟೇ
-ನಿರ್ಮಾಪಕ ಶರಣಪ್ಪ ಗೌರಮ್ಮ

ಮೊದಲ ಹಂತದ ಚಿತ್ರೀಕರಣ ಮುಗಿಸಿದ ದೇವಿಮಹಾತ್ಮೆ

ಉಡುಪಿ ಜಿಲ್ಲೆಯ ಕಮಲಶಿಲೆಯ ಬ್ರಹ್ಮಿ ದೇಗುಲದಲ್ಲಿ ಚಿತ್ರದ ಮುಹೂರ್ತ ಆಚರಿಸಿಕೊಂಡಿದ್ದ ದೇವಿ ಮಹಾತ್ಮೆ ಸಿನಿಮಾ ತಂಡ ಇದೀಗ ಚಿತ್ರದ ಮೊದಲ ಹಂತದ ಚಿತ್ರೀಕರಣವನ್ನು ಮುಕ್ತಾಯಗೊಳಿಸಿದೆ. ಕುಂದಾಪುರದ ಸುತ್ತಮುತ್ತಲಿನ ಸುಂದರ ತಾಣಗಳಲ್ಲಿ ದೇವಿ ಮಹಾತ್ಮೆ ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದ್ದು, ಶೀಘ್ರದಲ್ಲೇ ಚಿತ್ರತಂಡ ಎರಡನೇ ಹಂತದ ಚಿತ್ರೀಕರಣವನ್ನು ಪ್ರಾರಂಭಿಸಲಿದೆ. ಅಂದಹಾಗೆ ಇದು ನಿರ್ದೇಶಕ ನಾಗರಾಜ್ ಸೋಮಯಾಜಿ ಅವರ ನಿರ್ದೇಶನದ ಹೊಸ ಸಿನಿಮಾ. ಈ ಹಿಂದೆ ಫ್ಯಾಮಿಲಿ ಆಡಿಯನ್ಸ್‌ಗಾಗಿ ಮರ್ಯಾದೆ ಪ್ರಶ್ನೆ ಎಂಬ ಸಿನಿಮಾ ಕಥೆ ಉಣಬಡಿಸಿದ್ದ ಅವರೀಗ ದೇವಿ ಮಹಾತ್ಮೆ ಎಂಬ ಚಲನಚಿತ್ರದ ಮೂಲಕ ಕಾಮಿಡಿ ಥ್ರಿಲ್ಲರ್ ಕಥಾಹಂದರವನ್ನು ಹೇಳೋದಿಕ್ಕೆ ಹೊರಟಿದ್ದಾರೆ.

ಈಗಾಗಲೇ ಮೊದಲ ಹಂತದ ಚಿತ್ರೀಕರಣವು ಮುಕ್ತಾಯಗೊಂಡಿರುವ ಬಗ್ಗೆ ಮಾಹಿತಿ ಹಂಚಿಕೊಂಡಿರುವ ನಾಗರಾಜ್ ಸೋಮಯಾಜಿ, ಬಿಸಿಲಲ್ಲಿ ಕೆಲಸ ಮಾಡುವುದು ನಿಜಕ್ಕೂ ದೊಡ್ಡ ಸಾಹಸ. ಅದರಲ್ಲಿಯೂ ಕುಂದಾಪುರದ ಬಿಸಿಲ ಝಳದಲ್ಲಿ ಇಡೀ ಚಿತ್ರತಂಡ ಉತ್ಸಾಹದಿಂದ ಪಾಲ್ಗೊಂಡು ಕೆಲಸ ಮಾಡಿದೆ. ಕಡಿಮೆ ತಾಂತ್ರಿಕ ವರ್ಗದೊಂದಿಗೆ ನಿರ್ಮಾಪಕರಿಗೆ ಹೊರೆಯಾಗದಂತೆ ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದೆ. ಇನ್ನೂ, ನಿರ್ಮಾಪಕ ಗಾಂಧಿರಾಜನ್ ಅವರು ಕನ್ನಡ ಸಿನಿಮಾ ಬಗ್ಗೆ ತುಂಬಾನೇ ಆಸಕ್ತಿಯನ್ನು ಹೊಂದಿದ್ದು, ಖುಷಿಯಿಂದ ಶೂಟಿಂಗ್ ಸೆಟ್‌ಗೆ ವಿಸಿಟ್ ಹಾಕಿದ್ದರು ಎಂದರು.

ದೇವಿ ಮಹಾತ್ಮೆ ಒಂದು ಕಾಮಿಡಿ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ನಾಗರಾಜ ಸೋಮಯಾಜಿ ಅವರೇ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಅವರುಗಳು ಜೊತೆಯಾಗಿದ್ದಾರೆ. ಯುವಿಜಿ ಸ್ಟುಡಿಯೋ ಬ್ಯಾನರ್ ಅಡಿಯಲ್ಲಿ ವಿದ್ಯಾಗಾಂಧಿರಾಜನ್ ಅವರು ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಗಾಂಧಿರಾಜನ್ ಅವರು ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ. ಎಸ್. ಕೆ. ರಾವ್ ಅವರ ಛಾಯಾಗ್ರಹಣ ಹಾಗೂ ಲಿಕಿತ್ ಪ್ರಸಾದ್ ಕೆ. ಶೆಟ್ಟಿ ಅವರ ಸಂಗೀತ ನಿರ್ದೇಶನ ದೇವಿ ಮಹಾತ್ಮೆ ಚಿತ್ರಕ್ಕಿರಲಿದೆ.



- ದಕ್ಷಿಣ ಕನ್ನಡದ ಕುಂದಾಪುರದ ಸುತ್ತಮುತ್ತ ಮೊದಲ
- ಹಂತದ ಚಿತ್ರೀಕರಣ ಮುಗಿಸಿದ ದೇವಿ ಮಹಾತ್ಮೆ ಚಿತ್ರತಂಡ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಹೊಸ ದಿಗಂತ

ಮೈಸೂರು

ಭಾನುವಾರ 22 ಮಾರ್ಚ್ 2026

ಗರಿಷ್ಠ 33° | ಕನಿಷ್ಠ 22°

ಶುಭಾಶಯ...



ಸರಗೂರು ರಂಜಾನ್ ಹಬ್ಬದ ಪ್ರಯುಕ್ತ ಈದ್ಗಾ ಮೈದಾನಕ್ಕೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿ ಮುಸ್ಲಿಂರು ನಡೆಸುತ್ತಿದ್ದ ಪ್ರಾರ್ಥನೆಯಲ್ಲಿ ಶುಭಾಶಯ ಕೋರಿ ಸಿಹಿ ತಿನಿಸಿದರು.

ಮಳೆಗೆ ಶೇ.80ರಷ್ಟು ಬೆಳೆ ಹಾನಿ |೨ ಮಂಡ್ಯ: ಅಟ್ಟುಣ್ಣುವ ಜಾತ್ರೆ ಅದ್ದೂರಿ |೩ ಉತ್ಸಾಹ ಕುಗ್ಗಿಸುವ ತಂತ್ರ: ಅಸಮಾಧಾನ |೪

ಕಿರುಸುದ್ದಿ

ಇಂದು ಸೂರ್ಯನ ಕುದುರೆ ನಾಟಕ ಪ್ರದರ್ಶನ

ಮೈಸೂರು: ಪರಿವರ್ತನ ರಂಗ ಸಮಾಜವು ನಗರದ ರಮಾಗೋವಿಂದ ರಂಗಮಂದಿರದಲ್ಲಿ ಮಾ.22ರಂದು ಸಂಜೆ 7ಕ್ಕೆ 'ಸೂರ್ಯನ ಕುದುರೆ' ಕನ್ನಡ ನಾಟಕ ಪ್ರದರ್ಶನವನ್ನು ಆಯೋಜಿಸಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಮಾಧವ ಖರೆ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಸಾಹಿತಿ ಡಾ.ಯು.ಆರ್.ಅನಂತಮೂರ್ತಿ ಬರೆದ ಕಥೆಯನ್ನು, ಸತ್ಯನಾರಾಯಣ ರಾವ್ ರಂಗಪಠ್ಯಕ್ಕೆ ಇಳಿಸಿದ್ದಾರೆ. ನಾಟಕವನ್ನು ರವಿಕುಮಾರ್ ನಿರ್ದೇಶಿಸಿದ್ದಾರೆ. 8 ಜನ ಕಲಾವಿದರು ''ಅಭಿನಯಿಸಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಲ್ ಬಿ.ಎಸ್.ಸತೀಶ್, ನಿರ್ದೇಶಕ ರವಿಕುಮಾರ್, ನಟರಾದ ರವಿತೇಜ ಇದ್ದರು.

ನಕಲಿ ಚಿನ್ನ ಅಸಲಿ ಎಂದು ಫೈನಾನ್ಸ್ ಕಂಪನಿಗೇ ವಂಚನೆ

ಮೈಸೂರು: ವ್ಯಕ್ತಿಯೊಬ್ಬ ನಕಲಿ ಚಿನ್ನವನ್ನು ಅಸಲಿ ಚಿನ್ನ ಎಂದು ನಂಬಿಸಿ ಫೈನಾನ್ಸ್ ಕಂಪನಿಗೆ ವಂಚಿಸಿರುವ ಪ್ರಕರಣ ನಗರದಲ್ಲಿ ನಡೆದಿದೆ. ಮೈಸೂರಿನ ರಾಜ್ ಚಂದ್ರಶೇಖರ್ ಎಂಬಾತನೇ ನಕಲಿ ಚಿನ್ನವನ್ನು ಫೈನಾನ್ಸ್ ಕಂಪನಿಗೆ ನೀಡಿ ಹಣ ಪಡೆದು ವಂಚಿಸಿದ ಆರೋಪಿ. ಈ ಸಂಬಂಧ ಖಾಸಗಿ ಫೈನಾನ್ಸ್ ಕಂಪೆನಿಯ ವ್ಯವಸ್ಥಾಪಕ ಮಹದೇವಸ್ವಾಮಿ ಎಂಬವರು ನಜರಬಾದ್ ಠಾಣೆಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸಿದ್ಧಾರ್ಥನಗರದ ಫೈನಾನ್ಸ್ ಕಂಪೆನಿಗೆ ಭೇಟಿ ನೀಡಿದ್ದ ಚಂದ್ರಶೇಖರ್, ನಾನು ಸಿಎಸ್‌ಬಿ ಬ್ಯಾಂಕ್‌ನಲ್ಲಿ ಚಿನ್ನವನ್ನು 20.60 ಲಕ್ಷ ರೂ.ಗೆ ಅಡವಿಟ್ಟಿದ್ದೇನೆ. ನನಗೆ ಹೆಚ್ಚಿನ ಹಣದ ಅವಶ್ಯವಿದೆ. ನೀವು ಚಿನ್ನವನ್ನು ಬಿಡಿಸಿಕೊಂಡು, ಹೆಚ್ಚಿನ ಹಣ ನೀಡಿ ಎಂದು ಕೇಳಿದ್ದಾನೆ. ಈ ಸಂಬಂಧ ಗಿರಿವಿ ಇಟ್ಟಿದ್ದ ರಸೀದಿಯನ್ನು ಅವರಿಗೆ ನೀಡಿದ್ದಾನೆ. ಆತನ ಮಾತನ್ನು ನಂಬಿದ ಫೈನಾನ್ಸ್ ಕಂಪೆನಿಯವರು ಆತನಿಗೆ 1 ಲಕ್ಷ ರೂ. ನೀಡಿ, ಬ್ಯಾಂಕ್‌ಗೆ 20.60 ಲಕ್ಷ ರೂ. ಪಾವತಿಸಿ, ಚಿನ್ನವನ್ನು ಬಿಡಿಸಿ ತಂದಿದ್ದಾರೆ. ನಂತರ ಚಿನ್ನವನ್ನು ಪರಿಶೀಲಿಸಿದ ವೇಳೆ ಅದು ಭಾಗಶಃ ನಕಲಿ ಎಂಬುದು ಗೊತ್ತಾಗಿದೆ. ಈ ಸಂಬಂಧ ಚಂದ್ರಶೇಖರ್ ವಿರುದ್ಧ ನಜರಬಾದ್ ಠಾಣೆಯ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವೃದ್ಧರಿಗೆ ಬೆದರಿಸಿ 8.50 ಲಕ್ಷ ರೂ. ವಂಚನೆ

ಮೈಸೂರು: ವೃದ್ಧರಿಗೆ ನಿಮ್ಮ ವಿರುದ್ಧ ಮುಂಬೈ ಕ್ರೈಂ ಬ್ರಾಂಚ್‌ನಲ್ಲಿ ಮನಿ ಲಾಡ್ರಿಂಗ್ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿದ ಆನ್‌ಲೈನ್ ವಂಚಕರು, ಹೌಸ್ ಅರೆಸ್ಟ್ ನೆಪದಲ್ಲಿ ಅವರಿಂದ 8,50,047 ರೂ. ಪಡೆದು ವಂಚಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಇಲ್ಲಿನ ನೇತಾಜಿನಗರದ ನಿವಾಸಿ ಹಣ ಕಳೆದುಕೊಂಡವರು. ಇವರಿಗೆ ಅಪರಿಚಿತ ವ್ಯಕ್ತಿಯೊಬ್ಬ ದೂರವಾಣಿ ಕರೆ ಮಾಡಿ, ಟ್ರಾಯ್‌ನಿಂದ ಅಭಿಷೇಕ್ ಮಿಶ್ರಾ ಮಾತನಾಡುವುದಾಗಿ ತಿಳಿಸಿ, ನೀವು ಮುಂಬೈನಲ್ಲಿ ಏರ್‌ಟೆಲ್ ಕಂಪೆನಿಯಿಂದ ಸಿಮ್ ತೆಗೆದುಕೊಂಡು, ಹಲವಾರು ಮಹಿಳೆಯರಿಗೆ ಕರೆ ಮಾಡಿ ಅಸಹ್ಯವಾಗಿ ಮಾತನಾಡಿದ್ದೀರಿ. ಹೀಗಾಗಿ ನಿಮ್ಮ ವಿರುದ್ಧ ಮುಂಬೈ ಕ್ರೈಂ ಬ್ರಾಂಚ್‌ನಲ್ಲಿ ದೂರು ದಾಖಲಾಗಿದೆ ಎಂದು ಹೆದರಿಸಿದ್ದಾನೆ. ಬಳಿಕ ವಾಟ್ಸಾಪ್ ವೀಡಿಯೋ ಕಾಲ್ ಮಾಡಿ, ನಿಮ್ಮ ವಿರುದ್ಧ ಮನಿ ಲಾಡ್ರಿಂಗ್ ಪ್ರಕರಣ ದಾಖಲಾಗಿದ್ದು, ನರೇಶ್ ಗೋಯಲ್ ಪ್ರಕರಣದ ಫಿರ್ಯಾದುದಾರರ ಬ್ಯಾಂಕ್ ಖಾತೆಗೆ ಹಣ ಬಂದಿರುವುದಾಗಿ ತಿಳಿಸಿದ್ದಾನೆ. ಬಳಿಕ ಹೌಸ್ ಅರೆಸ್ಟ್ ಮಾಡುವುದಾಗಿ ಹೇಳಿ ಅವರ ಬ್ಯಾಂಕ್ ಖಾತೆಯ ವಿವರ ಪಡೆದು, ಪರಿಶೀಲನೆ ಮಾಡುವುದಾಗಿ ಹೇಳಿಅವರ ಐಸಿಐಸಿಐ ಬ್ಯಾಂಕ್ ಖಾತೆಯಿಂದ 8,50,047 ರೂ. ಹಣವನ್ನು ವರ್ಗಾಯಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೋಮನಾಥ ಜ್ಯೋತಿರ್ಲಿಂಗ ಮಹಾರುದ್ರ ಪೂಜೆ

ಮೈಸೂರು: ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಫ್ ಆಶ್ರಮದಲ್ಲಿ ಸೋಮನಾಥ ಜ್ಯೋತಿರ್ಲಿಂಗ ಮಹಾರುದ್ರ ಪಜೆ ನಡೆಯಿತು. ಮೈಸೂರು 45ನೇ ವಾರ್ಷಿಕೋತ್ಸವದ ಅಂಗವಾಗಿ ಗುರುದೇವ್ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ ಮಾರ್ಗದರ್ಶನದಲ್ಲಿ 1000 ವರ್ಷಗಳಷ್ಟು ಹಳೆಯದಾದ ಮೂಲ ಸೋಮನಾಥ ಜ್ಯೋತಿರ್ಲಿಂಗಕ್ಕೆ ಮಹಾರುದ್ರ ಪೂಜೆಯನ್ನು ನೆರವೇರಿಸಲಾಯಿತು ನೂರಾರು ಭಕ್ತರು ಜ್ಯೋತಿರ್ಲಿಂಗ ದರ್ಶನ ಪಡೆದರು.

ಜಾತ್ರಾ ಮಹೋತ್ಸವದಲ್ಲಿ ಪ್ರಾಣಿ ಬಲಿಗೆ ತಡೆ: ದಯಾನಂದ ಸ್ವಾಮೀಜಿ ಹೇಳಿಕೆ

ಚಿಕ್ಕದೇವಮ್ಮ ಜಾತ್ರೆ ಅದ್ದೂರಿ

ಮೈಸೂರು: ಜಿಲ್ಲೆ ಸರಗೂರು ತಾಲೂಕಿನ ಕುಂದೂರಿನಲ್ಲಿ ಯುಗಾದಿ ಹಬ್ಬದಿಂದ 3 ದಿನಗಳ ಕಾಲ ನಡೆದ ಶ್ರೀ ಚಿಕ್ಕದೇವಮ್ಮ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪ್ರಾಣಿ ಬಲಿಯನ್ನು ತಡೆಯಲಾಯಿತು ಎಂದು ವಿಶ್ವ ಪಾಣಿ ಕಲ್ಯಾಣ ಮಂಡಳಿ, ಪಶು ಪ್ರಾಣಿಬಲಿ ನಿರ್ಮೂಲನ ಜಾಗೃತಿ ಮಹಾಸಂಘ ಹಾಗೂ ಬಸವ ಧರ್ಮ ಜ್ಞಾನ ಪೀಠದ ಅಧ್ಯಕ್ಷ ಶ್ರೀ ದಯಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀ ಚಿಕ್ಕ ದೇವಮ್ಮ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಚಿಕ್ಕ ದೇವಮ್ಮನಬೆಟ್ಟ, ಹಾಲ್ಗಡ ಮತ್ತು ಇಟ್ನಾ ಗ್ರಾಮಗಳಲ್ಲಿ ನಡೆದ ಮಹೋತ್ಸವದಲ್ಲಿ ದೇವಿಯ ಮೆರವಣಿಗೆ ಸಂದರ್ಭದಲ್ಲಿ, ರಸ್ತೆ ಹಾಗೂ ಅಕ್ಕಪಕ್ಕದ ಜಮೀನುಗಳಲ್ಲಿ, ಹಾಲ್ಗಡದ ಮೈದಾನದಲ್ಲಿ, ಕಪಿಲ ನದಿಯ ದಡದಲ್ಲಿ ಎಲ್ಲಿಯೂ ಯಾವುದೇ ಪ್ರಾಣಿಗಳ ಬಲಿ ನಡೆಯಲಿಲ್ಲ, ಪ್ರಾಣಿ ಬಲಿ ಹಾಗೂ ರಕ್ತ ತರ್ಪಣೆಗೆ ಬದಲಾಗಿ ತೆಂಗಿನ ಕಾಯಿ, ಎಳನೀರ ಅಭಿಷೇಕ, ಅರಿಶಿನ ಕುಂಕುಮ ಅರ್ಚನೆ ಮೂಲಕ ದೇವಿಗೆ ಪೂಜೆ ಸಲ್ಲಿಸಿದರು. ಕಳೆದ ಹಲವು ವರ್ಷಗಳ ಹಿಂದೆ ಈ ಜಾತ್ರೆಯಲ್ಲಿ ಹರಕೆಯ ಹೆಸರಿನಲ್ಲಿ ಸಾವಿರಾರು ಪ್ರಾಣಿಗಳ ಮಾರಣ ಹೋಮ ಜರುಗುತಿತ್ತು.

ಎಲ್ಲಿ ನೋಡಿದರಲ್ಲಿ ರಕ್ತ ಹರಿಯುತ್ತಿತ್ತು, ಇಡೀ ಜಾತ್ರಾ ಪರಿಸರವೇ ರಕ್ತ ಮಯವಾಗುತಿತ್ತು. ಈ ಬಾರಿ ವಿಶೇಷವೇನೆಂದರೆ ಬಲಿ ನೀಡಲು ಯಾವುದೇ ಪ್ರಾಣಿಗಳನ್ನು ಯಾರೂ ಜಾತ್ರಾ ಪರಿಸರಕ್ಕೆ ತಂದಿರಲಿಲ್ಲ ಎಂಬುದು ಗಮನಾರ್ಹ, ಸ್ವತಃ ಭಕ್ತರೇ ಸ್ವಯಂ ಪ್ರೇರಣೆಯಿಂದ ಪ್ರಾಣಿಬಲಿ ಪದ್ಧತಿ ಸಂಪೂರ್ಣವಾಗಿ ಕೈಬಿಟ್ಟು ಅಹಿಂಸಾತ್ಮಕವಾಗಿ ಸಾತ್ವಿಕ ರೀತಿಯಲ್ಲಿ ಧರ್ಮಾರಧನೆ ನಡೆಸಿದ್ದು ಈ ಸಾರಿಯ ವಿಶೇಷ, ಇದೊಂದು ಐತಿಹಾಸಿಕ ಮೈಲಿಗಲ್ಲಾಗಿದ್ದು ಇದೊಂದು ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವ ದಾಖಲೆಯಾಗಿದ್ದು ನಮಗೆ ಅಪಾರ ಹರ್ಷವನ್ನು ಉಂಟುಮಾಡಿದೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

ಸುಮಾರು 2 ದಶಕಗಳ ಕಾಲ ಪ್ರತೀ ವರ್ಷ ನಿರಂತರನಡೆಸಿದಪ್ರಯತ್ನದಫಲಶೃತಿ ಇದಾಗಿದೆ. ಈ ಅಭೂತಪೂರ್ವ ಯಶಸ್ಸಿಗೆ ಕಾರಣರಾದ ಕರ್ನಾಟಕ ಉಚ್ಚ ನ್ಯಾಯಾಲಯ, ಕರ್ನಾಟಕ ಸರ್ಕಾರ, ಮೈಸೂರು ಜಿಲ್ಲಾಡಳಿತ, ಸರಗೂರು ತಾಲೂಕು ಆಡಳಿತ, ಪೊಲೀಸ್ ಇಲಾಖೆ, ಪಶುಸಂಗೋಪನೆ, ಕಂದಾಯ ಹಾಗೂ ಕುಂದೂರು ಪಂಚಾಯತಿ ಇಲಾಖೆ, ದೇವಸ್ಥಾನದ ಆಡಳಿತ ಮಂಡಳಿ, ಭಕ್ತ ಸಮೂಹ ಹಾಗೂ ಸುದ್ದಿ ಮಾಧ್ಯಮಗಳು ಜತೆಗೆ ರಾಜ್ಯದ ಅನೇಕ ಅಹಿಂಸಾ ಮತ್ತು ಜೀವದಯಾ ಪರ ಸಂಘಟನೆಗಳು ಮತ್ತು ಕಾರ್ಯಕರ್ತರು ಕಾರಣರಾಗಿದ್ದು, ಅವರೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.



ಸಿಹಿ ಭೋಜನ ಸ್ವೀಕರಿಸಿದ ಭಕ್ತ ಸಮೂಹ

ಇಟ್ನಾ ಗ್ರಾಮದ ಕಪಿಲ ನದಿಯ ದಡದಲ್ಲಿ ಸುಮಾರು 10 ಸಾವಿರಕ್ಕೂ ಅಧಿಕ ಭಕ್ತಾದಿಗಳು ಸಾಮೂಹಿಕವಾಗಿ ಮಾಂಸಾಹಾರ ತ್ಯಜಿಸಿ, ಶುದ್ಧ ಸಸ್ಯಾಹಾರ ಹಾಗೂ ಸಿಹಿ ಭೋಜನವನ್ನು ಪ್ರಸಾದದ ರೂಪದಲ್ಲಿ ಸೇವಿಸಿ ಧನ್ಯತಾಭಾವ ವ್ಯಕ್ತಪಡಿಸಿದರು. ಇಟ್ನಾ ಗ್ರಾಮಸ್ಥರು ಮುಖ್ಯವಾಗಿ ಯಜಮಾನರುಗಳಲ್ಲಿ ಒಬ್ಬರಾದ ಚಿನ್ನಾಯಕ, ಅವರ ಪರಿವಾರ ಈ ಅನ್ನದಾಸೋಹದ ಸಂಪೂರ್ಣ ವೆಚ್ಚವನ್ನು ಭರಿಸಿದ್ದಷ್ಟೇ ಅಲ್ಲದೆ, ಸ್ವತಃ ತಾವೇ ಈ ಅನ್ನಸಂತರ್ಪಣೆ ನಡೆಸಿಕೊಟ್ಟಿದ್ದು, ಅವರಿಗೆ ಸ್ವಾಮೀಜಿಯವರು ಹೃತ್ಪೂರ್ವಕವಾಗಿ ಅಭಿನಂದನೆ ಸಲ್ಲಿಸಿದ್ದಾರೆ.



ಸರಗೂರು ತಾಲೂಕಿನ ತಹಶೀಲ್ದಾರ್ ಮೋಹನ್ ಕುಮಾರಿ ಮತ್ತು ಸಿಪಿಐ ಪ್ರಸನ್ನ ಕುಮಾರ್ ಹಾಗೂ ಆರ್‌ಐ ರವಿಚಂದ್ರ ಮತ್ತು ಎಎಸ್‌ಐ ಕಿರಣ್ ರವರುಗಳ ನೇತೃತ್ವದಲ್ಲಿ ನೂರಕ್ಕೂ ಹೆಚ್ಚು ಕಂದಾಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ದಯಾನಂದ ಸ್ವಾಮೀಜಿಯವರು ಸ್ಥಳದಲ್ಲಿಯೇ ಬೀಡು ಬಿಟ್ಟು, ಈ ಪ್ರಾಣಿಬಲಿ ತಡೆಯುವಲ್ಲಿ ಸಂಪೂರ್ಣ ಯಶಸ್ಸು ಸಾಧಿಸಿತು. ಭಕ್ತಾದಿಗಳು ಸಾರ್ವಜನಿಕರು, ದೇವಾಲಯದ ಆಡಳಿತ ಮಂಡಳಿ, ಪಂಚಾಯತಿ ಅಧಿಕಾರಿಗಳು, ಸದಸ್ಯರು ಮತ್ತು ಇಟ್ನಾ ಹಾಗೂ ಸುತ್ತಲಿನ ಗ್ರಾಮಗಳ ಯಜಮಾನರುಗಳು ಹಾಗೂ ಗ್ರಾಮಸ್ಥರು ಈ ಪ್ರಾಣಿಬಲಿ ತಡೆ ಯಶಸ್ಸಿಗೆ ಸಂಪೂರ್ಣ ಸಹಕಾರ ನೀಡಿದರು.

ದಯಾನಂದ ಸ್ವಾಮೀಜಿ ಮತ್ತು ಅವರ ತಂಡ ಅಹಿಂಸಾ ಪ್ರಾಣಿದಯಾ ಸಂದೇಶ ಯಾತ್ರೆಯ ಮೂಲಕ ಸರಗೂರು ಹಾಗೂ ಹೆಚ್.ಡಿ. ಕೋಟೆ ತಾಲೂಕಿನ ವಿವಿಧ ಊರುಗಳಲ್ಲಿ ಹಾಗೂ ಕುಂದೂರು, ಚಿಕ್ಕದೇವಮ್ಮನ ಬೆಟ್ಟ, ಹಾಲ್ಗಡ ಹಾಗೂ ಇಟ್ನಾ ಗ್ರಾಮದ ಸುತ್ತಾಮುತ್ತ, ಜಾತ್ರಾ ಪರಿಸರದಲ್ಲಿ ಪ್ರಾಣಿ ಬಲಿ ತಡೆ ಕುರಿತು ಜಾಗೃತಿ ಮೂಡಿಸಿದ್ದರು, ಪರಿಣಾಮ ಪ್ರಾಣಿಗಳ ಬಲಿಗೆ ಬದಲಾಗಿ ಭಕ್ತರು ತೆಂಗಿನಕಾಯಿ, ಹೂ, ಹಣ್ಣು ಇಟ್ಟು ಸಾತ್ವಿಕ ಪೂಜೆ ಸಲ್ಲಿಸಿದರು.

ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಕಲ್ಪಿಸಿ: ಜಿಟಿಡಿ

ಮೈಸೂರು: ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಕೊಟ್ಟು ಉತ್ತಮ ಪ್ರಜೆಗಳನ್ನಾಗಿ ಮಾಡಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರುದರು.

ಶನಿವಾರ ನಗರದ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಜೂನಿಯರ್ ಟೋಸ್ ಇಂಟರ್‌ನ್ಯಾಷನಲ್ ಪ್ರಿಸ್ಕೂಲ್‌ನ ಮೊದಲನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂದು ಎಲ್ಲರಿಗೂ ಶಿಕ್ಷಣ ಕೊಡಬೇಕು. ಮೊದಲು ನೇರವಾಗಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರಿಸಲಾಗುತ್ತಿತ್ತು. ಈಗ ಸಣ್ಣ ಮಕ್ಕಳಿಂದಲೇ ಶಾಲೆಗೆ ಸೇರಿಸುವ ಕೆಲಸ ನಡೆಯುತ್ತಿದೆ. ಬೇಬಿ ಸಿಟ್ಟಿಂಗ್, ಎಲ್‌ಕೆಜಿ, ಯುಕೆಜಿ ನಂತರ ಶಾಲೆಗೆ ಸೇರಿಸಲಾಗುತ್ತದೆ. ಇದರಿಂದಾಗಿ ಮಕ್ಕಳ ಬುದ್ಧಿವಂತಿಕೆ, ಜ್ಞಾನ ಹೆಚ್ಚಾಗಲಿದೆ ಎಂದರು.

ದಾನ ದಾನಕ್ಕಿಂತ ವಿದ್ಯಾದ್ಯಾನ ದೊಡ್ಡದು. ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರು. ಶಾಲೆಯಲ್ಲಿ ಶಿಕ್ಷಕರೇ ಗುರುವಾಗಿಮಾರ್ಗದರ್ಶನ ನೀಡಿ ಶಿಕ್ಷಣ ಹೇಳಿಕೊಡುತ್ತಾರೆ. ಮನೆಯಲ್ಲಿ ಪೋಷಕರು ಸಂಸ್ಕಾರಯುತ ಶಿಕ್ಷಣ ಕಲಿಸಿದರೆ, ಶಾಲೆಯಲ್ಲಿ ಮುಂದಿನ ಜೀವನದ ಭವಿಷ್ಯವನ್ನು ರೂಪಿಸಿಕೊಳ್ಳುವಂತಹ ಶಿಕ್ಷಣ ಹೇಳಿಕೊಡುತ್ತಾರೆ ಎಂದರು.

ತಂದೆ-ತಾಯಿಗೆ ನಮಸ್ಕಾರ ಮಾಡಿ ಗೌರವ ಕೊಡಬೇಕು. ಶಿಕ್ಷಕರಿಗೆ ನಮಿಸಿ ಗೌರವಿಸಿದರೆ ಸಮಾಜದಲ್ಲಿ ಮಾನವೀಯ ಮೌಲ್ಯವುಳ್ಳ ವ್ಯಕ್ತಿತ್ವ ರೂಪುಗೊಳ್ಳಲಿದೆ ಎಂದರು. ಶಿಕ್ಷಣ ಕ್ಷೇತ್ರದಲ್ಲಿ ಮೈಸೂರು ಅಪಾರ ಹೆಸರನ್ನು ಗಳಿಸಿದೆ. ಡಾ.ರಾಧಾಕೃಷ್ಣನ್, ಡಾ.ಕುವೆಂಪು,ಎಸ್.ಎಂ.ಕೃಷ್ಣ ಸೇರಿದಂತೆ ಅನೇಕರು ವ್ಯಾಸಂಗ ಮಾಡಿದ್ದಾರೆ. ಅನೇಕ ಮಹನೀಯರು ಮೈಸೂರಿನಲ್ಲಿ ಶಿಕ್ಷಣ ಪಡೆದು ರಾಷ್ಟ್ರ,ಜಗತ್ತು ಮೆಚ್ಚುವಂತಹ ಹೆಸರುಗಳಿಸಿದ್ದಾರೆ. ಅದೇ ರೀತಿ ಜೂನಿಯರ್ ಟೋಸ್ ಇಂಟರ್‌ನ್ಯಾಷನಲ್ ಪ್ರಿಸ್ಕೂಲ್ ಕೂಡ ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ತರಬೇಕು ಎಂದು ಸಲಹೆ ನೀಡಿದರು.

ಮಕ್ಕಳಿಗೆ ಪಠ್ಯದ ಜತೆಗೆ, ಕಲೆ, ಸಾಹಿತ್ಯ ಮೊದಲಾದ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು. ಮಕ್ಕಳು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಉತ್ತಮ ನಾಗರಿಕರಾಗಿ, ಸಾಹಿತಿಗಳಾಗಿ, ಅಧಿಕಾರಿಗಳಾಗಿ, ವಿಜ್ಞಾನಿ, ಇಂಜಿನಿಯರ್‌ಗಳಾಗಬೇಕು ಎಂದು ನುಡಿದರು.

ಇಂದಿನ ದಿನಗಳಲ್ಲಿ ವಿದ್ಯಾವಂತರೇ ದಾರಿತಪ್ಪುತ್ತಿರುವುದನ್ನು ನೋಡಿದರೆ ಬೇಸರವಾಗಲಿದೆ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಸಂಸ್ಕಾರವನ್ನು ಕಲಿಸಬೇಕು. ಇಲ್ಲದಿದ್ದರೆ ಅಕ್ಷರ ಕಲಿತು ದಾರಿತಪ್ಪಿದರೆ ಕಷ್ಟವಾಗಲಿದೆ. ಮಕ್ಕಳೇ ಆಸ್ತಿ.ನಾವು ಆಸ್ತಿ ಸಂಪಾದನೆ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿದರೆ ಮುಂದೆ ಜವಾಬ್ದಾರಿಯುತ ನಾಯಕರಾಗುತ್ತಾರೆ. ಇದನ್ನು ಪೋಷಕರು ಅರಿಯಬೇಕು ಎಂದರು. ಪ್ರಾಂಚೈಸಿ ಮಾಲೀಕರಾದ ಅನ್ನಪೂರ್ಣ ಗೌಡ, ರೇಣುಕಾ, ಪೃಥ್ವಿ, ಪಲ್ಲವಿ, ಅರ್ಚನಾ ಮತ್ತಿತರರು ಹಾಜರಿದ್ದರು.



ಮಕ್ಕಳ ನೃತ್ಯ ವೀಕ್ಷಿಸಿ ಸಂಭ್ರಮ

ವೇದಿಕೆಯಲ್ಲಿ ಮಕ್ಕಳು ಮಾಡಿದ ನೃತ್ಯವನ್ನು ವೀಕ್ಷಿಸಿದ ಶಾಸಕ ಜಿ.ಟಿ.ದೇವೇಗೌಡ ಸಂಭ್ರಮಿಸಿದರು. ಒಂದು ತಂಡದ ಮಕ್ಕಳಿಗಿಂತ ಮತ್ತೊಂದು ತಂಡದ ಮಕ್ಕಳು ನಾವೇನೂ ಕಡಿಮೆ ಇಲ್ಲ ಎನ್ನುವಂತೆ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಜನರ ತೀವ್ರ ವಿರೋಧ

ಮೈಸೂರು: ನಗರದ ಅಂಬಾವಿಲಾಸ ಅರಮನೆ ಸಮೀಪದ ಫುಟ್‌ಪಾತ್‌ನಲ್ಲಿ ಟಾಂಗ್ ನಿಲ್ದಾಣ ನಿರ್ಮಿಸುವುದಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಎಚ್ಚೆತ್ತ ಮೈಸೂರು ಮಹಾನಗರ ಪಾಲಿಕೆ ಇದೀಗ ಈ ನಿರ್ಧಾರದಿಂದ ಹಿಂದೆ ಸರಿದಿದೆ.

ಕೇಂದ್ರ ಸರ್ಕಾರದ ಸ್ವದೇಶ್ 2.0 ಯೋಜನೆಯಡಿ ಅರಮನೆ ಸನಿಹದ ಫುಟ್ ಪಾತ್ ನಲ್ಲಿ ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಮೈಸೂರು ಮಹಾನಗರ ಪಾಲಿಕೆ ಅನುಮತಿ ನೀಡಿತ್ತು. ಟಾಂಗಾ ಸವಾರಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಜನನಿಬಿಡ ಪ್ರದೇಶವಾಗಿರುವ ಅರಮನೆ ಸನಿಹದ ಫುಟ್ ಪಾತ್ ನಲ್ಲಿ ಟಾಂಗಾ ಸ್ಟ್ಯಾಂಡ್ ನಿರ್ಮಾಣಕ್ಕೆ ಮಹಾನಗರ ಪಾಲಿಕೆ ಸಮ್ಮತಿ ಸೂಚಿಸಿತ್ತು.

ಇದರ ಪರಿಣಾಮ ಫುಟ್ ಪಾತ್ ನಲ್ಲಿ ಜನರು ಸಂಚರಿಸಲು ಸಾಧ್ಯವಾಗದೆ ರಸ್ತೆಗಿಳಿಯುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಹೀಗಾಗಿ ಪಾದಚಾರಿ ರಸ್ತೆಯಲ್ಲಿ ಟಾಂಗಾ ಸ್ಟ್ಯಾಂಡ್ ನಿರ್ಮಾಣ ಮುಂದುವರಿಸಿದರೆ, ಉಗ್ರ ಹೋರಾಟ ನಡೆಸುವುದಾಗಿ ಜನರು ಎಚ್ಚರಿಕೆ ನೀಡಿದ್ದರು.

ಇದರಿಂದಾಗಿ ಇಕ್ಕಟ್ಟಿಗೆ ಸಿಲುಕಿದ್ದ ಮಹಾನಗರ ಪಾಲಿಕೆ ಅಧಿಕಾರಿಗಳು ಈಗ ಫುಟ್ ಪಾತ್ ನಲ್ಲಿ ಟಾಂಗಾ ಸ್ಟ್ಯಾಂಡ್ ನಿರ್ಮಾಣಕ್ಕೆ ಹಾಕಿದ್ದ ಅಡಿಪಾಯ ತೆರವುಗೊಳಿಸಿದ್ದಾರೆ. ಇದೀಗ ಜನರು ಫುಟ್ ಪಾತ್‌ನಲ್ಲಿ ಮುಕ್ತವಾಗಿ ಸಂಚರಿಸುತ್ತಿದ್ದಾರೆ.

ಮರ ಬಿದ್ದು ಕಾರು, ಆಟೋ ಜಖಂ

ಮೈಸೂರು: ಜೋರಾಗಿ ಬೀಸಿದ ಬಿರುಗಾಳಿ, ಮಳೆಯಿಂದಾಗಿ ಬೃಹತ್ ಮರವೊಂದು ಉರುಳಿ ಬಿದ್ದು ಕೆಳಗಿದ್ದ ಒಂದು ಕಾರ್, ಆಟೋ ಜಖಂಗೊಂಡಿರುವ ಘಟನೆ ಮೈಸೂರಿನ ಹಾರ್ಡಿಂಗ್ ವೃತ್ತದ ಬಳಿ ಘಟನೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಪಾಯದಿಂದ ಪಾರಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ನಗರಪಾಲಿಕೆಯ ಸಿಬ್ಬಂದಿಗಳು ರಸ್ತೆಗೆ ಬಿದ್ದಿದ್ದ ಮರ ತೆರವು ಮಾಡಿದರು.

ವಸಂತನಗರಕ್ಕೆ ಹರಿದ ಕಾವೇರಿ ನೀರು



ಮೈಸೂರು: ಹಲವು ವರ್ಷಗಳಿಂದ ಕುಡಿಯುವ ನೀರು ಪೂರೈಕೆಯಿಲ್ಲದೆ ಪರದಾಡುತ್ತಿದ್ದ ಮೈಸೂರಿನ ವಸಂತನಗರಕ್ಕೆ ಇದೀಗ ಕಾವೇರಿ ನೀರು ಸರಬರಾಜಾಗುತ್ತಿದ್ದು, ಬಡಾವಣೆಯ ನಿವಾಸಿಗಳಲ್ಲಿ ಸಂತಸದ ಹೊನಲು ಹರಿದಿದೆ. ವಸಂತನಗರ ಬಡಾವಣೆಗೆ ನೀರು ಹರಿಯುತ್ತಿದ್ದು, ಉಂಡುವಾಡಿ ಯೋಜನೆ ಪೂರ್ಣಗೊಂಡ ಬಳಿಕ ಮೂರ್ನಾಲ್ಕು ತಿಂಗಳಲ್ಲಿ ದಿನದ 24ಗಂಟೆಗಳ ಕಾಲ ಪೂರೈಕೆಯಾಗಲಿದೆ. ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಗೆ ಬರುವ ವಸಂತನಗರಕ್ಕೆ ಸರಿಯಾಗಿ ನೀರು ಪೂರೈಕೆಯಾಗದೆ ಎಲ್ಲರಿಗೂ ಬೋರ್‌ವೆಲ್ ನೀರು,ಟ್ಯಾಂಕರ್ ನೀರು ಆಶ್ರಯವಾಗಿತ್ತು. ಈ ಸಮಸ್ಯೆಯನ್ನು ಶಾಸಕ ಜಿ.ಟಿ. ದೇವೇಗೌಡರಿಗೆ ಹೇಳಿದ್ದರು.

ಈ ಬಗ್ಗೆ ಹಿಂದಿನ ಮುಡಾ ಸಭೆಯಲ್ಲಿ ಪ್ರಸ್ತಾಪಿಸಿ ನಗರಪಾಲಿಕೆ ಮೂಲಕ ನೀರು ಹರಿಸುವುದಕ್ಕೆ ಹೇಳಿದ್ದರು. ಅದರಂತೆ, ಮೈಸೂರು ನಗರಪಾಲಿಕೆಯಿಂದ ಈ ಪ್ರದೇಶಗಳಿಗೆ ನೀರು ಬಿಡಲು ಹೆಚ್ಚಿನ ಎಂಎಲ್‌ಡಿ ಕೊಡುವಂತೆ ಸೂಚನೆ ಕೊಡಲಾಗಿತ್ತು. ಹೀಗಾಗಿ, ವಸಂತನಗರದಲ್ಲಿ ಇರುವ ಪೈಪ್‌ಲೈನ್ ಮೂಲಕ ಹಾದು ಹೋಗಿರುವ ಟ್ಯಾಂಕ್‌ಗಳಿಗೆ ನೀರು ಹರಿಸಲಾಗುತ್ತಿದೆ.

ಇದರಿಂದಾಗಿ ಮೊದಲನೇ ಹಂತವಾಗಿ ಎರಡು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಶೀಘ್ರದಲ್ಲೇ ದಿನಕ್ಕೆ ಒಂದು ಬಾರಿ ನೀರು ಹರಿಸುವ ಕೆಲಸವಾಗಲಿದೆ. ಮೂರ್ನಾಲ್ಕು ತಿಂಗಳಲ್ಲಿ ಉಂಡುವಾಡಿ ಯೋಜನೆ ಮುಗಿಯುತ್ತಿದ್ದಂತೆ ಪ್ರತಿನಿತ್ಯ ನೀರು ಪೂರೈಕೆಯಾಗಲಿದೆ.

ವಸಂತನಗರ ಬಡಾವಣೆಯ ಬಹುದಿನಗಳ ಕನಸನ್ನು ಈಡೇರಿಸಿದ ಶಾಸಕ ಜಿ.ಟಿ.ದೇವೇಗೌಡರನ್ನು ಬಡಾವಣೆಯ ಪ್ರಮುಖರು ಸನ್ಮಾನಿಸಿದರು. ಶಾಸಕರ ಕಚೇರಿಗೆ ಆಗಮಿಸಿದ ಬಡಾವಣೆಯ ನಿವಾಸಿಗಳ ಮುಖಂಡರು ಹೂಗುಚ್ಛ ನೀಡಿ ಅಭಿನಂದಿಸಿದರು.

ಬೇಸಿಗೆ ಶಿಬಿರದಲ್ಲಿ ಚಿಣ್ಣರಿಗೆ ಕೃಷಿ ಪಾಠ, ದೇಶಿ ಆಟ

ಮೈಸೂರು: ಕೃಷಿಕರ ಮಕ್ಕಳು ಕಾರಣಾಂತರಗಳಿಂದ ಕೃಷಿಯಿಂದ ದೂರ ಉಳಿಯುತ್ತಿದ್ದಾರೆ. ಕೃಷಿಕರ ಮಕ್ಕಳಿಗೆ ಕೃಷಿ ಕುರಿತು ಆಸಕ್ತಿ, ಕನಿಷ್ಠ ಜ್ಞಾನ, ತಿಳುವಳಿಕೆ ನೀಡಲು, ಗ್ರಾಮದತ್ತ ಮಕ್ಕಳನ್ನು ಆಕರ್ಷಿಸಲು ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಹೊಸ ಪ್ರಯತ್ನದೊಂದಿಗೆ ಚಿಣ್ಣರಿಗೆ ಕೃಷಿಪಾಠ ದೇಶಿಆಟ ಬೇಸಿಗೆ ಶಿಬಿರವನ್ನು ಆಯೋಜಿಸಿದೆ.

ಕೃಷಿ ಪಾಠದಲ್ಲಿ ಗೋ ಆಧಾರಿತ ಕೃಷಿ, ತೋಟಗಾರಿಕೆ, ಕೈತೋಟ, ಎರೆಗೊಬ್ಬರ ತಯಾರಿ, ಬೀಜದುಂಡೆ, ಮಣ್ಣಿನ ಮಹತ್ವ, ಕೀಟ ಪ್ರಪಂಚ, ರೇಷ್ಮೆ ಕೃಷಿ, ಜೇನು ಕೃಷಿ, ಕೃಷಿ ಉಪಕರಣಗಳ ಪರಿಚಯ, ಮಾವಿನ ಕಟಾವು, ಟ್ರ್ಯಾಕ್ಟರ್ ಸವಾರಿ ಇನ್ನಿತರೆ ಕೃಷಿ ಸಂಬಂಧಿತ ವಿಷಯಗಳ ಕುರಿತು ಪರಿಚಯಿಸಲಾಗುವುದು. ದೇಶಿ ಆಟಗಳಲ್ಲಿ ಬುಗುರಿ, ಗಾಳಿಪಟ, ಗೋಲಿ, ಕುಂಟೆಬಿಲ್ಲೆ, ಅಳುಗುಳಿ ಮನೆ, ಚೌಕಾಬಾರ, ಲಗೋರಿ, ಬಳೆ ಆಟ ಮೂಲಕ ರಜಾದಿನ ಕಳೆಯುವುದು. ಈ ಶಿಬಿರದ ಮೂಲ ಉದ್ದೇಶವಾಗಿದೆ. ಇದಲ್ಲದೆ, ಮಕ್ಕಳಿಗೆ ಮೌಲ್ಯಗಳನ್ನು ತಿಳಿಸಲು ಪ್ರತಿನಿತ್ಯ ಪ್ರಾರ್ಥನೆ, ಯೋಗ ಹಾಗು ನೀತಿಕತೆ ತಿಳಿಸಲಾಗುವುದು. ಚಿತ್ರಕಲೆ, ಕಾಗದದಿಂದ ಕರಕುಶಲ ವಸ್ತುಗಳ ತಯಾರಿ, ಮಣ್ಣಿನ ಆಟಿಕೆಗಳ ತಯಾರಿ, ಗಾಳಿಪಟ ತಯಾರಿ ಇವುಗಳ ಕುರಿತು ಹೇಳಿಕೊಡಲಾಗುವುದು.

ಕೃಷಿ ಪಾಠ ದೇಶಿ ಆಟ ಶಿಬಿರವು 2026 ಏಪ್ರಿಲ್ 7-11 ರಂದು ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಏರ್ಪಡಿಸಲಾಗಿದೆ. ಈ ಶಿಬಿರಕ್ಕೆ 6-12 ವರ್ಷದ ಮಕ್ಕಳು ಪ್ರವೇಶ ಪಡೆಯಬಹುದು. ಮೊದಲು ಬಂದ 25 ವಿದ್ಯಾರ್ಥಿಗಳಿಗೆ ಆದ್ಯತೆ. ಏಪ್ರಿಲ್ 5ರೊಳಗೆ ಹೆಸರನ್ನು ನೋಂದಾಯಿಸಬೇಕು. ಮೈಸೂರಿನಿಂದ ಬರುವ ವಿದ್ಯಾರ್ಥಿಗಳಿಗೆ ವಾಹನ ವ್ಯವಸ್ಥೆ ಇರುತ್ತದೆ ಎಂದರು.

ನ್ಯಾಯಬೆಲೆ ಅಂಗಡಿ ಉದ್ಘಾಟನೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ ಅಭಿಪ್ರಾಯ

ಗ್ಯಾರಂಟಿ ಬಡವರು ಬದುಕು ಕಟ್ಟಿಕೊಳ್ಳಲು ನೆರವು

ನಂಜನಗೂಡು: ತಾಲೂಕಿನ ವೀರೇದೇವನಪುರ ಗ್ರಾಮಸ್ಥರ ಬೇಡಿಕೆಯನ್ನು ಮನ್ನಿಸಿ ಗ್ರಾಮದ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಕಟ್ಟಡದಲ್ಲಿ ನ್ಯಾಯಬೆಲೆ ಅಂಗಡಿಯನ್ನು ಆರಂಭಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕಿನ ವೀರೇದೇವನಪುರ ಗ್ರಾಮದಲ್ಲಿ ಶನಿವಾರ ನ್ಯಾಯಬೆಲೆ ಅಗಂಡಿಯಲ್ಲಿ ಗ್ರಾಮಸ್ಥರಿಗೆ ಪಡಿತರ ವಿತರಿಸಿ ಅವರು ಮಾತನಾಡಿದರು.

ವೀರೇದೇವನಪುರ ಗ್ರಾಮಸ್ಥರು ಪಡಿತರ ಪಡೆಯಬೇಕಾದರೆ ಪಕ್ಕದ ಗ್ರಾಮದ ನ್ಯಾಯಬೆಲೆ ಅಂಗಡಿಗೆ ತೆರಳಬೇಕಾಗಿತ್ತು. ಆದಕಾರಣ ಗ್ರಾಮಸ್ಥರು ನಮ್ಮ ಗ್ರಾಮದಲ್ಲಿಯೇ ನ್ಯಾಯಬೆಲೆ ಅಂಗಡಿ ತೆರೆದು ಪಡಿತರ ವಿತರಿಸಬೇಕು ಎಂದು ಬೇಡಿಕೆ ಇಟ್ಟಿದ್ದರು. ಗ್ರಾಮಸ್ಥರ ಬೇಡಿಕೆಯಂತೆ ಇಂದಿನಿಂದ ನಿಮ್ಮ ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿ ಆರಂಭಿಸಲಾಗಿದ್ದು, ನಿಮ್ಮ ಗ್ರಾಮದಲ್ಲಿಯೇ ಪಡಿತರ ಪಡೆಯಬಹುದಾಗಿದೆ ಎಂದರು. ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳನ್ನು ಸಮರ್ಥವಾಗಿ ಜಾರಿಗೆ ತಂದಿದೆ, ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿವೆ ವಿಪಕ್ಷಗಳ ಆರೋಪದಂತೆ ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಯೋಜನೆಗಳಿಗೆ ಹಿನ್ನಡೆಯಾಗಿಲ್ಲ, ನಮ್ಮ ಕ್ಷೇತ್ರದಲ್ಲಿ ಸತತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ. ಗ್ರಾಮದಲ್ಲೂ ಕೂಡ ಗ್ರಾಮಸ್ಥರು ಬಸ್ ಶೆಲ್ಟರ್ ನಿರ್ಮಾಣ ಹಾಗೂ ಗ್ರಂಥಾಲಯವನ್ನು. ನಿರ್ಮಿಸಿ ಕೊಡುವಂತೆ ಬೇಡಿಕೆ ಇಟ್ಟಿದ್ದು ಶಾಸಕರ ಅನುದಾ?ನದಲ್ಲಿ ಅನುದಾನ ನೀಡುವ ಮೂಲಕ ನಿಮ್ಮ ಬೇಡಿಕೆಯನ್ನು ಈಡೇರಿಸಲಾಗುವುದು ಎಂದರು.




ಗ್ರಾಮದ ಕೃಷಿ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ ಕಳೆದ 35 ವರ್ಷಗಳಿಂದ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿ ಆರಂಭಿಸಬೇಕು ಎಂಬ ಬೇಡಿಕೆ ಇತ್ತು, ಅದರಂತೆ ಶಾಸಕ ದರ್ಶನ್ ಧ್ರುವನಾರಾಯಣ ಅವರು ಸತತ ಪ್ರಯತ್ನ ಪಟ್ಟು ಎಲ್ಲಾ ಅಡೆತಡೆಗಳನ್ನು ನಿವಾರಿಸಿ ನ್ಯಾಯಬೆಲೆ ಅಂಗಡಿಯನ್ನು ಮಂಜೂರುಗೊಳಿಸಿ ಗ್ರಾಮಸ್ಥರ ಬೇಡಿಕೆಯನ್ನು ಈಡೇರಿಸಿದ್ದಾರೆ ಎಂದರು. ಮುಖಂಡರಾದ ಶ್ರೀನಿವಾಸ ಮೂರ್ತಿ, ರಂಗದಾಸ್, ಎನ್.ಎಂ.ಮಂಜುನಾಥ್, ಮುದ್ದುಮಾದ ಶೆಟ್ಟಿ, ದೊರೆಸ್ವಾಮಿ, ಸುರೇಶ್, ಸೋಮು, ಶಿವಕುಮಾರ್, ಸಹಕಾರ ಸಂಘದ ನಿರ್ದೇಶಕರಾದ ಬದನವಾಳು ಮಹೇಶ್, ಪಾರ್ವತಮ್ಮ, ಸೌಭಾಗ್ಯ ಇದ್ದರು.

ಮಳೆಯಿಂದ ಹಾನಿಯಾಗಿರುವ ಗ್ರಾಮಗಳಿಗೆ ಮಾಜಿ ಶಾಸಕ ಮಂಜುನಾಥ್ ಭೇಟಿ

27 ಮನೆಗಳಿಗೆ ಹೆಂಚು, ಕಲ್ನಾರು ಶೀಟು ಸಹಾಯ

ಹುಣಸೂರು: ಹನಗೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಬೀಸಿದ ಬಿರುಗಾಳಿ-ಮಳೆಯಿಂದ ಹಾನಿಯಾಗಿರುವ ಗ್ರಾಮಗಳಿಗೆ ಮಾಜಿ ಶಾಸಕರಾದ ಎಚ್.ಪಿ. ಮಂಜುನಾಥ್ ಭೇಟಿ ನೀಡಿ ನೊಂದ ಜನತೆಗೆ ಆತ್ಮಸ್ಥೈರ್ಯ ತುಂಬಿ ಹಾನಿಗೀಡಾಗಿರುವ ದಾಸನಪುರ ಗ್ರಾಮದ 23 ಮನೆಗಳು, ಕಿರಂಗೂರು ಗ್ರಾಮದ 2 ಮನೆಗಳು, ಕಾಮಗೌಡನಹಳ್ಳಿ ಯಲ್ಲಿ ಒಂದು ಮನೆ, ಹಾಗೂ ಹರಳಳ್ಳಿ ಯಲ್ಲಿ ಒಂದು ಮನೆ ಸೇರಿದಂತೆ ಒಟ್ಟು 27 ಮನೆಗಳಿಗೆ ಹೆಂಚು, ಕಲ್ನಾರು ಶೀಟು, ಮರಮುಟ್ಟುಗಳು ಹಾಗೂ ಧನಸಹಾಯ ನೀಡಿದರು.

ಇದಲ್ಲದೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎರಡು ಕೊಠಡಿಗಳು ಬಿರುಗಾಳಿಯ ಹೊಡೆತಕ್ಕೆ ಸಿಲುಕಿ ಹಾನಿಯಾಗಿದ್ದು, ಇವುಗಳ ದುರಸ್ತಿಗೆ 50 ಸಾವಿರ ರೂ ಹಾಗೂ ಅಗತ್ಯವಾಗಿರುವಷ್ಟು ಹೆಂಚುಗಳನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಗ್ರಾಮಸ್ಥರುಗಳಿಗೆ ನೀಡಿ ಕೂಡಲೇ ಶಾಲೆ ಕೊಠಡಿಗಳನ್ನು ದುರಸ್ತಿ ಪಡಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರ ನೀಡಿದರು.



ಶಾಲಾ ಕೊಠಡಿ ದುರಸ್ತಿ ವೆಚ್ಚ ಹೆಚ್ಚಾದರೆ ಮತ್ತಷ್ಟು ಸಹಾಯ ಮಾಡುವೆನೆಂದು ಭರವಸೆ ನೀಡಿದರು.

ಇದಲ್ಲದೆ ಗ್ರಾಮದ ಇಬ್ಬರಿಗೆ ಮಳೆ ಗಾಳಿ ಸಿಲುಕಿ ಗಾಯಗೊಂಡಿದ್ದು ಅವರಿಗೆ ಆಸ್ಪತ್ರೆ ಖರ್ಚು ವೆಚ್ಚಕ್ಕೆ ಧನ ಸಹಾಯ ನೀಡಿದರು. ಇದಲ್ಲದೆ ದಾಸನಪುರ, ಹನಗೋಡು ಕಚುವಿನಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ಕಂಬಗಳು ಹಾನಿಯಾಗಿರುವ ಬಗ್ಗೆ ಚೆಸ್ಕಂನ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ ಕೂಡಲೇ ವಿದ್ಯುತ್ ಕಂಬಗಳ ದುರಸ್ತಿಕಾರ್ಯ ಕೈಗೊಂಡು ಕಗ್ಗತ್ತಲಿಂದ ಕೂಡಿರುವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದರು.

ಹಾಗೆಯೇ ಈ ಭಾಗದಲ್ಲಿ ಆಲಿಕಲ್ ಮಳೆಯಿಂದಾಗಿ ತಂಬಾಕು ಮಡಿ ಸಸಿಗಳು ಹನಗೋಡಿನ ಶಿವಣ್ಣ, ಬಸವರಾಜ್ ರವರಿಗೆ ಬಾಳೆ ಬೆಳೆ ಹೆಮ್ಮಿಗೆ ಗ್ರಾಮದ ರಾಮೇಗೌಡರಿಗೆ ಸೇರಿದ ನಾಲ್ಕು ಎಕರೆ ಕಲ್ಲಂಗಡಿ ಬೆಳೆ ಹಾನಿಯಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳಾದ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ದೂರವಾಣಿ ಮೂಲಕ ಮಾತನಾಡಿ ತಂಬಾಕು, ಬಾಳೆ, ಕಲ್ಲಂಗಡಿ ಬೆಳೆಗೆ ಹೆಚ್ಚಿನ ಪರಿಹಾರ ನೀಡಬೇಕೆಂದು ಮನವಿ ಮಾಡಿದರು.

ಕಿರುಸುದ್ದಿ

ರಾಷ್ಟ್ರೀಯ ಆಯುಷ್ ಅಭಿಯಾನದ ನೇಮಕಾತಿಗೆ ತಡೆ

ಚಾಮರಾಜನಗರ: ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಎಲ್ಲಾ ಗುತ್ತಿಗೆ ಆಧಾರದ ಆಯುಷ್ ವೈದ್ಯರ ನೇಮಕಾತಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ಆದೇಶಿಸಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಅಯುಷ್ ಅಭಿಯಾನದಡಿ ಗುತ್ತಿಗೆ ಆಧಾರದ ಆಯುಷ್ ವೈದ್ಯರ ನೇಮಕಾತಿಗಾಗಿ ಜಿಲ್ಲಾ ಆಯುಷ್ ಕಚೇರಿಯಿಂದ ಹೊರಡಿಸಲಾಗಿದ್ದ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ. 23ರಂದು ಜಿಲ್ಲಾಮಟ್ಟದ ಕ್ರೀಡಾಕೂಟ

ಚಾಮರಾಜನಗರ: ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಮೈ ಭಾರತ್ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಮಾರ್ಚ್ 23ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ) ಕಾರ್ಯಕ್ರಮ ಉದ್ಘಾಟಿಸುವರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್.ಎಸ್. ಅಶ್ವಿನಿ ಅಧ್ಯಕ್ಷತೆ ವಹಿಸುವರು. ಮೈ ಭಾರತ್ ಕೇಂದ್ರದ ಜಿಲ್ಲಾ ಯುವಜನ ಅಧಿಕಾರಿ ಪಿ. ಅಖಿಲ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕುದೇರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎನ್.ವಿ ಸಿಂಧು, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ. ಬಂಗಾರು ಉಪಸ್ಥಿತಿ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಜನಸಂಪರ್ಕ ಸಭೆ

ಚಾಮರಾಜನಗರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ, ಹರದನಹಳ್ಳಿ ಮತ್ತು ಸಂತೇಮರಹಳ್ಳಿ ಉಪವಿಭಾಗಗಳ ವ್ಯಾಪ್ತಿಯಲ್ಲಿ ಮಾರ್ಚ್ 23ರಂದು ಹಾಗೂ ಗುಂಡ್ಲುಪೇಟೆ, ಬೇಗೂರು ಉಪವಿಭಾಗಗಳ ವ್ಯಾಪ್ತಿಯಲ್ಲಿ ಮಾರ್ಚ್ 24ರಂದು ಜನಸಂಪರ್ಕ ಸಭೆ ಏರ್ಪಡಿಸಲಾಗಿದೆ. ಮಾರ್ಚ್ 23ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಚಾಮರಾಜನಗರ ಉಪವಿಭಾಗ, ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಹರದನಹಳ್ಳಿ ಉಪವಿಭಾಗ ಹಾಗೂ ಮಧ್ಯಾಹ್ನ 3 ರಿಂದ ಸಂಜೆ 4 ಗಂಟೆಯವರೆಗೆ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ಜನಸಂಪರ್ಕ ಸಭೆ ನಡೆಯಲಿದೆ. ಮಾರ್ಚ್ 24ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಬೇಗೂರು ಉಪವಿಭಾಗ ಹಾಗೂ ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದ್ದು, ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ತಿಳಿಸುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವರ ದಾಸಿಮಯ್ಯ ಜಯಂತಿ ನಾಳೆ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ಮಾರ್ಚ್ 23ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ದೇವರ ದಾಸಿಮಯ್ಯ ಭಾವಚಿತ್ರದ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಬೆಳಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಎಂ.ಎಸ್.ಐ.ಎಲ್. ಅಧ್ಯಕ್ಷರು ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ಸುನೀಲ್ ಬೋಸ್ ಘನ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು. ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಹೆಚ್.ವಿ. ಚಂದ್ರು, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕೊಳ್ಳೇಗಾಲ ಸಾಹಿತಿ ಡಾ. ಎನ್. ಮಧುಸೂದನ ಅವರು ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.



ಕೊಳ್ಳೇಗಾಲ ತಾಲೂಕಿನ ಕಂಚಗಳ್ಳಿ ಗ್ರಾಮದಲ್ಲಿ ಶನಿವಾರ ಪೈಪ್ ಲೈನ್ ಅಳವಡಿಸುವುದು, ಕಾಲುವೆ ಅಭಿವೃದ್ಧಿ ಕಾಮಗಾರಿಗೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಚಾಲನೆ ನೀಡಿದರು.

ಹೊನ್ನೇರು ಕಟ್ಟಿ ರೈತರ ಸಂಭ್ರಮ

ಚಾಮರಾಜನಗರ: ಜಿಲ್ಲಾದ್ಯಂತ ಸಡಗರ, ಸಂಭ್ರ ಮದಿಂದ ಯುಗಾದಿ ಹಬ್ಬವನ್ನು ಆಚರಣೆ ಮಾಡಲಾಗಿದ್ದು ರೈತರು ಹೊನ್ನೇರು ಕಟ್ಟುವ ಮೂಲಕ ಸಂಭ್ರಮ ಸಡಗರಿಂದ ನೂತನ ಯುಗಾದಿ ಹಬ್ಬವನ್ನು ಸಂಭ್ರಮದಿಂದ ಸ್ವಾಗತಿಸಿದರು.

ಯುಗಾದಿ ಹಬ್ಬ ಬರುವ ಮುನ್ನ ಎರಡು ದಿನದಿಂದ ಮಳೆಯಾಗುತ್ತಿದ್ದು, ಸಹಜವಾಗಿ ರೈತರ ಮುಖದಲ್ಲಿ ಮಂದಹಾಸ ಇದ್ದು, ಭೂಮಿ ಮಳೆಯಿಂದ ತಂಪಾಗಿದೆ. ಉತ್ತಮ ಮಳೆಯಾಗುವ ನಿರೀಕ್ಷೆ ಎಂದು ರೈತರು ಸಂಭ್ರಮ, ಸಡಗರದಿಂದ ಹೊನ್ನೇರು ಕಟ್ಟಿ, ಭೂಮಿ ತಾಯಿಗೆ ಪೂಜೆ ಸಲ್ಲಿಸಿದರು. ಜಿಲ್ಲೆಯಾದ್ಯಂತ ರೈತರು ತಮ್ಮ ಎತ್ತುಗಳನ್ನು ಶೃಂಗರಿಸಿ, ಜಮೀನಿಗೆ ತೆರಳಿ ನೇಗಿಲು ಇಟ್ಟು, ಬಾಳೆ, ಹೊಂಬಳೆ ಕಟ್ಟಿ, ವಿಶೇಷ ಪೂಜೆ ಸಲ್ಲಿಸಿ, ಒತ್ತು ಸುತ್ತು ಬೇಸಾಯ ಮಾಡುವ ಮೂಲಕ ಭೂಮಿ ತಾಯಿಗೆ ಉತ್ತಮ ಬೆಳೆಯಾಗಿ ರೈತರು ಸಂಮೃದ್ಧಿ ಜೀವನ ನಡೆಸುವಂತಾಗಲಿ ಎಂದು ಪ್ರಾರ್ಥಿಸಿಕೊಂಡರು. ಜಿಲ್ಲೆಯ ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ಭಾಗಗಳಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಹಬ್ಬದ ಹಿನ್ನೆಲೆಯಲ್ಲಿ ಜನರು ಹೊಸ ಬಟ್ಟೆ ತೊಟ್ಟು ದೇವಸ್ಥಾನಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಹಬ್ಬದ ಪ್ರಯುಕ್ತ ಜಿಲ್ಲೆಯ ಹಲವು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯಿತು. ಹಲವು ಗ್ರಾಮಗಳಲ್ಲಿ ದೇವರ ಉತ್ಸ ವಮೂರ್ತಿಗಳನ್ನು ಊರಿನ ಹೊರ ಭಾಗಕ್ಕೆ ಕೊಂಡೊಯ್ದು ವಿವಿಧ ಪುಷ್ಪಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಗ್ರಾಮಗಳಿಗೆ ತಂದು ಮೆರವಣಿಗೆ ಮಾಡಲಾಯಿತು.



ಚಾಮರಾಜನಗರ ಜಿಲ್ಲಾದ್ಯಂತ ಸಡಗರ, ಸಂಭ್ರ ಮದಿಂದ ಯುಗಾದಿ ಹಬ್ಬವನ್ನು ಆಚರಣೆ ಮಾಡಲಾಗಿದ್ದು ರೈತರು ಹೊನ್ನೇರು ಕಟ್ಟುವ ಮೂಲಕ ಯುಗಾದಿ ಹಬ್ಬವನ್ನು ಸಂಭ್ರಮದಿಂದ ಸ್ವಾಗತಿಸಿದರು.

ಚಾಮರಾಜನಗರದಲ್ಲಿ ಸುರಿದ ಆಲಿಕಲ್ಲು ಮಳೆಗೆ 350 ಎಕರೆಗೂ ಹೆಚ್ಚು ಬೆಳೆ ಹಾನಿ

ಶೇ.80ರಷ್ಟು ಬೆಳೆ ನಷ್ಟ

ಚಾಮರಾಜನಗರ: ಯುಗಾದಿ ಆರಂಭಕ್ಕೂ ಮುನ್ನ ಎರಡು ದಿನ ಸುರಿದ ಆಲಿಕಲ್ಲು, ಬಿರುಗಾಳಿ ಸಹಿತ ಮಳೆಗೆ ಜಿಲ್ಲೆಯಲ್ಲಿ 350 ಎಕರೆಗೂ ಅಧಿಕ ಪ್ರದೇಶದಲ್ಲಿ ಬೆಳೆದಿದ್ದ ವಿವಿಧ ಬೆಳೆಗಳು ಹಾನಿಯಾಗಿರುವುದು ವರದಿಯಾಗಿದೆ.

ಜಿಲ್ಲಾ ತೋಟಗಾರಿಕಾ ಇಲಾಖೆ ಆಲಿಕಲ್ಲು ಮಳೆಯಿಂದಾಗಿ ಉಂಟಾಗಿರುವ ಬೆಳೆ ಹಾನಿಯ ಸಮೀಕ್ಷೆ ನಡೆಸುತ್ತಿದ್ದು, ಸರ್ವೆ ಪ್ರಕಾರ, 350 ಎಕರೆಗೂ ಅಧಿಕ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವುದು ಕಂಡು ಬಂದಿದೆ. ಇದರಲ್ಲಿ ಶೇ.80ರಷ್ಟು ಪ್ರಮಾಣದಲ್ಲಿ ಬೆಳೆ ನಷ್ಟ ಆಗಿದೆ. ಕಳೆದ ಸಲ ಟೊಮೊಟೊಗೆ ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆ ಸಿಕ್ಕಿರಲಿಲ್ಲ. ಅವುಗಳನ್ನು ಕಟಾವು ಮಾಡದೆ ಜಮೀನುಗಳಲ್ಲೇ ಬಿಡುವಂತಹ ಪರಿಸ್ಥಿತಿ ಇತ್ತು. ಈ ಬಾರಿ ಟೊಮೊಟೊಗೆ ತಕ್ಕಮಟ್ಟಿಗಿನ ದರವಿದ್ದರೂ ಆಲಿಕಲ್ಲಿನ ಹೊಡೆತಕ್ಕೆ ಸಿಲುಕಿ ನೆಲದ ಪಾಲಾಗಿವೆ ಎಂದು ರೈತರು ತಿಳಿಸಿದ್ದಾರೆ.ಮಾರುಕಟ್ಟೆಯಲ್ಲಿ ಕಲ್ಲಂಗಡಿಗೆ ಭರ್ಜರಿ ಮಾರಾಟ ಆಗುತ್ತಿರುವ ಸಂದರ್ಭದಲ್ಲೇ ಆಲಿಕಲ್ಲು ಮಳೆ ಹಾನಿ ಮಾಡಿದೆ. ಹೀಗಾಗಿ, ರೈತರು ಕಂಗಾಲಾಗಿದ್ದಾರೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕೆಂದು ರೈತರು ಮನವಿ ಮಾಡುತ್ತಿದ್ದಾರೆ. ವೀರನಪುರದಲ್ಲಿ ಟೊಮೊಟೊ, ಬಾಳೆ ಫಸಲಿಗೆ ಹಾನಿ, ಯುಗಾದಿ ಬಂತೆಂದರೆ ಕೃಷಿ ಚಟುವಟಿಕೆಯನ್ನು ಹೊನ್ನೇರಿನ ಮೂಲಕ ಸಂಭ್ರಮದಿಂದ ಆರಂಭಿಸುತ್ತಿದ್ದ ರೈತರಿಗೆ ಮೊನ್ನೆ ಸುರಿದ ಆಲಿಕಲ್ಲು, ಬಿರುಗಾಳಿ ಮಳೆ ತಲೆನೋವು ತಂದಿದೆ. ವೀರನಪುರದ ರೈತ ಗುರುಸ್ವಾಮಿ ಎಂಬವರು ಮಾತನಾಡಿ, ಹಬ್ಬಕ್ಕೆಂದು ಹೊಸ ಬಟ್ಟೆ ಖರೀದಿಸಿದ್ದೆವು. ಆದರೆ, ಮಳೆ ಎಲ್ಲಾ ಸಡಗರವನ್ನು ಕಸಿದಿದೆ ಎಂದು ಅಳಲು ತೋಡಿಕೊಂಡರು. ಗುರುಸ್ವಾಮಿ, ರಘು, ಸುನೀಲ್ ಸೇರಿ ಹತ್ತಾರು ಮಂದಿ ರೈತರ ಟೊಮೊಟೊ





ನೆಲಕಚ್ಚಿದ ಬಾಳೆ ಬೆಳೆ

ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳಲ್ಲಿ ಬಾಳೆ ಪ್ರಮುಖವಾಗಿದೆ. ಬಹುಪಾಲು ರೈತರು ಬಾಳೆ ಕೃಷಿ ಮಾಡುತ್ತಿದ್ದಾರೆ. ಮಳೆ ಸೂಚನೆ ಇಲ್ಲದೇ ಇದ್ದರೂ ಆಲಿಕಲ್ಲು ಸಹಿತ ಮಳೆ ಸುರಿದ ಮಳೆಗೆ ಬಾಳೆ ಗಿಡಗಳು ನೆಲಕಚ್ಚಿವೆ. ಬಾಳೆ ಬಿಟ್ಟರೆ ಟೊಮೊಟೊ, ಕಲ್ಲಂಗಡಿ, ಮಂಗಳೂರು ಸೌತೆಕಾಯಿ, ಈರುಳ್ಳಿ ಬೆಳೆ ಆಲಿಕಲ್ಲಿನ ಆರ್ಭಟಕ್ಕೆ ಹಾನಿಗೊಳಗಾಗಿವೆ.

ಬೆಳೆ ಸಂಪೂರ್ಣ ಹಾನಿಗೀಡಾಗಿದೆ. ಉಳಿದಂತೆ, ಬಾಳೆಯೂ ಕೂಡ ನೆಲಕಚ್ಚಿದೆ. ಚಾಮರಾಜನಗರ ತಾಲೂಕಿನ ಕಡುವಿನಕಟ್ಟೆಹುಂಡಿ, ವೀರನಪುರ, ಉಡಿಗಾಲ, ನಂಜೇದೇವನಪುರ, ಹನೂರು ತಾಲೂಕಿನ ಹಲವೆಡೆ ಎರಡು ದಿನದ ಮಳೆ ರೈತರ ತಿಂಗಳುಗಟ್ಟಲೆ ಶ್ರಮ ವ್ಯರ್ಥವಾಗಿದೆ.

ಚಾಮರಾಜನಗರ ಜಿಲ್ಲಾ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಿವಪ್ರಸಾದ್ ಈ ಕುರಿತು ಪ್ರತಿಕ್ರಿಯಿಸಿ, ಆಲಿಕಲ್ಲು ಸಹಿತ ಮಳೆಯಿಂದ ಬೆಳೆ ಹಾನಿ ಉಂಟಾಗಿರುವ ಕುರಿತು ಸರ್ವೆ ನಡೆಸಲಾಗುತ್ತಿದೆ. ಸದ್ಯಕ್ಕೆ 350ಕ್ಕೂ ಅಧಿಕ ಎಕರೆಯಲ್ಲಿ ಬೆಳೆ ಹಾನಿಯಾಗಿರುವುದು ಕಂಡುಬಂದಿದೆ. ಅಧಿಕ ಪ್ರಮಾಣದಲ್ಲಿ ಬಾಳೆ ಬೆಳೆ ಹಾನಿಯಾಗಿದೆ. ಸರ್ವೆ ಮುಗಿದ ಬಳಿಕ ಪರಿಹಾರ ನೀಡಲಾಗುವುದು ಎಂದು ತಿಳಿಸಿದರು.

ಮಾರಮ್ಮ, ನಾಡಮೇಗಲಮ್ಮ ಕೊಂಡೋತ್ಸವ ಅದ್ದೂರಿ

ಯಳಂದೂರು: ಪಟ್ಟಣದ ಮಾರಮ್ಮ ಮತ್ತು ನಾಡಮೇಗಳಮ್ಮನವರ ಕೊಂಡೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಸುಮಾರು ಎಂಟು ವರ್ಷಗಳಿಂದ ನಿಂತು ಹೋಗಿದ್ದ ಮಾರಮ್ಮ ಹಬ್ಬವು ಈ ವರ್ಷವು ಬಹಳ ಅದ್ದೂರಿಯಾಗಿ ನಡೆಯಿತು. ಒಂದು ವಾರದಿಂದ ವಿವಿಧ ಧಾರ್ಮಿಕ ಆಚರಣೆಯಿಂದ ನಡೆ ಹಬ್ಬವು ಇಂದು ಕೊಂಡೋತ್ಸವವು ಅದ್ದೂರಿಯಾಗಿ ಜರುಗಿತು. ಕೆರೆಯಿಂದ ದೇವರಿಗೆ ಹಾಗೂ ಸತ್ತಿಗೆ ಸುರಪಾನಿಗಳಿಗೆ ಹೂ ಹೊಂಬಾಳೆ ಧರಿಸಿದೂಪದೀಪಗಂಧಕರ್ಪೂರಗಳಿಂದ ಪೂಜೆ ಮಾಡಿಕೊಂಡು ಬರುವ. ಮಾರಮ್ಮ ಮತ್ತು ನಾಡಮೇಗಳಮ್ಮ ದೇವರುಗಳು ಕೊಂಡವನ್ನು ಹಾಯ್ದು ಸಾಗುವ ದೃಶ್ಯವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

ಭಕ್ತರು ಹೂ ಹಣ್ಣು ದೂಪ ಗಂದ ಕರ್ಪೂರಗಳನ್ನು ದೇವರಿಗೆ ಸಮರ್ಪಿಸಿ ದೇವರ ಅನುಗ್ರಹಕ್ಕೆ ಪಾತ್ರರಾದರು.

ಕೊಂಡೋತ್ಸವಕ್ಕೆ ಕೊಳ್ಳೇಗಾಲ ಕ್ಷೇತ್ರದ ಶಾಸಕರಾದ ಶ್ರೀಯುತ ಎ ಆರ್ ಕೃಷ್ಣಮೂರ್ತಿ, ಮಾಜಿ ಶಾಸಕರಾದ ಜಿ ಎನ್ ನಂಜುಂಡಸ್ವಾಮಿ, ಚಾಮರಾಜನಗರ ಕ್ಷೇತ್ರದ ಶಾಸಕರಾದ ಪುಟ್ಟರಂಗಶೆಟ್ಟಿರವರು, ಜಿಲ್ಲಾ ಗ್ಯಾರೆಂಟಿ ಅನುಷ್ಠಾನ ಯೋಜನೆ ಜಿಲ್ಲಾಧ್ಯಕ್ಷ ಹೆಚ್ ವಿ ಚಂದ್ರು, ಕಿನಕಹಳ್ಳಿ ರಾಚಯ್ಯ ಆಗಮಿಸಿ ಮಾರಮ್ಮ ದೇವರ ದರ್ಶನ ಪಡೆದುಕೊಂಡು ಕೊಂಡೋತ್ಸ ವವನ್ನು ಕಣ್ತುಂಬಿಕೊಂಡರು.

ಈ ಸಂದರ್ಭದಲ್ಲಿ ಪಟ್ಟಣದ ಗೌತಮ್ ಬಡಾವಣೆಯ ಯಜಮಾನರುಗಳು ಮುಖಂಡರುಗಳು ಹಾಗೂ ಪಟ್ಟಣದ ಎಲ್ಲಾ ಜನಾಂಗದ ಯಜಮಾನರು ಮುಖಂಡರು ಸುತ್ತಮುತ್ತಲ ಗ್ರಾಮದ ಗ್ರಾಮಸ್ಥರು ಕೊಂಡೋತ್ಸವಕ್ಕೆ ಆಗಮಿಸಿ ದೇವರ ದರ್ಶನ ಪಡೆದು ಭಕ್ತಿಯಲ್ಲಿ ಮಿಂದರು.



ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ

ಸಾಲಿಗ್ರಾಮ: ಇತ್ತೀಚಿನ ದಿನಗಳಲ್ಲಿ ಮಾಲ್ಯಾಧಾರಿತ ರಾಜಕಾರಣ ಪ್ರಜಾಭುತ್ವದಲ್ಲಿ ಇಲ್ಲವಾಗಿದ್ದು. ಈಗಿನ ದಿನಮಾನಗಳಲ್ಲಿ ಮೌಲ್ಯಗಳು ಕುಸಿಯುತ್ತಿದೆ. ಯುವಕರು ಈಗಿನಿಂದಲೇ ಎಚ್ಚೆತ್ತುಕೊಂಡು ಸಾಮಾಜಿಕ ಮೌಲ್ಯಗಳನ್ನು ಸುಧಾರಣೆ ತರಲು ಮುಂದಾಗಬೇಕು ಎಂದು ಸಮಾಜ ಸೇವಕ ಹಾಗೂ ಜೆಡಿಎಸ್ ಮುಖಂಡ ಹಳೆಯೂರು ಮಧುಚಂದ್ರ ಸಲಹೆ ನೀಡಿದರು.

ಚುಂಚನಕಟ್ಟೆ ಸಮೀಪದ ಹಳೆಯೂರು ಗ್ರಾಮದಲ್ಲಿ ಶ್ರೀ ಬಸವೇಶ್ವರ ಯುವಕರ ಬಳಗದ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಯುವಕರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಧೈರ್ಯದಿಂದ ಮುನ್ನುಗ್ಗಬೇಕು, ಪರಮಾಣು ಶಕ್ತಿಗಿಂತ ದೊಡ್ಡ ಶಕ್ತಿ ಯುವ ಶಕ್ತಿ ಇದೆ. ಯುವಕರು ಚುನಾವಣೆ ಸಂದರ್ಭದಲ್ಲಿ ಆಸೆ, ಆಮಿಷಗಳಿಗೆ ಒಳಗಾಗದೆ ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಬೇಕು. ಸಾಮಾಜಿಕ ಅಧಿಕಾರ ಕೊಟ್ಟವರು ನೀವಾದರೆ, ಅದನ್ನು ಚಲಾವಣೆ ಮಾಡುವುದು ಜನಪ್ರತಿನಿಧಿಗಳು, ಅವರ ಪಾರದರ್ಶಕತೆ, ಪ್ರಾಮಾಣಿಕತೆ,ದಕ್ಷತೆಯಿಂದ ಇರಬೇಕು. ವೈಷಮ್ಯದ ರಾಜಕೀಯ ಹೊರತು ಪಡಿಸಿ ಸಾಮಾಜಿಕ ಸೇವಾ ಮನೋಭಾವದಲ್ಲಿ ರಾಜಕೀಯ ಮಾಡಬೇಕು ಎಂದು ಹೇಳಿದರು.

ಉತ್ತಮ ಆರೋಗ್ಯಕ್ಕೆ ಕ್ರೀಡೆ, ವ್ಯಾಯಾಮ, ಪ್ರಾಣಾಯಾಮ ಹಾಗೂ ದೈಹಿಕ ಕಸರತ್ತು ಮಾಡಬೇಕು. ಪ್ರಸ್ತುತ ದಿನಗಳಲ್ಲಿ ಕೆಲ ಯುವಕರು ಮಾದಕ, ಮದ್ಯಪಾನ, ಧೂಮಪಾನ ಚಟಕ್ಕೆ ಬಲಿಯಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ ಎಂದು ಹೇಳಿದರು.

ಗ್ರಾ.ಪಂ ಮಾಜಿ ಅಧ್ಯಕ್ಷ ಹೆಚ್ ಆರ್ ಮಹೇಶ್, ತಾ.ಪಂ ಮಾಜಿ ಸದಸ್ಯ ಹಳೆಯೂರು ಪ್ರಭಾಕರ್, ಜೆಡಿಎಸ್ ಯುವ ಮುಖಂಡ ಶ್ರೀಧರ, ಪ್ರವೀಣ್, ಈರಣ್ಣ ಇದ್ದರು.



ಕೇರಳಕ್ಕೆ ಬಿಳಿ ಕಲ್ಲು ಮಾರಾಟ ಮಾಡುವಂತಿಲ್ಲ

ಗುಂಡ್ಲುಪೇಟೆ: ತಾಲ್ಲೂಕಿನಲ್ಲಿ ಟಿಪ್ಪರ್ ಗಳ ಹಾವಳಿ ಹಾಗೂ ಕೇರಳಕ್ಕೆ ತಾಲ್ಲೂಕಿನ ಸಂಪತ್ತು ಲೂಟಿ ವಿಚಾರವಾಗಿ ಹಾಗೂ ಮಾಜಿ ಶಾಸಕ ನಿರಂಜನ್ ಕುಮಾರ್ ಆರೋಪಕ್ಕೆ ವಿರುದ್ಧವಾಗಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶಾಸಕ ಎಚ್. ಎಂ. ಗಣೇಶ್ ಪ್ರಸಾದ್ ತಿಳಿಸಿರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಾರಿಗಳ ವಿಚಾರವಾಗಿ ಕಡಿವಾಣ ಹಾಕಲು ಜಿಲ್ಲಾಧಿಕಾರಿಗಳು, ತಹಸೀಲ್ದಾರ್ ಗಣಿ ಇಲಾಖೆ, ಪೊಲೀಸ್ ಇಲಾಖೆಯ ಗಮನಕ್ಕೆ ತರಲಾಗಿದೆ, ಕರಿಕಲ್ಲು ತ್ಯಾಜ್ಯ ಮಾತ್ರ ಕೆರಳಕ್ಕೆ ಸಾಗಾಣೆಯಾಗುತಿದ್ದು, ಟನ್ ಸರಿಯಾಗಿ ಹಾಕಬೇಕು ಓವರ್ ಲೋಡ್ ಓವರ್ ಸ್ಪೀಡ್ ಗೆ ಕಡಿವಾಣ ಹಾಕಿ ಯಾವುದೇ ಒತ್ತಡಕ್ಕೆ ಒಳಗಾಗಬೇಡಿ ಸೀಜ್ ಮಾಡಿ ಎಂದು ಹೇಳಿದ್ದೇನೆ.

ಮಾಜಿ ಶಾಸಕ ನಿರಂಜನ್ ಕುಮಾರ್ ಅವರ ರೀತಿ ಅಧಿಕಾರ ದುರುಪಯೋಗ ಪಡಿಸಿಕೊಳ್ಳುವ ಅವಶ್ಯಕತೆ ಇಲ್ಲ ಕರಿಕಲ್ಲು ಕೇರಳಕ್ಕೆ ಸಾಗಿಸಲು ಅನುಮತಿ ನೀಡಿರುವುದೇ ಬಿಜೆಪಿ ಸರ್ಕಾರದ ಅವಧಿಯಲ್ಲಿ 202-22 ರ ಅವದಿಯಲ್ಲಿ ಇವರೇ ಅನುಮತಿ ನೀಡಿದ್ದಾರೆ.

ಆದರೆ ಪರ್ಮಿಟ್ ವಂಚಿಸಿ ಓವರ್ ಲೋಡ್ ಸಾಗಾಣೆ ಮಾಡುವವರ ವಿರುದ್ದ ಕ್ರಮ ಕೈಗೊಳ್ಳಬೇಕು ಎಂಬುದು ನಮ್ಮ ಆಗ್ರಹ ಎಂದರು.

ಪರ್ಮಿಟ್ ಇದೆ ಎಂದು ದಿನಕ್ಕೆ ಹತ್ತು ಲಾರಿ ಹದಿನೈದು ಲಾರಿ ಕೊಡಲು ಆಗಲ್ಲ, ಎಷ್ಟು ಲಾರಿಗೆ ಪರ್ಮಿಟ್ ಇದೆ ಅಷ್ಟು ಮಾತ್ರ ಅವಕಾಶ ನಿಡಬೇಕು ಇದರ ಬಗ್ಗೆ ಗಣಿ ಇಲಾಖೆ ಹಾಗೂ ಆರ್ ಟಿಓ ಕಣ್ಣಿಡಬೇಕು ಎಂದರು.



ಕೈವಾರ ಯೋಗಿಗಳ ಆತ್ಮಬೋಧೆ ಕುರಿತ ವಿಚಾರ ಸಂಕಿರಣ

ಚಾಮರಾಜನಗರ: ಚಾಮರಾಜನಗರ ವಿಶ್ವ ವಿದ್ಯಾನಿಲಯ, ಶ್ರೀಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾ ವತಿಯಿಂದ ಮಾ.22 ರಂದು ನಗರದಲ್ಲಿ ಕೈವಾರ ಸದ್ಗುರು ಯೋಗಿನಾರೇಯಣ ಯೋಗಿಗಳ ಪರಿಚಯ ಮತ್ತು ಆತ್ಮಬೋಧೆ ಕುರಿತು ವಿಚಾರ ಸಂಕಿರಣ ಹಾಗೂ . ಯತೀಂದ್ರ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜನೆ ಮಾಡಲಾಗಿದೆ.

ಅಂದು ಬೆಳಗ್ಗೆ 11.30 ಗಂಟೆಗೆ ನಗರದ ವರನಟ ಡಾ.ರಾಜಕು ಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆಯಲಿರುವ ಸಮಾರಂಭದ ದಿವ್ಯ ಸಾನಿಧ್ಯವನ್ನು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿದೇಶೀ ಕೇಂದ್ರಸ್ವಾಮೀಜಿ ವಹಿಸಲಿದ್ದಾರೆ. ಶ್ರೀಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಘನ ಉಪಸ್ಥಿತಿ ವಹಿಸಲಿದ್ದು, ಚಾ.ನಗರ ವಿವಿ ಕುಲಪತಿ ಡಾ.ಎಂ.ಆರ್.ಗಂಗಾಧರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿ ದಾನಂದಾಜೀ ಮಹಾರಾಜ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕಬ್ಬಹಳ್ಳಿ ಶ್ರೀಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ. ಎನ್.ಕವಿತಾ ವಿಷಯ ಮಂಡನೆ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಎಂ.ಎಸ್. ರಾಮಯ್ಯ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಎಂಎಲ್‌ಸಿ ಡಾ.ಎಂ. ಆರ್.ಸೀತಾರಾಮ್, ಜಿಲ್ಲಾಧಿಕಾರಿ ಶ್ರೀರೂಪ, ಎಸ್ಪಿ ಮುತ್ತುರಾಜು, ಬೆಂಗಳೂರಿನ ರೈಟ್ಸ್ ಜನರಲ್ ಮ್ಯಾನೇಜರ್ ಎಂ.ಜಿ.ಸುದೀಪ್, ಹೈಕೋರ್ಟ್ ವಕೀಲ ಬಿ.ಎಂ.ಅರುಣ್, ಮುಖ ಇಂಜಿನಿಯರ್ ಕೆ.ಟಿ.ರವಿಕುಮಾರ್, ಹಿರಿಯ ಲೆಕ್ಕ ಪರಿಶೋಧಕ ಸುರೇಂದ್ರ ಹೆಗಡೆ, ಶ್ರೀಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್, ಡಾ.ಎಸ್.ಶಿವರಾಜಪ್ಪ, ಸಮಾಜ ಸೇವಕ ಚಂದ್ರ ಶೇಖರ್, ಎಂ.ನಾರಾಯಣ, ಹಿರಿಯ ಲೆಕ್ಕ ಪರಿಶೋಧಕ ಕೆ.ಎನ್.ಮೋಹನ್ ಕುಮಾರ್ ಭಾಗವಹಿಸಲಿದ್ದಾರೆ. ಯೋಗಿನಾರೇಯಣ ಯತೀಂದ್ರರ ಕೀರ್ತನೆಗಳು ಹಾಗೂ ಸಾಮೂಹಿಕ ನಾಮ ಸಂಕೀರ್ತನೆಯ ಕೀರ್ತನೆಗಳನ್ನು ವಾನರಾಶಿ ಬಾಲಕೃಷ್ಣ ಭಾಗವತರ್ ಹಾಡಲಿದ್ದಾರೆ.

ಪತ್ರಿಕಾ ಸಂಪಾದಕರ ಸಭೆಯಲ್ಲಿ ಮೈಸೂರು ಪತ್ರಕರ್ತರ ಸಂಘ ಅಭಿಪ್ರಾಯ

ಹೊಸ ಜಾಹೀರಾತು ನೀತಿ ಪರಿಶೀಲನೆಗೆ ಒತ್ತಾಯ

ಮೈಸೂರು: ರಾಜ್ಯ ಸರಕಾರವು ಜಾರಿಗೆ ತರಲು ಮುಂದಾಗಿರುವ ಕರ್ನಾಟಕ ಜಾಹೀರಾತು ನೀತಿ-2026 ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಪಾಲಿಗೆ ಮರಣ ಶಾಸನವಾಗಿದೆ. ಪತ್ರಿಕೆಗಳು ನಾಶವಾದರೆ ಪ್ರಜಾಪ್ರಭುತ್ವವೂ ನಾಶವಾಗಲಿದೆ ಎಂಬ ಅರಿವು ಸರಕಾರಕ್ಕೆ ಇರಬೇಕು ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಶನಿವಾರ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಂಘದ ಅಧ್ಯಕ್ಷ ಕೆ.ದೀಪಕ್ ನೇತೃತ್ವದಲ್ಲಿ ನಡೆದ ಪತ್ರಿಕಾ ಸಂಪಾದಕರ ಸಭೆಯಲ್ಲಿ ರಾಜ್ಯ ಸರಕಾರವು ಕರ್ನಾಟಕ ಜಾಹೀರಾತು ನೀತಿಯನ್ನು ಜಾರಿಗೆ ತರಲು ಮುಂದಾಗುವ ಮೂಲಕ ಸಂಕಷ್ಟದಲ್ಲಿರುವ ಪತ್ರಿಕೆಗಳನ್ನು ಮೇಲೆತ್ತುವ ಬದಲು ಕುತ್ತಿಗೆ ಹಿಸುಕಿ ಕೊಲ್ಲಲು ಸಂಚು ರೂಪಿಸಿದೆ ಎಂಬ ಅನಿಸಿಕೆ ಸಭೆಯಲ್ಲಿ ಪತ್ರಿಕಾ ಸಂಪಾದಕರು ಕಳವಳ ವ್ಯಕ್ತಪಡಿಸಿದರು.

ಸಾಮಾನ್ಯ ವರ್ಗದ ಪತ್ರಿಕೆಗಳು ಮಾಧ್ಯಮ ಪಟ್ಟಿಗೆ ಸೇರಲು 2 ವರ್ಷದಿಂದ 3 ವರ್ಷಕ್ಕೆ ಪ್ರಕಟಣಾ ಅವಧಿಯನ್ನು ವಿಸ್ತರಿಸಿರುವುದು ಹಾಗೂ ಪರಿಶಿಷ್ಟ ಜಾತಿ, ವರ್ಗ, ವಿಶೇಷ ಸ್ಥಾನಮಾನ ಹೊಂದಿರುವ ಜಿಲ್ಲೆಗಳ ಪತ್ರಿಕೆಗಳು ಹಾಗೂ ಪ್ರಾದೇಶಿಕ ಭಾಷಾ ಪತ್ರಿಕೆಗಳಿಗೆ ಇದ್ದ 1 ವರ್ಷದ ಪ್ರಸಾರಣ ಅವಧಿಯನ್ನು 2 ವರ್ಷಕ್ಕೆ ವಿಸ್ತರಿಸಿರುವುದು ಹೊಸ ಪತ್ರಿಕೆಗಳ ಆರಂಭಕ್ಕೆ ಕಡಿವಾಣ ಹಾಕುವ ಹುನ್ನಾರವಾಗಿದೆ.

ಪತ್ರಿಕೆ ಟೈಟಲ್ ವರ್ಗಾವಣೆ ರದ್ದು: ಪತ್ರಿಕೆಯ ಟೈಟಲ್ ವರ್ಗಾವಣೆಯನ್ನು ಕೇವಲ ಕುಟುಂಬಕ್ಕೆ ಸೀಮಿತಗೊಳಿಸುವುದು ಒಂದು ಪತ್ರಿಕೆಯ ಪರಂಪರೆ ಮುಂದುವರೆಕೆಗೆ ಧಕ್ಕೆಯಾಗಲಿದೆ. ಸಂಪಾದಕ ಸತ್ತರೂ ಪತ್ರಿಕೆಗಳು ಸಾಯಬಾರದು. ಪತ್ರಿಕೆಗಳ ಟೈಟಲ್ ವರ್ಗಾವಣೆ ಮಾಡಿದರೆ ಮಾನ್ಯತಾ ಪಟ್ಟಿಯಿಂದ ಕೈಬಿಡುವ ಕ್ರಮವೂ ಸಹ ಪತ್ರಿಕೆ ಮಾಲೀಕನ ಹಕ್ಕುಗಳನ್ನು ಕಸಿದುಕೊಳ್ಳುವಂತ್ತಾಗಲಿದೆ. ಹಾಗೂ ಪತ್ರಿಕೆಗಳು ದೀರ್ಘಕಾಲ ಮುದ್ರಣಗೊಳ್ಳಲು ತೊಡಕಾಗಲಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು.



ಗರಳಪುರಿ ಉತ್ಸವಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ ಚಾಲನೆ

ಸಾಂಸ್ಕೃತಿಕ ಪರಂಪರೆಯ ಮರುಸ್ಥಾಪನೆಗೆ ಪ್ರಯತ್ನ

ನಂಜನಗೂಡು: ನಂಜನಗೂಡು ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗೆ ಹೆಸರುವಾಸಿಯಾಗಿದ್ದು, ನಂಜನಗೂಡಿನ ಸಾಂಸ್ಕೃತಿಕ ಪರಂಪರೆಯ ವೈಭವವನ್ನು ಉತ್ತೇಜಿಸುವ ಸಲುವಾಗಿ ಮತ್ತು ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಂಜನಗೂಡು ಗರಳಪುರಿ ಉತ್ಸ ವವನ್ನು ನಡೆಸಲಾಗುತ್ತಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಗುರುಭವನದಲ್ಲಿ ಗರಳಪುರಿ ಉತ್ಸ ವದ ಅಂಗವಾಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಲಾಗಿದ್ದ ಭಾವಗೀತೆ ಸ್ಪರ್ಧೆಯನ್ನು ಉದ್ಘಾಟಿಸುವ ಮೂಲಕ ಗರಳ ಪುರಿ ಉತ್ಸ ವಕ್ಕೆ ಚಾಲನೆ ನೀಡಿ ಮಾತನಾಡಿದರು.

ನಂಜನಗೂಡು ಕನ್ನಡದ ಮೊದಲ ಮಹಿಳಾ ಕಾದಂಬರಿಗಾರ್ತಿ ಮತ್ತು ಸಾಹಿತಿ ತಿರುಮಲಾಂಬ ಸೇರಿದಂತೆ ಸಂಗೀತ ಕ್ಷೇತ್ರದ ಹಲವು ಸಾಧಕರನ್ನು ಹೊಂದುವ ಮೂಲಕ ನಾಡಿನ ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಶ್ರೀಮಂತವಾದ ಐತಿಹಾಸಿಕ ಪರಂಪರೆಯನ್ನು ಹೊಂದಿದೆ, ಈ ಸಾಂಸ್ಕೃತಿಕ ವೈಭವವನ್ನು ಮತ್ತಷ್ಟು ಉತ್ತೇಜಿಸುವ ಸಲುವಾಗಿ ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸ ವದ ಅಂಗವಾಗಿ ಈ ಗರಳಪುರಿ ಉತ್ಸ ವವನ್ನು ನಡೆಸಲಾಗುತ್ತಿದೆ, ಇದರಲ್ಲಿ ಯಾವುದೇ ರಾಜಕೀಯವಿಲ್ಲ ಅಧಿಕಾರ ಶಾಶ್ವತ ವಲ್ಲ, ಆದರೆ ಅಧಿಕಾರ ಸಿಕ್ಕಾಗ ಜನತೆಗೆ ಏನು ಸೇವೆ ಸಲ್ಲಿಸಿದ್ದೇವೆ ಮುಖ್ಯವಾಗುತ್ತದೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಶಾಸಕರ ಹಿತಾಸಕ್ತಿಯ ಮೇರೆಗೆ ಮೊದಲ ಬಾರಿಗೆ ನಂಜನಗೂಡಿನಲ್ಲಿ ಅದ್ದೂರಿಯಾಗಿ ಗರಳ ಪುರಿ ಉತ್ಸ ವವನ್ನು ನಡೆಸುವ ಮೂಲಕ ಭಾವಗೀತೆ ಸ್ಪರ್ಧೆ, ಜಾನಪದ ಗಾಯನ ಸ್ಪರ್ಧೆ, ಚೆಸ್, ಆರೋಗ್ಯ ಯೋಗ ಜಾಗೃತಿ, ಚಿತ್ರಕಲಾ ಸ್ಪರ್ಧೆ, ವಚನಗಾಯನ, ವೇಶಭೂಷಣ ಸ್ಪರ್ಧೆ, ರಿಲ್ಸ್ ಮೇಕಿಂಗ್ ಸ್ಪರ್ಧೆ, ರಂಗೋಲಿ ಸ್ಪರ್ಧೆ ಹಾಲು ಕರೆಯುವ ಸ್ಪರ್ಧೆ ಮೆಹಂದಿ ಬಿಡಿಸುವ ಸ್ಪರ್ಧೆ ಸೇರಿದಂತೆ ವಿವಿಧ ಕಲಾವಿದರಿಗೆ ಅವರ ಪ್ರತಿಭೆಯನ್ನು ಪ್ರದರ್ಶಿಸಿ ಪ್ರೋತ್ಸಾ ಹಿಸುವ ಕೆಲಸ ಮಾಡುವುದು ಶ್ಲಾಘನೀಯ ಕಾರ್ಯ ಎಂದರು.



ಕಾರ್ಯಕ್ರಮದಲ್ಲಿ ಸುಮಾರು 50ಕ್ಕೂ ಹೆಚ್ಚು ಸ್ಪರ್ಧಿಗಳು ಕನ್ನಡ ಭಾವಗೀತೆಯನ್ನು ಹಾಡಿ ಜನರನ್ನು ರಂಜಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಾವಿದರಿಗೆ ಪ್ರಶಸ್ತಿ ಪ್ರಮಾಣ ಪತ್ರ ವಿತರಿಸಲಾಯಿತು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ.ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ತಾಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಲತಾ ಮೋಹನ್ ಉಪಸ್ಥಿತರಿದ್ದರು.

ಕಿರು ಸುದ್ದಿ

ಯುವ ವಿವೇಕ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮಂಡ್ಯ: ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿಯ ಮೂರನೇ ವರ್ಷದ ಯುವ ವಿವೇಕ ಪುರಸ್ಕಾರಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಯುವ ವಿವೇಕ ಪುರಸ್ಕಾರವು 5 ಸಾವಿರ ನಗದು ಬಹುಮಾನಗಳನ್ನೊಳಗೊಂಡ ಪ್ರಶಸ್ತಿ ಫಲಕವನ್ನು ನೀಡಿ ಗೌರವಿಸಲಾಗುತ್ತದೆ. ಎನ್‌ಎಸ್‌ಎಸ್, ಎನ್‌ಸಿಸಿ, ಸ್ಕೌಟ್ಸ್ ಅಂಡ್ ಗೈಡ್ಸ್‌ನ ಸ್ವಯಂ ಸೇವಕರುಗಳು ತಲಾ ಒಬ್ಬರಿಗೆ ಹಾಗೂ ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳು, ಅಸಂಘಟಿತ ವಲಯದ ಯುವ ಜನರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಪ್ರತಿ ವಿಭಾಗಕ್ಕೂ ಒಬ್ಬ ಸ್ವಯಂ ಸೇವಕರಿಗೆ ಯುವ ವಿವೇಕ ಪುರಸ್ಕಾರವನ್ನು ನೀಡಿ ಗೌರವಿಸಲಾಗುವುದು. ಯುವ ಸಾಕ್ಷರತೆ–ಯುವ ಸೇರ್ಪಡೆ ಆಂದೋಲನದ ಕಾರ್ಯಕ್ರಮದ ನಿಮಿತ್ತ ಸೇವಾ ಕ್ಷೇತ್ರದಿಂದ ಹೊರಗುಳಿಯುತ್ತಿರುವ ಯುವಜನರನ್ನು ಪ್ರೋತ್ಸಾಹಿಸಲು ಈ ಪುರಸ್ಕಾರವನ್ನು ನೀಡಲಾಗುತ್ತಿದೆ. 15 ರಿಂದ 35 ವರ್ಷ ವಯೋಮಿತಿಯ ಸ್ವಯಂ ಸೇವಕರುಗಳು ಪ್ರಸ್ತಾವನೆಯನ್ನು ಮಾ. 31, 2226ರೊಳಗೆ ಅಧ್ಯಕ್ಷರು, ಪರಿಸರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಮಂಗಲ, ಮಂಡ್ಯ ತಾಲೂಕು ಮತ್ತು ಜಿಲ್ಲೆ. ಈ ವಿಳಾಸಕ್ಕೆ ಕಳುಹಿಸಿಕೊಡಬೇಕು ಎಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ : 9844769755 ಸಂಪರ್ಕಿಸಬಹುದು.

ಜೂಜಾಟ: 20 ಮಂದಿ ಸೆರೆ

ಹಲಗೂರು: ವಿವಿಧ ಕಡೆ ಜೂಜಾಟದಲ್ಲಿ ತೊಡಗಿದ್ದ 20 ಮಂದಿ ಜೂಜುಕೋರರನ್ನು ಬಂಧಿಸಿದ ಹಲಗೂರು ಪೊಲೀಸರು 40 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ. ಹಲಗೂರು ಸಮೀಪದ ಧನಗೂರು ಕುರಿಫಾರಂ ಗ್ರಾಮದ ಹೊರವಲಯದಲ್ಲಿರುವ ರೇಷ್ಮೆ ಸಾಕಾಣಿಕೆ ಮನೆಯಲ್ಲಿ ಜೂಜಾಟದಲ್ಲಿ ತೊಡಗಿದ್ದ 7 ಮಂದಿಯನ್ನು ಬಂಧಿಸಿದ್ದು 12 ಸಾವಿರ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಸಮೀಪದ ವಿ.ಬಸಾಪುರ ಅಕ್ರಮವಾಗಿ ಜೂಜಾಟದಲ್ಲಿ ತೊಡಗಿದ್ದ 3 ಮಂದಿ ಜೂಜುಕೋರರನ್ನು ಬಂಧಿಸಿದ್ದು, ಆರೋಪಿಗಳಿಂದ 19 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ. ಹಲಗೂರಿನ ವಾಜರಗೇರಿ ಮನೆಯ ಟೇರೆಸ್ ಮೇಲೆ ಜೂಜಾಟದಲ್ಲಿ ತೊಡಗಿದ್ದ 10 ಮಂದಿ ಜೂಜುಕೋರರನ್ನು ಬಂಧಿಸಿದ್ದು, 9 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ. ಗುರುವಾರ ಗಸ್ತಿನಲ್ಲಿದ್ದಾಗ ಖಚಿತ ಮಾಹಿತಿ ಅಧರಿಸಿದ ಹಲಗೂರು ಪಿಎಸ್‌ಐ ಲೋಕೇಶ್ ಸಿಬ್ಬಂದಿ ಗಳೊಂದಿಗೆ ದಾಳಿ ಮಾಡಿದ್ದು, ಜೂಜುಕೋರರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಜೂಜಾಟ ಆಡುವುದನ್ನು ಸಂಪೂರ್ಣ ನಿಷೇಧ ಮಾಡಲಾಗಿದ್ದು, ಜೂಜುಕೋರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ನಿರ್ದಾಕ್ಷಿಣ್ಯವಾಗಿ ಪ್ರಕರಣ ದಾಖಲಿಸಲಾಗುವುದು ಎಂದು ಹಲಗೂರು ಪಿಎಸ್‌ಐ ಲೋಕೇಶ ತಿಳಿಸಿದ್ದಾರೆ.

ಮಾ.27ಕ್ಕೆ ಶ್ರೀರಾಮನವಮಿ ಮಹೋತ್ಸವ

ಮಂಡ್ಯ: ಇಲ್ಲಿನ ನೆಹರುನಗರದ ಶ್ರೀರಾಮ ಭಜನಾ ಸಭಾ ವತಿಯಿಂದ 43ನೇ ವರ್ಷದ ಶ್ರೀರಾಮನವಮಿ ಮಹೋತ್ಸವದ ಉದ್ಘಾಟನಾ ಸಮಾರಂಭ ಮಾ.27ರಂದು ಸಂಜೆ 6 ಗಂಟೆಗೆ ನಡೆಯಲಿದೆ. ಉದ್ಘಾಟನೆಯನ್ನು ಶಾಸಕ ಪಿ.ರವಿಕುಮಾರ್ ನೆರವೇರಿಸುವರು. ಅಧ್ಯಕ್ಷತೆಯನ್ನು ಶ್ರೀರಾಮ ಭಜನಾ ಸಭಾ ಅಧ್ಯಕ್ಷ ಬಿ.ಟಿ.ಜಯರಾಮ್ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ವಿ.ಜೆ.ಶೋಭಾರಾಣಿ ಆಗಮಿಸುವರು. ಸಾಹಿತಿ ಡಾ.ಪ್ರದೀಪ್‌ಕುಮಾರ್ ಹೆಬ್ರಿ ಉಪನ್ಯಾಸ ನೀಡುವರು. ಶ್ರೀ ರಾಮನವಮಿ ಅಂಗವಾಗಿ ಮಾ.27ರಿಂದ ಏ.5ರವರೆಗೆ ನಿತ್ಯ ದೇವರಿಗೆ ಪಂಚಾಮೃತಾಭಿಷೇಕ, ವೇದಪಾರಾಯಣ, ಷೋಡಚೋಪಚಾರ ಪೂಜೆ ನಡೆಯಲಿದೆ. ಅಲ್ಲದೆ, ನಿತ್ಯ ಸಂಜೆ ಭರತನಾಟ್ಯ, ಭವ್ಯ ರಾಮಕಥಾ ನೃತ್ಯರೂಪಕ, ಭಕ್ತಿ ಪ್ರದಾನ ದಾಸರ ಗೀತೆಗಳು, ದಶಾವತಾರ ನೃತ್ಯ ರೂಪಕ, ಶ್ರೀರಾಮ ಪಟ್ಟಾಭಿಷೇಕ ಹರಿಕಥೆ, ಏ.5ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಹನುಮಂತೋತ್ಸವ ಕಾರ್ಯಕ್ರಮಗಳು ನಡೆಯಲಿವೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಮಾ.24ರಂದು ಮಹಿಳಾ ದಿನಾಚರಣೆ ಕಾರ್ಯಕ್ರಮ

ಮಂಡ್ಯ: ಪದ್ಮ ಜಿ.ಮಾದೇಗೌಡ ಪ್ರತಿಷ್ಠಾನದ ವತಿಯಿಂದ 12ನೇ ವರ್ಷದ ಪದ್ಮ ಜಿ.ಮಾದೇಗೌಡ ಮಹಿಳಾ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮಾ.24ರಂದು ಬೆಳಗ್ಗೆ 10.30ಕ್ಕೆ ಭಾರತೀನಗರದ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ನಂಜೇಗೌಡ ತಿಳಿಸಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕ್ಯಾನ್ಸರ್ ತಜ್ಞೆ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು. ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಶಸ್ತಿ ಪ್ರದಾನ ಮಾಡುವರು. ವಿಧಾನ ಪರಿಷತ್ ಸದಸ್ಯ, ಮಹಾತ್ಮಗಾಂಧಿ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಮಧು ಜಿ.ಮಾದೇಗೌಡ ಘನ ಉಪಸ್ಥಿತಿ ವಹಿಸುವರು. ಪದ್ಮ ಜಿ.ಮಾದೇಗೌಡ, ಬಿಇಟಿ ಸಿಇಒ ಜಿ.ಎಂ.ಆಶಯ್ ಉಪಸ್ಥಿತರಿರುವರು ಎಂದು ಹೇಳಿದರು.



ಮದ್ದೂರು ಪಟ್ಟಣದ ಸೆಸ್ಕ್ ಕಚೇರಿಯಲ್ಲಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳು ಹಾಗೂ ಗ್ರಾಹಕರ ಸಮಾಲೋಚನೆ ಸಭೆ ನಡೆಸಿದರು.ಸೆಸ್ಕ್ ವಿಭಾಗದ ಕಾರ್ಯಪಾಲಕ ಅಭಿಯಂತರ ಶಿವಕುಮಾರ್ ಇದ್ದರು.

ವಿದ್ಯುತ್: ಕುಂದುಕೊರತೆ ಸಭೆ

ಮದ್ದೂರು: ಮದ್ದೂರು ತಾಲೂಕಿನ ಎಲ್ಲೆಡೆ ಪ್ರಸಕ್ತ ವರ್ಷದ ಬೇಸಿಗೆ ವೇಳೆ ವಿದ್ಯುತ್ ಕೊರತೆ ಉಂಟಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವುದಾಗಿ ಮದ್ದೂರು ತಾಲೂಕು ಸೆಸ್ಕ್ ವಿಭಾಗದ ಕಾರ್ಯಪಾಲಕ ಅಭಿಯಂತರ ಶಿವಕುಮಾರ್ ತಿಳಿಸಿದರು.

ಪಟ್ಟಣದ ಸೆಸ್ಕ್ ಕಚೇರಿಯಲ್ಲಿ ಆಯೋಜಿಸಿದ್ದ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳು ಹಾಗೂ ಗ್ರಾಹಕರ ಸಮಾಲೋಚನೆ ಸಭೆ ವೇಳೆ ಮಾತನಾಡಿದ ಅವರು ಕೃಷಿ ಅವಲಂಬಿತ ಕೊಳವೆ ಬಾವಿಗಳು ಹಾಗೂ ನಿರಂತರ ವಿದ್ಯುತ್ ಪೂರೈಕೆ ಸಂಬಂಧ ಇತ್ತೀಚಿನ ದಿನಗಳಲ್ಲಿ ಸರಕಾರದ ಮಾರ್ಗಸೂಚಿಯಂತೆ ಅಗತ್ಯ ಕ್ರಮ ವಹಿಸಿದ್ದು ಯಾವುದೇ ಲೋಪಕ್ಕೆ ಅವಕಾಶವಿಲ್ಲದಂತೆ ಕೆಳಸ್ತರದ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಹೇಳಿದರು.

ಗೃಹಜ್ಯೋತಿ, ವಾಣಿಜ್ಯ, ಕೈಗಾರಿಕೆ ಮತ್ತು ಇತರೆ ಪ್ರಕಾರಗಳ ವಿದ್ಯುತ್ ಗ್ರಾಹಕರಿಗೆ ಎದುರಾಗುವ ಸಮಸ್ಯೆಗಳ ಕುರಿತು ಸಿಬ್ಬಂಧಿ ದಿನದ ಎರಡು ಪಾಳಿ ಕರ್ತವ್ಯ ನಿರ್ವಹಿಸುವ ಮೂಲಕ ಲೋಪದೋಷಗಳು ಎದುರಾದ ತಕ್ಷಣದಲ್ಲೇ ಸ್ಥಳಕ್ಕೆ ತೆರಳಿ ದುರಸ್ಥಿ ಮತ್ತು ಇತರೆ ಕಾರ್ಯಗಳಿಗೆ ಮುಂದಾಗುವುದಾಗಿ ವಿವರಿಸಿದರು. ಕೊಪ್ಪ, ಬೆಸಗರಹಳ್ಳಿ, ಕೆಸ್ತೂರು, ಕೆ.ಹೊನ್ನಲಗೆರೆ, ಭಾರತೀನಗರ ಹಾಗೂ ಮದ್ದೂರು ಪಟ್ಟಣ ವ್ಯಾಪ್ತಿಯಲ್ಲಿ ಅಗತ್ಯವಿರುವೆಡೆ ಹೆಚ್ಚುವರಿ ವಿದ್ಯುತ್ ಪರಿವರ್ತನೆಗಳ ಅಳವಡಿಕೆ ಮತ್ತು ವಿದ್ಯುತ್ ಅವಘಡಗಳ ನಿವಾರಣೆಗೆ ಪ್ರಸಕ್ತ ವರ್ಷ ಸಂಸ್ಥೆಯ ಸಿಬ್ಬಂಧಿ ಸಾಕಷ್ಟು ಶ್ರಮಿಸಿರುವುದಾಗಿ ಪ್ರಶಂಸಿದರು. ಎ.ಇ.ಇ ಮೋಹನ್, ಎಚ್.ವಿ.ಮಹದೇವು, ಎ.ಇ.ಅನಿತಾ, ಪ್ರದೀಪ್ ಹಾಜರಿದ್ದರು.



ಭಾರತ್ ಸ್ಕೌಟ್, ಗೈಡ್ಸ್ ಕರ್ನಾಟಕ ಸ್ಥಳೀಯ ಸಂಸ್ಥೆ ಹಾಗೂ ಶ್ರೀರಂಗಪಟ್ಟಣ ಲೆನಿನ್ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾಜಿ ಸಚಿವ ಡಾ.ಪಿ.ಜಿ.ಆರ್.ಸಿಂಧ್ಯಾ ಅವರಿಗೆ ಶಾಲೆಯ ಕಾರ್ಯದರ್ಶಿ ಅಮಿತ್ ದೇವ್ ಬಿ.ಪಿ. ಸನ್ಮಾನಿಸಿದರು.

ಹುತಾತ್ಮ ವೀರ ಮಕ್ಕಳ ಆತ್ಮಕ್ಕೆ ಶಾಂತಿ ಕೋರುವ ಭೂಮಿ ಸಿದ್ದೇಶ್ವರ ಸ್ವಾಮಿ ಜಾತ್ರೆ

ಅಟ್ಟುಣ್ಣುವ ಜಾತ್ರೆ ಅದ್ದೂರಿ

ಮಂಡ್ಯ: ಹುತಾತ್ಮ ವೀರ ಮಕ್ಕಳ ಆತ್ಮಕ್ಕೆ ಶಾಂತಿ ಕೋರುವ ಧ್ಯೋತಕವಾಗಿ ನಡೆಯುವ ಶ್ರೀ ಭೂಮಿ ಸಿದ್ದೇಶ್ವರ ಸ್ವಾಮಿ ಅಟ್ಟುಣ್ಣುವ ಜಾತ್ರೆ ಶನಿವಾರ ವಿಜೃಂಭಣೆಯಿಂದ ನಡೆಯಿತು.

ತಾಲೂಕಿನ ಸಂತೆಕಸಲಗೆರೆ ಗ್ರಾಮದ ಹೊರ ವಲಯದಲ್ಲಿ ಶ್ರೀ ಭೂಮಿಸಿದ್ದೇಶ್ವರಸ್ವಾಮಿ ದೇವರ ದರ್ಶನ ಪಡೆದ ಸಹಸ್ರಾರು ಮಂದಿ ಭಕ್ತರು ಅಟ್ಟುಣ್ಣುವ ಜಾತ್ರೆಯನ್ನು ಅದ್ದೂರಿಯಾಗಿ ನಡೆಸಿದರು. ಅಟ್ಟುಣ್ಣುವ ಜಾತ್ರೆ ಪ್ರಯುಕ್ತ ಶನಿವಾರ ಬೆಳಗ್ಗೆಯೇ ದೇವರಿಗೆ ಹೋಮ, ಹವನ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಪೂಜಾ ವಿಧಿ–ವಿಧಾನಗಳನ್ನು ಅನುಸರಿಸಿ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲಾಗಿತ್ತು. ಪ್ರತಿ ವರ್ಷದಂತೆ ಈ ವರ್ಷವೂ ಸಂತೆಕಸಲಗೆರೆ, ಹನಿಯಂಬಾಡಿ, ಕಾರಸವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಮಂಗಲ, ಬೇವಿನಹಳ್ಳಿ, ಹುಲ್ಕೆರೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಜನರು ಈ ಜಾತ್ರೆಯಲ್ಲಿ ಭಾಗವಹಿಸಿದ್ದರು. ಜೊತೆಗೆ ಹೊರ ಜಿಲ್ಲೆಗಳಿಂದ ನೂರಾರು ಸಂಖ್ಯೆಯ ಶ್ರೀ ಭೂಮಿಸಿದ್ದೇಶ್ವರ ಸ್ವಾಮಿಯ ಒಕ್ಕಲಿನವರು ಜಾತ್ರೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಯುಗಾದಿ ಹಬ್ಬದ ನಂತರ ನಡೆಯುವ ಈ ಜಾತ್ರೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಗುರುವಾರ ಸಂಜೆಯೇ ಬಾಯಿ ಬೀಗ ಆಚರಣೆ ನಡೆಯಿತು. ಶನಿವಾರ ಬೆಳಗ್ಗೆ 7.30 ರಿಂದ ದೇವಾಲಯ ಆವರಣದಲ್ಲಿ ಸಾವಿರಾರು ಜನರು ಸೇರಿ ದೇವರ ದರ್ಶನ ಪಡೆದರು. ಬಳಿಕ ಭಕ್ತರು ಪಾನಕ, ಮಜ್ಜಿಗೆ ಹಾಗೂ ರಸಾಯನ ವಿತರಣೆ ಮಾಡಿ ಸಂಭ್ರಮಿಸಿದರು. ಜಾತ್ರೆಗೆ ಬಂದ ಮಹಿಳೆಯರು ಅಡುಗೆ ಸಾಮಗ್ರಿಗಳನ್ನು ಬುಟ್ಟಿಯಲ್ಲಿ ತಂದು ದೇವರ ಮುಂದಿಟ್ಟು ಪೂಜೆಸಲ್ಲಿಸಿದರು. ನಂತರ ದೇವಾಲಯದ ಹೊರ ಆವರಣಕ್ಕೆ ತೆರಳಿ ಅಡುಗೆ ಮಾಡಿದರು. ಸಸ್ಯಹಾರದ ಜೊತೆಗೆ ಮಾಂಸಹಾರವನ್ನೂ ತಯಾರಿಸಿ ಬಂಧು–ಮಿತ್ರರು, ನೆಂಟರು, ಸ್ನೇಹಿತರನ್ನು ಆಹ್ವಾನಿಸಿ ಊಟ ಬಡಿಸಿದರು.



ಉಂಡ ಎಲೆಗಳನ್ನು ಅಲ್ಲೇ ಬಿಡುವುದು

ಈ ಜಾತ್ರೆಯಲ್ಲಿ ಮಾಂಸಹಾರವನ್ನು ದೇವರಿಗೆ ಅರ್ಪಿಸುವುದಿಲ್ಲ. ದೇವಾಲಯದ ಹೊರ ಆವರಣದಲ್ಲಿ ಮಾಂಸಾಹಾರ ತಯಾರಿಸಲಾಗುತ್ತದೆ. ದೇವರಿಗೆ ಪೂಜೆ ಸಲ್ಲಿಸಿ ತಂದ ತೀರ್ಥವನ್ನು ಪ್ರೋಕ್ಷಣೆ ಮಾಡಿ ಊಟ ಬಡಿಸುವ ಮೂಲಕ ಸಂಪ್ರದಾಯ ಆಚರಣೆ ಮಾಡಿದರು. ಜಾತ್ರೆಗೆ ಬಂದ ಸಹಸ್ರಾರು ಸಂಖ್ಯೆಯ ಜನರು ಮಾಂಸಾಹಾರ ಸೇವಿಸಿದರು. ಊಟ ಮಾಡಿದ ನಂತರ ಎಲೆಗಳನ್ನು ತೆರವುಗೊಳಿಸದೆ ಉಂಡ ಸ್ಥಳದಲ್ಲಿಯೇ ಬಿಡುವುದು ಆಚರಣೆಯಾಗಿದೆ. ರಾತ್ರಿ ಸುಮಾರು 8 ಗಂಟೆಯ ವೇಳೆಗೆ ಜಾತ್ರೆ ಸಂಪನ್ನಗೊಂಡಿತು.

ರಾಜಗೋಪುರ ನಿರ್ಮಾಣಕ್ಕೆ ಸಹಾಯ ಮಾಡಲು ಮನವಿ: ಶ್ರೀ ಭೂಮಿ ಸಿದ್ದೇಶ್ವರಸ್ವಾಮಿ ಟ್ರಸ್ಟ್ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ, ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಪೊಲೀಸ್ ಬಂದೋಬಸ್ತ್ ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು.

ಟ್ರಸ್ಟ್ ಅಧ್ಯಕ್ಷ ಕೆ. ಸಿದ್ದರಾಮು ಮಾತನಾಡಿ, ದೇವಾಲಯದ ರಾಜಗೋಪುರ ನಿರ್ಮಾಣದ ಕಾರ್ಯ ಕೈಗೆತ್ತಿಕೊಂಡಿದ್ದು, ಭಕ್ತಾದಿಗಳು ಧನ ಸಹಾಯ ಮಾಡುವಂತೆ ಮನವಿ ಮಾಡಿದರು. ಟ್ರಸ್ಟ್‌ನ ಕಾರ್ಯದರ್ಶಿ ಚನ್ನಸಿದ್ದೇಗೌಡ, ಉಪಾಧ್ಯಕ್ಷ ಎಸ್. ಕೆಂಪೇಗೌಡ, ಖಜಾಂಚಿ ಟಿ.ಕೆ. ಜಗದೀಶ್, ಜಂಟಿ ಕಾರ್ಯದರ್ಶಿ ಬಸವರಾಜು, ಟ್ರಸ್ಟಿಗಳಾದ ಚೇತನ್‌ಕುಮಾರ್, ಶಿವರಾಜು, ಕೆಂಪೇಗೌಡ, ಮಾಜಿ ಕಾರ್ಯದರ್ಶಿ ಕೆ.ಸಿ.ಶ್ರೀನಿವಾಸ್, ಸಂತೆಕಸಲಗೆರೆ ಗ್ರಾಪಂ ಮಾಜಿ ಅಧ್ಯಕ್ಷ ರುದ್ರಪ್ಪ ಸೇರಿದಂತೆ ಹಲವರು ಸ್ಥಳದಲ್ಲಿ ಹಾಜರಿದ್ದು ಜಾತ್ರೆಯ ವ್ಯವಸ್ಥೆಗಳು ಸುಗಮವಾಗಿ ನಡೆಯುವುದಕ್ಕೆ ನೆರವಾದರು.

ಮದ್ದೂರಲ್ಲಿ ನಾಳೆ ಬಲಿದಾನ ದಿವಸ್ ಕಾರ್ಯಕ್ರಮ

ಮಂಡ್ಯ: ಹಿಂದುಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮಾ. 23ರಂದು ಮದ್ದೂರು ಪಟ್ಟಣದಲ್ಲಿ ಬಲಿದಾನ ದಿವಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಕೀಲ ಕೆ. ಯೋಗಾನಂದ ತಿಳಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂದು ಸಂಜೆ 4 ಗಂಟೆಗೆ ಮದ್ದೂರು ಪ್ರವಾಸಿ ಮಂದಿರ ವೃತ್ತದಿಂದ ಶೋಭಯಾತ್ರೆ ಆರಂಭವಾಗಲಿದ್ದು, ಹಳೇ ಬಸ್ ನಿಲ್ದಾಣದವರೆಗೆ ಶೋಭಯಾತ್ರೆ ನಡೆಯಲಿದ್ದು, ಮಾಜಿ ಸಂಸದ ಅನಂತಕುಮಾರ್ ಅವರು ಶೋಭಯಾತ್ರೆಗೆ ಚಾಲನೆ ನೀಡುವರು ಎಂದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ದೇಶಕ್ಕಾಗಿ ಮಾರ್ಚ್ 23 , 1931 ರಂದು ಪ್ರಾಣತ್ಯಾಗಮಾಡಿದ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ಸುಖದೇವ್ ಥಾಪರ್, ಶಿವರಾಂರಾಜಗುರು ಅವರ ವೀರರ ಶೌರ್ಯ, ತ್ಯಾಗ ಸ್ಮರಿಸುವ ಸಲುವಾಗಿ ಮತ್ತು ಮುಂದಿನ ಪೀಳಿಗೆಗೆ ಈ ತ್ಯಾಗ ಬಲಿದಾನದ ಉದ್ದೇಶ ಮತ್ತು ಆದರ್ಶವನ್ನು ತಿಳಿಸುವ ಸದುದ್ದೇಶದಿಂದ ಮದ್ದೂರು ತಾಲೂಕು ಹಿಂದೂಪರ ಸಂಘಟನೆಗಳ ಒಕ್ಕೂಟವು ಕಾರ್ಯಕ್ರಮವನ್ನು ಆಯೋಜನೆ ಮಾಡಿದೆ ಎಂದು ವಿವರಿಸಿದರು.

ಕೆಂಗೇರಿ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷರಾದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗುರುಮಹಾರಾಜರು (ಸ್ವರ್ಣನೃಸಿಂಹದತ್ತಸಾಯಿ ಪೀಠಿಕಾ ಸೇವಾ ಟ್ರಸ್ಟ್, ಮೈಸೂರಿನ) ಶ್ರೀ ಅರ್ಜುನ ಅವಧೂತ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ವಿಜಯಪುರ ಕ್ಷೇತ್ರದ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಅವರು ಮುಖ್ಯ ಭಾಷಣಗಾರರಾಗಿ ಭಾಗವಹಿಸಲಿದ್ದು, ಲೇಖಕ ಹಾಗೂ ವಾಗ್ಮಿ ಕಾರ್ಕಳದ ಶ್ರೀಕಾಂತ್ ಶೆಟ್ಟಿ ಅವರು ದಿಕ್ಸೂಚಿ ಭಾಷಣ ಮಾಡುವರು ಎಂದರು.



> ಹಿಂದುಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆಸಲುದ್ದೇಶಿಸಿರುವ ಬಲಿದಾನ ದಿವಸ್ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಗಳು ಆಗಮಿಸಿ, ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಮಹನೀಯರ ಆದರ್ಶಗಳನ್ನು ತಿಳಿದು, ತಮ್ಮ ಮಕ್ಕಳಿಗೂ ತಿಳಿಸಬೇಕು. ಎಲ್ಲರಲ್ಲೂ ರಾಷ್ಟ್ರಾಭಿಮಾನವನ್ನು ಭಿತ್ತುವ ಕೆಲಸ ಮಾಡಬೇಕು.
>
> ■ **ಕೆ.ಟಿ. ನವೀನ್‌ಕುಮಾರ್,** ಹಿಂದು ಸಂಘಟಕ

ಈ ಕಾರ್ಯಕ್ರಮದಲ್ಲಿ 5 ರಿಂದ 10 ಸಾವಿರ ಜನ ಹಿಂದೂಗಳು ಭಾಗವಹಿಸುವ ನಿರೀಕ್ಷೆ ಇದೆ. ಬರುವ ಎಲ್ಲ ಹಿಂದೂ ಬಾಂಧವರಿಗೂ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು. ಹಿಂದೂ ಸಂಘಟನೆಗಳ ಮುಖಂಡರಾದ ಕೆ.ಎಸ್. ಮಲ್ಲಿಕಾರ್ಜುನ್, ಜಗನ್ನಾಥ್, ಗುರುಮಲ್ಲೇಶ್, ವೀರಭದ್ರು, ಮನು ಗೋಷ್ಠಿಯಲ್ಲಿದ್ದರು.

ದಾಖಲೀಕರಣ ಮಾಡಿ: ಶಾಸಕ

ಮೇಲುಕೋಟೆ: ನಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಜ್ಞಾನಬಂಡಾರವಾದ ಪುಸ್ತಗಳಲ್ಲಡಗಿದೆ ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ಮೇಲುಕೋಟೆಯ ಭಗವದ್ರಾಮಾನುಜ ಸಂಸ್ಕೃತ ಸಂಶೋಧನಾ ಸಂಸ್ಥೆಯ ಸುವರ್ಣಮಹೋತ್ಸವ ಉದ್ಘಾಟಿಸಿ ಮಾತನಾಡಿ, ನಮ್ಮ ಪೂರ್ವಿಕರು ಎಲ್ಲಾ ವಿಚಾರಗಳನ್ನು ಜ್ಞಾನಗಳನ್ನು ತಾಳೆಗರಿಯಲ್ಲಿ ಬರೆದಿಟ್ಟಿದ್ದಾರೆ. ಈ ಎಲ್ಲಾ ವಿಚಾರಧಾರೆಗಳನ್ನು ಈಗಿನ ಕಾಲಮಾನದ ಸಂದರ್ಭಕ್ಕೆ ತಕ್ಕಂತೆ ಜನಸಾಮಾನ್ಯರಿಗೆ ತಲುಪಿಸಬೇಕಿದೆ. ಡಿಜಿಟಲ್ ತಂತ್ರಜ್ಞಾನದ ಮೂಲಕ ತಾಳೆಗರಿಯಲ್ಲಿರುವ ಮಾಹಿತಿಗಳನ್ನು ದಾಖಲೀಕರಣ ಮಾಡಬೇಕು ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಸಿ.ಎನ್ ಸೀತಾರಾಮ್ ಮಾತನಾಡಿ, ಜಾತಿಮತ ಧರ್ಮ ಮೀರಿದ ಸಮಾನತೆಯ ಸಂದೇಶಸಾರಿದ ರಾಮಾನುಜಚಾರ್ಯರು ಭಾರತಾದ್ಯಂತ ಪ್ರಾಥಸ್ಮರಣೀಯರಾಗಿದ್ದಾರೆ. ರಾಮಾನುಜಾಚಾರ್ಯರ ಸಾಮಾಜಿಕ ಸಂದೇಶಗಳನ್ನು ಜಗತ್ತಿಗೆ ಪ್ರಕಾಶಪಡಿಸಲು ಸರ್ಕಾರ ಮೇಲುಕೋಟೆಯಲ್ಲಿ ಸಂಸ್ಕೃತ ಸಂಶೋಧನಾ ಕೇಂದ್ರ ಸ್ಥಾಪಿಸಿದೆ ಎಂದರು. ಭರಾರಾಸಂನ ಕುಲಸಚಿವ ಡಾ.ಎಸ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಚೆಲುವನಾರಾಯಣಸ್ವಾಮಿ ದೇವಾಲಯದ ಒಂದು ಲಕ್ಷರೂ ಮೂಲಧನದೊಂದಿಗೆ ಆರಂಭವಾದ ಸಂಸ್ಥೆ ಐವತ್ತು ವಸಂತಗಳನ್ನು ಪೂರೈಸಿದೆ ಸುಮಾರು 6ಲಕ್ಷ ತಾಳೆಗರಿಗಳನ್ನು ಸಂರಕ್ಷಿಸಿ ಡಿಜಿಟಲೀಕರಣ ಮಾಡಿದೆ ಎಂದರು.



ಮೇಲುಕೋಟೆಯ ಭಗವದ್ರಾಮಾನುಜ ಸಂಸ್ಕೃತ ಸಂಶೋಧನಾ ಸಂಸ್ಥೆಯ ಸುವರ್ಣಮಹೋತ್ಸವವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಸೇವೆ ಸಲ್ಲಿಸುವುದೇ ಅಲಯನ್ಸ್ ಸಂಸ್ಥೆಯ ಧ್ಯೇಯ

ಮಂಡ್ಯ: ಅವಶ್ಯಕತೆ ಇರುವವರನ್ನು ಗುರುತಿಸಿ ಸೇವೆ ಸಲ್ಲಿಸುವುದೇ ಅಲಯನ್ಸ್ ಸಂಸ್ಥೆಯ ಧ್ಯೇಯ ಎಂದು ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ ಜಿಲ್ಲೆ 268–ಎಸ್‌ನ ರಾಜ್ಯಪಾಲ ಅಲೈ ಮಾದೇಗೌಡ ಅಭಿಪ್ರಾಯಪಟ್ಟರು.

ಇಲ್ಲಿನ ಅಶೋಕನಗರದ ಆಸ್ಪತ್ರೆ ರಸ್ತೆಯಲ್ಲಿರುವ ಪ್ರತಿಭಾಂಜಲಿ ಸಭಾಂಗಣದಲ್ಲಿ ಆಯೋಜಿದ್ದ ಪ್ರತಿಭಾಂಜಲಿ ಅಲಯನ್ಸ್ ಕ್ಲಬ್ ಹಾಗೂ ಷುಗರ್ ಸಿಟಿ ಅಲಯನ್ಸ್ ಕ್ಲಬ್‌ಗಳ ರಾಜ್ಯಪಾಲರ ಅಧಿಕೃತ ಭೇಟಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಸಮಾನ ಮನಸ್ಕ ಸದಸ್ಯರು ಸ್ನೇಹಪರತೆಯಿಂದ ಒಂದೆಡೆ ಸೇರಿ, ಸಮಾಜದಲ್ಲಿರುವ ಅಶಕ್ತರನ್ನು ಗುರುತಿಸಿ ಅವರವರ ಶಕ್ತಾನುಸಾರ ಸೇವೆ ಸಲ್ಲಿಸುವ ಮೂಲಕ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಕ್ಲಬ್ ಸದಸ್ಯರಿಗೆ ಸಲಹೆ ನೀಡಿದರು. ಹಾಗಾಗಿ ಸ್ನೇಹ ಹಾಗೂ ಸೇವೆಯೇ ಆಲಯನ್ಸ್‌ನ ಮೂಲ ಆಶಯ ಎಂದರು.



ಜಿಲ್ಲಾ ಸಂಪುಟ ಕಾರ್ಯದರ್ಶಿ ಅಲೈ. ನಾಗರಾಜು, ಒಂದನೇ ರಾಜ್ಯಪಾಲ ಅಲೈ. ಕೆ.ಆರ್. ಶಶಿಧರ ಮಾತನಾಡಿ, ಮುಂದಿನ ಬಾರಿ ಜಿಲ್ಲೆಯ ಎಲ್ಲಾ ಕ್ಲಬ್‌ಗಳು ಅತ್ಯುತ್ತಮ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗಿ ಮನವಿ ಮಾಡಿದರು.

ಎರಡನೇ ರಾಜ್ಯಪಾಲ ಅಲೈ. ಚಂದ್ರಶೇಖರ ಕೀಲಾರ ಮಾತನಾಡಿ, ಸೇವೆಯ ಜೊತೆಗೆ ಜೊತೆಗೆ ಸೇವಾ ಮನೋಭಾವನೆಯುಳ್ಳ ನೂತನ ಸದಸ್ಯರನ್ನು ಕ್ಲಬ್‌ಗಳಿಗೆ ಸೇರ್ಪಡೆಗೊಳಿಸುವತ್ತ ಗಮನಹರಿಸಲು ತಿಳಿಸಿದರು. ಜಿಲ್ಲಾ ಸಂಪುಟ ಕಾರ್ಯದರ್ಶಿ ಅಲೈ. ನಾಗರಾಜ್, ಪ್ರತಿಭಾಂಜಲಿ ಅಲೈ ಕ್ಲಬ್ ಅಧ್ಯಕ್ಷ. ಅಲೈ. ಸಂತೋಷ್ ಆಲಯನ್ಸ್ ಷುಗರ್ ಸಿಟಿ ಕ್ಲಬ್ ಅಧ್ಯಕ್ಷ ಅಲೈ. ನಾಗರಾಜು, ಹಾಗೂ ಕ್ಲಬ್ ಪದಾಽಕಾರಿಗಳಾದ ಅಲೈ.ಲೋಕೇಶ್, ಅಲೈ.ಸೋಮಶೇಖರ್, ಅಲೈ. ಸರಿತಾ, ಅಲೈ. ವಂದನಾ, ಅಲೈ. ಕಾವ್ಯ, ಅಲೈ. ಪ್ರತಿಭಾ ಅಲೈ. ರಾಧಾಕೃಷ್ಣ, ಅಲೈ. ಮುರುಳಿ ಹಾಗೂ ಇತರೆ ಸದಸ್ಯರು ಉಪಸ್ಥಿತರಿದ್ದರು.

ಚಿರತೆ ದಾಳಿ: 4 ಕುರಿ ಸಾವು

ಮದ್ದೂರು: ಮನೆಯ ಹೊರಾಂಗಣದ ಶೆಡ್‌ನಲ್ಲಿ ಕಟ್ಟಿದ್ದ ಕುರಿ ಮತ್ತು ಮೇಕೆ ಮೇಲೆ ದಾಳಿ ಮಾಡಿರುವ ಚಿರತೆ ನಾಲ್ಕು ಕುರಿ ಸೇರಿದಂತೆ ಎರಡು ಮೇಕೆಗಳನ್ನು ಕಚ್ಚಿ ಕೊಂದಿರುವ ಘಟನೆ ಮದ್ದೂರು ತಾಲೂಕು ಮಾದನಾಯಕನಹಳ್ಳಿ ಗ್ರಾಮದಲ್ಲಿ ಜರುಗಿದೆ.



ಶುಕ್ರವಾರ ತಡರಾತ್ರಿ ಶೆಡ್‌ಗೆ ದಾಳಿ ಮಾಡಿದ್ದ ಚಿರತೆಯು ನಾಲ್ಕು ಕುರಿಗಳನ್ನು ಕೊಂದು ಸ್ಥಳದಲ್ಲೇ ಬಿಟ್ಟು ಎರಡು ಮೇಕೆಗಳನ್ನು ಕಚ್ಚಿ ಕೊಂಡೊಯ್ದಿದ್ದು ಅಪಾರ ಪ್ರಮಾಣದ ನಷ್ಟ ಸಂಭವಿಸಿದ್ದು ಕುರಿ ಮಾಲೀಕರ ಸಂಕಷ್ಟ ಹೇಳತೀರದಾಗಿದೆ. ಮಾದಾನಯಕನಹಳ್ಳಿ ಗ್ರಾಮದ ಪವಿತ್ರ ಮತ್ತು ಗುಂಡಪ್ಪ ದಂಪತಿಗಳಿಗೆ ಸೇರಿದ ಮೇಕೆ ಮತ್ತು ಕುರಿ ಚಿರತೆ ದಾಳಿಗೆ ಬಲಿಯಾದ ಹಿನ್ನೆಲೆಯಲ್ಲಿ ಸಂಭವಿಸಿರುವ ನಷ್ಟ ಭರಿಸುವ ಮತ್ತು ಈ ಭಾಗದಲ್ಲಿ ರೈತರಿಗೆ ತಲೆನೋವಾಗಿ ಪರಿಣಮಿಸಿರುವ ಚಿರತೆಯನ್ನು ಸೆರೆಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ಪಶುವೈದ್ಯರು, ಅರಣ್ಯ ಇಲಾಖೆ ಸಿಬ್ಬಂಧಿ ಮತ್ತು ಕಂದಾಯ ಅಧಿಕಾರಿಗಳು ಬೇಟಿ ನೀಡಿ ವಿವರ ಸಂಗ್ರಹಿಸಿದ್ದು ಚಿರತೆ ಸೆರೆ ಸಂಬಂಧ ಕ್ರಮ ವಹಿಸುವ ಭರವಸೆ ನೀಡಲಾಗಿದೆ.

ಶೇಖರ್ ನಿಧನ

ಮದ್ದೂರು: ಪಟ್ಟಣದ ಲೀಲಾವತಿ ಬಡಾವಣೆ ನಿವಾಸಿ ನಿವೃತ್ತ ಮುಖ್ಯಶಿಕ್ಷಕ ಎಂ.ಮಾಯಿಗಯ್ಯ ಅವರ ಪುತ್ರ ಶೇಖರ್ ಮೆಡಿಕಲ್ಸ್ ಮಾಲೀಕ ಎಂ.ಶೇಖರ್(63) ಅನಾರೋಗ್ಯ ಹಿನ್ನೆಲೆಯಲ್ಲಿ ಮಾರ್ಚ್ 20ರ ಶುಕ್ರವಾರ ಮೃತಪಟ್ಟಿದ್ದು ಅಂತ್ಯಕ್ರಿಯೆ ಮಾರ್ಚ್ 22ರಂದು ಭಾನುವಾರ ಮಧ್ಯಾಹ್ನ ನೆರವೇರಲಿದೆ.



ಉನ್ನತ ವ್ಯಾಸಂಗಕ್ಕೆ ವಿದೇಶದಲ್ಲಿರುವ ಪುತ್ರನ ಆಗಮನ ನಿರೀಕ್ಷೆಯಲ್ಲಿದ್ದು ಭಾನುವಾರ ಬೆಳಗ್ಗೆ 8ರಿಂದ 11 ಗಂಟೆವರೆಗೆ ಅಂತಿಮ ದರ್ಶನಕ್ಕೆ ಅವಕಾಶವಿದ್ದು ಪ್ರಸಕ್ತ ಶವವನ್ನು ಮಂಡ್ಯದ ಜಿಲ್ಲಾಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದೆ.

ಮೃತರು ಮದ್ದೂರು ತಾಲೂಕು ಭಾರತ್ ವಿಕಾಸ್ ಪರಿಷತ್ ಕಾರ್ಯದರ್ಶಿಯಾಗಿ, ತಾಲೂಕು ಔಷಧಿ ಮಾರಾಟಗಾರರ ಸಂಘದ ಕಾರ್ಯಕರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು ಮೃತರಿಗೆ ಪತ್ನಿ ಲಕ್ಷ್ಮಿ ಸೇರಿದಂತೆ ಓರ್ವ ಪುತ್ರಿ, ಓರ್ವ ಪುತ್ರನಿದ್ದಾನೆ.

ಅಂತ್ಯಕ್ರಿಯೆ ಪಟ್ಟಣದ ಹೊರವಲಯದ ಶಿಂಷಾ ನದಿ ದಡದ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ನೆರವೇರಲಿರುವುದಾಗಿ ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಶಾಲಾ ವಾರ್ಷಿಕೋತ್ಸವದಲ್ಲಿ ವಿದ್ವಾನ್ ಜಗದೀಶ್ ಶರ್ಮ ಸಲಹೆ

ಪೋಷಕರು ಮಕ್ಕಳಿಗೆ ನೈತಿಕ ಶಿಕ್ಷಣ ಕೊಡಿಸಿ

ಕೃಷ್ಣರಾಜಪೇಟೆ: ಪೋಷಕರು ತಮ್ಮ ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಕೊಡಿಸಿ, ಸಂಸ್ಕಾರಯುತ ಮಾನವೀಯ ಮೌಲ್ಯಗಳನ್ನು ತುಂಬಿ ಸಮಾಜಕ್ಕೆ ಉತ್ತಮವಾದ ಕೊಡುಗೆಯನ್ನು ನೀಡುವ ಭವಿಷ್ಯದ ನಾಗರಿಕರನ್ನಾಗಿ ರೂಪಿಸಬೇಕು ಎಂದು ನಾಡಿನ ಖ್ಯಾತ ಆಧ್ಯಾತ್ಮ ಚಿಂತಕ ಹಾಗೂ ಲೇಖಕ ವಿದ್ವಾನ್ ಜಗದೀಶ್ ಶರ್ಮ ಸಂಪ ಹೇಳಿದರು.

ಪಟ್ಟಣದ ಜಯನಗರ ಬಡಾವಣೆಯಲ್ಲಿರುವ ಪ್ರಬುದ್ಧ ಪ್ರತಿಷ್ಠಾನದ ಫಸ್ಟ್ ಕ್ರೈ ಇಂಟಲಿ ಟಾಟ್ಸ್ ಪ್ರೀ ಸ್ಕೂಲ್‌ನ 3ನೇ ವಾರ್ಷಿಕೋತ್ಸವ ಸಮಾರಂಭವನ್ನು ಶ್ರೀಲಕ್ಷ್ಮೀವೆಂಕಟೇಶ್ವರಕಲ್ಯಾಣಸಭಾಂಗಣದಲ್ಲಿ ಉದ್ಘಾಟಿಸಿ ಶಾಲಾಮಕ್ಕಳಿಗೆ ಪದವಿಪ್ರದಾನ ಮಾಡಿ ಮಾತನಾಡಿ, ಶಿಕ್ಷಣವು ಇಂದು ವ್ಯಾಪಾರಿಕರಣಗೊಂಡು ಮಾರಾಟದ ಸರಕಾಗಿ ಬದಲಾಗಿದೆ. ಋಷಿ ಮುನಿಗಳ ಕಾಲದಲ್ಲಿ ಇದ್ದ ಗುರುಕುಲ ಪದ್ಧತಿಯ ಶಿಕ್ಷಣ ಇಂದು ಮಾಯವಾಗಿದೆ, ಹಣವಿದ್ದವರಿಗೆ ಮಣೆ, ಡೊನೇಷನ್ ನೀಡಿದ ಶ್ರೀಮಂತರ ಮಕ್ಕಳಿಗೆ ಮಾತ್ರ ಗುಣಮಟ್ಟದ ಶಿಕ್ಷಣ ಎಂಬ ಮಾತು ಜನ ಜನಿತವಾಗಿದೆ ಎಂದರು.



ಪ್ರಬುದ್ಧ ಪ್ರತಿಷ್ಠಾನದ ಅಧ್ಯಕ್ಷ ಸಂಸ್ಕೃತಿ ಸಂಘಟಕ, ವೇದಬ್ರಹ್ಮ ಶ್ರೀ ಗೋಪಾಲಕೃಷ್ಣ ಅವಧಾನಿಗಳು ಮಾತನಾಡಿ, ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ನೈತಿಕ ಮೌಲ್ಯಗಳನ್ನು ಕಲಿಸಿಕೊಡಲಾಗುತ್ತಿದೆ ಕನ್ನಡ ಇಂಗ್ಲಿಷ್ ಹಿಂದಿ ಹಾಗೂ ಸಂಸ್ಕೃತ ವಿಷಯಗಳಲ್ಲಿ ಮಕ್ಕಳಿಗೆ ವಿಶೇಷವಾದ ಬೋಧನೆಯು ನಮ ಶಾಲೆಯಲ್ಲಿ ನಡೆಯುತ್ತಿದ್ದು, ಮಕ್ಕಳು ಉತ್ಸಾಹದಿಂದ ಕಲಿಯುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ನಿವೃತ್ತ ಪ್ರೌಢಶಾಲಾ ಶಿಕ್ಷಕಿ ಕೆ.ಎಸ್. ಗಿರಿಜಾ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಆರ್.ನರಸಿಂಹ ಮೂರ್ತಿ ಹಾಗೂ ಆಧ್ಯಾತ್ಮಿಕ ಚಿಂತಕರಾದ ವಿದ್ವಾನ್ ಜಗದೀಶ್ ಶರ್ಮಾ ಸಂಪಾ ಅವರಿಗೆ ದೇವತುಷ್ಟ ಬಿರುದುನೀಡಿ ಸನ್ಮಾನಿಸಿ ಗೌರವಿಸಲಾಯಿತು. ಪ್ರಬುದ್ಧ ಪ್ರತಿಷ್ಠಾನದ ಕಾರ್ಯದರ್ಶಿ ಶಮಂತ್, ಟ್ರಸ್ಟಿಗಳಾದ ಕೌಸ್ತುಭ ಭಾರತೀಪುರ, ಶ್ರೀನಿಧಿ, ಮುಖ್ಯ ಶಿಕ್ಷಕಿ ಪಲ್ಲವಿ, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ಮುಖಂಡರಾದ ವಿ.ಡಿ.ಮೋಹನ್, ಬತ್ತದ ವೆಂಕಟರಾಮು, ಸುಶೀಲಮ್ಮ ರಾಮದಾಸ್ ಇದ್ದರು.

ನಿವೃತ್ತ ನರ್ಸ್ ಸೇರಿದಂತೆ ನಾಲ್ವರು ರೂಪಿಸಿದ್ದ ಒಳಸಂಚು ಬಯಲು

ನಕಲಿ ದಾಖಲೆ ಸೃಷ್ಟಿಸಿ ₹24.37 ಲಕ್ಷ ಭೂ ಪರಿಹಾರ

ಮಂಡ್ಯ: ಬೆಂಗಳೂರಿನ ವ್ಯಕ್ತಿಯೊಂದಿಗೆ ಸೇರಿ ನಕಲಿ ದಾಖಲೆಗಳನ್ನು ಸೃಷ್ಟಿಸಿ 24.37 ಲಕ್ಷ ರು. ಭೂ ಪರಿಹಾರವನ್ನು ಪಡೆದಿರುವ ಸಂಗತಿ ಬೆಳಕಿಗೆ ಬಂದಿದೆ. ಹಣ ಹೊಡೆಯಲು ನಿವೃತ್ತ ನರ್ಸ್ ಸೇರಿದಂತೆ ನಾಲ್ವರು ರೂಪಿಸಿದ್ದ ಒಳಸಂಚು ಇದೀಗ ಬಯಲಾಗಿದೆ.

ಪ್ರಕರಣವೇನು? ನಾಗಮಂಗಲ ತಾಲೂಕು ದೇಲಾಪುರ ಹೋಬಳಿ ಕುಡಗಬಾಳು ಗ್ರಾಮದಲ್ಲಿ ಮಾಗಡಿ–ಸೋಮವಾರ ಪೇಟೆ ರಾಜ್ಯ ಹೆದ್ದಾರಿ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ಈ ರಸ್ತೆಗೆ ಗ್ರಾಮದ ಸರ್ವೆ ನಂ.128ರಲ್ಲಿ 23 ಗುಂಟೆ ಜಮೀನು ಸ್ವಾಧೀನವಾಗಿದ್ದು, ಆರ್‌ಟಿಸಿ ಬಸವಲಿಂಗಾಚಾರಿರವರ ಹೆಸರಿನಲ್ಲಿದ್ದ ಕಾರಣ ಸರ್ಕಾರದ ಅಧಿಸೂಚನೆ ಅಂಗೀಕಾರವಾಗಿ ಬಸವಲಿಂಗಾಚಾರಿ ಹೆಸರಿಗೆ 24,37,745 ರು.ಗಳ ಪರಿಹಾರ ಅನುಮೋದನೆಯಾಗಿತ್ತು.

ಅನುಮೋದನೆಯಾಗಿರುವ ಪರಿಹಾರಕ್ಕೆ ಸಂಬಂಧಿಸಿದಂತೆ ವಿ.ರತ್ನಮ್ಮ ಎಂಬುವರು ಬೆಂಗಳೂರಿನ ಮರಿಯಪ್ಪನ ಪಾಳ್ಯದ ವಿಳಾಸ ನೀಡಿ ಜ.3ರಂದು ಅರ್ಜಿ ಸಲ್ಲಿಸಿ ಬಸವಲಿಂಗಾಚಾರಿ ಅವರು ನನ್ನ ಪತಿಯಾಗಿದ್ದು, ಅವರು ಈಗಾಗಲೇ ಪೌತಿಯಾಗಿರುವುದರಿಂದ ಅವರ ಪತಿಯಾದ ನನಗೆ ಭೂ ಪರಿಹಾರ ಮೊತ್ತವನ್ನು ನೀಡಬೇಕೆಂದು ದಾಖಲೆಗಳನ್ನು ನೀಡಿದ್ದರು.

> **ದೂರು ದಾಖಲು**
>
> ಮದ್ದೂರು ತಾಲೂಕು ಚಾಮನಹಳ್ಳಿಯ ಹೌಸಿಂಗ್ ಬೋರ್ಡ್ ನಿವಾಸಿ ರತ್ನಮ್ಮ, ರಾಧಮ್ಮ, ಆರ್.ಎನ್.ದೀಪಕ್ ಹಾಗೂ ಬೆಂಗಳೂರಿನ ರಾಜಾಜಿ ನಗರದ ಸುಬ್ಬಣ್ಣ ಅವರ ವಿರುದ್ಧ ಮಂಡ್ಯ ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ ಅವರು ನಗರದ ಪಶ್ಚಿಮ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಎಲ್ಲಾ ದಾಖಲೆಗಳಲ್ಲಿ ವಿ.ರತ್ನಮ್ಮರವರ ಪತಿ ಬಸವಲಿಂಗಾಚಾರಿ ಎಂದಿದ್ದರಿಂದ ಹಾಗೂ ಖುದ್ದು ವಿ.ರತ್ನಮ್ಮ ಸಲ್ಲಿಸಿರುವ ಆಧಾರ್‌ಕಾರ್ಡ್‌ನೊಂದಿಗೆ ನಷ್ಟ ಭರ್ತಿ ಪ್ರಮಾಣ ಪತ್ರ ಹಾಗೂ ಸಾಕ್ಷಿಗಳಾದ ಸುಬ್ಬಣ್ಣ ಮತ್ತು ಜಿ.ರಾಧಮ್ಮ ಅವರು ಸಾಕ್ಷಿಪ್ರಮಾಣಪತ್ರದೊಂದಿಗೆ ಮಂಡ್ಯ ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಿದ್ದರು. ಇವೆಲ್ಲಾ ದಾಖಲೆಗಳನ್ನು ನಿಜವೆಂಬನಂಬಿ ಜ.13ರಂದು ಭೂ ಪರಿಹಾರದ ಮೊತ್ತವಾದ 24,37,745 ರು. ಹಣವನ್ನು ವಿ. ರತ್ನಮ್ಮ ನೀಡಿದ್ದ ಬ್ಯಾಂಕ್ ಖಾತೆ (ಸಂಖ್ಯೆ: 54018163964)ಗೆ ಪಾವತಿ ಮಾಡಲಾಗಿತ್ತು.

ಇದೇ ವೇಳೆ ಜ.7ರಂದು ನಾಗಮಂಗಲ ತಾಲೂಕು ಕುಡುಗುಬಾಳು ಗ್ರಾಮದ ಶಾಂತಮ್ಮ ಎಂಬುವರು ವಿ.ರತ್ನಮ್ಮ ಅವರು ಬಸವಲಿಂಗಾಚಾರಿ ತನ್ನ ಪತಿ ಎಂಬುದಾಗಿ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಭೂ ಪರಿಹಾರದ ಹಣವನ್ನು ಪಡೆದುಕೊಂಡಿದ್ದಾರೆ ಎಂದು ಮಂಡ್ಯ ಉಪವಿಭಾಗಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಅಲ್ಲದೆ ಫೆ.23ರಂದು ಪೊಲೀಸ್ ಠಾಣೆಗೆ ತೆರಳಿ ದೂರನ್ನು ನೀಡಿದ್ದರು.

ಹಾಗಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಗೂ ನಕಲಿ ದಾಖಲೆ ಸೃಷ್ಟಿಗೆ ಸಹಾಯ ಮಾಡಿರುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರಡಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಕಿರುಸುದ್ದಿ

ಆಯತಪ್ಪಿ ಬಿದ್ದು ಯುವಕ ಸಾವು

• **ಹಾಸನ:** ಎಳನೀರು ಕೀಳುವಾಗ ಆಯತಪ್ಪಿ ಬಿದ್ದು ಯುವಕ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ, ಅಣ್ಣೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಅಭಿಷೇಕ್ (23) ಮೃತಪಟ್ಟ ಯುವಕ. ಎಳನೀರು ಕೀಳಲು ತೆಂಗಿನಮರ ಹತ್ತಿದ್ದ ಅಭಿಷೇಕ್ ತೆಂಗಿನಮರದಿಂದ ಆಯತಪ್ಪಿ ಕೆಳಗೆ ಬಿದ್ದು ಸ್ಥಳದಲ್ಲೇ ಧಾರುಣವಾಗಿ ಸಾವನ್ನಪ್ಪಿದ್ದಾನೆ. ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಸ್ಥಳಕ್ಕೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.

ಹೋಟೆಲ್ ಮೇಲೆ ಆಹಾರ ಅಧಿಕಾರಿ ದಾಳಿ

• **ಕೊಣನೂರು:** ರಾಮನಾಥಪುರದ ರೆಸ್ಟೋರೆಂಟ್ ಹೋಟೆಲ್ ಮೇಲೆ ಆಹಾರ ಇಲಾಖೆಯ ಅಧಿಕಾರಿಗಳು ದಾಳಿ ಮಾಡಿ ಗೃಹಬಳಕೆಯ ಸಿಲಿಂಡರ್ ವಶಪಡಿಸಿಕೊಂಡಿದ್ದಾರೆ. ಗೃಹಪಯೋಗಿ ಗ್ಯಾಸ್ ಸಿಲಿಂಡರ್ ಅನ್ನು ವಾಣಿಜ್ಯ ಉಪಯೋಗಿಸುತ್ತಿದ್ದ ಮಾಹಿತಿಯನ್ನು ಆಧರಿಸಿ ಆಹಾರ ಇಲಾಖೆ ಶಿರಸ್ತೆಧಾರ್ ಮಂಜುನಾಥ್ ಮತ್ತು ರೂಪ.ಎಸ್ ರ ನೇತೃತ್ವದಲ್ಲಿ ಅರಕಲಗೂಡು ಮುಖ್ಯ ರಸ್ತೆಯಲ್ಲಿರುವ ರಾಮನಾಥಪುರದ ಕೆಲ ಹೋಟೆಲ್ ಗಳ ಮೇಲೆ ಪರಿಶೀಲನೆಗೆ ತೆರಳಿದ ವೇಳೆ ಹೊಂಗನಸು ಫ್ಯಾಮಿಲಿ ರೆಸ್ಟೋರೆಂಟ್ ಅಲ್ಲಿ ಮೂರು ಗೃಹಪಯೋಗಿ ಅಡಿಗೆ ಅನಿಲದ ಸಿಲಿಂಡರ್ ಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸುತ್ತಿರುವುದು ಕಂಡುಬಂದಿದೆ. ಅಧಿಕಾರಿಗಳು ಅವುಗಳನ್ನು ವಶಪಡಿಸಿಕೊಂಡಿದ್ದಾರೆ. ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಯಿತು. ಶಿರಸ್ತೆದಾರ್ ಮಂಜುನಾಥ್ ಈ ಕುರಿತು ಮಾತನಾಡಿ ತಾಲ್ಲೂಕಿನ ಹಲವು ಬೇಕರಿ, ಹೋಟೆಲ್ ಗಳಲ್ಲಿ ಚಾಟ್ ಸೆಂಟರ್ ಗಳಲ್ಲಿ ಗೃಹೋಪಯೋಗಿ ಅನಿಲವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸುತ್ತಿರುವುದು ತಿಳಿದು ಬಂದಿದ್ದು , ಈ ಕುರಿತು ದೂರಗಳು ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ

• **ಬೇಲೂರು:** ದೇಶದಲ್ಲೆಡೆ ಶುಕ್ರವಾರ ಚಂದ್ರದರ್ಶನವಾದ ಹಿನ್ನೆ ಲೆಯಲ್ಲಿ ಬೇಲೂರಿನ ಕೇಂದ್ರ ಜಾಮಿಯಾ ಮಸೀದಿಯ ಧರ್ಮಗುರು ಸೈಯದ್ ಅಹಮದ್ ಅಶ್ರಫಿ ಅವರು ಶನಿವಾರ ಈದುಲ್ ಫಿತರ್ ಆಚರಿಸ ಲಾಗುವುದು ಎಂದು ಘೋಷಿಸಿದರು. ಅದರಂತೆ ಶನಿವಾರ ಪಟ್ಟಣ ಸೇರಿದಂತೆ ರಾಜ್ಯದಾದ್ಯಂತ ಮುಸ್ಲಿಂ ಬಾಂಧವರು ರಂಜಾನ್ ಹಬ್ಬವನ್ನು ಸಡಗರ-ಸಂಭ್ರಮದಿಂದ ಆಚರಿಸಿದರು. ಒಂದು ತಿಂಗಳ ಉಪ ವಾಸ ಪೂರ್ಣಗೊಳಿಸಿದ ಭಕ್ತರು ಬೆಳಿಗ್ಗೆ ಗೆಂಡೇಹಳ್ಳಿ ರಸ್ತೆಯ ಈದ್ಗಾ ಮೈದಾನ ದಲ್ಲಿ ಸೇರಿ ಶ್ರದ್ಧಾಭಕ್ತಿ ಯಿಂದ ಸಾಮೂಹಿಕ ನಮಾಜ್ ಸಲ್ಲಿಸಿ, ಲೋಕ ಕಲ್ಯಾಣಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮಕ್ಕಳು ಹಾಗೂ ಹಿರಿ ಯರು ಹೊಸ ಬಟ್ಟೆ ಧರಿಸಿ ಪರಸ್ಪರ ಸಿಹಿ ಹಂಚಿ ಕೊಂಡು ಹಬ್ಬದ ಶುಭಾಶ ಯಗಳನ್ನು ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಧರ್ಮಗುರುಗಳು ಪ್ರವಚನ ನೀಡುತ್ತಾ, ರಂಜಾನ್ ತಿಂಗಳು ಮುಸ್ಲಿಮರಿಗಾಗಿ ಅತ್ಯಂತ ಪವಿತ್ರವಾಗಿದ್ದು, ಉಪವಾ ಸದ ಮೂಲಕ ಶಿಸ್ತಿನ ಜೀವನ, ಸಹನೆ ಮತ್ತು ಆತ್ಮಶುದ್ಧಿಯನ್ನು ಅಭ್ಯಾಸ ಮಾಡಬೇಕು ಎಂದರು. ಅಸೂಯೆ, ಅಹಂಕಾರ, ಲೋಭ, ಮದ, ಮತ್ಸ ರ ಸೇರಿದಂತೆ ದುಷ್ಪ್ರವೃತ್ತಿಗ ಳನ್ನು ದೂರವಿಡುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಪೇಟೆ ಜಾಮಿಯಾ ಮಸೀದಿ ಅಧ್ಯಕ್ಷ ಇಫ್ರಾಜ್, ಕೋಟೆ ಜಾಮಿಯಾ ಮಸೀದಿ ಅಧ್ಯಕ್ಷ ರಫೀಕ್, ಹಳೇಬೀಡು-ಬೇಲೂರು ಪ್ರಾಧಿಕಾರ ಅಧ್ಯಕ್ಷ ಸೈಯದ್ ತೌಫಿಕ್, ಪುರಸಭೆ ಸದಸ್ಯ ಜಮಾಲ್, ಮಾನವ ಹಕ್ಕು ಆಯೋಗದ ರಾಜ್ಯಾಧ್ಯಕ್ಷ ಅಹಮದ್ ಅಲಿ ಖಾನ್, ಮುಸ್ಲಿಂ ಮುಖಂಡರಾದ ಜಾಕಿರ್ ಪಾಶಾ, ಸೈಯದ್ ಜಮೀಲ್, ಮುಜಮಿಲ್, ಮುಶೀರ್ ಸೇರಿದಂತೆ ಅನೇಕರು ಉಪಸ್ಥಿತ ರಿದ್ದರು.ಡಿವೈಎಸ್‌ಪಿ ಪರಶುರಾಮ್, ಸರ್ಕಲ್ ಇನ್ಸ್ ಪೆಕ್ಟರ್ ರೇವಣ್ಣ, ಸಬ್‌ಇನ್ಸ್ ಪೆಕ್ಟರ್ ಎಸ್. ಜೆ. ಪಾಟೀಲ್ ಹಾಗೂ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು.

ಛಾಯಾಗ್ರಾಹಕರಿಗೆ ಐಡಿ ಕಾರ್ಡ್ ವಿತರಣೆ

• **ಬೇಲೂರು:** ತಾಲೂಕು ಛಾಯಾಗ್ರಾಹಕರ ಸಂಘ ದ ವತಿಯಿಂದ ಸದಸ್ಯರಿಗೆ ಗುರುತಿನ ಚೀಟಿ (ಐ ಡಿ ಕಾರ್ಡ್) ವಿತರಣೆ ಕಾರ್ಯ ಕ್ರಮವನ್ನು ಶನಿವಾರ ಪಟ್ಟಣದ ನೌಕರರ ಭವನ ದಲ್ಲಿ ಅದ್ದೂರಿಯಾಗಿ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಸಂಘದ ಹಿರಿಯ ಸದ ಸ್ಯರು ಉದ್ಘಾಟಿಸಿ, ನಂತರ ಅಧ್ಯಕ್ಷರು ಹಾಗೂ ಪದಾಧಿ ಕಾರಿಗಳು ಸಂಘದ ಎಲ್ಲಾ ಸದಸ್ಯ ರಿಗೆ ಕ್ರಮವಾಗಿ ಐಡಿ ಕಾರ್ಡ್‌ಗಳನ್ನು ವಿತರಿಸಿದರು.

ಐಡಿ ಕಾರ್ಡ್‌ಗಳನ್ನು ವಿತರಿಸಿ ಮಾತನಾಡಿದ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಚಂದ್ರ ಶೇಖರ್ ಛಾಯಾಗ್ರಾಹಕರ ವೃತ್ತಿಗೆ ಗುರುತಿನ ಮಹತ್ವ ಹೆಚ್ಚುತ್ತಿದ್ದು, ಐಡಿ ಕಾರ್ಡ್ ಗಳ ಮೂಲಕ ವೃತ್ತಿಪರತೆಗೆ ಮತ್ತಷ್ಟು ಗೌರವ ಮತ್ತು ಭದ್ರತೆ ಸಿಗಲಿದೆ ಎಂದು ಹೇಳಿದರು.

ಇಂದು ಛಾಯಾಗ್ರಹಣ ಕ್ಷೇತ್ರವು ತಂತ್ರಜ್ಞಾನ ಅಭಿವೃದ್ಧಿಯೊಂದಿಗೆ ವೇಗವಾಗಿ ಬೆಳೆಯುತ್ತಿದೆ. ಮದುವೆ, ಸಾಮಾಜಿಕ ಕಾರ್ಯಕ್ರಮ ಗಳು, ಸುದ್ದಿ ವರದಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಛಾಯಾಗ್ರಾಹಕರ ಪಾತ್ರ ಪ್ರಮುಖವಾಗಿದೆ. ಇಂತಹ ಸಂದರ್ಭದಲ್ಲಿ ಸಂಘದ ಸದಸ್ಯರು ಏಕತೆ ಮತ್ತು ಶಿಸ್ತಿ ನಿಂದ ಕೆಲಸ ಮಾಡುವುದು ಅಗತ್ಯ ಎಂದು ಅವರು ತಿಳಿಸಿದರು.

ಸಂಘದ ಮಾಜಿ ಅಧ್ಯಕ್ಷ ರಾಘವೇಂದ್ರ ಹೊಳ್ಳ ಮಾತನಾಡಿ, ಸದಸ್ಯರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಅಪಘಾತ ವಿಮೆ, ತುರ್ತು ನೆರವು ನಿಧಿ, ತರಬೇತಿ ಶಿಬಿರಗಳು ಹಾಗೂ ನವೀನ ತಂತ್ರಜ್ಞಾನಗಳ ಪರಿಚಯ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುವ ಉದ್ದೇಶವಿದೆ ಎಂದು ಹೇಳಿದರು.

ಹೊಸದಾಗಿ ಕ್ಷೇತ್ರಕ್ಕೆ ಬರುತ್ತಿರುವ ಯುವ ಛಾಯಾಗ್ರಾಹಕರಿಗೆ ಮಾರ್ಗದರ್ಶನ ನೀಡುವುದು ಸಂಘದ ಪ್ರಮುಖ ಗುರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು, ಸಂಘದ ಈ ಪ್ರಯತ್ನವನ್ನು ಶ್ಲಾಘಿಸಿದರು. ಐಡಿ ಕಾರ್ಡ್‌ಗಳು ವಿವಿಧ ಕಾರ್ಯಕ್ರಮಗಳಲ್ಲಿ ಪ್ರವೇಶ ಹಾಗೂ ಕೆಲಸ ನಿರ್ವಹಣೆಗೆ ಅನುಕೂಲ ವಾಗಲಿದ್ದು,ಛಾಯಾಗ್ರಾಹ ಕರಿಗೆ ವೃತ್ತಿಪರ ಗುರುತು ನೀಡಲಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷ, ಸೋಮಶೇಖರ್,ಪ್ರಧಾನ ಕಾರ್ಯದರ್ಶಿ ಸಂದೀಪ್, ಖಜಾಂಚಿ ನವೀನ್ , ಕಾರ್ಯಕಾರಿ ಸಮಿತಿ ಸದಸ್ಯರು,ನಿರ್ದೇಶಕರು,ಹಾಗೂ ತಾಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ ಛಾಯಾಗ್ರಾಹಕರು ಹಾಜರಿದ್ದರು.



ಕೊಣನೂರು ತಾಲೂಕಿನ ರಾಮನಾಥಪುರದಲ್ಲಿನ ತಂಬಾಕು ಹರಾಜು ಮಾರುಕಟ್ಟೆಗೆ ಸಂಸದ ಶ್ರೇಯಸ್ ಪಟೇಲ್ ಭೇಟಿ. ಅಧಿಕಾರಿಗಳು, ಬೆಳೆಗಾರರೊಂದಿಗೆ ಚರ್ಚೆ ನಡೆಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರು, ತಂಬಾಕು ಬೆಳೆಗಾರರ ಸಂಘದ ಪದಾಧಿಕಾರಿಗಳು, ನೂರಾರು ಬೆಳೆಗಾರರು, ಅಧಿಕಾರಿಗಳಿದ್ದರು.

ಅಧ್ಯಕ್ಷರಾಗಿ ಮಧು ನೇಮಕ

• **ಹಾಸನ:** ಕೆ.ಪಿ.ಸಿ.ಸಿ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷರಾದ ಪುಟ್ಟಸ್ವಾಮಿ ಗೌಡ ಅವರ ಆದೇಶದ ಮೇರೆಗೆ ಹಾಗೂ ಹಾಸನ ಜಿಲ್ಲಾಧ್ಯಕ್ಷರಾದ ಹೇಮಂತ್ ಗೌಡ ಅಂಕಪುರ ಅವರ ಶಿಫಾರಸ್ಸಿ ನ ಮೇರೆಗೆ, ಹಾಸನ ಜಿಲ್ಲೆಯ ಹಳ್ಳಿ ಮೈಸೂರು ಬ್ಲಾಕ್ ಅಧ್ಯಕ್ಷರಾಗಿ ಮಧು ಎಚ್.ಎ. ರವರನ್ನು ನೇಮಕ ಮಾಡಲಾಗಿದೆ.

ಈ ವೇಳೆ ನೂತನ ಅಧ್ಯಕ್ಷ ಮಧು ಮಾತನಾಡಿ, ಪಕ್ಷಕ್ಕಾಗಿ ಕಳೆದ 15 ವರ್ಷಗಳಿಂದ ನಿರಂತರವಾಗಿ ಶ್ರಮಿಸಿದ್ದು, ಪಕ್ಷ ನೀಡಿರುವ ಜವಾಬ್ದಾರಿಗೆ ನಾನು ಅಭಾರಿಯಾಗಿದ್ದೇನೆ ಸಂಸದರಾದ ಶ್ರೇಯಸ್ ಪಟೇಲ್ ಹಾಗೂ ನಾಯಕರಾದ ಶ್ರೀಧರ್ ಗೌಡ ಅವರಿಗೆ ಧನ್ಯವಾದಗಳು ತಿಳಿಸುತ್ತೇನೆ. ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಹಿರಿಯ ಮತ್ತು ಸ್ಥಳೀಯ ನಾಯಕರುಗಳ ಸಹಕಾರದೊಂದಿಗೆ ಪಕ್ಷದ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುವುದು. ವಿಶೇಷವಾಗಿ ಕಾರ್ಮಿಕರ ಏಳಿಗೆಗಾಗಿ ಮತ್ತು ಅವರ ಹಕ್ಕುಗಳ ರಕ್ಷಣೆಗಾಗಿ ನಿರಂತರವಾಗಿ ಶ್ರಮಿಸುವ ಮೂಲಕ ಪಕ್ಷದ ಬಲವರ್ಧನೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಮಧು ಎಚ್.ಎ. ರವರ ರಾಜಕೀಯ ಹಾದಿಗೆ ಜಿಲ್ಲಾ ನಾಯಕರು ಹಾಗೂ ಅಭಿಮಾನಿಗಳು ಶುಭ ಹಾರೈಸಿದ್ದಾರೆ.



ಹಾಸನ ಜಿಲ್ಲೆಯ ಹಳ್ಳಿ ಮೈಸೂರು ಬ್ಲಾಕ್ ಅಧ್ಯಕ್ಷರಾಗಿ ಮಧು ಎಚ್.ಎ. ಅವರನ್ನು ನೇಮಕ ಮಾಡಲಾಗಿದೆ.

ಎಚ್.ಡಿ. ರೇವಣ್ಣ ವಿರುದ್ಧ ಸಂಸದ ಶ್ರೇಯಸ್ ಪಟೇಲ್ ಅಸಮಾಧಾನ

ಉತ್ಸಾಹ ಕುಗ್ಗಿಸುವ ತಂತ್ರ

• **ಹಾಸನ:** ಜಿಲ್ಲೆಯಲ್ಲಿ ಕೆಲ ಪ್ರಭಾವಿ ರಾಜಕಾರಣಿಗಳಿಂದ ಅಧಿಕಾರಗಳ ಕಾರ್ಯ ವೈಖರಿ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಅವರ ಉತ್ಸಾಹ ಕುಗ್ಗಿಸುವ ತಂತ್ರ ನಡೆಯುತ್ತಿದೆ ಎಂದು ಮಾಜಿ ಸಚಿವ ಎಚ್ ಡಿ ರೇವಣ್ಣ ವಿರುದ್ಧ ಸಂಸದ ಶ್ರೇಯಸ್ ಪಟೇಲ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಅಭಿವೃದ್ಧಿ ಪರ ಇರುವ ರಾಜಕಾರಿಣಿಗಳು ಅಭಿವೃದ್ಧಿ ಕೆಲಸಗಳ ಬಗ್ಗೆ ಮಾತನಾಡಬೇಕು, ಅದನ್ನು ಬಿಟ್ಟು ಅಧಿಕಾರಿಗಳನ್ನು ಟಾರ್ಗೆಟ್ ಮಾಡಿ ಅವರನ್ನು ಕುಗ್ಗಿಸುವ ಕೆಲಸ ಮಾಡಬಾರದು, ಸಣ್ಣ ವಿಚಾರ ಇಟ್ಟುಕೊಂಡು ರಾಜ್ಯಮಟ್ಟದಲ್ಲಿ ಜಿಲ್ಲೆಯ ಅಧಿಕಾರಿಗಳ ಮೇಲೆ ದರ್ಪ ಮಾಡುವುದು ಸರಿಯಲ್ಲ. ಹೊಳೆನರಸೀಪುರ ಲಕ್ಷ್ಮಿ ನರಸಿಂಹ ಸ್ವಾಮಿ ಜಾತ್ರಾ ಮಹೋತ್ಸವದ ವಿಚಾರವಾಗಿ ತನ್ನನ್ನು ಕಡೆಗಣಿಸಲಾಗಿದೆ ಎಂದು ಹಕ್ಕು ಚ್ಯುತಿ ಮಂಡಿಸಿರುವುದು ಖಂಡನೀಯ, ಅಧಿಕಾರಿಗಳಿಗೆ ಕೆಲಸ ಮಾಡಲು ಸ್ವತಂತ್ರ ನೀಡಬೇಕು ಇದರ ಬದಲಾಗಿ ಅವರ ಮೇಲೆ ಸವಾರಿ ಮಾಡುವ ಕೆಲಸ ಮಾಡಬಾರದು, ಪಕ್ಷಾತೀತವಾಗಿ ಅಭಿವೃದ್ಧಿ ಕೆಲಸಕ್ಕೆ ಸಹಕಾರ ನೆಡಬೇಕು ಎಂದರು. ಉತ್ಸವದ ದಿನ ರಥಕ್ಕೆ ಬಟ್ಟೆ ಹಾಕುವ ಸಣ್ಣ ವಿಚಾರ ಇಟ್ಟುಕೊಂಡು ಅದನ್ನೇ ದೊಡ್ಡ ವಿಷಯ ಮಾಡಿ ಗಲಭೆ ಸೃಷ್ಟಿ ಮಾಡುವ ಕೆಲಸ ಮಾಡಿರುವ ರೇವಣ್ಣ ಅವರ ನಡೆಯನ್ನು ಜಿಲ್ಲೆಯ ಜನ ಗಮನಿಸುತ್ತಿದ್ದಾರೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದ ಅವರು ಲಕ್ಷ್ಮಿ ನರಸಿಂಹಸ್ವಾಮಿ ಯಾರ ಒಬ್ಬರ ಮನೆ ಸ್ವತ್ತಲ್ಲ, ಎಲ್ಲಾ ಭಕ್ತರ ಸ್ವತ್ತು ದೊಡ್ಡ ಮನೆತನದವರು ಒಳ್ಳೆ ರೀತಿಯ ನಡವಳಿಕೆ ಅಳವಾಡಿಕೊಳ್ಳುವುದು ಒಳಿತು ಎಂದರು.



ಪೆನ್ ಡ್ರೈವ್ ಪ್ರಕರಣದಲ್ಲಿ ರಾಜ್ಯಕೀಯ ಇಲ್ಲ: ಪೆನ್ ಡ್ರೈವ್ ಪ್ರಕರಣದಲ್ಲಿ ರಾಜಕೀಯ ನಡೆದಿದೆ ಎಂಬ ಶಾಸಕ ಸ್ವರೂಪ್ ಪ್ರಕಾಶ್ ಅವರ ಆರೋಪವನ್ನು ತಳ್ಳಿ ಹಾಕಿದ ಎಂಪಿ ಶ್ರೇಯಸ್ ಪಟೇಲ್, ಈ ಪ್ರಕರಣ ಭೇದಿಸಲು ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದ್ದು ಮುಕ್ತ ಮತ್ತು ನ್ಯಾಯಸಮ್ಮತವಾಗಿ ತನಿಖೆ ನಡೆದಿದೆ ಎಂದು ಭಾವಿಸಿದ್ದೇನೆ. ಇದರಲ್ಲಿ ಯಾವ ರಾಜಕಾರಣಿ ಕೂಡ ಮೂಗು ತೋರಿಸಿಲ್ಲ ಎಂದರು. ಚಾರ್ಜ್ ಶೀಟ್ ನಲ್ಲಿ ಯಾರ ಯಾರ ಹೆಸರು ಇದೆ, ಇಲ್ಲ ಎಂಬುದನ್ನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಈ ಪೈಕಿ ಯಾರು ಯಾವ ಪಕ್ಷದವರು ಎಂಬ ಬಗ್ಗೆ ನನಗೆ ಗೊತ್ತಿಲ್ಲ, ಈ ಪ್ರಕರಣದಲ್ಲಿ ಯಾವುದೇ ರಾಜಕೀಯ ಪಾತ್ರ ಇಲ್ಲ ಯಾರ ಕೈವಾಡಮೂ ಇಲ್ಲ ಎಂದು ಸ್ಪಷ್ಟ ಪಡಿಸಿದರು. ಸಿಲಿಂಡರ್ ಕೊರತೆ ಬಗ್ಗೆ ಕೇಂದ್ರ ಗಮನ ಹರಿಸಲಿ. ಹಾಸನ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ವಾಣಿಜ್ಯ ಸಿಲಿಂಡರ್ ಕೊರತೆ ಹೆಚ್ಚಾಗಿದ್ದು ಇದಕ್ಕೆ ಕೇಂದ್ರ ಸರ್ಕಾರದ ನಿರ್ಲಕ್ಷ. ಸಿಲಿಂಡರ್ ಅಭಾವ ತಪ್ಪಿಸಲು ಕೇಂದ್ರ ಸರ್ಕಾರ ಕೂಡಲೇ ಗಮನ ಹರಿಸಬೇಕೆಂದು ಒತ್ತಾಯಿಸಿದರು. ಸಿಲಿಂಡರ್ ಕೊರತೆಯಿಂದ ಬಡ ಬೀದಿ ವ್ಯಾಪಾರಿಗಳು ಸೇರಿದಂತೆ ಹಲವರಿಗೆ ತುಂಬಾ ಸಮಸ್ಯೆ ಆಗುತ್ತಿದೆ, ಯುದ್ಧ ನಡೆಯುತ್ತಿರುವುದು ಗೊತ್ತಿದ್ದರೂ ಎಚ್ಚೆತ್ತುಕೊಳ್ಳದ ಕೇಂದ್ರ ಸಿಲಿಂಡರ್ ಅಭಾವ ಹೆಚ್ಚಾಗಲು ಕಾರಣವಾಗಿದೆ, ಗೃಹ ಬಳಕೆ ಸಿಲಿಂಡರ್ ಗಳು ಸಾಕಷ್ಟು ಲಭ್ಯ ಇವೆ ಆದರೆ ಜನರಲ್ಲಿ ಆತಂಕ ಹೆಚ್ಚಾಗಿದೆ. ಯಾರು ಭಯ ಪಡುವ ಅಗತ್ಯ ಇಲ್ಲ ಗೃಹ ಬಳಕೆ ಸಿಲಿಂಡರ್ ಕೊರತೆ ಇಲ್ಲ ಎಂದು ಮಾಹಿತಿ ನೀಡಿದರು.

ಗಾಂಜಾ, ಡ್ರಗ್ಸ್‌ಗೆ ಕಡಿವಾಣಕ್ಕೆ ಕ್ರಮ

ಜಿಲ್ಲೆಯಲ್ಲಿ ಗಾಂಜಾ, ಡ್ರಗ್ಸ್ ಹಾವಳಿ ಹೆಚ್ಚಾಗಿರುವುದು ನನ್ನ ಗಮನಕ್ಕೆ ಬಂದಿದೆ ಈ ಬಗ್ಗೆ ಈಗಾಗಲೇ ಹಲವು ಸಭೆಗಳನ್ನು ನಡೆಸಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಗಾಂಜಾ ಹಾಗೂ ಡ್ರಗ್ಸ್‌ನಿಂದ ಜಿಲ್ಲೆಯಲ್ಲಿ ಕೊಲೆ, ಸುಲಿಗೆ ಇನ್ನಿತರ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚಾಗಿವೆ ಇವುಗಳ ತಡೆಗೆ ಅಗತ್ಯ ಕ್ರಮ ವಹಿಸಲಾಗುವುದು. ಮಲೆನಾಡು ಭಾಗದಲ್ಲಿ ಅಕ್ರಮ ಮರಳು ಗಣಿಗಾರಿಕೆ ಬಗ್ಗೆಯೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದು ಅದರ ಬಗ್ಗೆಯೂ ಗಮನ ಹರಿಸುವ ಬಗ್ಗೆ ಸಭೆ ನಡೆಸಲಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ ಅಕ್ರಮ ಚಟುವಟಿಕೆಗಳ ನಿಯಂತ್ರಣಕ್ಕೆ ಅಧಿಕಾರಿಗಳು ಹಾಗೂ ನಾವು ಬದ್ಧರಾಗಿದ್ದೇವೆ.

ಲೋಕ್ ಅದಾಲತ್ ಪ್ರಕರಣಗಳ ಇತ್ಯರ್ಥ

• **ಹಾಸನ:** ಜಿಲ್ಲೆಯಲ್ಲಿ ಈ ವರ್ಷ ನಡೆಸಲಾದ ಮೊದಲ ರಾಷ್ಟ್ರೀಯ ಲೋಕ್ ಅದಾಲತ್ ಸಾರ್ವಜನಿಕರ ಉತ್ತಮ ಪ್ರತಿಕ್ರಿಯೆಯೊಂದಿಗೆ ಅತ್ಯಂತ ಯಶಸ್ವಿಯಾಗಿ ಜರುಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಹಾಗೂ ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಲಾಗಿದ್ದು,ಈಪ್ರಕ್ರಿಯೆಯಲ್ಲಿ ಸಾರ್ವಜನಿಕರಿಗೆ ಕಾಲಮಿತಿ ಹಾಗೂ ಹಣದ ಉಳಿತಾ ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಜಿಲ್ಲೆಯ ಒಟ್ಟು 42 ನ್ಯಾಯಾಲಯಗಳಲ್ಲಿ ಬಾಕಿ ಉಳಿದಿದ್ದ ಪ್ರಕರಣಗಳಲ್ಲಿ ಈ ಬಾರಿ ಲೋಕ್ ಅದಾಲತ್‌ಗಾಗಿ ವಿಶೇಷ ಗಮನ ಹರಿಸಲಾಗಿತ್ತು. ಅಂತೆಯೇ ಒಟ್ಟು 6,18,580 ಪ್ರಕರಣಗಳು ಇತ್ಯರ್ಥಗೊಂಡಿದ್ದು, ವಸೂಲಿ ಮಾಡಲಾದ ಮೊತ್ತ 72,44,18,606 ರೂಪಾಯಿಗಳಾಗಿವೆ. ವ್ಯಾಜ್ಯಪೂರ್ವ 6,14,318 ಪ್ರಕರಣಗಳಲ್ಲಿ 5.98 ಲಕ್ಷಕ್ಕೂ ಅಧಿಕ ನೀರಿನ ಮತ್ತು ಮನೆಗಂದಾಯದ ಪ್ರಕರಣಗಳು ಸೇರಿವೆ ಎಂದು ವಿವರಿಸಿದ್ದಾರೆ. ಅದಾಲತ್‌ನಲ್ಲಿ ವಿವಿಧ ರೀತಿಯ ಕಾನೂನು ವ್ಯಾಜ್ಯಗಳನ್ನು ಸೌಹಾರ್ದಯುತವಾಗಿ ಬಗೆಹರಿಸಲಾಗಿದೆ. ಈ ಪೈಕಿ ಸಂಚಾರಿ ನಿಯಮ ಉಲ್ಲಂಘನೆಗೆ ಸಂಬಂಧಿಸಿದ 15,364 ಪ್ರಕರಣಗಳು, ಚೆಕ್ ಬೌನ್ಸ್ 285 ವ್ಯಾಜ್ಯಗಳು, ಮೋಟಾರು ವಾಹನ ಪರಿಹಾರದ 250, ಬ್ಯಾಂಕ್ ರಿಕವರಿಯ 142 (+ 238 (ವ್ಯಾಜ್ಯಪೂರ್ವ) ಕೇಸುಗಳು, ಜನನ ನೋಂದಣಿ 645 ಹಾಗೂ ಇತರ 73 ಕ್ರಿಮಿನಲ್ ಕಂಪೌಂಡಬಲ್, 36 ಭೂಸ್ವಾಧೀನ ಹಾಗೂ 53 ಕೌಟುಂಬಿಕ ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಹೇಳಿದ್ದಾರೆ. ಕೇವಲ ಆಸ್ತಿ ಮತ್ತು ಹಣಕಾಸಿನ ವಿವಾದಗಳಷ್ಟೇ ಅಲ್ಲದೆ, ವೈಮನಸ್ಸಿ ನಿಂದ ದೂರಾಗಿದ್ದ ಎರಡು ದಂಪತಿಗಳನ್ನು ಲೋಕ್ ಅದಾಲತ್ ಮೂಲಕ ಮತ್ತೆ ಒಂದು ಮಾಡಲಾಗಿದೆ. ಅಲ್ಲದೆ, ಐದು ವರ್ಷಗಳಿಗೂ ಹಳೆಯದಾದ 61 ಪ್ರಕರಣಗಳು ಹಾಗೂ ಹಿರಿಯ ನಾಗರಿಕರ 41 ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಬಗೆಹರಿಸುವ ಮೂಲಕ ನ್ಯಾಯದಾನ ಪ್ರಕ್ರಿಯೆಗೆ ವೇಗ ನೀಡಲಾಗಿದೆ ಎಂದು ತಿಳಿಸಿದ್ದಾರೆ.



ಜಿಲ್ಲೆಯ ಎಲ್ಲ ನ್ಯಾಯಾಧೀಶರು, ವಕೀಲರು ಹಾಗೂ ಪಕ್ಷಗಾರರ ಸಹಕಾರದಿಂದ ಈ ಬೃಹತ್ ಮಟ್ಟದ ಪ್ರಕರಣಗಳ ವಿಲೇವಾರಿ ಸಾಧ್ಯವಾಗಿದೆ ಎಂದು ನ್ಯಾಯಾಧೀಶರು ಶ್ಲಾಘಿಸಿದ್ದಾರೆ.

ರಂಜಾನ್ ಭಕ್ತಿಯ ಸಂಕೇತ

• **ಹೊಳೆನರಸೀಪುರ:** ರಂಜಾನ್ ಹಬ್ಬವು ಕೇವಲ ಆಚರಣೆಯಲ್ಲ, ಅದು ಶಾಂತಿ, ತಾಳ್ಮೆ ಮತ್ತು ಭಕ್ತಿಯ ಮಹೋನ್ನತ ಸಂಕೇತವಾಗಿದೆ, ಎಂದು ಹಾಸನ ಲೋಕಸಭಾ ಕ್ಷೇತ್ರದ ಸಂಸದ ಶ್ರೇಯಸ್ ಎಂ. ಪಟೇಲ್ ಅವರು ತಿಳಿಸಿದರು. ಪಟ್ಟಣದ ಅರಕಲಗೂಡು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಆಯೋಜಿಸಲಾಗಿದ್ದ ರಂಜಾನ್ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಮುಸ್ಲಿಂ ರನ್ನು ಉದ್ದೇಶಿಸಿ ಅವರು ಮಾತನಾಡಿದರು. ಭಾವೈಕ್ಯತೆಯ ಶುಭಾಶಯ: ರಾಜ್ಯದ ಸಮಸ್ತ ಮುಸ್ಲಿಂರಿಗೆ ಹಬ್ಬದ ಹಾರ್ದಿಕ ಶುಭಾಶಯ ಕೋರಿದ ಸಂಸದರು, ಕಳೆದ 30 ದಿನಗಳ ಕಾಲ ಕಠಿಣ ಉಪವಾಸ ವ್ರತದ ಮೂಲಕ ಅಲ್ಲಾಹನನ್ನು ಸ್ಮರಿಸಿದ ಭಕ್ತರ ಶ್ರದ್ಧೆಯನ್ನು ಶ್ಲಾಘಿಸಿದರು. ಕರ್ನಾಟಕ ರಾಜ್ಯ ಸರ್ಕಾರವು ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿ ಸುತ್ತಿದೆ. ನಿಮ್ಮ ಕುಟುಂಬದ ಸದಸ್ಯನಾಗಿ ನಾನು ಸದಾ ನಿಮ್ಮ ಏಳಿಗೆಗಾಗಿ ಕೆಲಸ ಮಾಡುತ್ತೇನೆ ಎಂಬ ಭರವಸೆಯನ್ನು ನೀಡಿದರು. ನಾಡು ಹಾಗೂ ಜಗತ್ತಿಗೆ ಒಳ್ಳೆಯದಾಗಲಿ ಎಂದು ಎಲ್ಲರೂ ಪ್ರಾರ್ಥಿಸೋಣ. ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ನೆಲೆಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ, ಎಂದು ಕರೆ ನೀಡಿದರು. ಉಪನ್ಯಾಸಕರಾದ ಪಯಾಜ್ ಮಾತನಾಡಿ, ರಂಜಾನ್ ಹಬ್ಬದ ಮಹತ್ವವನ್ನು ವಿವರಿಸಿದರು. ಇಸ್ಲಾಂ ಧರ್ಮದಲ್ಲಿ ರಂಜಾನ್ ಮಾಸಕ್ಕೆ ಅತ್ಯಂತ ಪವಿತ್ರ ಸ್ಥಾನವಿದೆ. ಹೊಳೆನರಸೀಪುರದ ಸುನ್ನಿ ಜಾಮೀಯಾ ಮಸೀದಿಯಲ್ಲಿ ತಿಂಗ ಳ ಪೂರ್ತಿ ನಡೆಯುವ ಇಫ್ತಾರ್ ಕೂಟವು ಕರ್ನಾಟಕದಲ್ಲೇ ಒಂದು ವಿಶಿಷ್ಟ ಸಂಪ್ರದಾಯವಾಗಿದೆ ಎಂದು ತಿಳಿಸಿದರು.



ಕೊಣನೂರು ಕೆರೆ ಏರಿ ದುರಸ್ತಿ ಕಾಮಗಾರಿ ಪ್ರಾರಂಭ

• **ಕೊಣನೂರು:** ಕುಸಿದು ಸಂಚಾರಕ್ಕೆ ಕಂಟಕವಾಗಿದ್ದ ಕೊಣನೂರು ಕೆರೆ ಏರಿ ಮೇಲಿನ ರಸ್ತೆಯ ಕಾಮಗಾರಿ ಆರಂಭಗೊಂಡು ಭರದಿಂದ ಸಾಗಿದೆ.

ಕಳೆದ ಒಂದೂವರೆ ವರ್ಷದಿಂದ ದೊಡ್ಡ ಕೆರೆಯ ಏರಿಯ ಮೇಲಿನ ರಸ್ತೆ ಮಣ್ಣು ಕುಸಿದು ವಾಹನ ಸವಾರರಿಗೆ ಮತ್ತು ಕೆರೆಯಲ್ಲಿ ನೀರು ಸಂಗ್ರಹಣೆಗೆ ಅಪಾಯ ತಂದೊಡ್ಡಿತ್ತು. ಈ ಕೆರೆಗೆ ಹಾರಂಗಿ, ಹೇಮಾವತಿ ನಾಲೆಗಳ ನೀರು ಸೇರಿವುದರಿಂದ ಹೆಚ್ಚು ಪ್ರಮಾಣದ ನೀರು ಸಂಗ್ರಹವಾಗಿ ಏರಿಗೆ ಒತ್ತಡ ಕಡಿಮೆಮಾಡಲು ಹೆಚ್ಚು ಪ್ರಮಾಣದ ನೀರು ಸಂಗ್ರಹವಾಗದಂತೆ ಕೆರೆಯ ತೂಬನ್ನು ಒಡೆದು ಹಾಕಲಾಗಿತ್ತು. ಕೆರೆ ಏರಿಯನ್ನು ದುರಸ್ಥಿಗೊಳಿಸಿ ರಸ್ತೆ ನಿರ್ಮಾಣಕ್ಕಾಗಿ ಕಾವೇರಿ ನೀರಾವರಿ ನಿಗಮದಿಂದ 1.88 ಕೋಟಿ ರೂ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭವಾಗಿದೆ. ರಸ್ತೆಯು ಕುಸಿದಿದ್ದ ಸ್ಥಳದಲ್ಲಿ ಸುಮಾರು 150 ಮೀ ಉದ್ದಕ್ಕೂ ರಸ್ತೆ ನಿರ್ಮಾಣಕ್ಕಾಗಿ ಹಾಕಿದ್ದ ಮಣ್ಣನ್ನು ತೆರವುಗೊಳಿಸಲಾಗುತ್ತಿದೆ. ಕಾಮಗಾರಿ ಸ್ಥಳದಲ್ಲಿ ಜೇಡಿ ಮಣ್ಣು ಹೇರಳವಾಗಿ ಸಿಗುತ್ತಿರುವುದರಿಂದ ತಮ್ಮ ಜಮೀನಿಗೆ ಬಳಸಿಕೊಳ್ಳಲು ರೈತರು ಸಾಲುಗಟ್ಟಿ ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ಜಮೀನಿಗೆ ಸಾಗಿಸುತ್ತಿದ್ದಾರೆ. ಈ ರಸ್ತೆಯ ಕೊಡಗು ಮತ್ತು ಕೊಣನೂರಿಗೆ ಸಮೀಪದ ರಸ್ತೆಯಾಗಿರುವುದರಿಂದ ಗುಣಮಟ್ಟದಲ್ಲಿ ಕಾಮಗಾರಿಯಾಗಬೇಕು ಎನ್ನುವುದು ಸಾರ್ವಜನಿಕರ ಆಶಯವಾಗಿದೆ.



ಅಂಬೇಡ್ಕರ್ ವಿಶ್ವ ಕಂಡ ಶ್ರೇಷ್ಠ ಸಮಾಜ ಸುಧಾರಕ

• **ಆಲೂರು:** ಡಾ.ಬಿ.ಆರ್.ಅಂಬೇಡ್ಕರ್ ವಿಶ್ವಕಂಡ ಶ್ರೇಷ್ಠ ಸಮಾಜ ಸುಧಾರಕ, ಮಹಾ ಮಾನವತಾವಾದಿ. ಈ ದೇಶದ ಇತಿಹಾಸವನ್ನೇ ಬದಲಾಯಿಸಿದ ಇಂತಹ ಮಹಾತ್ಮರ ಹೆಸರಿನಲ್ಲಿ ಕ್ರಿಕೇಟ್ ಪಂದ್ಯಾವಳಿಯನ್ನ ಆಯೋಜನೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ ಎಂದು ಮಾಜಿ ಸಚಿವ ಎಚ್ ಕೆ ಕುಮಾರಸ್ವಾಮಿ ಹೇಳಿದರು.

ತಾಲೂಕಿನ ಪಾಳ್ಯ ಹೋಬಳಿ ಕಾರ್ಜುವಳ್ಳಿಯ ಗ್ರಾಮದಲ್ಲಿ ಆಯೋಜಿಸಿದ್ದ ಡಾ. ಬಿ.ಆರ್ ಅಂಬೇಡ್ಕರ್ ಅವರ ವಿಶ್ವರತ್ನ ಕ್ರಿಕೇಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಭಾರತದ ಸಾಮಾಜಿಕ ಸಮಾನತೆಯ ಹರಿಕಾರ. ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಗಾದ ದೀನ ದಲಿತರ ಏಳಿಗೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಅವರ ಆದರ್ಶಗಳು ಎಲ್ಲ ವರ್ಗದ ಜನರಿಗೂ ಮಾದರಿಯಾಗಿವೆ. ಯುವಕರು ಹೆಚ್ಚೆಚ್ಚು ಕ್ರೀಡೆಗಳಲ್ಲಿ ತೊಡಗಿಕೊಂಡಾಗ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗಳಿಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ತಾಲೂಕು ಪಂಚಾಯಿತಿ ಮಾಜಿ ಸದಸ್ಯ ನಟರಾಜ್ ನಾಕಲಗೂಡು ಮಾತನಾಡಿ, ಮಾಜಿ ಸಚಿವರು ಹಾಗೂ ಆಲೂರು ಸಕಲೇಶಪುರ ಕ್ಷೇತ್ರದ ಮಾಜಿ ಶಾಸಕರಾದ ಹೆಚ್. ಕೆ ಕುಮಾರಸ್ವಾಮಿ ರವರು ತಮ್ಮ ಅಧಿಕಾರಾವಧಿಯಲ್ಲಿ ಈ ಭಾಗದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಜೊತೆಗೆ 15 ವರ್ಷಗಳ ಕಾಲ ಶಾಸಕರಾಗಿದ್ದ ಇವರೂ ಸಾರ್ವಜನಿಕರಿಗೆ ನೀಡಿದ ಸೇವೆಯನ್ನು ಕುರಿತು ಉಲ್ಲೇಖಿಸಿದರು.

ಕಣತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಮಾತನಾಡಿ, ಕ್ರೀಡಾ ಕೂಟಗಳ ಮಹತ್ವ ಅರಿತು ಕ್ರೀಡೆಗಳನ್ನು ಅಬಿವೃದ್ಧಿಪಡಿಸುವ ಮನೋಭಾವ ಬೆಳೆಸಿಕೊಂಡು ಇಂದಿನ ಯುವಜನತೆಯು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬೆಳಗೋಡು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಂಚಲ ಕುಮಾರಸ್ವಾಮಿ, ಕಣತೂರು ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ರವಿ ಕಾರ್ಜುವಳ್ಳಿ, ತಾಳೂರು ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯ ರವಿ ನಿಲುವಾಗಿಲು, ಕಾರ್ಜುವಳ್ಳಿ ಗ್ರಾಮಸ್ಥರಾದ ಸೋಮಶೇಖರ , ಗುರಪ್ಪ, ಲಿಂಗರಾಜು, ಮುರುಳಿ, ಸಿದ್ದಲಿಂಗ ಸೇರಿದಂತೆ ಮುಂತಾದವರು ಹಾಜರಿದ್ದರು.



ಇಂದು ಕನ್ನಡ ಆವೃತ್ತಿ ಬಿಡುಗಡೆ

• **ಹಾಸನ:** ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ ಸಂಸ್ಥೆ ವತಿಯಿಂದ ಇಂದು ಯೋಗ ಸತ್ಸಂಗ ಕ್ರಿಯಾ ಯೋಗ ಪಾಠಗಳ್ನು ಕನ್ನಡದ ಆವೃತ್ತಿಯ ಬಿಡುಗಡೆಯ ವಿಶೇಷ ಕಾರ್ಯಕ್ರಮವು ನಗರದ ಶಂಕರಿಪುರಂನಲ್ಲಿರುವ ಯೋಗದಾ ಸತ್ಸಂಗ ಧ್ಯಾನ ಕೇಂದ್ರದಲ್ಲಿ ಮಾ.22, ಭಾನುವಾರ ಸಂಜೆ 6 ಗಂಟೆಗೆ ನಡೆಯಲಿದೆ. ಪರಮಹಂಸ ಯೋಗಾನಂದರು 1917ರಲ್ಲಿ ಸ್ಥಾಪಿಸಿದ ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ ಸಂಸ್ಥೆಯು (ಜ) ಇಂಗ್ಲಿಷ್, ಹಿಂದಿ, ತೆಲುಗು ಮತ್ತು ತಮಿಳಿನಲ್ಲಿ ಈಗಾಗಲೇ ಲಭ್ಯವಿರುವ ಇಂದು ಯೋಗ ಸತ್ಸಂಗ ಕ್ರಿಯಾ ಯೋಗ ಪಾಠಗಳ್ನು ಕನ್ನಡದ ವಿಶೇಷ ಆವೃತ್ತಿಯ ಬಿಡುಗಡೆ ಕಾರ್ಯ ಕ್ರಮವನ್ನು ಆಯೋಜನೆ ಮಾಡಲಾಗಿದೆ. ಈ ಪಾಠಗಳು, ಕ್ರಿಯಾ ಯೋಗ ಧ್ಯಾನದ ವೈಜ್ಞಾನಿಕ ವಿಧಾನಗಳನ್ನು ಹಂತ ಹಂತವಾಗಿ ಕಲಿಯಲು ಸಹಾಯ ಮಾಡುತ್ತವೆ. ಸಂಸ್ಥೆಯ ಉಪಾಧ್ಯಕ್ಷರಾದ ಸ್ವಾಮಿ ಸ್ಮರಣಾನಂದ ಗಿರಿ, ಸ್ವಾಮಿ ಶ್ರೇಯಾನಂದ ಗಿರಿ ಅವರು ಪರಮಹಂಸ ಯೋಗಾನಂದರ ಉಪದೇಶಗಳು, ಧ್ಯಾನದ ಪ್ರಯೋಜನಗಳ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮದ ಮೂಲಭೂತ ಧ್ಯಾನ ತಂತ್ರಗಳ ಬೋಧನೆ ಇರುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ತನಿಖಾಧಿಕಾರಿಯಿಂದ ವೃದ್ಧನ ಮೇಲೆ ಹಲ್ಲೆ

• **ಸಕಲೇಶಪುರ:** ಬಸ್ ಟಿಕೆಟ್ ವಿಚಾರವಾಗಿ ಸಾರಿಗೆ ಇಲಾಖೆಯ ತನಿಖಾಧಿಕಾರಿಯೊಬ್ಬರು ವೃದ್ಧರೊಬ್ಬರ ಮೇಲೆ ಹಲ್ಲೆ ನಡೆಸಿರುವ ಘಟನೆ ಸಕಲೇಶಪುರದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಸಕಲೇಶಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆಯ ಹಿನ್ನೆಲೆ: ಬೆಳಗೋಡು ಹೋಬಳಿಯ ಉದೇವಾರ ಗ್ರಾಮದ ನಿವಾಸಿ ಹಾಗೂ ಕೋಳಿ ಅಂಗಡಿ ಮಾಲೀಕರಾದ ಅಬ್ದುಲ್ ಹಫೀಜ್ (76) ಎಂಬುವವರು ಗುರುವಾರ ಬೆಳಗ್ಗೆ 10:30ರ ಸುಮಾರಿಗೆ ಉದೇವಾರದಿಂದ ಸಕಲೇಶಪುರಕ್ಕೆ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಈ ವೇಳೆ ಅವರ ಜೊತೆಯಲ್ಲಿದ್ದ ಶಿವಣ್ಣ ಎಂಬುವವರು ಇಬ್ಬರಿಗೂ ಸೇರಿಸಿ ಟಿಕೆಟ್ ಪಡೆದುಕೊಂಡಿದ್ದರು.ಸಕಲೇಶಪುರಕ್ಕೆ ತಲುಪುವ ಮೊದಲೇ ಶಿವಣ್ಣ ಅವರು ಸೇತುವೆ ಸ್ಟಾಪ್‌ನಲ್ಲಿ ಇಳಿದುಕೊಂಡಿದ್ದು, ಇಬ್ಬರ ಟಿಕೆಟ್ ಕೂಡ ಅವರ ಬಳಿಯೇ ಉಳಿದುಕೊಂಡಿತ್ತು.ಅಬ್ದುಲ್ ಹಫೀಜ್ ಅವರು ಹಳೆ ಬಸ್ ನಿಲ್ದಾಣದ ಬಳಿ ಇಳಿಯುವಾಗ, ಅಲ್ಲಿ ಕರ್ತವ್ಯದಲ್ಲಿದ್ದ ಟಿಕೆಟ್ ಚೆಕ್ಕಿಂಗ್ ಇನ್ಸ್‌ಪೆಕ್ಟರ್ ಸದಾಶಿವ ಎಂಬುವವರು ಟಿಕೆಟ್ ಕೇಳಿದ್ದಾರೆ. ಟಿಕೆಟ್ ನನ್ನ ಜೊತೆ ಬಂದಿದ್ದವರ ಬಳಿ ಇದೆ ಎಂದು ಅಬ್ದುಲ್ ಹಫೀಜ್ ವಿವರಿಸಲು ಪ್ರಯತ್ನಿಸಿದರೂ, ಸದಾಶಿವ ಅವರು ಅದನ್ನು ಕೇಳಿಸಿಕೊಳ್ಳದೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅಲ್ಲದೆ, ವೃದ್ಧರೆನ್ನದೆ ಅವರ ಮೇಲೆ ಕೈನಿಂದ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.ಗಾಯಗೊಂಡ ಅಬ್ದುಲ್ ಹಫೀಜ್ ಅವರು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಾಗಿದ್ದರು, ಅಲ್ಲಿ ಅವರು ನೀಡಿದ ಹೇಳಿಕೆಯ ಆಧಾರದ ಮೇಲೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಈ ಪ್ರಕರಣವು ಅಸಂಜ್ಞೇಯ ಸ್ವರೂಪದ್ದಾಗಿರುವುದರಿಂದ, ಪೊಲೀಸರು ಈ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ಮಾನ್ಯ ನ್ಯಾಯಾಲಯದ ಅನುಮತಿ ಪಡೆದ ನಂತರ, ಈಗ ಸಕಲೇಶಪುರ ಪೊಲೀಸ್ ಠಾಣೆಯಲ್ಲಿ ಜಿ.ಎಸ್.ಸಿ ನಂ 117/2026 ರ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.



ತುಮಕೂರು



ಮಳಿಗೆ ಉದ್ಘಾಟನೆ ಮಧುಗಿರಿ ಪಟ್ಟಣದಲ್ಲಿ ಮಾರುತಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ನೂತನವಾಗಿ ಪ್ರಾರಂಭವಾಗಿರುವ ಕೃಷಿ ಪರಿಕರಗಳ ಮಾರಾಟ ಮಳಿಗೆಯನ್ನು ಮಾಜಿ ಸಚಿವ ಹಾಗೂ ಶಾಸಕ ಕೆ.ಎನ್.ರಾಜಣ್ಣ ಉದ್ಘಾಟಿಸಿದರು.

ವೀರಶೈವ ಸಿದ್ಧಾಂತ ಪ್ರಚಾರ: ಸ್ವಾಮೀಜಿ | ೨
ಹಳೆ ಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ | ೩
ಬಹುವರ್ಷದ ಕನಸು ನನಸು: ಸಚಿವ | ೪

ಕಿರುಸುದ್ದಿ

ಅಡುಗೆ ಅನಿಲ ಸಮಸ್ಯೆ ಕಂಡುಬಂದಲ್ಲಿ ಸಹಾಯವಾಣಿಗೆ ಮನವಿ

ತುಮಕೂರು: ಗೃಹ ಬಳಕೆ ಅಡುಗೆ ಅನಿಲ ಕುರಿತು ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳಿಗೆ ಸಾರ್ವಜನಿಕರು ಕಿವಿ ಕೊಡಬಾರದೆಂದು ತಿಳುವಳಿಕೆಗಾಗಿ ದೇಶಾದ್ಯಂತ ಉತ್ಪಾದನೆ ಮತ್ತು ಬಾಟಲಿಂಗ್ ಎರಡೂ ಹೆಚ್ಚಿರುವುದರಿಂದ ದೇಶಿಯ್ಯಖ/ಖಜಿಂಂಭಿಭ ಇಚ್ಚು ಕೊರತೆಯಿಲ್ಲ. ಗೃಹಬಳಕೆ ಆಡುಗೆ ಅನಿಲ(ಸಿಲಿಂಡರ್‌ಗಳು) ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಲಭ್ಯವಿರುವುದರಿಂದ ಗ್ರಾಹಕರು ಗಾಬರಿಗೊಳ್ಳಬಾರದೆಂದು ಹಾಗೂ ಹೆಚ್ಚುವರಿಯಾಗಿ ದಾಸ್ತಾನು ಮಾಡಿಕೊಳ್ಳಬಾರದೆಂದು ತುಮಕೂರು ತಾಲೂಕು ತಹಸೀಲ್ದಾರ್ ಮನವಿ ಮಾಡಿದ್ದಾರೆ. ಹೆಚ್ಚಿನ ಗ್ರಾಹಕರು, ಮುಂಚಿತವಾಗಿ ಬುಕ್ಕಿಂಗ್ ಮಾಡುತ್ತಿರುವುದರಿಂದ ಮಾಡುವ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಚಾರ ದಟ್ಟಣೆ ಉಂಟಾಗಿ ಸದರಿ ಸಿಸ್ಟಂಗಳು ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಪರ್ಯಾಯವಾಗಿ ಹಾಗೂ ತೈಲ ಕಂಪನಿಗಳು ಗ್ರಾಹಕರಿಗೆ Missed Call, Whatsapp, Mobile Application, OMC Portal ಹಾಗೂ ಪಾವತಿ ಅಪ್ಲಿಕೇಶನ್ ನಂತಹ 6 ಬುಕ್ಕಿಂಗ್ ವಿಧಾನಗಳನ್ನು ಕಲ್ಪಿಸಿದೆ. ಗ್ರಾಹಕರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಈ ವ್ಯವಸ್ಥೆಯನ್ನು ಬಳಸಲು ಸೂಚಿಸಲಾಗಿದೆ. ಪ್ರತಿ ಗ್ರಾಹಕರಿಗೆ ನಗರ ಪ್ರದೇಶದಲ್ಲಿ 25 ದಿನಗಳಿಗೊಮ್ಮೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 45 ದಿನಗಳಿಗೊಮ್ಮೆ ಸರ್ಕಾರದ ನಿಯಮದಂತೆ ಇಂಟರ್-ಬುಕ್ಕಿಂಗ್ ಅವಧಿಯನ್ನು ನಿಗಧಿಪಡಿಸಲಾಗಿದೆ. ತಾಲೂಕಿನಲ್ಲಿ ಎಲ್‌ಪಿಜಿ ಅನಿಲಗಳ ಕೊರತೆ ಇಲ್ಲದಿರುವುದರಿಂದ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಸಾಮಾಜಿಕ ಜಾಲತಾಣಗಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿ ಕೊಡಬಾರದು. ಒಂದು ವೇಳೆ ಸಮಸ್ಯೆ ಕಂಡು ಬಂದಲ್ಲಿ ಸಹಾಯವಾಣಿ ಸಂಖ್ಯೆ 8553378925ಕ್ಕೆ ದೂರವಾಣಿ ಮೂಲಕ ಕರೆ ಮಾಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಾ.23ರಂದು ಜಿಲ್ಲೆಗೆ ನ್ಯಾ.ಗುರುರಾಜನ್ ಭೇಟಿ

ತುಮಕೂರು: ಕರ್ನಾಟಕ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾ.ಆರ್. ಗುರುರಾಜನ್ ಅವರು ಮಾರ್ಚ್ 23ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕೇಂದ್ರ ಗ್ರಂಥಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹಿರಿಯ ನಾಗರಿಕರ ಅನುಕೂಲಕ್ಕಾಗಿ ಆಯೋಜಿಸಿರುವ ಕಾನೂನು ಸಾಕ್ಷರತಾ ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸುವರು. ನಂತರ ತುಮಕೂರು ಜಿಲ್ಲಾ ಕೇಂದ್ರದ ಒಂದು ಸರ್ಕಾರಿ ಆಸ್ಪತ್ರೆ ಮತ್ತು ತಾಲೂಕು/ಹೋಬಳಿ ಮಟ್ಟದ ಒಂದು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಹಿರಿಯ ನಾಗರಿಕರಿಗೆ ಇರುವ ಸೌಲಭ್ಯಗಳನ್ನು ವೀಕ್ಷಿಸುವರು ಎಂದು ಪ್ರಕಟಣೆ ತಿಳಿಸಿದೆ.

ಮಾ.23ರಂದು ದೇವರ ದಾಸಿಮಯ್ಯ ಜಯಂತಿ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತುಮಕೂರು ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹಾಗೂ ತುಮಕೂರು ಜಿಲ್ಲಾ ದೇವಾಂಗ ಸಂಘ(ರಿ), ತುಮಕೂರು ಜಿಲ್ಲಾ ಕುರುಹಿನ ಶೆಟ್ಟಿ ಸಂಘ(ರಿ), ತುಮಕೂರು ಜಿಲ್ಲಾ ಪದ್ಮಶಾಲಿ ಸಂಘ(ರಿ)ಹಾಗೂ ತುಮಕೂರು ಜಿಲ್ಲಾ ತೊಗಟವೀರ ಸಂಘ(ರಿ) ತುಮಕೂರು ವತಿಯಿಂದ ಮಾ.23ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ಕನ್ನಡ ಭವನ, ಅಮಾನಿಕೆರೆ ರಸ್ತೆ, ತುಮಕೂರು ಇಲ್ಲಿ ಏರ್ಪಡಿಸಲಾಗಿದೆ. ಉದ್ಘಾಟನೆಯನ್ನು ಗೃಹ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ ಪರಮೇಶ್ವರ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವರು, ಭಾರತ ಸರ್ಕಾರ ಹಾಗೂ ತುಮಕೂರು ಲೋಕಸಭಾ ಕ್ಷೇತ್ರದ ಸಂಸದ ವಿ.ಸೋಮಣ್ಣ ಅವರು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ತುಮಕೂರು ನಗರ ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಬಿ.ಜ್ಯೋತಿಗಣೇಶ್ ವಹಿಸಲಿದ್ದಾರೆ.

ಸರ್ಕಾರಿ ಉಪಕರಣ-ತರಬೇತಿ ಕೇಂದ್ರದೊಂದಿಗೆ ಸಾಹೇ ಒಡಂಬಡಿಕೆ

ಉದ್ಯೋಗಾವಕಾಶಕ್ಕೆ ಒತ್ತು

ತುಮಕೂರು: ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ಸುಧಾರಿತ ಕೌಶಲ್ಯ ತರಬೇತಿಗಾಗಿ ಜಂಟಿ ಕಾರ್ಯಕ್ರಮಗಳ ಮೂಲಕ ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸುವುದು, ಸಂಶೋಧನೆ ಸಹಭಾಗಿತ್ವ ಮತ್ತು ನಾವೀನ್ಯತೆ ಸೇರಿದಂತೆ ಇನ್ನಷ್ಟು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ತುಮಕೂರಿನ ಸಾಹೇ (ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್) ವಿಶ್ವವಿದ್ಯಾಲಯದೊಂದಿಗೆ ಬೆಂಗಳೂರಿನ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರ ಪರಸ್ಪರ ಜಂಟಿ ಒಡಂಬಡಿಕೆ ಮಾಡಿಕೊಂಡಿವೆ.

ನಗರದ ಸಾಹೇ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಗುರುವಾರ ನಡೆದ ಮಾತುಕತೆಯಲ್ಲಿ ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ ಮತ್ತು ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರದ ಪ್ರತಿನಿಧಿಗಳ ಜಂಟಿ ಸಭೆಯಲ್ಲಿ ಇನ್ನು ಮುಂದೆ ಎರಡು ಸಂಸ್ಥೆಗಳು ಶೈಕ್ಷಣಿಕ ಕ್ಷೇತ್ರದ ಸಹಕಾರ ಸಂಬಂಧಗಳನ್ನು ಔಪಚಾರಿಕಗೊಳಿಸಲು ಮತ್ತು ವೇಗಗೊಳಿಸಿಕೊಳ್ಳುವ ಸಂಬಂಧ ಚರ್ಚಿಸಿದವು. ಎರಡು ವಿವಿಗಳ ನಡುವಿನ ಸಹಕಾರವನ್ನು ಪ್ರೋತ್ಸಾಹಿಸುವುದು ಮತ್ತು ಬೆಂಬಲಿಸುವುದು ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಎರಡೂ ಸಂಸ್ಥೆ ಗಳಿಂದ ಶೈಕ್ಷಣಿಕವಾಗಿ ಪ್ರಯೋಜನಕಾರಿ ಯೋಜನೆಗಳನ್ನು ಜಾರಿಗೆ ತರಲು ಬದ್ಧವಾಗಿರಲು ತಿರ್ಮಾನಿಸಲಾಯಿತು.

ಒಡಂಬಡಿಕೆ ಪತ್ರಕ್ಕೆ ಸಹಿ: ಸಾಹೇ ಉಪಕುಲಪತಿ ಡಾ.ಕೆ.ಬಿ.ಲಿಂಗೇಗೌಡ ಮತ್ತು ರಾಜ್ಯ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಮಹೇಶ್ ರೆಡ್ಡಿ ಅವರು ಪರಸ್ಪರ ಒಡಂಬಡಿಕೆ ಪತ್ರಗಳಿಗೆ ಸಹಿ ಮಾಡಿ, ವಿನಿಮಯ ಮಾಡಿಕೊಂಡರು.

ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ಸುಧಾರಿತ ಕೌಶಲ್ಯ ತರಬೇತಿಗಾಗಿ ಜಂಟಿ ಕಾರ್ಯಕ್ರಮಗಳ ಮೂಲಕ ಕೌಶಲ್ಯ ಅಭಿವೃದ್ಧಿ ಯನ್ನು ಹೆಚ್ಚಿಸುವುದು. ಸಂಶೋಧನೆ ಸಹಭಾಗಿತ್ವ ಮತ್ತು ನಾವೀನ್ಯತೆ.



ಕೌಶಲ ವಿನಿಮಯ

ಉದ್ಯಮದ ಅಗತ್ಯತೆಗಳೊಂದಿಗೆ ಶೈಕ್ಷಣಿಕ ಕಲಿಕೆಯನ್ನು ಸಂಪರ್ಕ ಕಲ್ಪಿಸುವುದು, ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಮಾಡಲು ಅವಕಾಶಗಳು ಮತ್ತು ಪ್ರಮಾಣೀಕರಣ ಕೋರ್ಸ್‌ಗಳು, ಕೈಗಾರಿಕಾ ಭೇಟಿ, ಎರಡು ಸಂಸ್ಥೆಗಳ ಅಧ್ಯಾಪಕರ ನಡುವೆ ಕೌಶಲದ ವಿನಿಮಯ. ತಂತ್ರಜ್ಞಾನ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ಉದ್ಯೋಗಾವಕಾಶವನ್ನು ಬಲಪಡಿಸುವುದು.

ಈ ಒಡಂಬಡಿಕೆಯ ಪ್ರಮುಖ ಉದ್ದೇಶ ಎಂದು ರಾಜ್ಯ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಮಹೇಶ್ ರೆಡ್ಡಿ ತಿಳಿಸಿದರು.

ಸಾಹೇ ಉಪಕುಲಪತಿ ಡಾ.ಕೆ.ಬಿ.ಲಿಂಗೇಗೌಡ ಅವರು ಮಾತನಾಡಿ, ಎರಡೂ ಸಂಸ್ಥೆಗಳು ಪರಸ್ಪರ ಸಂಪರ್ಕವನ್ನು ಕಲ್ಪಿಸಿಕೊಂಡಿರುವುದರಿಂದ ಜಂಟಿ ಸೆಮಿನಾರ್‌ಗಳು, ಸಮ್ಮೇಳನಗಳು, ಕಾರ್ಯಾಗಾರಗಳು ಆಯೋಜಿಸಿ, ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ವರ್ಚುವಲ್ ಉಪನ್ಯಾಸಗಳನ್ನು ಮತ್ತು ವರ್ಚುವಲ್ ಇಂಟರ್ನ್‌ಶಿಪ್‌ಗಳು, ಪ್ರಾಜೆಕ್ಟ್ ಪ್ರದರ್ಶನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುದು ಎಂದು ವಿವರಿಸಿದರು.

ಸಾಹೇ ವಿವಿ ಕುಲಸಚಿವ ಡಾ.ಅಶೋಕ್ ಮೆಹತಾ, ಪರೀಕ್ಷಾಂಗ ಕುಲಸಚಿವರಾದ ಡಾ.ಗುರುಶಂಕರ್, ಶ್ರೀ ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಮಹಾಂತೇಶ್ ಎಂ ನಡಕಟ್ಟಿ, ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕರಾದ ಕೋಮಲಾ ಸಾಹೇ ವಿವಿ ಐಕ್ಯುಎಸಿ ಸಂಯೋಜಕ ಡಾ.ಚಿದಾನಂದಮೂರ್ತಿ ಎಂ.ವಿ. ಸಂಶೋಧನಾ ವಿಭಾಗದ ಸಂಯೋಜಕ ಡಾ.ಸುನಿಲ್.ಕೆ ವೈದ್ಯಕೀಯಕಾಲೇಜಿನ ಪ್ರಾಂಶುಪಾಲ ಡಾ.ಸಾಣಿಕೊಪ್ಪ, ಡೆಂಟಲ್‌ಕಾಲೇಜಿನ ಪ್ರಾಂಶುಪಾಲ ಡಾ.ಪ್ರವೀಣ್ ಕುಡುವಾ, ಸೇರಿದಂತೆ ವಿಭಾಗಗಳ ಪ್ರಾಧ್ಯಾಪಕರು ಈ ಜಂಟಿ ಒಪ್ಪಂದ ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಾಮೂಹಿಕ ಉಪನಯನ, ಬ್ರಹ್ಮೋಪದೇಶ ಕಾರ್ಯಕ್ರಮ

ತುಮಕೂರು: ಜಿಲ್ಲಾ ವೈಷ್ಣವ ಸಮುದಾಯ ಧಾರ್ಮಿಕ ಸಂಸ್ಥೆ ಹಾಗೂ ಆಂಡಾಳ್ ಗೋಷ್ಠಿ ಸಹಯೋಗದಲ್ಲಿ ನಗರದಮಾರುತಿ ನಗರದ ಸಂಸ್ಥೆಯ ಸಭಾಂಗಣದಲ್ಲಿ ಏಪ್ರಿಲ್ 22 ಮತ್ತು 23ರಂದುಶ್ರೀರಾಮಾನುಜಾಚಾರ್ಯರತಿರುನಕ್ಷತ್ರ ಹಾಗೂ ಸಾಮೂಹಿಕ ಉಪನಯನ ಬ್ರಹ್ಮೋಪದೇಶ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೇಲುಕೋಟೆ ಯತಿರಾಜಮಠದ ಪೀಠಾಧಿಪತಿಗಳಾದ ಯದುಗಿರಿಯತಿರಾಜ ನಾರಾಯಣ ರಾಮಾನುಜಜೀಯರ್ ಅವರ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ. ಏ.22 ರಂದು ಮುಂಜಾನೆ 8 ಗಂಟೆಗೆ ಭಗವದ್ ರಾಮಾನುಜಾಚಾರ್ಯರ ತಿರುನಕ್ಷತ್ರದ ಅಂಗವಾಗಿ ಸುಪ್ರಭಾತ ಸೇವೆ, ವೇದಪಾರಾಯಣ, ಆಂಡಾಳ್ ಗೋಷ್ಠಿಯವರಿಂದ ತಮಿಳು ದಿವ್ಯ ಪ್ರಬಂಧ ಪಾರಾಯಣ, ತಿರುಮಜ್ಜನ, ಅಷ್ಟಾವಧಾನ, ಶಾತ್ತುಮುರೈ ಕಾರ್ಯಕ್ರಮಗಳು ವೇದ ವಿದ್ವಾನ್ ರವಿವರ್ಮನ್ ನೇತೃತ್ವದಲ್ಲಿ ನೆರವೇರಲಿವೆ ಎಂದುಜಿಲ್ಲಾ ವೈಷ್ಣವ ಸಮುದಾಯಧಾರ್ಮಿಕ ಸಂಸ್ಥೆ ಅಧ್ಯಕ್ಷಟಿ. ಎಸ್. ಮೋಹನ್‌ಕುಮಾರ್ ತಿಳಿಸಿದ್ದಾರೆ.

23ರಂದು ಚೌಲೋಪನಯನ, ಬ್ರಹ್ಮೋಪದೇಶ ಉಪನಯನ, ಮಂಗಳಾಶಾಸನ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಶಾಮಸುಂದರ ಆಚಾರ್ಯರು ಹಾಗೂ ಸಹ ಋತ್ವಿಕರಿಂದ ನೆರವೇರಲಿವೆಎಂದುಹೇಳಿದ್ದಾರೆ. ಸಂಸ್ಥೆಯಪದಾಧಿಕಾರಿಗಳು ಶನಿವಾರಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಶಾಸಕ ಜಿ.ಬಿ. ಜ್ಯೋತಿಗಣೇಶ್, ಮಾಜಿ ಶಾಸಕ ಎಚ್.ನಿಂಗಪ್ಪ ಸೇರಿದಂತೆ ವಿವಿಧ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿಲಿದ್ದಾರೆ.

ಜಿಲ್ಲಾ ವೈಷ್ಣವ ಸಮುದಾಯ ಧಾರ್ಮಿಕ ಸಂಸ್ಥೆ ಉಪಾಧ್ಯಕ್ಷ ಕೆ.ಎನ್.ನವರತ್ನ ಕುಮಾರ್, ಕಾರ್ಯದರ್ಶಿ ಯೋಗಾನಂದ, ಸಂಘಟನಾ ಕಾರ್ಯದರ್ಶಿ ಕೆ.ಎಸ್.ರವಿಕುಮಾರ್, ಖಜಾಂಚಿಗಳಾದ ಡಿ.ಎಸ್. ಭಕ್ತವತ್ಸಲ, ಎಸ್.ಜ್ಯೋತಿಆಚಾರ್ಯ, ನಿರ್ದೇಶಕರಾದ ಸತ್ಯನಾರಾಯಣ, ಎಚ್.ಕೆ.ಪುಟ್ಟರಾಜು, ಸೀನಪ್ಪ ಮಲ್ಲಪ್ಪನಹಳ್ಳಿ, ಕೆ.ವೆಂಕಟೇಶ್, ಡಿ.ಎಸ್. ಜನಾರ್ದನ್, ನಳಿನಾಎಸ್, ಜಿ.ವಿ.ಕೇಶವಮೂರ್ತಿ, ಎಚ್.ಎನ್.ಕುಮಾರ್, ಎನ್.ರವಿಕುಮಾರ್, ಆಂಡಾಳ್ ಗೋಷ್ಠಿಯ ಅಧ್ಯಕ್ಷೆಎಸ್.ಜ್ಯೋತಿ ಆಚಾರ್ಯ, ಕಾರ್ಯದರ್ಶಿ ವೈದೇಹಿ ಕೃಷ್ಣಮೂರ್ತಿ ಮೊದಲಾದವರು ಹಾಜರಿದ್ದರು.



ಹೃದ್ರೋಗ ತಪಾಸಣಾ ಶಿಬಿರ

ಮಧುಗಿರಿ: ಶ್ರೀ ಸಿದ್ದಗಂಗಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ತುಮಕೂರು ಇವರ ನಿರ್ವಹಣೆಯಲ್ಲಿ ಸ್ಥಾಪಿಸಿರುವ ಶ್ರೀ ಸಿದ್ದಗಂಗಾ ಡಯಾಲಿಸಿಸ್ ಸೆಂಟರ್ ಮತ್ತು ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮಧುಗಿರಿ ಶಾಖೆ ಆರಂಭವಾಗಿ ಒಂದು ವರ್ಷ ಪೂರೈಸಿದ್ದು, ಈ ಹಿನ್ನೆಲೆಯಲ್ಲಿ ಅನೇಕ ನೂತನ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಚಿಂತನೆ ನಡೆಸಲಾಗಿದೆ ಎಂದು ಪಾವಗಡದ ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ಜಪಾನಂದ ಮಹಾರಾಜ್ ತಿಳಿಸಿದ್ದಾರೆ. ಒಂದು ವರ್ಷದ ಹಿನ್ನೆಲೆಯಲ್ಲಿ ಹೃದ್ರೋಗತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುವುದು.

ಇದುವರೆಗೂ ಸರಿಸುಮಾರು 1,250 ಡಯಾಲಿಸಿಸ್ ಪ್ರಕ್ರಿಯೆಯನ್ನು ನಡೆಸಲಾಗಿದೆ. ಇದರೊಂದಿಗೆ ಶಾರದಾದೇವಿ ಕಣ್ಣಿನ ಆಸ್ಪತ್ರೆ ವತಿಯಿಂದ 1500ಕ್ಕೂ ಮುಗಿಲಾಗಿ ಜನರಿಗೆ ನೇತ್ರ ಪರೀಕ್ಷೆ ಮತ್ತು ಚಿಕಿತ್ಸೆಯನ್ನು ನೀಡಲಾಗಿದೆ. ಸುಮಾರು 120ಕ್ಕೂ ಹೆಚ್ಚು ಮಂದಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಮಧುಗಿರಿ ಎಂತಹ ಪ್ರದೇಶದಲ್ಲಿ ಈ ರೀತಿ ಸೇವಾ ಯಜ್ಞ ಮಾಡುತ್ತಿರುವುದು ನಿಜಕೂಟಲಾಗನೀಯವಾದದ್ದು ಎಂದರು.

ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮ ಮಾ.23 ಸೋಮವಾರ ಬೆಳಗ್ಗೆ 11 ಗಂಟೆಗೆ ಪಟ್ಟಣದ ಆಸ್ಪತ್ರೆ ಬೀದಿಯಲ್ಲಿರುವ ಸಿದ್ದಗಂಗಾ ಡಯಾಲಿಸಿಸ್ ಸೆಂಟರ್ ಆವರಣದಲ್ಲಿ ಕಾರ್ಯಕ್ರಮ ನಡೆಸಲಾಗುವುದು. ದಿವ್ಯಸಾನಿಧ್ಯವನ್ನು ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಸಿದ್ದಗಂಗಾ ಮಠ ವಹಿಸುವರು ಅಧ್ಯಕ್ಷತೆಯನ್ನು ಸ್ವಾಮಿ ಜಪಾನಂದ ಮಹಾರಾಜ್ ವಹಿಸುವರು. ಉದ್ಘಾಟನೆಯನ್ನು ಮಾಜಿಸಚಿವರಶಾಸಕರಾದ



ಕೆ.ಎನ್.ರಾಜಣ್ಣ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಪವಿಭಾಗಾಧಿಕಾರಿ ಗೋಟೂರುಶಿವಪ್ಪ ಡಿವೈಎಸ್‌ಪಿಮಂಜುನಾಥ್ ಸಿದ್ದಗಂಗಾ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ.ಸ್ವಾಮಿ ನಿರ್ದೇಶಕ ಡಾ.ಪರಮೇಶ್, ಪ್ರಾಂಶುಪಾಲ ಡಾ. ಶಾಲಿನಿ, ಡಾ.ಜಿ.ಕೆ. ಜಯರಾಮ್, ಶ್ರೀ ಸಿದ್ದಗಂಗಾ ಸಂಶೋಧನಾ ಸಂಸ್ಥೆ ಮತ್ತು ಶಾರದಾದೇವಿ ಕಣ್ಣಿನ ಆಸ್ಪತ್ರೆಯ ವೈದ್ಯಾಧಿಕಾರಿಗಳು ಆಡಳಿತ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿ ದ್ದಾರೆ. ಎಚ್.ಸಿ. ಬಸವರಾಜು ವಕೀಲರು ಮತ್ತು ಎಚ್.ಸಿ. ವೀರಭದ್ರಪ್ಪ ಇವರ ಸ್ಮರಣಾರ್ಥ ಇವರ ಮಕ್ಕಳಾದ ರುದ್ರೇಶ್, ವೀರೇಶ್, ಶಿವಕುಮಾರ್ ಮತ್ತು ಎನ್.ಎಂ .ಶಿವಕುಮಾರ್, ಅನುರಾಧ, ಉಮಾ ಶಂಕರ್, ಶ್ರೀ ಅಕ್ಷಯ್ ನೆರವೇರೊಂದಿಗೆ ಶ್ರೀ ಸಿದ್ದಗಂಗಾ ಆಸ್ಪತ್ರೆಯ ನಿರ್ವಹಣೆಯಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಆಟೋಟ ಸ್ಪರ್ಧೆ, ವಿಜೇತರಿಗೆ ಬಹುಮಾನ ವಿತರಣೆ

ಹುಳಿಯಾರು: ಹುಳಿಯಾರಿನ ಆರ್ಯವೈಶ್ಯ ಮಂಡಳಿಯ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರಿಗಾಗಿ ವಿವಿಧ ಮನರಂಜನಾ ಹಾಗೂ ಕ್ರೀಡಾ ಸ್ಪರ್ಧೆಗಳನ್ನು ಅತ್ಯಂತ ಸಡಗರದಿಂದ ಆಯೋಜಿಸಲಾಗಿತ್ತು.

ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಹಿಳೆಯರು ಉತ್ಸಾಹದಿಂದ ಭಾಗವಹಿಸಿ ತಮ್ಮ ಕೌಶಲ್ಯ ಪ್ರದರ್ಶಿಸಿದರು. ಮಹಿಳೆಯರ ದೈನಂದಿನ ಒತ್ತಡದ ಬದುಕಿನ ನಡುವೆ ಮನರಂಜನೆ ನೀಡುವ ಉದ್ದೇಶದಿಂದ 'ಬಕೆಟ್ ಇನ್ ದ ಬಾಲ್', 'ಕಾರ್ಡ್ಸ್ ಗೇಮ್', 'ಬಲೂನ್ ಒಡೆಯುವುದು' ಸೇರಿದಂತೆ ಹಲವು ವಿಶಿಷ್ಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಒಂದು ನಿಮಿಷದಲ್ಲಿ ಮಹಿಳೆ ಬಗ್ಗೆ ಮಾತನಾಡುವ ಸ್ಪರ್ಧೆಯಲ್ಲಿ ಪೂಜಾಅಭಿಷೇಕ್, ಬಕೆಟ್ ಇನ್ ದ ಬಾಲ್‌ನಲ್ಲಿ ಸಂಧ್ಯಾ ಪ್ರದೀಪ್ ಮತ್ತು ಅಶ್ವಿನಿ ರವಿ, ಕಾರ್ಡ್ಸ್ ಗೇಮ್‌ನಲ್ಲಿ ಲಕ್ಷ್ಮಿ ಭೂಷಣ್ ಮತ್ತು ಲಕ್ಷ್ಮಿಸುಧೀರ್, ಕಡ್ಲೇಬೀಜ ಕಪ್ಪಿಗೆ ಹಾಕುವ ಆಟದಲ್ಲಿ



ಲಕ್ಷ್ಮಿವಸಂತ್ ಮತ್ತು ಬೇಬಿಕಲಾ, ಗುಂಪಿನಲ್ಲಿ ಕಲರ್ ಡಿಪ್ ಮಾಡುವ ಆಟದಲ್ಲಿ ಶಶಿಕಲಾ ಮತ್ತು ಅನಿತಾರವೀಶ್, ಗ್ರೂಪ್ ಗೇಮ್‌ನಲ್ಲಿ ಲಕ್ಷ್ಮಿ ಮೂರ್ತಿ ಮತ್ತು ಶಕುಂತಲಾ ನಾಗೇಂದ್ರ. ಬಲೂನ್ ಒಡೆಯುವ ಆಟದಲ್ಲಿ ಕಾವ್ಯ ನಿರೂಪ್ ಮತ್ತು ವಿಜಯ ಪ್ರದೀಪ್ ಬಹುಮಾನಗೆದ್ದುಕೊಂಡರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಆಕರ್ಷಕ ಬಹುಮಾನಗಳನ್ನು ವಿತರಿಸಲಾಯಿತು. ಬಹುಮಾನಗಳನ್ನು ಲೋಕಾ ರಾಜೇಶ್ವರಿ ಪ್ರಭಾಕರ್ ಹಾಗೂ ವೀಣಾ ಭೂಷಣ್ ಅವರು ಪ್ರಾಯೋಜಿಸಿದ್ದರು. ಮಹಿಳಾ ಮಂಡಳಿ ಅಧ್ಯಕ್ಷೆ ಜ್ಯೋತಿ, ಕಾರ್ಯದರ್ಶಿ ಲಕ್ಷ್ಮೀಧರ್, ಶಿಕ್ಷಕಿ ಬೇಬಿಕಲಾ, ಕಾರ್ಯಕಾರಿ ಮಂಡಳಿಸದಸ್ಯರುಗಳಾದಜ್ಯೋತಿಅರುಣ್, ಸವಿತಾ ನಾಗೇಶ್, ರೇಣುಕಾ ರವಿ, ಆರತಿ ಕೃಷ್ಣಮೂರ್ತಿ, ಲಕ್ಷ್ಮೀರಾಮಚಂದ್ರ, ರೂಪ ಮಂಜುನಾಥ್, ನಾಗಲಕ್ಷ್ಮಿ ಪ್ರವೀಣ್, ಅನುರಾಧ ಉಮೇಶ್, ಅನಿತಾ ರವಿ, ಕನಕಲಕ್ಷ್ಮಿ ರಮೇಶ್, ಅನುಪಮಾ ನವೀನ್ ಇದ್ದರು.

ಬದುಕಿನ ಪಾಠ ಕಲಿಸುವ ರಂಜಾನ್: ನಯಾಜ್

ಕೊಡಿಗೇನಹಳ್ಳಿ: ರಂಜಾನ್ ಹಬ್ಬ ಮುಸ್ಲಿಮರಾದನಮಗೆಜೀವನಕ್ಕೆಬೇಕಾದಅನೇಕಪಾಠಗಳನ್ನು ಕಲಿಸಿಕೊಡುತ್ತದೆ ಎಂದು ಮುಸ್ಲಿಂ ಜನಾಂಗದ ಮುಖಂಡ ಹಾಗೂ ಜಾಮಿಯಾ ಮಸೀದಿ ಸಮಿತಿ ಸದಸ್ಯ ಸೈಯದ್ ನಯಾಜ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ರಂಜಾನ್ ಅಂಗವಾಗಿ ಕೊಡಿಗೇನಹಳ್ಳಿಯ ದರ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಪ್ರಾರ್ಥನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಾರ್ಥನೆ ನಂತರ ಮಾತನಾಡಿದ ಅವರು ರಂಜಾನ್ ಮುಸ್ಲಿಮರ ಪಾಲಿನ ಮಹಾ ಪವಿತ್ರ ಹಬ್ಬ. ಒಂದು ತಿಂಗಳು ಉಪವಾಸವನ್ನು ಮಾಡುವುದು, ಅಲ್ಲಾನನ್ನು ಪ್ರಾರ್ಥಿಸುವುದು, ದಾನ ಮಾಡುವುದು ಮತ್ತು ಚಂದ್ರ ದರ್ಶನದ ನಂತರ ಉಪವಾಸವನ್ನು ತ್ಯಜಿಸುವುದು ಮಹತ್ವದ್ದಾಗಿದೆ. ಒಂದು ತಿಂಗಳು ಉಪವಾಸವು ಮನುಷ್ಯನಿಗೆ ಎಲ್ಲಾ ರೀತಿಯ ಕಷ್ಟಗಳನ್ನು ಅರ್ಥ ಮಾಡಿ ಸಿಕೊಡುವ ಶಕ್ತಿ ಹೊಂದಿದೆ ಎಂದರು.

ಮುಖಂಡ ಅಮಾನುಲ್ಲಾ, ಜಾಮಿಯಾ ಮಸೀದಿಯ ಮುತ್ತವಲ್ಲಿ ಶಾಮೀರ್ ಅಹಮದ್, ಕಾರ್ಯದರ್ಶಿ ಜಬಿವುಲ್ಲಾ, ಸದಸ್ಯ ಗಫೂರ್ ಸಾಬ್, ಮುಸ್ತಫಾ, ಪರ್ವೀಜ್ ಝುಕಾ, ಇನಾಯತುಲ್ಲಾ, ತನ್ವೀರ್ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.



ಗ್ರಾಮದ ಪುರಬೀದಿಗಳಲ್ಲಿ ಚೌಡೇಶ್ವರಿ ದೇವಿ ಮೆರವಣಿಗೆ

ಚೌಡೇಶ್ವರಿ ದೇವಿ ಜ್ಯೋತಿ ಉತ್ಸವ ಆಚರಣೆ

ವೈ.ಎನ್.ಹೊಸಕೋಟೆ: ಚೌಡೇಶ್ವರಿ ಅಮ್ಮನವರ ಜ್ಯೋತಿ ಉತ್ಸವವನ್ನು ಗ್ರಾಮದಲ್ಲಿ ಶನಿವಾರ ವಿಜೃಂಭಣೆಯಿಂದ ಆಚರಿಸಲಾಯಿತು.

ಗ್ರಾಮದಲ್ಲಿ ಶಾಂತಿ ಮತ್ತು ಸಂಮೃದ್ಧಿಗಾಗಿ ಹಾಗೂ ಜನತೆಯನ್ನು ದುಷ್ಟ ಶಕ್ತಿಗಳಿಂದ ರಕ್ಷಿಸುವ ಸಲುವಾಗಿ ತೊಗಟವೀರ ಕ್ಷತ್ರಿಯರು ತಮ್ಮ ಕುಲದೇವಿ ಶ್ರೀ ಚೌಡೇಶ್ವರಿ ಅಮ್ಮನವರ ಜ್ಯೋತಿ ಉತ್ಸವವನ್ನು ಶ್ರದ್ಧಾಭಕ್ತಿಗಳಿಂದ ಪ್ರತಿ ವರ್ಷ ಹಮ್ಮಿಕೊಳ್ಳುತ್ತಿದ್ದು, ಅದು ಗ್ರಾಮದ ಸಂಪ್ರದಾಯವಾಗಿ ಬೆಳೆದು ಬಂದಿದೆ.

ಪ್ರತಿ ವರ್ಷ ಯುಗಾದಿ ಹಬ್ಬದ 3ನೇ ದಿನ ಚೌಡೇಶ್ವರಿ ದೇವಿಯ ಜ್ಯೋತಿಗಳ ಮೆರವಣಿಗೆ ಯನ್ನು ಗ್ರಾಮದ ಬೀದಿ ಗಳಲ್ಲಿ ಹಮ್ಮಿಕೊಳ್ಳುವುದು ಗ್ರಾಮದ ಸಂಪ್ರದಾಯಗಳಲ್ಲಿ ಒಂದಾಗಿದೆ. ಎಂದಿನಂತೆ ಈ ವರ್ಷವೂ ಸಹಾ ಈ ಉತ್ಸವ ಮೆರವಣಿಗೆಯು ವಾದ್ಯವೃಂದ, ಕಲಾತಂಡಗಳೊಂದಿಗೆ ಸಾಗುತ್ತಾ ಆನಂದ ಪದಗಳೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು.

ಉತ್ಸವವು ಶ್ರೀಚೌಡೇಶ್ವರಿ ಅಮ್ಮನವರ



ಮೂರ್ತಿ ಮತ್ತು ಕಳಸ, ಭಾನ ಮತ್ತು ಜ್ಯೋತಿಗಳೊಂದಿಗೆ ಪುರದಕಟ್ಟೆಯಿಂದ ಪ್ರಾರಂಭವಾಗಿ ಬಿ.ಎಚ್. ರಸ್ತೆಯ ಮೂಲಕ ಸಾಗಿ ಹಳೆಯ ಅಂಚೆಕಟೇರಿ ರಸ್ತೆ, ಎಸ್‌ಕೆಪಿಟಿ ರಸ್ತೆಯ ಮೂಲಕ ಅಶ್ವಥನಕಟ್ಟೆಯ ರಸ್ತೆಯಲ್ಲಿ ಸಾಗಿ ಹೊಸ ಚೌಡೇಶ್ವರಿ ದೇವಾಲಯದಲ್ಲಿ ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ಹರಕೆ ಹೊತ್ತ ಭಕ್ತಾಧಿಗಳು ಬಾಯಿಗೆ ಬೀಗ (ನಾರದ) ಹಾಕಿಕೊಂಡು ಹರಕೆ ತೀರಿಸಿದರು. ಹರಕೆ ಹೊತ್ತ ಮತ್ತಲವು ಭಕ್ತಾಧಿಗಳು ಜ್ಯೋತಿ ಹಾದುಬರುವ ದಾರಿಯುದ್ದಕ್ಕೂ ಜನಸ್ತೋಮಕ್ಕೆ ಷಾಮಿಯಾನಗಳನ್ನು ಹಾಕಿ ನೆರಳು ಮೂಡಿಸಿ ಅಲ್ಲಲ್ಲಿ ಮಜ್ಜಿಗೆ, ಷರಬತ್ತು, ಅನ್ನಪ್ರಸಾದ ಹಂಚಿಕೆ ಮಾಡಿದರು. ಸಾವಿರಾರು ಭಕ್ತರು ಬಂದು ದೇವಿಯ ದರ್ಶನ ಪಡೆದು ಕೃತಾರ್ಥರಾದರು. ಜ್ಯೋತಿಗಳ ಪುರಮೆರವಣಿಗೆಯಲ್ಲಿ ಜೋಡಿ ಅಚ್ಚಮ್ಮನಹಳ್ಳಿ ಕಲಾವಿದರ ಕೋಲಾಟ ಮತ್ತು ಸಿದ್ದಾಪುರ ಕಲಾವಿದರ ಡ್ರಮ್ಸ್ ವಾದನ ಆಕರ್ಷಕವಾಗಿತ್ತು.

ತಿರುಮಣಿಯಲ್ಲಿ ನೂತನ ಶ್ರೀನಿಧಿ ಸಹಕಾರಿ ಬ್ಯಾಂಕ್ ಪ್ರಾರಂಭ

ರೈತರಿಗೆ ಉತ್ಕೃಷ್ಟ ಸೇವೆ ನೀಡುವುದೇ ಧ್ಯೇಯ

ಪಾವಗಡ: ಗಡಿನಾಡಿನ ತಿರುಮಣಿಯಲ್ಲಿ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್‌ನ ನೂತನ ಶಾಖೆಯನ್ನು ಮಾ.25ರಂದು ಪ್ರಾರಂಭಿಸಲಾಗುತ್ತಿದ್ದು, ಈ ಭಾಗರದ ರೈತರಿಗೆ ಉತ್ಕೃಷ್ಟವಾದ ಹಣಕಾಸು ಸೇವೆಗಳನ್ನು ನೀಡುವುದೇ ನಮ್ಮ ಮುಖ್ಯ ಧ್ಯೇಯವಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಸದಾಶಿವರೆಡ್ಡಿ ತಿಳಿಸಿದರು. ಪಟ್ಟಣದ ತೇಜಸ್ ಹೋಟೆಲ್‌ನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

ಗ್ರಾಮೀಣ ಭಾಗದ ರೈತಾಪಿ ಜನರಿಗೆ ಉತ್ತಮ ಹಣಕಾಸು ಸೇವೆ ಮತ್ತು ಸಹಕಾರ ನೀಡುವುದು ಹಾಗೂ ಸೋಲಾರ್ ಕಂಪನಿಗಳಿಂದ ರೈತರು ಸುಗಮವಾಗಿ ವಹಿವಾಟು ನಡೆಸಲು ವ್ಯವಸ್ಥೆ ಮಾಡುವ ಸಲುವಾಗಿ ನೂತನವಾಗಿ 9ನೇ ಶಾಖೆಯನ್ನು ತಿರುಮಣಿಯಲ್ಲಿ ತೆರೆಯಲಾಗುತ್ತಿದೆ ಎಂದರು.

ಸ್ಥಳೀಯ ಶಾಸಕ ಎಚ್.ವಿ.ವೆಂಕಟೇಶ್ ಮಾ.25ರಂದು ನೂತನ ಶಾಖೆ ಉದ್ಘಾಟಿಸಲಿದ್ದಾರೆ, ಸಹಕಾರರತ್ನ ಬಿ.ಎಚ್ ಕೃಷ್ಣಾರೆಡ್ಡಿ, ಕೆನರಾ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಕೆ.ವೆಂಕಟರಾಮಯ್ಯ.ರಾಘವನ್ ಮುಖ್ಯ ಅತಿಥಿಗಳಾಗಿ, ವಿಸಿ ಚೆನ್ನಕೇಶವರೆಡ್ಡಿ, ಆರ್‌ಪಿ ಸಾಂಬಸದಾಶಿವರೆಡ್ಡಿ, ಎಸ್ ರಾಮಾಂಜನೇಯುಲು ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆಎಂದರು.



ಬೆಂಗಳೂರು ನಗರದ ಪ್ರತಿಷ್ಠಿತ ಸಹಕಾರಿ ಬ್ಯಾಂಕ್‌ಗಳಲ್ಲಿ ಒಂದಾಗಿರುವ ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ಈಗಾಗಲೇ 8 ಶಾಖೆಗಳು ಹಾಗೂ 11 ಸಾವಿರ ಸದಸ್ಯರೊಂದಿಗೆ 27ಕೋಟಿ ಷೇರು ಬಂಡವಾಳ ಹೊಂದಿದೆ, ಪ್ರಸ್ತುತ 481 ಕೋಟಿಠೇವಣಿಯಿದ್ದು, 339 ಕೋಟಿ ಸಾಲ ವಿತರಿಸಲಾಗಿದೆ, ಒಟ್ಟು ಹೂಡಿಕೆ 209ಕೋಟಿಯಷ್ಟಿದೆ, ಒಟ್ಟು 820 ಕೋಟಿಗಳಷ್ಟು ವ್ಯವಹಾರದೊಂದಿಗೆ ಪ್ರಸಕ್ತ ಸಾಲಿಗೆ 8ಕೋಟಿ ನಿವ್ವಳ ಲಾಭದಲ್ಲಿದೆ ಎಂದರು.

ನೂತನಶಾಖೆಯಲ್ಲಿ ಗ್ರಾಹಕರಿಗೆ ಷೇರು, ವಿವಿಧ ಬಗೆಯ ಖಾತೆಗಳು, ಸಾಲ, ಡಿಜಿಟಲ್ ಪೇಮೆಂಟ್‌ಗಳು, ಎಟಿಎಂ, ಲಾಕರ್ ಸೌಲಭ್ಯಗಳು ದೊರೆಯಲಿದ್ದು, ಈ ಭಾಗದ ಜನತೆ ನಗರ ಪ್ರದೇಶಗಳಿಗೆ ಪರದಾಡುವುದು ತಪ್ಪಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ನಿರ್ದೇಶಕರಾದ ಕೆ.ನರಸಿಂಹ, ಪರಮೇಶ್ ನಾಯ್ಕ ಹಾಗೂ ಸಾಂಬಸದಾಶಿವರೆಡ್ಡಿ ಇದ್ದರು.

ಕಿರುಸುದ್ದಿ

ನಾಳೆ ದೇವರದಾಸಿಮಯ್ಯ ಜಯಂತಿ

ರಾಮನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾ.23ರ ಸೋಮವಾರ ಬೆಳಿಗ್ಗೆ 10.30ಕ್ಕೆ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮವನ್ನು ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 409ರಲ್ಲಿ ಆಯೋಜಿಸಲಾಗಿದೆ. ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಕಾರ್ಯದರ್ಶಿಗಳು, ಮುಖಂಡರು, ಎಲ್ಲಾ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.24ರಂದು ರಾಷ್ಟ್ರೀಯ ವಿಚಾರ ಸಂಕಿರಣ

ರಾಮನಗರ: ಐಸಿಎಸ್ಎಸ್ಆರ್ ಸಹಯೋಗದಲ್ಲಿ ಹಾಗೂ ಕನಕಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಮಾ.24ರಂದು ಕನಕಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕುವೆಂಪು ಆಡಿಟೋರಿಯಂನಲ್ಲಿ ಜಿಎಸ್ಟಿ ಸುಧಾರಣೆಗಳು ಮತ್ತು ಭಾರತದ ಬೆಳವಣಿಗೆ ಪಥ: ಕ್ಷೇತ್ರವಾರು ಅವಕಾಶಗಳು ಮತ್ತು ಸವಾಲುಗಳು ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ತಮಿಳು ನಾಡಿನ ಖ್ಯಾತ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕರಾದ ಡಾ. ಕೆ. ಸೆಲ್ವ ಸುಂದರಂ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬೆಂಗಳೂರು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಡಾ. ಎಸ್.ಆರ್ ಕೇಶವ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಬೆಂಗಳೂರಿನ ಆರ್.ಸಿ.ಕಾಲೇಜಿನ ಪ್ರಾಂಶುಪಾಲರಾದ ಎಜಾಜ್ ಅಹ್ಮದ ಖಾನ್ ಅವರು ಜಿಎಸ್ಟಿಯ ಪರಿಣಾಮ, ಅವಕಾಶಗಳು ಮತ್ತು ಸವಾಲುಗಳ ಕುರಿತು ಮುಖ್ಯ ಉಪನ್ಯಾಸ ನೀಡುವರು. ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಸಂಶೋಧಕರು ಭಾಗವಹಿಸಿ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವರು ಎಂದು ಕಾರ್ಯಕ್ರಮದ ಅಧ್ಯಕ್ಷರು ಮತ್ತು ಪ್ರಾಚಾರ್ಯರಾದ ಡಾ.ಬಿ. ಶಾಮಲಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: ಓರ್ವ ಸಾವು

ರಾಮನಗರ: ನಿಯಂತ್ರಣ ತಪ್ಪಿ ಡಿವೈಡರ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೋರ್ವ ಗಂಭೀರ ಗಾಯಗೊಂಡ ಘಟನೆ ತಾಲೂಕಿನ ಮಾಯಗಾನಹಳ್ಳಿ ಬಳಿಯ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ನಡೆದಿದೆ. ಅಮೀರ್ (25) ಮೃತ ದುರ್ದೈವಿ. ಗೂಡ್ಸ್ ವಾಹನ ಮೈಸೂರಿನಿಂದ ಬೆಂಗಳೂರು ಕಡೆಗೆ ಹೋಗುತ್ತಿತ್ತು. ಈ ವೇಳೆ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ಅಪಘಾತದ ರಭಸಕ್ಕೆ ಗೂಡ್ಸ್ ವಾಹನ ಸಂಪೂರ್ಣ ಜಖಂಗೊಂಡಿದೆ. ಘಟನಾ ಸ್ಥಳಕ್ಕೆ ರಾಮನಗರ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಂಜಾನ್ ಆಚರಣೆ

ಕನಕಪುರ: ರಂಜಾನ್ ಅಂಗವಾಗಿ ಪಟ್ಟಣದ ಅಜೀಜ್ ನಗರದ ಈದ್ಗಾ ಮೊಹಲ್ಲಾದಲ್ಲಿ ಶನಿವಾರ ಸಾವಿರಾರು ಮುಸ್ಲಿಮರು ಶ್ರದ್ಧಾ ಭಕ್ತಿಯಿಂದ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಗರದ ಜಾಮೀಯಾ ಮಸೀದಿ, ಫಾರುಕ್ಯ ಮಸೀದಿ ಹಾಗೂ ಮೇಳೆಕೋಟೆಯ ಮಸೀದಿಗಳಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿ, ನಂತರ ಈದ್ಗಾ ಮೊಹಲ್ಲಾದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಮೂರು ಮಸೀದಿಯ ಧರ್ಮಗುರುಗಳ ನೇತೃತ್ವದಲ್ಲಿ ಜರುಗಿದ ಪ್ರಾರ್ಥನೆಯಲ್ಲಿ ಅಲ್ಲಾಹನನ್ನು ಸ್ಮರಿಸಿದರು. ಯುವಕರು, ಹಿರಿಯು, ಮಕ್ಕಳು ಪರಸ್ಪರ ಶುಭಾಷಯ ಕೋರುವ ಮೂಲಕ ರಂಜಾನ್ ಹಬ್ಬವನ್ನು ಆಚರಿಸಿದರು.

ವ್ಯಕ್ತಿ ಆತ್ಮಹತ್ಯೆ

ಕುಣಿಗಲ್: ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಯೊಬ್ಬ ರಂಗಸ್ವಾಮಿ ಬೆಟ್ಟದಲ್ಲಿ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿರುವ ಘಟನೆ ಶುಕ್ರವಾರ ನಡೆದಿದೆ. ತಾಲೂಕಿನ ಕೊತ್ತಗೆರೆ ಹೋಬಳಿ ದಾಸನಪುರ ಗ್ರಾಮದ ರಮೇಶ್ 35 ವರ್ಷ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ್ದಾನೆ. ಈತ ಕುಡಿತದ ಚಟಕ್ಕೆ ಬಲಿಯಾಗಿದ್ದು ಮನೆಯಲ್ಲಿ ಯಾವಾಗಲೂ ನಾನು ಎಲ್ಲಿಗಾದರೂ ಹೋಗುತ್ತೇನೆ ನನ್ನನ್ನ ಬಿಟ್ಟು ಬಿಡಿ ಎಂದು ಆಗಿಂದಾಗ್ಗೆ ಮನೆಯವರ ಹತ್ತಿರ ಜಗಳವಾಡುತ್ತಿದ್ದನು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಶುಕ್ರವಾರ ಬೆಳಿಗ್ಗೆ 8.30 ರ ಸಮಯದಲ್ಲಿ ಮನೆಯಿಂದ ಬೈಕ್ ನಲ್ಲಿ ಹೊರ ಬಂದ ಈತ ಮಧ್ಯದಲ್ಲಿ ಯಾವಾಗಲೂ ರಂಗಸ್ವಾಮಿ ಬೆಟ್ಟದಲ್ಲಿ ಬೈಕ್ ನಿಲ್ಲಿಸಿ ಮರಕ್ಕೆ ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾನೆ. ಶನಿವಾರ ಬೆಳಗ್ಗೆ ಬೆಟ್ಟಕ್ಕೆ ಹೋದವರು ನೋಡಿ ಮಾಹಿತಿ ನೀಡಿದ್ದಾರೆ ಈ ಸಂಬಂಧ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಚಿಕ್ಕನಾಯಕನಹಳ್ಳಿ ತಾಲೂಕು ತರಬೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನವಾಗಿ ಆಯ್ಕೆಗೊಂಡ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ಮಣಕೀಕೆರೆ ಕರಿಯಮ್ಮದೇವಿ ಜಾತ್ರೆ

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ಮಣಕೀಕೆರೆ ಗ್ರಾಮದ ಗ್ರಾಮದೇವತೆ ಕರಿಯಮ್ಮದೇವಿ, ಆಂಜನೇಯಸ್ವಾಮಿ, ಮಂಕಮ್ಮದೇವಿಯವರ ಜಾತ್ರಾ ಮಹೋತ್ಸವವು ಮಾ.29 ರಿಂದ ಏ.3ರವರೆಗೆ ನಡೆಯಲಿದೆ. ಮಾ.29ರಂದು ಕರಿಯಮ್ಮದೇವಿಗೆ ಮದುವಣಗಿತ್ತಿ ಉತ್ಸವ, ಪುಷ್ಪಾಲಂಕಾರ. ಮಾ.30 ರಂದು ಮೊದಲೋತ್ಸವ. ಮಾ.31 ರಂದು ಆರತಿಬಾನ, ರಾತ್ರಿ ಶ್ರೀಅಮ್ಮನವರಿಗೆ ಹಾಗೂ ಶ್ರೀಸ್ವಾಮಿಯವರಿಗೆ ಭೂಕೈಲಾಸ ಉತ್ಸವ ನಡೆಯಲಿದೆ. ಏ.1ರಂದು ಗಂಗಾಸ್ನಾನ, ರಾತ್ರಿ 10ಕ್ಕೆ ಶ್ರೀ ಅಮ್ಮನವರಿಗೆ ಹಾಗು ಶ್ರೀ ಸ್ವಾಮಿಯವರಿಗೆ ಶ್ರೀಕೃಷ್ಣ ಪಾರ್ಥಸಾರಥಿ ವೈಕುಂಠ ದರ್ಬಾರ್ ಉತ್ಸವ, ವಿಶೇಷ ಹೂವಿನ ಅಲಂಕಾರ, ದೇವಸ್ಥಾನ ಹಾಗೂ ಆವರಣಕ್ಕೆ ವಿಶೇಷ ಡೇಕೋರೇಷನ್, ವಿದ್ಯುತ್ ದೀಪಾಲಂಕಾರ, ಸಾಂಸ್ಕೃತಿಕ ಕಲಾತಂಡಗಳಾದ ಕೀಲುಕುದುರೆ, ತಮಟೆವಾದ್ಯ, ಮಹಿಳಾ ಡೊಳ್ಳುಕುಣಿತ, ನಗಾರಿವಾದ್ಯ, ನಾಸಿಕ್ ಡೋಲ್, ಚಂಡೆವಾದ್ಯ, ಭಜರಂಗಿ ವೇಷ, ಶ್ಯಾಡೋಸ್ ಡ್ಯಾನ್ಸ್ ಸ್ಟುಡಿಯೋ ನೃತ್ಯ ಪ್ರದರ್ಶನ, ಆರ್ಕೆಸ್ಟ್ರಾ ಹಾಗೂ ಅಮೋಘ ಮದ್ದಿನ ಪ್ರದರ್ಶನ ಕಾರ್ಯಕ್ರಮಗಳ ಉತ್ಸವ ನಡೆಯಲಿದೆ. ಏ.2 ರಂದು ರಥೋತ್ಸವ ಮತ್ತು ಉಯ್ಯಾಲೋತ್ಸವ ನಡೆಯಲಿದ್ದು, ಅನ್ನಸಂತರ್ಪಣೆ, ಮಜ್ಜಿಗೆ, ಪಾನಕ ಫಲಹಾರ, ಸಿಹಿ ವಿತರಿಸಿದರು.



ಮಧುಗಿರಿ ಪಟ್ಟಣದ ಶಿರಾ ಗೇಟ್‌ನಲ್ಲಿರುವ ಈದ್ಗಾ ಮೈದಾನದಲ್ಲಿ ರಂಜಾನ್ ಪ್ರಯುಕ್ತ ನಡೆದ ಸಾಮೂಹಿಕ ಪ್ರಾರ್ಥನೆ ಯಲ್ಲಿ ಶಾಸಕ ಕೆ.ಎನ್.ರಾಜಣ್ಣ ಭಾಗವಹಿಸಿದ್ದರು. ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ ಇದ್ದರು.


ಶಿವಕುಲತಿಲಕ ಆಚಾರ್ಯ ಶ್ರೀ ರೇವಣಸಿದ್ದೇಶ್ವರ ಕೃತಿ ಲೋಕಾರ್ಪಣೆ

ವೀರಶೈವ ಸಿದ್ಧಾಂತ ಪ್ರಚಾರ

ರಾಮನಗರ: ರೇವಣಸಿದ್ಧರು ಒಬ್ಬರೇ ಅಲ್ಲ, ಅವರದ್ದು ಒಂದು ಗುರು ಪರಂಪರೆ ಎಂದು ಶಿವಗಂಗಾ ಕ್ಷೇತ್ರದ ಮೇಲಣಗವಿ ಸಂಸ್ಥಾನಮಠದ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು. ತಾಲೂಕಿನ ಕೈಲಾಂಚ ಹೋಬಳಿಯ ಅವ್ವೇರಹಳ್ಳಿಯ ಸಮೀಪವಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ದಾಸೋಹ ಭವನದಲ್ಲಿ ಶ್ರೀ ಬಸವೇಶ್ವರ ಸಾರ್ವಜನಿಕ ವಿದ್ಯಾರ್ಥಿ ನಿಲಯ ಟ್ರಸ್ಟ್ ವತಿಯಿಂದ ನಡೆದ ವಿದ್ವಾನ್ ಚಂದ್ರಶೇಖರಯ್ಯ ಅವರ 'ಶಿವಕುಲತಿಲಕ ಆಚಾರ್ಯ ಶ್ರೀರೇವಣಸಿದ್ದೇಶ್ವರ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿದರು.

ಸಾಹಿತಿ ಡಾ.ಸಿ. ಶಿವಕುಮಾರಸ್ವಾಮಿ ಮಾತನಾಡಿ, ರೇಣುಕಾದಿ ಪಂಚಾಚಾರ್ಯರು ನಾಲ್ಕು ಯುಗಗಳಲ್ಲಿಯೂ ಬೇರೆ ಬೇರೆ ಹೆಸರುಗಳಿಂದ ಭೂಲೋಕದ ಶಿವಲಿಂಗಗಳಿಂದ ಅವತರಿಸಿ ವೀರಶೈವ ಸಿದ್ದಾಂತವನ್ನು ಸ್ಥಾಪಿಸಿದರು. ಅವರಲ್ಲಿ ಮೊದಲನೆಯವರು ರೇಣುಕಾಚಾರ್ಯರು. ಇವರು ಕೊಲ್ಲಿ ಪಾಕಿಯ ಸೋಮೇಶ್ವರಲಿಂಗದಿಂದ ಅವತರಿಸಿದರು. ಅವರು ಕೃತಾಯುಗದಲ್ಲಿ ಅವರಿಗೆ ಏಕಾಕ್ಷರ, ತೇತ್ರಾಯುಗದಲ್ಲಿ ಏಕವಕ್ತ್ರ ದ್ವಾಪರಯುಗದಲ್ಲಿ ರೇಣುಕಾ ಮತ್ತು ಕಲಿಯುಗದಲ್ಲಿ ರೇವಣಸಿದ್ಧ ಅಥವಾ ರೇವಣಾರಾಧ್ಯ ಎಂಬ ಹೆಸರುಗಳಿಂದ ಪ್ರಸಿದ್ದರಾದರು ಎಂದರು.

ರೇಣುಕಾಚಾರ್ಯರು ಕೊಲ್ಲಿಪಾಕಿಯ ಸೋಮೇಶ್ವರಲಿಂಗದಿಂದ ಅವತರಿಸಿ ಮಲಯಾಚಲಕ್ಕೆ ಬಂದು ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ವೀರಶೈವ ಸಿದ್ದಾಂತವನ್ನು ಜಗತ್ತಿಗೆ ಬೋದಿಸಿದರು. ಕಲಿಯುಗದಲ್ಲಿ ಅದೇ



> ರೇವಣಸಿದ್ಧರ ಬಗ್ಗೆ ಹೆಚ್ಚಿನ ಅಧ್ಯಯನ, ಸಂಶೋಧನೆಗಳು ನಡೆಯಬೇಕಿದೆ. ಈ ನಿಟ್ಟಿನಲ್ಲಿ ಸಂಶೋಧಕರು, ವಿದ್ವಾಂಸರು ಮುಂದಿನ ದಿನಗಳಲ್ಲಿ ಸತ್ಯಾಂಶವನ್ನು ಜಗಜ್ಜಾಹೀರು ಪಡಿಸಿದರೆ, ರೇವಣಸಿದ್ಧರ ಬಗ್ಗೆ ಎದ್ದಿರುವ ಗೊಂದಲಗಳಿಗೆ ಇತಿಶ್ರೀ ಹಾಡಿದಂತಾಗುತ್ತದೆ.
> ■ **ಮಲಯಶಾಂತಮುನಿ ಶಿವಾಚಾರ್ಯಶ್ರೀ,** ಮೇಲಣಗವಿ ಸಂಸ್ಥಾನಮಠ

ರೇಣುಕಾಚಾರ್ಯರು ರೇವಣಸಿದ್ಧ ಅಥವಾ ರೇವಣಾರಾಧ್ಯ ಎಂಬ ಹೆಸರಿನಿಂದ ಅವತರಿಸಿ ರಂಭಾಪುರಿ ಪೀಠದಲ್ಲಿದ್ದುಟ್ಟುಕೊಂಡು ವೀರಶೈವ ಸಿದ್ದಾಂತವನ್ನು ಉಪದೇಶಿಸಿದರು ಎಂದರು.

ಇತಿಹಾಸಕಾರರು ಮತ್ತು ಪ್ರಾಚೀನ ಕವಿಗಳು ರೇಣುಕಾಚಾರ್ಯ ಮತ್ತು ರೇವಣಸಿದ್ಧರನ್ನು ಒಬ್ಬರೇ ಎಂಬುದಾಗಿ ಸಮೀಕರಿಸಿ ತಮ್ಮ ಕಾವ್ಯಗಳನ್ನು ರಚನೆ ಮಾಡಿದ್ದಾರೆ. ಅವರಲ್ಲಿ ಹರಿಹರನು ಪ್ರಮುಖನು. ಹರಿಹರ ತನ್ನ ರೇವಣಸಿದ್ದೇಶ್ವರ ರಗಳೆಯಲ್ಲಿ ರೇವಣಸಿದ್ಧರು 1400 ವರ್ಷಗಳ ಕಾಲ ಅಂದರೆ 700 ವರ್ಷಗಳ ಕಾಲ ಗುಪ್ತವಾಗಿ, 700 ವರ್ಷಗಳ ಕಾಲ ಪ್ರಕಟವಾಗಿದ್ದರು ಎಂದು ನಿರೂಪಸಿದ್ದನ್ನು ನಂತರದ ವಿದ್ವಾಂಸರು ಒಬ್ಬನೇ ರೇವಣಸಿದ್ಧ ಎಂಬುದಾಗಿ ಪ್ರತಿಪಾದನೆ ಮಾಡಿದ್ದಾರೆ. ಆದರೆ ರೇವಣಸಿದ್ಧರು ಒಬ್ಬರೆ ಅಲ್ಲ, ಅದು ಒಂದು ಪರಂಪರೆ ಎಂದು ತಿಳಿಸಿದರು. ಸಮಾರಂಭದಲ್ಲಿ ನಿವೃತ್ತ ಡಿಜಿಪಿ ಎಲ್. ರೇವಣಸಿದ್ಧಯ್ಯ, ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಯ ಕಾರ್ಯದರ್ಶಿ ಸದಾಶಿವಪ್ಪ, ಶ್ರೀ ರೇವಣಸಿದ್ಧೇಶ್ವರ ಕ್ಷೇತ್ರಾಭಿವೃದ್ಧಿ ಸೇವಾ ಸಮಿತಿ ಟ್ರಸ್ಟಿನ ರೇಣುಕಾನಂದಸ್ವಾಮಿ, ಚನ್ನಬಸಪ್ಪ ಹಾಗೂ ಇತರು ಇದ್ದರು. ಸಾಧನ ಶಾಲೆಯ ಮುಖ್ಯಶಿಕ್ಷಕ ಎಂ.ಎಸ್. ಚನ್ನವೀರಪ್ಪ ನಿರೂಪಿಸಿದರು. ಗಂಗಾಬಿಕಾ ಸ್ವಾಗತಿಸಿದರು. ಶಿಕ್ಷಕಿ ಕೆ.ಆರ್. ವಿನುತಾ ಲೇಖಕರನ್ನು ಪರಿಚಯಿಸಿದರು.

ಯುಗಾದಿ ಕವಿಗೋಷ್ಠಿ, ಸಾಂಸ್ಕೃತಿಕ ಸಂಭ್ರಮ

ಚನ್ನಪಟ್ಟಣ: ಯುಗಾದಿ ಹಬ್ಬದ ಸಂಭ್ರಮವನ್ನು ಸಾಹಿತ್ಯದ ಸೊಗಡಿನಿಂದ ಆಚರಿಸುವ ಅಪೂರ್ವ ಪ್ರಯತ್ನವಾಗಿ, ಡಾ.ನಾಗರಾಜ್ ಸಾಹಿತ್ಯ ಸಾಂಸ್ಕೃತಿಕ ಸಾಮಾಜಿಕ ವೇದಿಕೆ ವತಿಯಿಂದ ಪಟ್ಟಣದ ಅಂಚೆ ಕಚೇರಿ ಸಮೀಪದ ರಾಜ್ ಮಕ್ಕಳ ಚಿಕಿತ್ಸಾಲಯ ಆವರಣದಲ್ಲಿ ಶನಿವಾರ ಸಂಜೆ 'ಯುಗಾದಿ ಕವಿಗೋಷ್ಠಿ' ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಮಿಕೊಳ್ಳಲಾಯಿತು.

ಯುಗಾದಿ ಎಂಬ ನವಸಂವತ್ಸರದ ಆತ್ಮಸ್ಫೂರ್ತಿಯನ್ನು ಕಾವ್ಯದ ಮೂಲಕ ವ್ಯಕ್ತಪಡಿಸಿದ ಕವಿಗಳು, ಜೀವನದ ವಿವಿಧ ಮುಖಗಳನ್ನು ತಮ್ಮ ಸಾಲುಗಳಲ್ಲಿ ನವೀನವಾಗಿ ಚಿತ್ರಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅರವಿಂದವಲ್ಲಿ ಸಾಂಸ್ಕೃತಿಕ ಕಲಾ ಟ್ರಸ್ಟ್ ಅಧ್ಯಕ್ಷೆ ಜಯಲಕ್ಷ್ಮಮ್ಮ ನಂಜಪ್ಪ ಅವರು ಮಾತನಾಡಿ, ಚನ್ನಪಟ್ಟಣದಂತಹ ಬೊಂಬೆನಗರಿಯಲ್ಲಿ ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯುವುದು ಸಮಾಜದ ಸಾಂಸ್ಕೃತಿಕ ಆರೋಗ್ಯದ ಸಂಕೇತವಾಗಿದೆ. ಡಾ. ನಾಗರಾಜ್ ಸಾಹಿತ್ಯ ವೇದಿಕೆಯು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಿದ್ದು, ಇದು ಭವಿಷ್ಯದ ಸಾಹಿತ್ಯ ಪರಂಪರೆಗೆ ಬಲ ನೀಡುವ ಕಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆಯನ್ನು ವಹಿಸಿದ್ದ ಮಕ್ಕಳ ತಜ್ಞರು ಹಾಗೂ ವೇದಿಕೆಯ ಅಧ್ಯಕ್ಷೆ ಡಾ. ರಾಜಶ್ರೀ, ಅಭಾವಿಪ ಕಣ್ವ ಶಾಖೆ ಅಧ್ಯಕ್ಷ ಡಿ.ಪುಟ್ಟಸ್ವಾಮಿಗೌಡ, ಅಭಾವಿಪ ರಾಜ್ಯ ಸಂಚಾಲಕ ವಸಂತಕುಮಾರ್ ನಿರೂಪಿದರು. ಸಾಹಿತ್ಯ ಪ್ರಿಯರಾದ ಗೋಪಾಲಕೃಷ್ಣ, ಚೋಳಮಾರನಹಳ್ಳಿ ರಾಮೇಗೌಡ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಕವಿಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳು ತಮ್ಮ ಸ್ವರಚಿತ ಕವಿತೆಗಳ ಮೂಲಕ ಯುಗಾದಿಯ ಆಶಯ, ಬದುಕಿನ ನಿಜಸ್ಥಿತಿ, ಪ್ರಸ್ತಾಪಿಸಿದರು.



ವಿಟಿಯು ರಾಜ್ಯಮಟ್ಟದ ಅಥ್ಲೆಟಿಕ್ 27ನೇ ಕ್ರೀಡಾಕೂಟಕ್ಕೆ ಕೆಐಟಿ ಸಜ್ಜು

ತಿಪಟೂರು: ಈ ಸಾಲಿನ ವಿಟಿಯು 27ನೇ ರಾಜ್ಯಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ತಿಪಟೂರಿನ ಕಲ್ಪತರು ತಾಂತ್ರಿಕ ಮಹಾವಿದ್ಯಾಲಯ ಆತಿಥ್ಯ ವಹಿಸಲಿದ್ದು ನಾಲ್ಕು ದಿನಗಳ ಕಾಲ ನಡೆಯಲಿರುವ ಅಂತರ ಮಹಾವಿದ್ಯಾಲಯ ಕ್ರೀಡಾಕೂಟಕ್ಕೆ ಮಾ.26ರಂದು ಕೇಂದ್ರ ಸಚಿವ ವಿ.ಸೋಮಣ್ಣ ಚಾಲನೆ ನೀಡಲಿದ್ದಾರೆ ಎಂದು ಕಲ್ಪತರು ವಿದ್ಯಾ ಸಂಸ್ಥೆಯ ಅಧ್ಯಕ್ಷ ಪಿ.ಕೆ. ತಿಪ್ಪೆರುದ್ರಪ್ಪ ತಿಳಿಸಿದರು.

ನಗರದ ಕಲ್ಪತರು ವಿದ್ಯಾಸಂಸ್ಥೆಯ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಮಾರ್ಚ್ 26 ರಿಂದ 29 ರವರೆಗೆ ನಾಲ್ಕು ದಿನಗಳ ಕಾಲ ನಡೆಯಲಿರುವ ಕ್ರೀಡಾಕಲ್ಪ-2.0 ಅಂತರ ವಿಟಿಯು ಕ್ರೀಡಾಕೂಟವು ರಾಜ್ಯದ ಕ್ರೀಡಾ ಚಟುವಟಿಕೆಗಳಿಗೆ ಹೊಸ ಚೈತನ್ಯ ತುಂಬಲಿದೆ. ಈ ಪ್ರತಿಷ್ಠಿತ ಕ್ರೀಡಾಕೂಟವನ್ನು ಆಯೋಜಿಸಲು ನಮ್ಮ ಸಂಸ್ಥೆ ಸಂಪೂರ್ಣ ತಯಾರಿ ನಡಸುತ್ತಿದೆ. ವಿದ್ಯಾರ್ಥಿಗಳ ಪ್ರತಿಭೆಗಳ ಪ್ರದರ್ಶನಕ್ಕೆ ಈ ಕ್ರೀಡಾಕೂಟ ಮಹತ್ವದ ವೇದಿಕೆಯಾಗಲಿದೆ ಎಂದರು.

ಸಂಸ್ಥೆಯ ಖಜಾಂಚಿ ಟಿ.ಎಸ್. ಶಿವಪ್ರಸಾದ್ ಮಾತನಾಡಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಸೇರಿದ ಕ್ರೀಡಾಪಟುಗಳು ಇಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲಿದ್ದಾರೆ. ಕ್ರೀಡೆಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ವಿಶೇಷವಾಗಿ ರೂಪಿಸಲಾಗಿದೆ. ಮಾ.26 ಮಧ್ಯಾಹ್ನ 3 ಗಂಟೆಗೆ ಶ್ರೀ ಕೆಂಪಮ್ಮ ದೇವಿ ದೇವಾಲಯದಿಂದ ಭವ್ಯ ಮೆರವಣಿಗೆ ನಡೆಯಲಿದ್ದು, ಕ್ರೀಡಾಪಟುಗಳು, ಸಾಂಸ್ಕೃತಿಕ ಕಲಾ ತಂಡಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 4ಗಂಟೆಗೆ ಕೇಂದ್ರ ಸಚಿವ ಸೋಮಣ್ಣ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಅಧ್ಯಕ್ಷ ಪಿ.ಕೆ.ತಿಪ್ಪೆರುದ್ರಪ್ಪ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಕೆ.ಷಡಕ್ಷರಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್‌ಚೇತನ್, ಉಪವಿಭಾಗಾಧಿಕಾರಿ ಸಪ್ತಶ್ರೀ.ಬಿ.ಕೆ., ವಿಟಿಯು ಕುಲಪತಿ ಡಾ. ವಿದ್ಯಾಶಂಕರ್, ವಿಟಿಯು ಅಕಾಡೆಮಿಕ್ ಸೆನೆಟ್ ಮೆಂಬರ್ ಡಾ. ಹೆಚ್.ಬಿ.ಬಾಲಕೃಷ್ಣ, ಏಕಲವ್ಯ ಪ್ರಶಸ್ತಿ ವಿಜೇತ ಅಂತರರಾಷ್ಟ್ರೀಯ ಕ್ರೀಡಾಪಟು ವಿ.ನಿಹಾಲ್‌ಜೋಯಲ್ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ.



ಮುಸ್ಲಿಮರಿಗೆ ಪಾನೀಯ ವಿತರಿಸಿದ ಕೆ.ಶೇಷಾದ್ರಿ

ರಾಮನಗರ: ನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಕೆ ನಂತರ ಮುಸ್ಲಿಮರಿಗೆ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಅವರು ಶುಭಾಷಯ ವಿನಿಮಯ ಮಾಡಿಕೊಂಡು ತಂಪು ಪಾನೀಯ, ಮಜ್ಜಿಗೆ ವಿತರಣೆ ಮಾಡಿದರು.


ಶನಿವಾರ ಬೆಳಿಗ್ಗೆ ಗಾಂಧಿಪಾರ್ಕ್ ಬಳಿ ಬೃಹತ್ ಶಾಮಿಯಾನ ಅಳವಡಿಸಿ ಮಜ್ಜಿಗೆಯನ್ನು ಮುಸ್ಲಿಮರಿಗೆ ವಿತರಣೆ ಮಾಡಿದರು. ಈ ಸಮಯದಲ್ಲಿ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿ ಒಂದು ತಿಂಗಳ ಕಾಲ ಆಹಾರ ತ್ಯಜಿಸುವುದಲ್ಲ, ಬದಲಾಗಿ ಕೆಟ್ಟ ಆಲೋಚನೆಗಳು, ಸುಳ್ಳು, ಅಸೂಯೆ ಮತ್ತು ದ್ವೇಷವನ್ನು ತ್ಯಜಿಸಿ, ಮನಸ್ಸು ಮತ್ತು ಆತ್ಮವನ್ನು ಶುದ್ಧೀಕರಿಸುವ ಪ್ರಕ್ರಿಯೆಯಾಗಿದೆ ಹಬ್ಬ ಆಚರಣೆ ಮಾಡುತ್ತಾರೆ ಎಂದು ಹೇಳಿದರು. ಧರ್ಮ ಗುರುಗಳ



ಸಂದೇಶದ ನಂತರ ಎಲ್ಲೆಡೆ ರಂಜಾನ್ ಹಬ್ಬವನ್ನು ಮುಸ್ಲಿಂಮರು ಸಾಮೂಹಿಕವಾಗಿ ಒಂದೆಡೆ ಸೇರಿ ಪ್ರಾರ್ಥನೆ ಮಾಡುವ ಮೂಲಕ ಆಚರಣೆ ಮಾಡುತ್ತಾರೆ. ಆಗಾಗಿ ಅವರಿಗೆ ರಂಜಾನ್ ಶುಭಾಶಯಗಳನ್ನು ತಿಳಿಸಿ. ಸಾವಿರಾರು ಮುಸ್ಲಿಮರೊಂದಿಗೆ ಕೆ.ಶೇಷಾದ್ರಿ,(ಶಶಿ) ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಮಜ್ಜಿಗೆ ವಿತರಣೆ ಮಾಡಿದ್ದು ಕಂಡು ಬಂದಿತು. ಟಿಎಪಿಸಿಎಂಎಸ್ ಅಧ್ಯಕ್ಷ ಸುರೇಶ್(ದೊಡ್ಡಿ), ನಗರಸಭೆ ಸದಸ್ಯ ಮುತ್ತುರಾಜು, ನಗರಾಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಪ್ರವೀಣ್, ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಭೂಷಣ್, ಮುಖಂಡರಾದ ಹಾಲಿನಚಂದ್ರು, ಕಬ್ಬಡಿವಿಜಿ, ದೇವರಾಜು, ಮಲ್ಲೇಗೌಡ, ರಾಮು, ಪ್ರಮೋದ್ (ಮೋದಿ), ಉಮಾಶಂಕರ್, ಲವ, ನಂದೀಶ್, ಶಿವರಾಜು ಹಾಗೂ ಇತರರು ಉಪಸ್ಥಿತರಿದ್ದರು.

ಶಾಸಕರಿಗೆ ಅವಕಾಶ ನೀಡುವ ಕುರಿತು ಸಭೆ: ಇಕ್ಬಾಲ್

ರಾಮನಗರ: ಸಂಪುಟ ಪುನರಾಚನೆ ವೇಳೆ ಮೊದಲ ಬಾರಿ ಗೆದ್ದ ಶಾಸಕರಿಗೆ ಅವಕಾಶ ಮಾಡಿಕೊಡುವ ಕುರಿತು 55 ಶಾಸಕರು ಸೇರಿ ಸಭೆ ನಡೆಸಿದ್ದು, ಈ ವಿಚಾರವನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರ್ನಾಲ್ಕು ಬಾರಿ ಗೆದ್ದ ಶಾಸಕರು ಸಭೆ ಮಾಡಿ, ಸಿಎಂಗೆ ಮನವಿ ಮಾಡಿದ್ದಾರೆ. ಹಾಗಾಗಿ ಮೊದಲ ಬಾರಿ ಹಾಗೂ ಎರಡು ಬಾರಿ ಗೆದ್ದ ಶಾಸಕರು ಕೂಡಾ ಸಭೆ ಮಾಡಿದ್ದೇವೆ. ನಮ್ಮ ಬೇಡಿಕೆಗಳನ್ನೂ ಸಿಎಂ, ಡಿಸಿಎಂಗೆ ತಿಳಿಸುವ ನಿಟ್ಟಿನಲ್ಲಿ ಚರ್ಚಿಸಿದ್ದೇವೆ ಎಂದು ತಿಳಿಸಿದರು.



ಡಿಸಿಎಂ ಡಿ.ಕೆ. ಶಿವಕುಮಾರ್ ಮೊದಲ ಬಾರಿ ಗೆದ್ದಾಗಲೇ ಸಚಿವರಾಗಿದ್ದರು. ಪ್ರಿಯಾಂಕ ಖರ್ಗೆ ಕೂಡಾ ಮೊದಲ ಬಾರಿ ಗೆದ್ದು ಸಚಿವರಾಗಿದ್ದರು. ಹಾಗಾಗಿ ಈಗಲೂ ಮೊದಲ ಬಾರಿ ಗೆದ್ದವರಿಗೂ ಅವಕಾಶ ಬೇಕು. ಈ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಲಾಗಿದೆ. ನಮ್ಮ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸುವ ವಿಶ್ವಾಸ ಇದೆ ಎಂದರು. ಇರಾನ್-ಇಸ್ರೇಲ್ ಯುದ್ಧದಿಂದ ಸಾಕಷ್ಟು ಅನಾನುಕೂಲ ಆಗುತ್ತಿದೆ.

ಗ್ಯಾಸ್ ಸಿಗದೇ ಹೋಟೆಲ್ ಗಳು ಮುಚ್ಚುತ್ತಿವೆ. ಗೃಹ ಬಳಕೆ ಸಿಲಿಂಡರ್ ಗೂ ಜನ ಪರದಾಡುವ ಪರಿಸ್ಥಿತಿ ಇದೆ. ಪೆಟ್ರೋಲ್, ಡೀಸೆಲ್ ದರವೂ ಏರಿಕೆ ಆಗುತ್ತಿದೆ. ಇದರಿಂದಾಗಿ ಬೇರೆ ಬೇರೆ ಉದ್ಯಮದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದರು.

ಬಾನಂದೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಸಂಘದಿಂದ ರೈತರಿಗೆ ಸಕಾಲಕ್ಕೆ ಸೌಲಭ್ಯ: ಅಧ್ಯಕ್ಷ

ರಾಮನಗರ: ತಾಲೂಕಿನ ಬಾನಂದೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ನಿರ್ದೇಶಕ ಬಿ.ಸಿ.ಬಸವರಾಜು ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಹಿಂದಿನ ಅಧ್ಯಕ್ಷರಾಗಿದ್ದ ಪಾಪಣ್ಣ(ನಾಗರಾಜು)ವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಬಾನಂದೂರು ಗ್ರಾಮದಲ್ಲಿರುವ ಸಂಘದ ಕಾರ್ಯಾಲಯದಲ್ಲಿ ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಸ್ಪರ್ಧೆ ಬಯಸಿ ಜೆಡಿಎಸ್ ಬೆಂಬಲಿತ ನಿರ್ದೇಶಕ ಬಿ.ಸಿ.ಬಸವರಾಜು ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ನಾಮನಿರ್ದೇಶಿತ ನಿರ್ದೇಶಕ ಕೇಶವಮೂರ್ತಿ ನಾಮಪತ್ರ ಸಲ್ಲಿಸಿದ್ದರು. ಚುನಾವಣೆಯಲ್ಲಿ ಬಿ.ಸಿ.ಬಸವರಾಜು 9 ಮತಗಳನ್ನು ಪಡೆದು ಜಯಶೀಲರಾದರು, ಕೇಶವಮೂರ್ತಿ 4 ಮತಗಳಿಸಿ ಪರಾಭವಗೊಂಡರು. ಮತದಾನ ಪ್ರಕ್ರಿಯೆಯಲ್ಲಿ ಸಂಘದ ಎಲ್ಲಾ ನಿರ್ದೇಶಕರು ಹಾಗೂ ಸೂಪರ್‌ವೈಸರ್ ಚೇತನ್ ಕುಮಾರ್ ಪಾಲ್ಗೊಂಡು ತಮ್ಮ ಹಕ್ಕು ಚಲಾಯಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಅಧಿಕಾರಿ ಪುರುಷೋತ್ತಮ್



ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ಶಿಕ್ಷಕ ಶಿವರಾಜು ಕಾರ್ಯನಿರ್ವಹಿಸಿದರು. ಸಂಘದ ಕಾರ್ಯದರ್ಶಿ ಕುಮಾರ್ ಇದ್ದರು. ಈ ವೇಳೆ ಸಂಘದ ನೂತನ ಅಧ್ಯಕ್ಷ ಬಿ.ಸಿ.ಬಸವರಾಜು ಮಾತನಾಡಿ, ನಿಕಟಪೂರ್ವ ಶಾಸಕರಾದ ಎ.ಮಂಜುನಾಥ್ ಹಾಗೂ ಬಿಡದಿ ಹೋಬಳಿ ಜೆಡಿಎಸ್ ಅಧ್ಯಕ್ಷರಾದ ಜಗದೀಶ್ ಗೌಡ ಅವರ ಆಶೀರ್ವಾದ ಮತ್ತು ಸಂಘದ ನಿರ್ದೇಶಕರು ಮುಖಂಡರು ನನ್ನ ಮೇಲೆ ವಿಶ್ವಾಸವಿಟ್ಟು ಸೇವೆ ಮಾಡುವ ಅವಕಾಶ ಕಲ್ಪಿಸಿದ್ದಾರೆ. ಸಂಘದಿಂದ ರೈತರಿಗೆ ಕಾಲಕಾಲಕ್ಕೆ ನೀಡುವ ಸೌಲತ್ತುಗಳ ಜತೆಗೆ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕಿದೆ. ರೈತರ ಆರ್ಥಿಕ ಮಟ್ಟವನ್ನು ಸುಧಾರಣೆಗೊಳಿಸುವುದು ನಮ್ಮ ಧ್ಯೇಯವಾಗಿದೆ. ತಮ್ಮ ಅವಧಿಯಲ್ಲಿ ಅಭಿವೃದ್ಧಿಪೂರಕ ಆಡಳಿತ ನೀಡಲಾಗುವುದು ಎಂದು ತಿಳಿಸಿದರು.

ನೂತನ ಅಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಮುಖಂಡರು ಮತ್ತು ಕಾರ್ಯಕರ್ತರು ಸಿಹಿಹಂಚಿ ಸಂಭ್ರಮಿಸಿದರು. ಸಂಘದ ನಿಕಟಪೂರ್ವ ಅಧ್ಯಕ್ಷ ಪಾಪಣ್ಣ(ನಾಗರಾಜು), ಉಪಾಧ್ಯಕ್ಷೆ ಶಂಬಮ್ಮ, ನಿರ್ದೇಶಕ ಶ್ರೀಧರ್, ಜಿ.ಜೆ.ಕುಮಾರ್, ಗಿರಿಜಮ್ಮ, ಜಯಕುಮಾರ್, ಗಂಗಾಧರ್, ಕೃಷ್ಣಪ್ಪ, ಬಿಡದಿ ಹೋಬಳಿ ಜೆಡಿಎಸ್ ಅಧ್ಯಕ್ಷರಾದ ಬಿ.ಎನ್.ಜಗದೀಶ್‌ಗೌಡ, ಕುಮಾರ್, ರಾಜೇಶ್, ರಾಜಶೇಖರ್, ಮಾದೇಗೌಡ್ರು, ಸದಾ, ಕೆಂಪರಾಜು, ಪ್ರಕಾಶ್, ಸಮೃದ್ಧಿ ರೇಣುಕಾ, ಶಿವನಂಜಯ್ಯ, ಸುರೇಶ್, ರಾಮಣ್ಣ ಇದ್ದರು.

ಚನ್ನಪಟ್ಟಣದಲ್ಲಿ ಬಲಗೈ ಸಮುದಾಯದ ಪ್ರತಿಭಟನೆ ಪ್ರಚಾರಕ್ಕೆ ಚಾಲನೆ

ಮನೆ ಮನೆಗೆ ತೆರಳಿ ಜನರಿಗೆ ಮಾಹಿತಿ

ಚನ್ನಪಟ್ಟಣ: ಮಾರ್ಚ್ 25ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನಾ ಸಮಾವೇಶದ ಅಂಗವಾಗಿ ಬಲಗೈ ಸಮುದಾಯಗಳ ಒಕ್ಕೂಟವು ಚನ್ನಪಟ್ಟಣದಲ್ಲಿ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಿತು.

ಪಟ್ಟಣದ ಪುರ ಪೊಲೀಸ್‌ಠಾಣೆ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್‌ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ, ಬಳಿಕ ಆಟೋರಿಕ್ಷಾಗಳಿಗೆ ಚಾಲನೆ ನೀಡಿ ಮನೆ ಮನೆಗೆ ತೆರಳಿ ಜನರಿಗೆ ಮಾಹಿತಿ ನೀಡುವ ಕಾರ್ಯ ಆರಂಭಿಸಲಾಯಿತು.

ಈ ವೇಳೆ ಮಾತನಾಡಿದ ಮುಖಂಡರು, ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಸಮೀಕ್ಷೆ ಸಂಪೂರ್ಣವಾಗಿ ನಡೆಯದೇ, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಅಗತ್ಯ ಅಂಕಿ ಅಂಶಗಳನ್ನು ಸಂಗ್ರಹಿಸದೇ ವರದಿ ಸಿದ್ಧಪಡಿಸಲಾಗಿದೆ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿಯ ಬಲಕ್ಕೆ ಸಮುದಾಯದ ಜನಸಂಖ್ಯೆಯನ್ನು ನಾಲ್ಕು ಭಾಗಗಳಾಗಿ ವಿಭಜಿಸಿರುವುದು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿದ್ದು, ಇದರಿಂದ ಜಾತಿಗಳ ನಡುವೆ ಅಸಮಾಧಾನ ಉಂಟಾಗುತ್ತಿದೆ ಎಂದು ಹೇಳಿದರು.

ಹಳೆಯ ಮೀಸಲಾತಿ ವ್ಯವಸ್ಥೆಯನ್ನು ಯಾವುದೇ ಒಳ ಮೀಸಲಾತಿ ಇಲ್ಲದೆ ಮುಂದುವರಿಸಲು ಆಗ್ರಹಿಸಿದರು. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು. 2025ರಲ್ಲಿ ಹೊರಡಿಸಿರುವ



ಮೀಸಲಾತಿ ಆದೇಶವನ್ನು ಹಿಂಪಡೆಯಬೇಕು ಮತ್ತು ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಸೇರಿದ 63 ಜಾತಿಗಳಿಗೆ ಉದ್ಯೋಗ, ಶಿಕ್ಷಣ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಪಡೆಯಲು ಪ್ರತ್ಯೇಕ ಅಧಿಸೂಚನೆ ಹೊರಡಿಸಬೇಕೆಂದು ಮನವಿ ಮಾಡಿದರು. ಅಕ್ಕೂರ್ ಶೇಖರ್, ಜಯಕಾಂತ್ ಚಾಲುಕ್ಯ, ಮತ್ತೀಕೆರೆ ಹನುಂತಯ್ಯ, ಮಂಗಳವಾರಪೇಟೆ ಶೇಖರ್, ಡಾ. ಲೋಕಾನಂದ್, ಅಪ್ಪಗೆರೆ ಪ್ರದೀಪ್, ಶಿವಮೂರ್ತಿ, ನೀಲಸಂದ್ರ ಸಿದ್ದರಾಮು, ಪ್ರಸಾದ್, ಭರತ್ (ನೀಲಕಂಠನಹಳ್ಳಿ), ಕೂಡ್ಲೂರುಕಾಂತರಾಜು, ರವಿಕುಮಾರ್, ಹರಿಸಂದ್ರ ಸತೀಶ್ ಸೇರಿದಂತೆ ಹಲವು ಮುಖಂಡರು ಹಾಗೂ ಸಮುದಾಯದ ಸದಸ್ಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಸಾಮೂಹಿಕ ಪ್ರಾರ್ಥನೆ ಸಮಾಜದ ಶಾಂತಿಗೆ ದಾರಿ

ಕೆಜಿಎಫ್: ಮಾನವ ಕುಲದ ಒಳಿತಿಗಾಗಿ ಪ್ರತಿಯೊಬ್ಬರೂ ಪ್ರಾರ್ಥಿಸುವುದು ಅತ್ಯಂತ ಅವಶ್ಯಕ ಎಂದು ಶಾಸಕಿ ರೂಪಕಲಾ ಎಂ ಶಶಿಧರ್ ಅಭಿಪ್ರಾಯಪಟ್ಟರು. ಭಾರತ ದೇಶವು ವಿವಿಧ ಜಾತಿ ಹಾಗೂ ಸಂಸ್ಕೃತಿಗಳಿಂದ ಕೂಡಿದ ರಾಷ್ಟ್ರವಾಗಿದ್ದು, ವಿವಿಧತೆಯಲ್ಲಿ ಏಕತೆ ಎಂಬ ಮಹತ್ವದ ಮೌಲ್ಯವನ್ನು ಹೊಂದಿದೆ. ಯಾವ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಎಲ್ಲಾ ಧರ್ಮಗಳೂ ಪ್ರೀತಿ ಮತ್ತು ಸಹಾನುಭೂತಿಯನ್ನು ಸಾರುತ್ತವೆ. ಈ ಮೌಲ್ಯಗಳನ್ನು ಅರಿತು ಬದುಕಿದರೆ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯವೆಂದು ಅವರು ಹೇಳಿದರು. ರಂಜಾನ್ ಹಿನ್ನೆಲೆಯಲ್ಲಿ ಕೆಜಿಎಫ್ನ ರಾಬರ್ಟ್ಸನ್ ಪೇಟೆಯ ಅಶೋಕನಗರದಲ್ಲಿರುವ ಜಾಮಿಯಾ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಪ್ರಾರ್ಥನೆ ಬಳಿಕ ಧರ್ಮಗುರುಗಳು ಪ್ರವಚನ ನೀಡಿ, ಧರ್ಮದ ಮಹತ್ವವನ್ನು ವಿವರಿಸಿದರು. ಮಾಜಿ ನಗರಸಭೆ ಸದಸ್ಯ ಮುಜಾಹಿದ್ ಖಾನ್, ಹಿಂದಿನ ವರ್ಷಗಳಲ್ಲಿ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ವಿಭಿನ್ನ ದಿನಾಂಕಗಳಲ್ಲಿ ರಂಜಾನ್ ಹಬ್ಬ ಆಚರಿಸಲಾಗುತ್ತಿತ್ತು. ರಾಜ್ಯ ಮತ್ತು ದೇಶದಲ್ಲಿ ಶಾಂತಿ ನೆಲೆಸಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದಾಗಿ ಹೇಳಿದರು. ಮುಸ್ಲಿಂ ಸಮುದಾಯದ ಹಿರಿಯ ನಾಯಕರು ಹಾಗೂ ಮಾಜಿ ನಗರಸಭೆ ಅಧ್ಯಕ್ಷರಾದ ಅತಾವುಲ್ಲಾ, ಶಾಜಾದ್, ನಯಾಜ್, ಪಯಾಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಧರ್ಮಗುರುಗಳು ಸುಮಾರು ಒಂದು ಗಂಟೆ ಕಾಲ ಧರ್ಮೋಪದೇಶ ನೀಡಿದರು.

ರೈಲಿನಲ್ಲಿ ಸಾಗಿಸುತ್ತಿದ್ದ 21ಕೆ.ಜಿ.ಗಾಂಜಾ ವಶ

ಬಂಗಾರಪೇಟೆ: ಬಿಹಾರ್‌ದ ಪಾಟ್ನಾದಿಂದ ಬೆಂಗಳೂರಿಗೆ ವ್ಯಕ್ತಿಯೊಬ್ಬ 10.75 ಲಕ್ಷ ಬೆಲೆ ಬಾಳುವ 21.5 ಕೆಜಿ ಗಾಂಜಾ ಸಾಗಾಣಿಕೆ ಮಾಡುತ್ತಿರುವುದನ್ನು ಬಂಗಾರಪೇಟೆ ರೈಲ್ವೆ ಪೊಲೀಸ್ ಠಾಣೆಯ ಅರಕ್ಷಕ ಉಪನಿರೀಕ್ಷಕ ಬಿ.ನಲ್ಲರಾಜು ನೇತೃತ್ವದಲ್ಲಿ ಗಾಂಜಾ ಸಮೇತ ಸೆರೆ ಹಿಡಿದ್ದಾರೆ. ಬಿಹಾರ ರಾಜ್ಯದ ಪಾಟ್ನಾದಿಂದ ದಾನಾಪುರ್ ಎಕ್ಸ್‌ಪ್ರೆಸ್ ರೈಲುಗಾಡಿಯಲ್ಲಿ ಪಾಟ್ನಾ ನಿವಾಸಿ ಇಂದ್ರಜಿತ್ ಕುಮಾರ್ ಮೆಹತೋ (28) ಎಂಬ ವ್ಯಕ್ತಿ ಮೂರು ಚೀಲಗಳಲ್ಲಿ ತುಂಬಿಸಿಕೊಂಡು 3 ಎಸಿ ಕ್ಲಾಸ್ ರೈಲಿನಲ್ಲಿ ಬಂದಿದ್ದು, ಈ



ರೈಲುಗಾಡಿಯು ವೈಟ್‌ಫೀಲ್ಡ್ ನಿಲ್ದಾಣದಲ್ಲಿ ನಿಲುಗಡೆ ಇಲ್ಲದೇ ಇರುವುದರಿಂದ ಬಂಗಾರಪೇಟೆ ರೈಲ್ವೆ ಜಂಕ್ಷನ್‌ನಲ್ಲಿ ಇಳಿದು ಬಂಗಾರಪೇಟೆಯಿಂದ ಬೆಂಗಳೂರಿನ ವೈಟ್‌ಫೀಲ್ಡ್‌ಗೆ ಪ್ಯಾಸೆಂಜರ್ ವಾಹನದಲ್ಲಿ ಹೋಗಲು ಯೋಜನೆ ರೂಪಿಸಿಕೊಂಡಿದ್ದನು, ಖಚಿತ ಮಾಹಿತಿ ಮೇರೆಗೆ ರೈಲ್ವೆ ಪೊಲೀಸ್ ಎಸ್ಪಿಸಾರಾ ಫಾತಿಮಾ, ರೈಲ್ವೆ ಡಿವೈಎಸ್‌ಪಿ ಸತೀಶ್ ಕುಮಾರ್ ಮಾರ್ಗದರ್ಶನದಲ್ಲಿ ಬಂಗಾರಪೇಟೆ ರೈಲ್ವೆ ಪೊಲೀಸರು ಆರೋಪಿ ಇಂದ್ರಜಿತ್ ಕುಮಾರ್ ಮೆಹತೋ ಎಂಬ ಆರೋಪಿಯನ್ನು ರೈಲ್ವೆ ಜಂಕ್ಷನ್‌ನಲ್ಲಿ ಇಳಿದ ತಕ್ಷಣವೇ ಗಾಂಜಾ ಸಮೇತ ಸೆರೆ ಹಿಡಿದಿದ್ದಾರೆ, ಬಂಗಾರಪೇಟೆ ರೈಲ್ವೆ ಪೊಲೀಸ್ ಅರಕ್ಷಕ ನಿರೀಕ್ಷಕ ಬಿ.ನಲ್ಲರಾಜು, ಎಎಸ್‌ಐ ರಮೇಶ್, ಹಿಮಾಚಲ್, ಮುಖ್ಯಪೇದೆ ವೆಂಕಟೇಶ್, ಪೇದೆ ಸಂತೋಷ್ ಕುಮಾರ್ ಕಾರ್ಯದಕ್ಷತೆಯನ್ನು ರೈಲ್ವೆ ಪೊಲೀಸ್ ಎಸ್ಪಿ ಸಾರಾ ಫಾತಿಮಾ ಅವರು ಪ್ರಶಂಸಿಸಿದ್ದಾರೆ.

ಚಾಮುಂಡೇಶ್ವರಿ ಜಾತ್ರಾ ಮಹೋತ್ಸವ

ಕೆಜಿಎಫ್: ಸುಮಾರು 250 ವರ್ಷಗಳಿಗಿಂತ ಹಳೆಯದಾದ ಚಾಮುಂಡೇಶ್ವರಿ ದೇವಸ್ಥಾನವನ್ನು ಮೈಸೂರು ಮಹಾರಾಜರ ಕಾಲದಲ್ಲಿ ಸ್ಥಾಪಿಸಲಾಗಿದ್ದು, ಅಂದಿನಿಂದ ಇಂದಿನವರೆಗೂ ಪಿಚ್ಚಹಳ್ಳಿ ಗ್ರಾಮಸ್ಥರು ಎಲ್ಲರೂ ಒಂದಾಗಿ ಸೇರಿ ವಿಜೃಂಭಣೆಯಿಂದ ಜಾತ್ರಾ ಮಹೋತ್ಸವವನ್ನು ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ ಎಂದು ದೇವಾಲಯ ಕನ್ವಿನರ್ ನಾರಾಯಣರೆಡ್ಡಿ ಹೇಳಿದರು. ತಾಲೂಕಿನ ಇತಿಹಾಸ ಪ್ರಸಿದ್ಧ ಚಾಮುಂಡೇಶ್ವರಿ ದೇವಾಲಯದ 9 ದಿನಗಳ ಜಾತ್ರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿ ಮಾತನಾಢಿದರು. ಹಬ್ಬದ ಹಿನ್ನಲೆಯಲ್ಲಿ ಗ್ರಾಮದಿಂದ ದೂರದ ದೇಶ ವಿದೇಶಗಳಲ್ಲಿ ನೆಲೆಸಿರುವ ಸ್ಥಳೀಯರು ಸಹ ಜಾತ್ರೆಗೆ ಪ್ರತಿ ವರ್ಷ ತಪ್ಪದೇ ಬಂದು ಶ್ರದ್ಧಾ ಭಕ್ತಿಯಿಂದ ಪಾಲ್ಗೊಳ್ಳುವ ಮೂಲಕ ದೇವಿಯ ಕೃಪೆಗೆ ಪಾತ್ರರಾಗುವರು ಎಂದರು. ಮಾ. 20ರಂದು ವೀರಶೈವ ಸಂಘದವರಿಂದ ಪ್ರಾರಂಭವಾಗುವ ಗಂಗಸಾಟು, 21 ರಂದು ಧ್ವಜಾರೋಹಣ, 22 ರಂದು ಸಿಂಹವಾಹನೋತ್ಸವ 23 ರಂದು ಬ್ರಹ್ಮರಥೋತ್ಸವ ರಾತ್ರಿ, ಮಹಿಷಾಸುರ ವಾಹನೋತ್ಸವ, 24 ರಂದು ಶಿರಸ್ಸು, ರಾತ್ರಿ ಮುತ್ಯಾಲ ಪಲ್ಲಕ್ಕಿ, 25ರಂದು ಅಶ್ವವಾಹನೋತ್ಸವ, 26 ರಂದು ಪುಷ್ಪಪಲ್ಲಕ್ಕಿ, 27 ರಂದು ಪಲ್ಲಕ್ಕಿ, 28 ನೇ ತಾರೀಖು ವಸಂತೋತ್ಸವದಂದು ಪೂರ್ಣಗೊಳ್ಳಲಿದ್ದು 24 ರಂದು ಅತಿ ವಿಜೃಂಭಣೆಯಿಂದ ಶಿರಸ್ಸು ಆಚರಣೆ ಮಾಡಲಾಗುತ್ತದೆ ಎಂದರು.



ಮಾ.25ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಗೆ ಸಂಬಂಧಿಸಿದಂತೆ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರು ಘೋಷಣೆ ಕೂಗಿದರು.

ಒಳ ಮೀಸಲಾತಿ: ವರದಿ ತಿರಸ್ಕಾರಕ್ಕೆ ಆಗ್ರಹಿಸಿ ಪ್ರತಿಭಟನೆ

ಕೋಲಾರ: ಒಳ ಮೀಸಲಾತಿ ಹೆಸರಿನಲ್ಲಿ ಸೌಹಾರ್ದತೆಯಿಂದಿದ್ದ ಹೊಲೆಯ-ಮಾದಿಗ ಸಮುದಾಯಗಳ ನಡುವೆ ಬೆಂಕಿ ಇಟ್ಟ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ತಿರಸ್ಕಾರಕ್ಕೆ ಆಗ್ರಹಿಸಿ ಮತ್ತು ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಒತ್ತಾಯಿಸಿ ಮಾ.25ರಂದು ಬುಧವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ದಮನಿತರ ಸೇವಾ ಸಮಿತಿ ರಾಜ್ಯ ಅಧ್ಯಕ್ಷ ಮೇಡಿಹಾಳ ಮುನಿಅಂಜಿನಪ್ಪ ತಿಳಿಸಿದರು.

ನಗರದ ನಚಿಕೇತನ ನಿಲಯದ ಬುದ್ದ ಮಂದಿರದಲ್ಲಿ ಬಲಗೈ ಜಾತಿ ಸಮುದಾಯವರಿಂದ ವತಿಯಿಂದ ಮಾ.25 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಗೆ ಸಂಬಂಧಿಸಿದಂತೆ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಜ್ಞಾನಪ್ರಕಾಶ್ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆಯಲಿರುವ ಬೃಹತ್ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ಸಾವಿರಾರು ಬಲಗೈ ಸಮುದಾಯದ ಬಂಧುಗಳು ಭಾಗವಹಿಸಬೇಕು ಎಂದು ಮನವಿ ಮಾಡಿದರು.



ಜೆಡಿಎಸ್ ಮುಖಂಡ ಸಿಎಂಆರ್ ಶ್ರೀನಾಥ್ ಕೋಲಾರ ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ಗಂಗೋತ್ರಿ ಕ್ರಿಕೆಟರ್ಸ್ ಯುವಕರ ಬಳಗ ವತಿಯಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಮಾ.24ಕ್ಕೆ ಒಳಮೀಸಲಾತಿರಹಿತ ಹಳೆ ಮೀಸಲಾತಿ ಜಾರಿಗೆ ಒತ್ತಾಯ

ಪ್ರತಿಭಟನೆಗೆ ನಿರ್ಧಾರ

ಕೋಲಾರ: ಒಳಮೀಸಲಾತಿ ರಹಿತ ಹಳೆ ಮೀಸಲಾತಿಯ ಜಾರಿಗೆ ಒತ್ತಾಯಿಸಿ ಇದೇ ಮಾರ್ಚ್ 24 ರ ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಭೋವಿ,ಬಂಜಾರ, ಕೊರಮ,ಕೊರಚ ಸಮುದಾಯವರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಯುವ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಮಾಲೂರಿನ ಎಸ್.ವಿ.ಲೋಕೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ವೇದಿಕೆಯ ಮುಖಂಡರುಗಳೊಂದಿಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕ,ಅಪೂರ್ಣ ಹಾಗೂ ದೋಷ ಪೂರಿತವಾಗಿದ್ದು ಮತ್ತು ಪಕ್ಷಪಾತದಿಂದ ಕೂಡಿರುವುದರಿಂದ ರೋಸ್ಟರ್ ಪದ್ಧತಿಯಿಂದ ಕೆಳ ಸಮುದಾಯಗಳಿಗೆಶಿಕ್ಷಣಮತ್ತು ನೌಕರರಿಗೆಸಮರ್ಪಕ ಮೀಸಲಾತಿ ದೊರೆಯದೆ ಅನ್ಯಾಯವಾಗಲಿದೆ ಎಂದು ವಿವರಿಸಿದರು. ರಾಷ್ಟ್ರದಲ್ಲಿ ಭೋವಿ ಸಮುದಾಯದ ಜನಸಂಖ್ಯೆ 7 ಕೋಟಿಗೂ ಅಧಿಕವಿದೆ.ಭಾರತದ ಸರ್ವೋಚ್ಚನ್ಯಾಯಾಲಯವು ಕಳೆದ 2024ರ ಆಗಸ್ಟ್ 1 ರಂದು ಒಳ ಮೀಸಲಾತಿ ನೀಡಲು ಆಯಾ ರಾಜ್ಯಗಳಿಗೆ ಅಧಿಕಾರವಿದೆಯೆಂದು ತೀರ್ಪು ನೀಡಿದೆ.

ಪರಿಶಿಷ್ಟ ಜಾತಿಯಲ್ಲಿನ ಎಲ್ಲಾ ಉಪ ಜಾತಿಗಳಿಗೆ ಸೂಕ್ತವಾದ ಪ್ರಾತಿನಿಧ್ಯ ಖಚಿತವಾದ ಅಂಕಿ ಅಂಶಗಳ ಆಧಾರದ ಮೇಲೆ ಒಳಮೀಸಲಾತಿ ನೀಡಬಹುದೆಂದು ತಿಳಿಸಿದೆ. ಅನುಕೂಲ ಸಿಂಧು ರಾಜಕೀಯಕ್ಕಾಗಿ ಒಳ ಮೀಸಲಾತಿಯನ್ನು ಅವೈಜ್ಞಾನಿಕವಾಗಿ ನೀಡಬಾರದೆಂದು ನ್ಯಾಯಾಲಯದಲ್ಲಿ ಸ್ಪಷ್ಟ ಪಡಿಸಿದೆ ಎಂದರು. ಒಂದೇ ಜಾತಿಯನ್ನು ಒಲೈಸಲು ಪರಿಶಿಷ್ಟ ಜಾತಿಯಲ್ಲಿ ಮಾದಿಗ ಜನಾಂಗವು ಅತಿ ಹೆಚ್ಚು ಬಿಂಬಿಸಿದೆ. ಎಡಗೈ ಗಿಂತ ಕಡಿಮೆ ಎಂದು ಬಲಗೈಯನ್ನು



ರೋಸ್ಟರ್ ಬಿಂದು ನಿಗದಿ

ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿಯನ್ವಯ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯ ಭೋವಿ,ಬಂಜಾರ,ಕೊರಮ, ಕೊರಚ, ಛಲವಾದಿ,ಚರ್ಮಕಾರ ಇತರೆ ಸೂಕ್ಷ್ಮ ಜಾತಿಗಳ ಸಮುದಾಯವನ್ನು ಗ್ರೂಫ್ ಸಿ ಗೆ ಸೇರಿಸುವ ಮೂಲಕ ಯಾವುದೇ ಉನ್ನತ ಹುದ್ದೆಗಳು ಈ ಜಾತಿಗಳಿಗೆ ಸಿಗದಂತೆ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿ ಅನ್ಯಾಯ ಮಾಡಲಾಗಿದೆ.

ಗುರುತಿಸಲಾಗಿದೆ. ಅದರೆ ರಾಜ್ಯದಲ್ಲಿಯೇ ಅತಿ ಹೆಚ್ಚು ಜನಸಂಖ್ಯೆಯುಳ್ಳವರು ಬೋವಿ ಕೊರಚ, ಕೊರಮ. ಲಂಬಾಣಿಯವರು ಇದ್ದಾರೆ ಎಂದರು.

ಅದರೆ ರಾಜ್ಯ ಸರ್ಕಾರವು ಮೀಸಲಾತಿ ವರ್ಗೀಕರಣ ಮಾಡಿರುವುದು ಸಮಾಂಜಸವಾಗಿಲ್ಲದ ಕಾರಣ ಪುನರ್ ಪರಿಶೀಲನೆ ಮಾಡಬೇಕೆಂದು ತಿಳಿಸಿತ್ತು. ಈ ತೀರ್ಪಿನ ಅನ್ವಯ ಕರ್ನಾಟಕ ಸರ್ಕಾರವು ನಿವೃತ್ತ ನ್ಯಾಯಾಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಅವರ ಏಕ ಸದಸ್ಯ ಒಳ ಮೀಸಲಾತಿ ವಿಚಾರ ಆಯೋಗವನ್ನು ನೇಮಕ ಮಾಡಿ ನಡೆಸಿರುವ ಸಮೀಕ್ಷೆಯ ವರದಿಯು ಅವೈಜ್ಞಾನಿಕವಾಗಿದೆ. ಮೀಸಲಾತಿಯನ್ನು ಶೆ 56ಕ್ಕೆ ಏರಿಕೆ ಮಾಡಿರುವುದನ್ನು ಕೈ ಬಿಟ್ಟು ಶೇ 50ರ ಒಳಗೆ ಮೀಸಲಾತಿಯನ್ನು ನಿಗಧಿಪಡಿಸಬೇಕೆಂದು ಒತ್ತಾಯಿಸಿದರು.

ಒಳ ಮೀಸಲಾತಿ ಅಳವಡಿಸುವ ಬಗ್ಗೆ ಇದೇ ತಿಂಗಳು 27 ರಂದು ರಾಜ್ಯ ಸಂಪುಟದ ವಿಶೇಷ ಸಭೆ ನಡೆಯಲಿದ್ದು, ಸರ್ಕಾರದ ಗಮನ ಸೆಳೆಯಲು ಹಾಗೂ ಹಳೆ ಮೀಸಲಾತಿಯ ಜಾರಿಗೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.ಪ್ರತಿಭಟನೆಯಲ್ಲಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ನಮ್ಮ ಹಕ್ಕುಗಳನ್ನು ಪಡೆಯಲು ಸಹಕಾರ ನೀಡಬೇಕೆಂದು ಅವರು ಮನವಿ ಮಾಡಿದರು.

ಸಮುದಾಯದ ಅಗ್ರಗಣ್ಯ ನಾಯಕಿ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಮಂಗಮ್ಮ ಮುನಿಸ್ವಾಮಿ ರವರ ನೇತೃತ್ವದಲ್ಲಿ ಜಿಲ್ಲೆಯ ಪ್ರತಿ ತಾಲೂಕಿನಿಂದ ಒಂದು ಸಾವಿರ ಜನ ಭಾಗವಹಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಒಸಿಸಿಐ ರಾಷ್ಟ್ರೀಯ ಉಪಾಧ್ಯಕ್ಷ ಮುನಿಮಾರಪ್ಪ,ಮುಖಂಡರಾದ ಟಿ.ವೆಂಕಟರಮಣ, ವೇದಿಕೆಯ ಜಿಲ್ಲಾ ಅಧ್ಯಕ್ಷ ಎನ್.ಮಂಜುನಾಥ್ (ತಾರಕಮಂಜು), ಉಪಾಧ್ಯಕ್ಷ ಕೆ.ವಿ.ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್, ಖಜಾಂಚಿ ನಾರಾಯಣ ಸ್ವಾಮಿ, ಕೋಲಾರ ತಾಲ್ಲೂಕು ಅಧ್ಯಕ್ಷ ವೆಂಕಟರಾಮ್,ತಾಲ್ಲೂಕು ಪ್ರಧಾನ ಕಾರ್ಯದರ್ಶಿ ದೀಪಕ್ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಗು ಶಿಕ್ಷಣದಿಂದ ವಂಚಿತವಾಗದಿರಲಿ

ಗ್ರಾಮೀಣ ಶಾಲೆಗಳ ಬಲವರ್ಧನೆಗೆ ಭಾರತ್ ಸುಧಾರ್ ಸಂಸ್ಥೆ ಗ್ರೀನ್‌ಬೋರ್ಡ್ ವಿತರಣೆ

ಕೋಲಾರ: ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಪ್ರಗತಿ ಮತ್ತು ಬಲವರ್ಧನೆಗೆ ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದ್ದು, ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಹೃದಯವಂತಿಕೆ ಮಾತ್ರವಲ್ಲ ಅದು ಪ್ರತಿಯೊಬ್ಬರ ಕರ್ತವ್ಯವೂ ಆಗಬೇಕು ಎಂದು ಭಾರತ್ ಸುಧಾರ್ ಸಂಸ್ಥೆಯ ಕಿರಣ್ ಅಭಿಪ್ರಾಯಪಟ್ಟರು.

ಶಿಕ್ಷಕ ಗೆಳೆಯರ ಬಳಗದ ಆಶ್ರಯದಲ್ಲಿ ನಗರದಲ್ಲಿ ಕೋಲಾರ ಜಿಲ್ಲೆಯ ಐವತ್ತು ಸರ್ಕಾರಿ ಶಾಲೆಗಳಿಗೆ ತಮ್ಮ ಸಂಸ್ಥೆಯಿಂದ ಗ್ರೀನ್ ಬೋರ್ಡ್ ವಿತರಿಸಿ ಅವರು ಮಾತನಾಡುತ್ತಿದ್ದರು. ಸರ್ಕಾರಿ ಶಾಲೆಗಳನ್ನು ಉಳಿಸುವ ಕೆಲಸವಾಗಬೇಕು, ಇದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿಯೂ ಆಗಬೇಕು ಎಂದ ಅವರು, ಈ ಶಾಲೆಗಳಿಗೆ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿ ಶಕ್ತಿ ತುಂಬಬೇಕು ಎಂದರು. ಈಗಾಗಲೇ ನಮ್ಮ ಸಂಸ್ಥೆಯಿಂದ ಜಿಲ್ಲೆಯ ಮುಳಬಾಗಿಲಿನ ನಾಲ್ಕು ಸರ್ಕಾರಿ ಶಾಲೆಗಳಿಗೆ ಸುಣ್ಣ ಬಣ್ಣ ಮಾಡಲಾಗಿದೆ,ಬಂಗಾರಪೇಟೆಯ ಮಾಗುಂದಿಯಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ, ಎರಡು ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಮತ್ತು ಜೂನ್ ಒಳಗೆ ಕೆಲವು ಶಾಲೆಗಳಿಗೆ ಡೆಸ್ಕ್ ವಿತರಿಸಲಾಗುವುದು ಎಂದು ತಿಳಿಸಿದರು.

ಶಿಕ್ಷಕ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ ಮಾತನಾಡಿ, ಭಾರತ್ ಸುಧಾರ್ ಸಂಸ್ಥೆ ನಮಗೆ ಸಿಕ್ಕಿರುವುದು ನಮ್ಮ ಅದೃಷ್ಟ. ಇಂತಹ ಅನೇಕ ಸಂಸ್ಥೆಗಳು ಸರ್ಕಾರಿ ಶಾಲೆಗಳಿಗಾಗಿ ಕೆಲಸ ಮಾಡುತ್ತಿವೆ ನಮ್ಮ ಬಳಗದಿಂದ ಎಲ್ಲ ರೀತಿಯ ಸಹಕಾರ ನೀಡುವುದರ ಜೊತೆಗೆ ನಿಮ್ಮ ಜೊತೆ ನಾವೂ ನಿಲ್ಲುತ್ತೇವೆ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಶಿಕ್ಷಕ ಗೆಳೆಯರ ಬಳಗದ ಖಜಾಂಚಿ ಮಾಗುಂದಿ ಶ್ರೀನಿವಾಸ್,ಭಾರತ್ ಸುಧಾರ್ ಸಂಸ್ಥೆಯ ಶಶಿಕಾಂತ್ ರಮೇಶ್ ,ಕೊಳಮೂರು ಶಾಲೆಯ ರಮೇಶ್,ಎನ್ ಟಿಜಿ.ಎಸ್.ಎಮ್ ಶಾಲೆ ಸೇರಿದಮತೆ ಐವತ್ತು ಶಾಲೆಗಳ ಮುಖ್ಯಶಿಕ್ಷಕರು ಹಾಜರಿದ್ದರು.



ಶುದ್ಧ ನೀರಿನ ಘಟಕದ ಕೊಡುಗೆ

ಕೋಲಾರ: ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ದಾನಿಗಳ ನೆರವು ಅಗತ್ಯವಾಗಿದೆ ಮತ್ತು ಖಾಸಗಿ ಶಾಲೆಗಳ ಪೈಪೋಟಿ ಎದುರಿಸಿ ಮಕ್ಕಳಿಗೆ ಅಗತ್ಯ ಸೌಲಭ್ಯ ಸಿಗಲು ಸಂಘ ಸಂಸ್ಥೆಗಳು, ಕೈಗಾರಿಕೆಗಳ ಸಿಎಸ್‌ಆರ್ ನಿಧಿ ಬಳಸುವಂತಾಗಬೇಕು ಎಂದು ಶಾಲೆ ದತ್ತು ಪಡೆದಿರುವ ಕೆ.ಎಂ.ಚೌಡೇಗೌಡ ತಿಳಿಸಿದರು.

ತಾಲೂಕಿನ ವೇಮಗಲ್- ಕುರುಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕುರುಗಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕುರುಗಲ್ ಗ್ರಾಮದ ದಿವಂಗತ ಕಾಡೇನಹಳ್ಳಿ ವೆಂಕಟರಾಯಪ್ಪ ಮಗ ಮುನಿವೆಂಕಟೇಶಪ್ಪ ಎಂಬುವವರು ಶಾಲೆಗೆ ಸುಮಾರು 20 ಸಾವಿರ ರುಪಾಯಿ ಖರ್ಚು ಮಾಡಿ ನೀಡಿರುವ ಕುಡಿಯುವ ನೀರಿನ ಫಿಲ್ಟರ್‌ಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಮಕ್ಕಳ ಆರೋಗ್ಯ ದೃಷ್ಟಿಯಿಂದ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಅಗತ್ಯವಿದೆ ಎಂದರು. ಇಲ್ಲವಾದಲ್ಲಿ ಮಕ್ಕಳು ಅನಾರೋಗ್ಯಕ್ಕೆ ತುತ್ತಾಗಿ ಶಾಲೆಗೆ ಗೈರಾಗುವುದರಿಂದ ಶೈಕ್ಷಣಿಕ ಪ್ರಗತಿಗೆ ಹೊಡೆತ ಬೀಳುತ್ತದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರಿ ಶಾಲೆಗಳನ್ನು ಬಲವರ್ಧನೆ ಮಾಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಈ ಶಾಲೆಗಳು ಉಳಿಯುವುದಿಲ್ಲ ಎಂದ ಆತಂಕ ವ್ಯಕ್ತಪಡಿಸಿದ ಅವರು, ಸರ್ಕಾರವೂ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು ಇಂಗ್ಲೀಷ್ ಮಾಧ್ಯಮ ಶಿಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿದರು. ಶಾಲೆಗೆ ಸುಸಜ್ಜಿತ ಶುದ್ದ ಕುಡಿಯುವ ನೀರಿನ ಘಟಕ ಒದಗಿಸಿದ್ದಕ್ಕಾಗಿ ಶಿಕ್ಷಕರು ಧನ್ಯವಾದ ತಿಳಿಸಿ, ಶಾಲೆಯಲ್ಲಿ ನೀರಿಯ ಸಮಸ್ಯೆ ನಿರಂತರವಾಗಿತ್ತು, ಅನೇಕ ಮಕ್ಕಳು ಮನೆಗಳಿಂದ ನೀರು ತರೋದಿಲ್ಲ ಮತ್ತು ತಂದರೂ ಅದು ಮಧ್ಯಾಹ್ನದ ವೇಳಗೆ ಸಾಕಾಗದ ಕಾರಣ ಕುಡಿಯುವ ನೀರಿಗೆ ಹಾಹಾಕಾರವಿತ್ತು ಎಂದು ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಮುರಳಿ ಹಾಗೂ ಶಾಲಾ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಯ ನಾರಾಯಣಸ್ವಾಮಿ, ಮುಖಂಡರಾದ ಟೈಲರ್ ಮಂಜುನಾಥ್, ಕಾಂತರಾಜ, ಶಿಕ್ಷಕರಾದ ರೇಣುಕಾದೇವಿ. ಮಂಜುಳ. ಚಂದ್ರಶೇಖರ್ ವಿದ್ಯಾರ್ಥಿಗಳು ಹಾಜರಿದ್ದರು.



ಮಾಲೂರಿಗೆ ನೀರು ಬಿಡುವ ಪ್ರಶ್ನೆ ಇಲ್ಲ: ಶಾಸಕ

ಬಂಗಾರಪೇಟೆ: ತಾಲೂಕಿನ ಬೂದಿಕೋಟೆ ಸಮೀಪದ ಮಾರ್ಕೊಂಡೇಯ ಡ್ಯಾಂ ನೀರನ್ನು ಮಾಲೂರು ತಾಲೂಕಿಗೆ ಕುಡಿಯುವ ನೀರಿನ ಯೋಜನೆಗೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಶಾಸಕ ಎಸ್.ಎನ್. ನಾರಾಯಣಸ್ವಾಮಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಬೂದಿಕೋಟೆಯ ಸುಪ್ರಸಿದ್ಧ ಮಾರ್ಕೊಂಡೇಯ ಡ್ಯಾಂ ಅನ್ನು ಮೈಸೂರು ಮಹಾರಾಜರು ನಿರ್ಮಿಸಿರುವ ವರದಾನವಾಗಿದೆ, ಡ್ಯಾಂ ಮತ್ತು 2400 ಎಕರೆ ಅಚ್ಚುಕಟ್ಟು ಪ್ರದೇಶ ಕಟ್ಟಿರುವುದು ಬಂಗಾರಪೇಟೆಯ ವ್ಯಾಪ್ತಿಯಲ್ಲಿರುತ್ತದೆ.

2400 ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ಬೂದಿಕೋಟೆಯ ರೈತರು ಭತ್ತ ಬೆಳೆದು ಭತ್ತದ ಕಣಜ ಎಂದು ಹೆಸರುವಾಸಿಯಾಗಿದೆ, ಈ ನೀರು ಕೃಷಿಗಾಗಿ ಮೀಸಲಿಡಲಾಗಿದೆ, ಈ ಹಿಂದೆ ಮಾಲೂರಿನ ಮಾಜಿ ಶಾಸಕರಾದ ಎಸ್.ಎನ್.ಕೃಷ್ಣಯ್ಯಶೆಟ್ಟಿ ರವರು ಮಾಲೂರು ತಾಲೂಕಿನ ಕೆಲವು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗೆ ಪ್ರಯತ್ನಿಸಿದ್ದು, ಆಗ ನಾನು ಶಾಸಕನಾಗಿದ್ದು, ಅದನ್ನು ತಡೆದು, ಅಂದಿನ ಗ್ರಾಮೀಣ ಅಭಿವೃದ್ಧಿ ಸಚಿವರಾದ ಎಚ್.ಕೆ.ಪಾಟೀಲ್ ರವರಿಗೆ ಮನವಿ ಮಾಡಿ ಯೋಜನೆಯನ್ನು ನಿಲ್ಲಿಸಿದ್ದೆ ಎಂದು ವಿವರಿಸಿದರು.



ತಾಲೂಕಿನ ಯರ್‌ಗೋಳ್ ಡ್ಯಾಂ ಮೂಲಕ ಕೋಲಾರ, ಮಾಲೂರು, ಬಂಗಾರಪೇಟೆಗೆ ಶುದ್ದ ಕುಡಿಯುವ ನೀರನ್ನು ಒದಗಿಸಲಾಗುತ್ತಿದ್ದು, ಮಾರ್ಕಂಡೇಯ ಡ್ಯಾಂ ತುಂಬಿದರೆ ಮಾತ್ರ ನೀರು ಯರ್‌ಗೋಳ್ ಡ್ಯಾಂಗೆ ನೀರು ಬರುತ್ತದೆ, ಇದೇ ನೀರಿನ ಮೂಲವಾಗಿದೆ, ನೀರು ಹರಿಯದಿದ್ದರೆ ಸಾವಿರಾರು ಕೋಟಿ ಯೋಜನೆ ನೆಲಕಚ್ಚಿದಂತಾಗುತ್ತದೆ. ಮೂರು ಪಟ್ಟಣದಲ್ಲಿ ನೀರು ಕೊಡವ ಯರ್‌ಗೋಳ್ ಯೋಜನೆ ಸಂಪೂರ್ಣ ವಿಫಲವಾಗುತ್ತದೆ ಆದ್ದರಿಂದ ಮಾಲೂರಿನ ಶಾಸಕರು ಹಿರಿಯರು ಆಗಿರುವ ನಂಜೇಗೌಡರು ಸೌಜನ್ಯಕ್ಕಾದರೂ ನನಗೆ ಒಂದು ಮಾತು ತಿಳಿಸಿರುವುದಿಲ್ಲ, ಏಕ ಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಬಾರದು, ಅಚ್ಚುಕಟ್ಟು ಡ್ಯಾಂ ಬಂಗಾರಪೇಟೆ ತಾಲೂಕಿನಲ್ಲಿದೆ, ಬೂದಿಕೋಟೆ ರೈತರಿಗೆ ಈ ಡ್ಯಾಂ ನಿರ್ಮಾಣ ಮಾಡಿರುವುದು, ರೈತರಿಗೆ ತೊಂದರೆ ಮಾಡುವುದು ಬೇಡ, ಕುಡಿಯುವ ನೀರಿಗಾಗಿ ಬೇರೆ ಯೋಜನೆಗಳಿವೆ, ಎರಡು ತಾಲೂಕುಗಳ ಮಧ್ಯೆ ವೈಷಮ್ಯ ಬೇಡ.

ನನಗೆ ಎರಡು ತಾಲೂಕು ಒಂದೇ ಹಿರಿಯರ ಸಮ್ಮುಖದಲ್ಲಿ ಕುಳಿತು ಚರ್ಚೆ ಮಾಡಿ ಎರಡು ತಾಲೂಕು ರೈತರಿಗೆ ಅನುಕೂಲವಾಗುವಂತೆ ಬಗೆಹರಿಸಿಕೊಳ್ಳಬೇಕು. ಎಲ್ಲರಿಗೂ ಅನುಕೂಲ ಮಾಡಿಕೊಡಬೇಕು, ನಂಜೇಗೌಡರು ಸಹಕರಿಸಬೇಕೆಂದು ಶಾಸಕರು ಮನವಿ ಮಾಡಿದರು.

ಸರ್ಕಾರಿ ಶಾಲೆಗಳ ಸಬಲೀಕರಣವೇ ಮುಖ್ಯ ಉದ್ದೇಶ

ಬಂಗಾರಪೇಟೆ: ಸರ್ಕಾರಿ ಶಾಲೆಗಳ ಸಬಲೀಕರಣವೇ ನಮ್ಮ ಮುಖ್ಯ ಉದ್ದೇಶವಾಗಿದೆ, ನಾವು ಶಾಲೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತೇವೆ, ಆದರೆ ಶಿಕ್ಷಕರು ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿ ತೋರಿಸಬೇಕು ಎಂದು ಭಾರತದ ಭಾರತ್ ಸುಧಾರ್ ಫೌಂಡೇಶನ್‌ನ ಶಶಿಕಾಂತ್ ಮುರುಗೋಡು ಹೇಳಿದರು.

ಪಟ್ಟಣದ ಬಿಆರ್‌ಸಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ತಾಲೂಕಿನಾದ್ಯಂತ ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮತನಾಡಿದ ಅವರು ಭಾರತ್ ಸುಧಾರ್ ಫೌಂಡೇಶನ್‌ನ ಶಶಿಕಾಂತ್ ಮುರುಗೋಡು ಹಾಗೂ ಕಿರಣ್ ಅವರು ತಾಲೂಕಿನ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಕೈಜೋಡಿಸಿದ್ದು, ಸರ್ಕಾರಿ ಶಾಲೆಗಳಿಗೆಈ ಕೊಡುಗೆಗಳನ್ನು ನೀಡಿದ್ದಾರೆ, ಹೊಸ ಶೌಚಾಲಯ ನಿರ್ಮಾಣ, ಇತ್ತೀಚಿಗೆ ಹುನ್ಕುಂದ ಶಾಲೆಯಲ್ಲಿ ಅತ್ಯಾಧುನಿಕ ಶೌಚಾಲಯ ನಿರ್ಮಿಸಿಕೊಟ್ಟಿದ್ದ ಫೌಂಡೇಶನ್, ಇಂದು ಮಾಗೊಂದಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಅತ್ಯಾಧುನಿಕ ಶೌಚಾಲಯ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿತು.

ಕೋಲಾರ ಜಿಲ್ಲಾ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ, ಉಪಾಧ್ಯಕ್ಷ ವೀರಣ್ಣ, ಬಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮುನಿನಾರಾಯಣಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಆರ್. ಆಂಜನೇಯಗೌಡ, ನೌಕರರ ಸಂಘದ ಖಜಾಂಚಿ ವೆಂಕಟೇಶ್, ಎಸ್.ಸಿ, ಎಸ್.ಟಿ ಶಿಕ್ಷಕರ ಸಂಘದ ಅಧ್ಯಕ್ಷ ನಾರಾಯಣಸ್ವಾಮಿ ಉಪಸ್ಥಿತರಿದ್ದರು.

ಗ್ರಾಮೀಣ ಕೆರೆಗಳ ಅಭಿವೃದ್ಧಿಗೆ 18 ಕೋಟಿ ರೂ. ವೆಚ್ಚ: ನಂಜೇಗೌಡ

ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಿ: ಶಾಸಕ

ಮಾಲೂರು: ತಾಲೂಕಿನ ಗ್ರಾಮಾಂತರ ಕೆರೆಗಳ ಅಭಿವೃದ್ಧಿಗೆ 18 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಲು ಮುಂದಾಗಿರುವುದಾಗಿ ಶಾಸಕ ಕೆ.ವೈ.ನಂಜೇಗೌಡರು ತಿಳಿಸಿದರು. ಅವರು ಬಂಗಾರಪೇಟೆ, ಮಾಲೂರು ತಾಲೂಕಿನ ಗಡಿಯ ಲ್ಲಿರುವ ಮಾರ್ಕೋಂಡಯ್ಯ ಡ್ಯಾಂಗೆ ಬೇಟಿ ನೀಡಿ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ ಮಾತನಾಡುತ್ತಿದ್ದರು.

ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಣ್ಣ ನೀರಾವರಿ ಸಚಿವ ಎನ್.ಎಸ್ .ಭೋಸರಾಜ್ ಮಾಲೂರು ತಾಲೂಕಿಗೆ ವಿಶೇಷವಾಗಿ ಇತಿಹಾಸವಿರುವ ಡ್ಯಾಂಗೆ ಕಾರಣಕರ್ತ ಮೈಸೂರು ರಾಜ ವಂಶಸ್ಥ ಜಯಚಾಮರಾಜೇಂದ್ರ ಒಡೆಯರವರ ಕಾಲದಲ್ಲಿ ಇಂಜಿನಿಯರ್ ವಿಶ್ವೇಶ್ವರಯ್ಯ ನೇತೃತ್ವದಲ್ಲಿ ಅವರು ರೂಪಿಸಿದ ಯೋಜನೆಯಲ್ಲಿ ರೂಪಿತವಾದ ಮಾರ್ಕಂಡಯ್ಯ ಡ್ಯಾಂ ತನ್ನದೇ ಇತಿಹಾಸ ಹೊಂದಿದ್ದು, ಸುತ್ತಮುತ್ತಲು ರಮಣೀಯ ಸುಂದರ ತಾಣವಿದ್ದು ಕರ್ನಾಟಕ, ತಮಿಳುನಾಡು, ಆಂಧ್ರ ಇತರೆ ಕಡೆಯಿಂದ ಪ್ರವಾಸಿಗರು ಇಲ್ಲಿಗೆ ಬಂದು ಹೋಗುತ್ತಾರೆ.



8 ಕೋಟಿ ರೂಪಾಯಿ ವೆಚ್ಚದಲ್ಲಿ ಇಲ್ಲಿಗೆ ಸಂಪರ್ಕ ರಸ್ತೆ, ವಾಕಿಂಗ್ ಪಾರ್ಕ್, ಪ್ರವಾಸಿಗರಿಗೆ ಬೇಕಾದ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಿಂದ, ಪ್ರವಾಸಿಗರಿಗೆ ತಂಗುದಾಣ ಹಾಗೂ ವಿಶೇಷವಾಗಿ ಪ್ರವಾಸಿಗರಿಗೆ ಭದ್ರತೆ ಒದಗಿಸುವುದು. ಈ ಹಿಂದೆ ಡ್ಯಾಂನಲ್ಲಿ ಹಲವಾರು ಪ್ರವಾಸಿಗರು ನೀರಿನಲ್ಲಿ ಈಜಲು ಹೋಗಿ ಪ್ರಾಣ ಕಳೆದುಕೊಂಡಿರುವ ಘಟನೆಯು ನಡೆದಿದ್ದು ಆದುದರಿಂದ ಪ್ರವಾಸಿಗರಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಭದ್ರತೆ ಸುರಕ್ಷತೆ ಒದಗಿಸುವುದು ಹೆಚ್ಚಿನ ಪ್ರಮಾಣದಲ್ಲಿ ಕಾಳಜಿವಹಿಸಲಾಗುತ್ತದೆ. ಹಾಗೂ ಆದಷ್ಟು ಬೇಗ ಕಾಮಗಾರಿ ಪ್ರಾರಂಭವಾಗುತ್ತದೆ ಎಂದರು. ಇಲಾಖೆಯ ಇಂಜಿನಿಯರ್ ಹರಿಕೃಷ್ಣ, ಮುಖಂಡರಾದ ಮಾಜಿ ಗ್ರಾ.ಪಂ.ಅಧ್ಯಕ್ಷರು ರಾಜಕುಮಾರ್, ದೇವರಹಳ್ಳಿ ನಾಗರಾಜ್, ಲಕ್ಷೀನಾರಾಯಣ, ನಲ್ಲಿತಿಮ್ಮನಹಳ್ಳಿ ನಾಗರಾಜ್, ಯುವ ಮುಖಂಡರಾದ ಕೆ.ಎನ್.ಹರೀಶ್‌ನಂಜೇಗೌಡ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಶೀಘ್ರ ಪ್ರಾರಂಭ

ತಿಮ್ಮನಾಯಕನಹಳ್ಳಿ ಅಮಾನಿ ಅರಸಿಕೆರೆ 6 ಕೋಟಿ, ನಮ್ಮ ಸ್ವಗ್ರಾಮ ಕೊಮ್ಮನಹಳ್ಳಿ ಕೆರೆಗೆ 4 ಕೋಟಿ ಹಾಗೂ ಮಾಲೂರು ದೊಡ್ಡ ಕೆರೆಗೆ 45 ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಕಾಮಗಾರಿಗಳು ಕೆಲವು ಕಡೆ ಪ್ರಾರಂಭವಾಗಿದ್ದು ಇನ್ನೂ ಕೆಲವು ಕಡೆ ಆದಷ್ಟು ಬೇಗ ಪ್ರಾರಂಭವಾಗುತ್ತದೆ.

ಕಾಡ್ಗಿಚ್ಚಿಗೆ ಕಾರಣ ಆದವರ ವಿರುದ್ಧ ಗೂಂಡಾ ಕಾಯಿದೆಯಲ್ಲಿ ಕೇಸು ದಾಖಲಿಸಿ

ಬೆಂಕಿ ತಡೆಗೆ ವಿಶೇಷ ತಂಡ ರಚಿಸಲು ಆಗ್ರಹ

ಶ್ರೀನಿವಾಸಪುರ: ಕಾಡ್ಗಿಚ್ಚು ನಿಯಂತ್ರಣಕ್ಕೆ ವಿಶೇಷ ತಂಡ ರಚನೆ ಮಾಡಿ ಮತ್ತು ಸಾರ್ವಜನಿಕರಿಗೆ ಕರಪತ್ರದ ಮುಖಾಂತರ ಜಾಗೃತಿ ಮೂಡಿಸಿ ಕಾಡ್ಗಿಚ್ಚು ಹಚ್ಚುವ ಕಿಡಿಗೇಡಿಗಳ ವಿರುದ್ದ ಗೂಂಡಾ ಕಾಯ್ದೆಯಲ್ಲಿ ಕೇಸು ದಾಖಲಿಸುವಂತೆ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಪತ್ರಿಕಾ ಹೇಳಿಕೆ ಮುಖಾಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಒತ್ತಾಯಿಸಿದರು.

ಪ್ರತಿ ವರ್ಷ ಬೇಸಿಗೆ ಬಂತೆಂದರೆ ಅರಣ್ಯಕ್ಕೆ ಬೆಂಕಿಯ ಅಪಾಯವೂ ಬರುತ್ತದೆ ಎಂಬ ಮುಂಜಾಗ್ರತೆ ಇದ್ದರೂ ಸರ್ಕಾರ ಮತ್ತು ಅರಣ್ಯ ಇಲಾಖೆ ಯಾವುದೇ ಮುಂಜಾಗ್ರತ ಕ್ರಮ ವಹಿಸದೆ ಮೂಕ ಪ್ರಾಣಿಗಳ ಜೀವ ಜೊತೆ ಚೆಲ್ಲಾಟ ಆಡುತ್ತಿದ್ದಾರೆಂದು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯ ಸಂಪತ್ತಿನ ವನ್ಯ ಜೀವಿಗಳ ಮಾರಣ ಹೋಮ ಅಷ್ಟೇ ಅಲ್ಲ ಹಠಾತ್ ನೆರೆ ಹಾವಳಿಯ ಪ್ರಮಾಣವೂ ಹೆಚ್ಚುತ್ತದೆ ಏಕೆಂದರೆ ನೀರನ್ನು ಹೀರಿಕೊಳ್ಳುವ ಸೂಕ್ಷ್ಮ ರಂಧ್ರಗಳೆಲ್ಲವೂ ಬೂದಿಯಲ್ಲಿ ಮುಚ್ಚಿ ಹೋಗುತ್ತದೆ.ಕೃಷಿ ತ್ಯಾಜ್ಯಗಳ ನಿರ್ಲಕ್ಷದ ವಿಲೇವಾರಿ ಹಾಗೂ ಮೋಜಿಗಾಗಿ ಕಡ್ಡಿ ಗೀರುವವರ ಕೃತ್ಯದಿಂದಾಗಿ ಬೆಂಕಿ ಹಬ್ಬುತ್ತದೆ ಮಾನವೀಯತೆ ಇಲ್ಲದ ಮನುಷ್ಯನ ಒಂದು ನಿಮಿಷದ ಚೆಲ್ಲಾಟ ಮೂಖ ಪ್ರಾಣಿಗಳ ಆಕ್ರಂದನ ಶಾಪವಾಗಿ ಪರಿಣಮಿಸುತ್ತದೆ ಎಂದು ಆರೋಪಿಸಿದರು.



ಅರಣ್ಯಕ್ಕೆ ಬೆಂಕಿ ಬಿದ್ದಾಗ ಹತೋಟಿಗೆ ತರಲು ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಜೊತೆಗೆ ಯಾವುದೇ ಗುಣಮಟ್ಟದ ಉಪಕರಣಗಳಿಲ್ಲ ಸಾವಿರಾರು ಹೆಕ್ಟೆರ್ ಅರಣ್ಯದಲ್ಲಿ ಬೆಂಕಿ ನಂದಿಸಲು ಅಷ್ಟೇ ಸಾಮರ್ಥ್ಯವುಳ್ಳ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಅರಣ್ಯ ಇಲಾಖೆಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಅರಣ್ಯ ಸಿಬ್ಬಂದಿಯ ಪ್ರಾಣ ಹಾಗೂ ಅರಣ್ಯ ರಕ್ಷಣೆ ಮಾಡಲು ಮುಂದಾಗಬೇಕೆಂದು ಮನವಿ ಮಾಡಿದರು. ರೈತಸಂಘದ ರಾಜ್ಯ ಮುಖಂಡ ಬಂಗವಾಧಿ ನಾಗರಾಜಗೌಡ ಮಾತನಾಡಿ, ಬೇಸಿಗೆಯಲ್ಲಿ ಬೆಂಕಿ ಎಂಬುದು ಅರಣ್ಯಕ್ಕೆ ಸೀಮಿತವಾಗದೆ ಕೃಷಿ ಕ್ಷೇತ್ರದ ಕೆಲವು ಹೊಲ,ತೋಟಗಳಲ್ಲಿ ಹುಲ್ಲು, ಗಿಡಗಂಟೆ ಬಿದ್ದಿರುವ ಕಡೆ ಬೆಂಕಿ ಕಡ್ಡಿ ಗೀಚುವ ಕಿಡಿಗೇಡಿಗಳಿಂದ ರೈತರು ಕೃಷಿ ಭೂಮಿಗೆ ಬೆಂಕಿ ತಗುಲಿ ಡ್ರಿಪ , ಮಲ್ಚಿಂಗ್ ಪೇಪರ್ ಜೊತೆಗೆ ಕೈಗೆ ಬಂದ ಬೆಳೆ ನಾಶವಾಗುತ್ತಿದೆ ಎಂದರು.

ಕಾಡ್ಗಿಚ್ಚು ಬಗ್ಗೆ ಅರಣ್ಯ ಇಲಾಖೆ ಕರಪತ್ರದ ಮೂಲಕ ಜನ ಜಾಗೃತಿ ಮೂಡಿಸಬೇಕು, ಅರಣ್ಯ ಪಕ್ಕದಲ್ಲಿರುವ ಹಳ್ಳಿಗಳ ಜನರಲ್ಲಿ ಜಾಗೃತಿ ಮೂಡಿಸ ಮಾಡಬೇಕೆಂದು ಮನವಿ ಮಾಡಿದರು. ಪತ್ರಿಕಾ ಹೇಳಿಕೆ ನೀಡುವಾಗ ಜಿಲ್ಲಾಧ್ಯಕ್ಷ ಈಕಂಬಳ್ಳಿ. ಮಂಜುನಾಥ ತೆರ್ನಹಳ್ಳಿ ಅಂಜಿನಪ್ಪ ಪುತ್ತೇರಿ ರಾಜು ಗೀರೀಶ ಮುಂತಾದವರಿದ್ದರು.

ಕಿರುಸುದ್ದಿ

ನೀರು ಶೇಖರಣೆ ತೊಟ್ಟಿ ಅವ್ಯವಸ್ಥೆಗೆ ಆಕ್ರೋಶ

ಶಿಡ್ಲಘಟ್ಟ: ನಗರಸಭೆ ವ್ಯಾಪ್ತಿಯಲ್ಲಿ ಬರುವ 23 ವಾರ್ಡಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿರುವ ನಗರಸಭೆಯ ನೀರು ಶೇಖರಣೆ ಘಟಕ ವಾರ್ಡ್‌ಗಳಿಗೆ ಈ ಸಂಪನ ಮುಖಾಂತರ ಮನೆಗಳಿಗೆ ಕುಡಿಯಲು ನೀರನ್ನು ಸರಬರಾಜು ಮಾಡುವ ಶೇಖರಣೆಯ ತೊಟ್ಟಿ, ಈ ಶೇಖರಣೆಯ ಘಟಕದಲ್ಲಿ ಸ್ವಚ್ಛತೆ ಇಲ್ಲದೆ ಅವ್ಯವಸ್ಥೆಯಿಂದ ಕೂಡಿದೆ. ಪೂರ್ಣ ಪ್ರಮಾಣದಲ್ಲಿ ಸ್ವಚ್ಛತೆ ಇಲ್ಲದೆ ನಗರಸಭೆ ಇಲಾಖೆ ಕಾಣದ ರೀತಿಯಲ್ಲಿ ಕುರುಡುತನ ತೋರುತ್ತಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಜೆ.ಎಸ್. ವೆಂಕಟಸ್ವಾಮಿ ತಿಳಿಸಿದರು. ಪತ್ರಿಕಾ ಹೇಳಿಕೆ ನೀಡಿ,ಸಾಂಕ್ರಾಮಿಕ ರೋಗಗಳಿಗೆ ಆಸ್ಪದ ನೀಡಲಾಗುತ್ತಿದೆ. ಈ ಎರಡು ದಿನ ಬಿದ್ದ ಮಳೆ ನೀರು ಈ ಶೇಖರಣೆಯ ಘಟಕದ ಒಳಗಡೆ ಸೇರಿದೆ. ಇದೆ ಈ ವಿಚಾರವನ್ನು ಶಿಡ್ಲಘಟ್ಟ ನಗರ ಸಭೆ ಆಯುಕ್ತರ ಗಮನಕ್ಕೆ ತಂದರು ಸಹ ಬೇಜವಾಬ್ದಾರಿ ಉತ್ತರವನ್ನು ನೀಡುತ್ತಾರೆ ಶಿಡ್ಲಘಟ್ಟ ನಗರಸಭೆ ವ್ಯಾಪ್ತಿಯಲ್ಲಿ ಬರುವಂತಹ ವಾರ್ಡುಗಳ ಜವಾಬ್ದಾರಿ ಯಾರದು ಅನ್ನುವ ಪ್ರಶ್ನೆ ಸಾರ್ವಜನಿಕರಲ್ಲಿ ಕೇಳಿ ಬರುತ್ತಿದೆ. ಸಾರ್ವಜನಿಕರ ತೆರಿಗೆ ಹಣ ಮುಖಾಂತರ ಇವತ್ತು ಸಂಬಳವನ್ನು ತೆಗೆದುಕೊಳ್ಳುತ್ತಿರುವ ಅಧಿಕಾರಿಗಳು ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಇರುವಂತಹ ಅಧಿಕಾರಿಗಳು ಯಾವ ಕಾರಣಕ್ಕಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಸಾರ್ವಜನಿಕರ ತೆರಿಗೆ ಹಣ ಭ್ರಷ್ಟರ ಪಾಲಾಗುತ್ತಿದೆ, ಅನ್ನುವ ಪ್ರಶ್ನೆ ಇವತ್ತು ಕಾಣುತ್ತಿದೆ. ತಕ್ಷಣ ಈ ಒಂದು ಸಮಸ್ಯೆಯ ಬಗ್ಗೆ ತಕ್ಷಣ ಮಾನ್ಯ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಸೂಕ್ತ ಕಾನೂನು ಕ್ರಮಗಳನ್ನು ತೆಗೆದುಕೊಂಡು ನಿರ್ದಾಕ್ಷಣವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ರಂಜಾನ್ ಸಾಮೂಹಿಕ ವಿಶೇಷ ಪ್ರಾರ್ಥನೆ

ಬಾಗೇಪಲ್ಲಿ: ಚೇಳೂರು ತಾಲೂಕಿನಲ್ಲಿ ಮುಸ್ಲಿಂ ಸಮುದಾಯ ಸಡಗರದಿಂದ ರಂಜಾನ್ ಆಚರಿಸಿದರು. ಮುಸ್ಲಿಂ ಪರಸ್ಪರ ಅಪ್ಪಿಕೊಂಡು ಶುಭಾಷಯಗಳನ್ನು ಕೋರಿದರು. ಈದ್ಗಾ ಮೈದಾನದಲ್ಲಿ ಸ್ವಚ್ಛತೆ ಮಾಡಿ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಮುಸ್ಲಿಂ ಕುಲ ಭಾಂದವರು ಜಾಮೀಯಾ ಮಸೀದಿಯ ಹತ್ತಿರಕ್ಕೆ ನೂರಾರು ಜನ ತೆರಳಿ ಮಸೀದಿಯಿಂದ ಮೆರವಣಿಗೆಯಲ್ಲಿ ಬಂದು ಎಂ.ಜಿ.ಸರ್ಕಲ್ ನಿಂದ ಬಾಗೇಪಲ್ಲಿ ರಸ್ತೆಯ ಮೂಲಕ ಈದ್ಗಾ ಮೈದಾನದಲ್ಲಿ ಧಾನ ಧರ್ಮಗಳ ಶಾಂತಿ ಸೌಹಾರ್ದ ಸಂದೇಶ ಸಾರುವ ರಂಜಾನ್ ಹಬ್ಬದ ಕುರಿತು ಧರ್ಮಗುರುಗಳ ಉಪನ್ಯಾಸ ನೀಡುವುದರ ಮೂಲಕ ಸಾಮೂಹಿಕ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ರಂಜಾನ್ ಆಚರಣೆಯಲ್ಲಿ ಜಾಮಿಯ ಮಸೀದಿ ಅಧ್ಯಕ್ಷ ಎಂ.ಎಸ್.ಅಬ್ದುಲ್ ಲತೀಫ್ ಮಾತನಾಡಿ ಮುಂದಿನ ದಿನಗಳ ಮುಂಗಾರಿನಲ್ಲಿ ಉತ್ತಮ ಮಳೆಯಾಗಿ ಬೆಳೆಯಾಗಿ ಜನ ಜಾನುವಾರುಗಳಿಗೆ ಆರೋಗ್ಯ ನೀಡಲು ಪ್ರಾರ್ಥನೆ ಮಾಡಿರುವುದಾಗಿ ಹೇಳಿದರು. ಪ್ರಾರ್ಥನೆಯಲ್ಲಿ ಕೆಪಿಎಸ್ ಶಾಲೆ ಮುಖ್ಯ ಶಿಕ್ಷಕ ಜಿಲಾನ್‌ಬಾಷಾ, ಸಲೀಮ್ ಜಮಾದಾರ್ ಮೇಸ್ತ್ರಿ ಖಾದರ್ ವಲಿ.ಎಂ.ಎಸ್.ಅಬ್ದೂಲ್ ಸತ್ತಾರ್‌ಸಾಬ್ ಅಬ್ದೂಲ್‌ರವೂಫ್‌ಸಾಬ್ ಕ.ರ.ವೇ ಸದಸ್ಯ ಬುಲೆಟ್‌ಬಾಬು ಮದೀನ ಮಸೀದಿಯ ಅಧ್ಯಕ್ಷ ಮೆಕಾನಿಕ್ ಅಲೀಮ್‌ಬಾಷ. ಪ್ರತಿನಿಧಿಗಳಾದ ಸ್ಟುಡೀಯೋ ಮುನ್ನಾ ಟೈಲರ್ ಚಾಂದ್ ಬಾಷಾ ಎಸ್.ಎಮ್.ಕಲೀಮುಲ್ಲಾ ವಿ.ಎಸ್ ಇನಾಯಿತ್ತುಲ್ಲ ಜಿ.ಪಂ. ಮಾಜಿ ಸದಸ್ಯ ಎಸ್.ಮಹಮದ್‌ಷಫೀ. ಮೆಕಾನೀಕ್ ನಯಾಜ್. ಅಹಮದ್‌ಬಾಷ. ಎಂ.ಎಸ್.ಫೀರ್ದೋಶ್ ಕರಿಯಪಲ್ಲಿ ಕೆ.ಸಿ.ಬಾಬು. ಮತ್ತಿತರರು ಭಾಗವಹಿಸಿದ್ದರು.

ರಂಜಾನ್ ಪ್ರಯುಕ್ತ ಸಿಹಿ ಹಂಚಿದ ಶಾಸಕ

ಶಿಡ್ಲಘಟ್ಟ: ಶಾಂತಿ ಸೌಹಾರ್ದತೆ ಮತ್ತು ಭ್ರಾತೃತ್ವದ ಸಂದೇಶವನ್ನು ಸಾರುವ ಈದ್ ಉಲ್ ಫಿತರ್ (ರಂಜಾನ್) ಹಬ್ಬವನ್ನು ಸಹಸ್ರಾರು ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಶನಿವಾರ ಆಚರಿಸಿದರು. ಕಳೆದ ಒಂದು ತಿಂಗಳಿಂದ ಉಪವಾಸ ವ್ರತವನ್ನು ಆಚರಿಸಿ ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಅಲ್ಲಾಹನ ಕೃಪೆಗೆ ಪಾತ್ರರಾದ ಮುಸ್ಲೀಮರು ಶನಿವಾರ ನಗರದ ಜಾಮಿಯಾ ಮಸೀದಿಯಿಂದ ಮೆರವಣಿಗೆ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಹೊರವಲಯದ ಮೀಲಾದ್ ಬಾಗ್ ಈದ್ಗಾ ಮೈದಾನದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು.ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಬಳಿಕ ಮುಸ್ಲಿಂ ಬಾಂಧವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ನಂತರ ನಿಧನ ಹೊಂದಿರುವ ಪೂರ್ವಜರ ಸಮಾಧಿಗಳ ಬಳಿ ಪ್ರಾರ್ಥನೆ ಸಲ್ಲಿಸಿದರು.ರಂಜಾನ್ ಹಬ್ಬಕ್ಕೂ ಒಂದು ತಿಂಗಳು ಮುನ್ನ ಅವರು ಕೈಗೊಳ್ಳುವ ರೋಜಾ ಆಚರಣೆಯಲ್ಲಿ ಹಿರಿಯರು ಮತ್ತು ಕಿರಿಯರು ಬೇಧವಿಲ್ಲದೆ ಪಾಲ್ಗೊಂಡಿದ್ದರು.ಪವಿತ್ರ ರಂಜಾನ್ ಮಾಸವನ್ನು ಧಾರ್ಮಿಕ ತಿಂಗಳು. ಉಪವಾಸದ ತಿಂಗಳೆಂದೇ ಕರೆಯುತ್ತಾರೆ. ತಿಂಗಳು ಪೂರ್ತಿ ಕುರಾನ್ ಪಠಿಸುತ್ತಾರೆ. ಈದ್ಗಾ ಮೈದಾನಕ್ಕೆ ಆಗಮಿಸಿ ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯಗಳನ್ನು ಕೋರಿದ ಶಾಸಕ ಬಿ.ಎನ್.ರವಿಕುಮಾರ್ ಮಾತನಾಡಿ, ಶಿಡ್ಲಘಟ್ಟ ಕ್ಷೇತ್ರದಲ್ಲಿನ ಮುಸ್ಲಿಂ ಬಾಂಧವರ ಪರವಾಗಿ ಸದನದಲ್ಲಿ ಮಾತನಾಡುವ ಅವಕಾಶ ಸಿಕ್ಕಿತ್ತು. ಇಲ್ಲಿನ ಈದ್ಗಾ ಮೈದಾನದ ಅಭಿವೃದ್ಧಿಗಾಗಿ ಸರಕಾರವನ್ನು ವಿಶೇಷ ಅನುದಾನ ನೀಡುವಂತೆ ಕೋರಿದ್ದೆ.12 ಕೋಟಿ ರೂ ಅನುದಾನದ ಭರವಸೆ ಸಿಕ್ಕಿದೆ ಎಂದು ಹೇಳಿದರು. ತಹಸೀಲ್ದಾರ್ ಗಗನಸಿಂಧು ಇದ್ದರು.


ರಂಜಾನ್ ಪ್ರಯುಕ್ತ ಈದ್ಗಾ ಮೈದಾನದಲ್ಲಿ ಶಾಸಕ ಬಿ.ಎನ್. ರವಿಕುಮಾರ್ ಮತ್ತು ತಹಸೀಲ್ದಾರ್ ಗಗನಸಿಂಧು ಅವರು ಮುಸಲ್ಮಾನ್ ಮುಖಂಡರಿಗೆ ಸಿಹಿ ನೀಡಿ ಶುಭಾಶಯ ಕೋರಿದರು.

ಗ್ರಾಮೀಣ ಬ್ಯಾಂಕಿಗೆ ಅವಿರೋಧ ಆಯ್ಕೆ

ಗೌರಿಬಿದನೂರು: ತಾಲೂಕಿನ ಕಾಚಮಾಚೇನಹಳ್ಳಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಬ್ಯಾಂಕಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡರ ಬಣದ ಬೊಮ್ಮಣ್ಣ ಅಧ್ಯಕ್ಷರಾಗಿ,ಉಪಾಧ್ಯಕ್ಷರಾಗಿ ನಂಜುಂಡಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇತ್ತೀಚಿಗೆ ಕಾಚಮಾಚೇನಹಳ್ಳಿ ವಿಎಸ್ ಎಸ್‌ಎನ್ ಸೊಸೈಟಿಯ ನಿರ್ದೇಶಕರ ಆಯ್ಕೆಗಾಗಿ ನಡೆದ ಜಿದ್ದಾಜಿದ್ದಿನ ಚುನಾವಣೆಯಲ್ಲಿ ಶಾಸಕ ಕೆಎಚ್.ಪುಟ್ಟಸ್ವಾಮಿಗೌಡರ ಬಣದ ಹನ್ನೊಂದು ಮಂದಿ ನಿರ್ದೇಶಕರು ಆಯ್ಕೆಯಾಗುವ ಮೂಲಕ ಮೇಲುಗೈ ಸಾಧಿಸಿದ್ದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬೊಮ್ಮಣ ಅವರು ಮಾತನಾಡುತ್ತಾ ಶಾಸಕರು ಹಾಗೂ ನಮ್ಮ ಮುಖಂಡರಾದ ಕೆಎಚ್ ಪುಟ್ಟಸ್ವಾಮಿಗೌಡರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಮತದಾರರು ನಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ,ಸೊಸೈಟಿಯಲ್ಲಿ ಉತ್ತಮ ಆಡಳಿತವನ್ನು ನೀಡುವ ಮೂಲಕ ಜನರ ಋಣವನ್ನು ತೀರಿಸುವುದಾಗಿ ತಿಳಿಸಿದರು. ಕೆಎಚ್‌ಕೆ ಬಣದ ಮುಖಂಡ ಡಿಸಿಸಿ ಬ್ಯಾಂಕ್ ನಿರ್ದೇಶಕ ವೆಂಕಟರಮರೆಡ್ಡಿ ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಚಂದ್ರಣ್ಣ,ಮುಖಂಡ ಬಲರಾಮ್ ,ನಗರಸಭೆ ಮಾಜಿ ಸದಸ್ಯ ಕೆಎಸ್ ಅನಂತ ರಾಜ್ ,ವೀರಶೈವ ಮಹಾಸಭಾ ಅಧ್ಯಕ್ಷ ಮಹೇಂದ್ರ , ಚಂದ್ರಣ್ಣ, ನಾಗೇಶ್, ಶಿವಾನಂದ ರೆಡ್ಡಿ, ಗಿರೀಶ್, ಶ್ರೀನಿವಾಸ್ ,ಗಂಗಾಧರಪ್ಪ, ಲಕ್ಷ್ಮೀನಾರಾಯಣ್, ಮಂಜುನಾಥ್ ,ಲಿಂಗಣ್ಣ, ಶ್ರೀನಿವಾಸ್ , ಗಂಗಾಧರಪ್ಪ, ಮಂಜುನಾಥ್, ಲಕ್ಷ್ಮೀನಾರಾಯಣ್ ಹಾಜರಿದ್ದರು.


ಗೌರಿಬಿದನೂರು ತಾಲೂಕಿನ ಕಾಚಮಾಚೇನಹಳ್ಳಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಬ್ಯಾಂಕಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಯಿತು.

ವಯೋವೃದ್ಧರಿಗೆ, ರೈತರಿಗೆ, ಆಸ್ಪತ್ರೆಗೆ ಹೋಗುವವರಿಗೆ ಅನುಕೂಲ: ಸಚಿವ

ಬಹುವರ್ಷದ ಕನಸು ನನಸು



ಪ್ರಯಾಣಿಕರ ಸಮಸ್ಯೆ ಆಲಿಸಿದ ಸಚಿವ

ಬೆಂಗಳೂರು, ವಿವಿಧ ಹಳ್ಳಿಯ ಭಾಗಕ್ಕೆ ಸಂಪರ್ಕ ಬಸ್ ಹಾಗೂ ನಿಗದಿತ ಸಮಯಕ್ಕೆ ಬಸ್ ಚಾಲನೆ ಮಾಡದಿರುವುದರ ಬಗ್ಗೆ ಜನರು ಸಚಿವರ ಗಮನಕ್ಕೆ ತಂದರು. ಹಾಗೂ ರಾತ್ರಿಯ ವೇಳೆ ಬಸ್ ನಿಲ್ದಾಣದಲ್ಲಿ ವಿದ್ಯುತ್ ದೀಪಗಳನ್ನು ಹಾಕದಿರುವುದರ ಬಗ್ಗೆ ಮಾಹಿತಿ ನೀಡಿದರು.

ಚಿಂತಾಮಣಿ: ಎಲ್ಲಾ ಬಸ್‌ಗಳನ್ನು ಎಲ್ಲ ಸ್ಥಳಗಳಲ್ಲೂ ನಿಲುಗಡೆ ಮಾಡಲು ಸಾಧ್ಯವಿಲ್ಲ, ದೂರದ ಊರಿನ ಪ್ರಯಾಣಿಕರು ಎಕ್ಸ್‌ಪ್ರೆಸ್, ವೇಗದೂತ ಇತ್ಯಾದಿಗಳಲ್ಲಿ ಪ್ರಯಾಣಿಸುವಾಗ ಬಸ್‌ಗಳನ್ನು ಪ್ರತಿಯೊಂದು ಹಳ್ಳಿಯ ಸಮೀಪ ನಿಲುಗಡೆ ಮಾಡಿದರೆ ಅದು ನಾನ್‌ಸ್ಟಾಪ್ ಆಗುವುದಿಲ್ಲ ಬದಲಾಗಿ ನಾನಾ ಸ್ಟಾಪ್ ಆಗುತ್ತದೆ ಇದಕ್ಕೆ ಉತ್ತಮ ಪರಿಹಾರವೇ ನಗರ ಸಾರಿಗೆಯಾಗಿದೆಯೆಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ನುಡಿದರು.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದ ಕೈಲಾಸಗಿರಿ ನಗರ ಸಾರಿಗೆ ಬಸ್‌ಗಳ ಉದ್ಘಾಟಿಸಿ ಸಮಾರಂಭದಲ್ಲಿ ಭಾಗವಹಿಸಿ ದೀಪ ಬೆಳಗಿ ಮಾತನಾಡಿ ನಗರ ಸಾರಿಗೆ ಬಗ್ಗೆ 2011ರಲ್ಲೇ ಈ ಕನಸನ್ನು ಕಂಡಿದೆ. ಆದರೆ ನಂತರ ಆದ ರಾಜಕೀಯ ಬದಲಾವಣೆಗಳಿಂದ ನನ್ನ ಕನಸು ಕನಸಾಗಿಯೆ ಉಳಿದಿತ್ತು. 2023ರಲ್ಲಿ ಗೆಲುವನ್ನು ಪಡೆದು ಶಾಸಕನಾಗಿ ಸಚಿವನಾಗಿ ಆಯ್ಕೆಯಾದ ಮೇಲೆ ಚಿಂತಾಮಣಿ ನಗರ ವ್ಯಾಪ್ತಿಗೆ ನಗರ ಸಾರಿಗೆ ಮಾಡಬೇಕೆಂಬ ಕನಸನ್ನು ಚರ್ಚಿಸಿ ಸಾರಿಗೆ ಇಲಾಖೆಯ ಸಚಿವರೊಂದಿಗೆ ನಿರಂತರ ಸಂಪರ್ಕದೊಂದಿಗೆ ಅವರ ಸಹಕಾರದಿಂದ ಇಂದು ಕೈಲಾಸಗಿರಿ ನಗರ ಸಾರಿಗೆ ಚಾಲನೆ ನೀಡಲಾಗುತ್ತಿದ್ದು ಇದರಿಂದ ವಿದ್ಯಾರ್ಥಿಗಳಿಗೆ, ವಯೋವೃದ್ಧರಿಗೆ, ಆಸ್ಪತ್ರೆಗೆ ಭೇಟಿ ನೀಡುವವರಿಗೆ, ರೈತರಿಗೆ ಅನುಕೂಲವಾಗುತ್ತದೆಂದರು. ಈಗಾಗಲೇ ನಗರ ಸಾರಿಗೆ 8-10 ಮಾರ್ಗಗಳನ್ನು ಹುಡುಕಿಕೊಂಡಿದ್ದು, ಇದರಲ್ಲಿ 5 ಮಾರ್ಗಗಳಲ್ಲಿ ಇಂದು ಬಸ್‌ಗಳನ್ನು ನೀಡಲಾಗಿದ್ದು, ಶ್ರೀನಿವಾಸಪುರ 16 ಟ್ರಿಪ್, ದಿಬ್ಬೂರಹಳ್ಳಿ, ಹೆಚ್ ಕ್ರಾಸ್ , ಶಿಡ್ಲಘಟ್ಟ , ಪೆದ್ದೂರು ತಲಾ 12 ಟ್ರಿಪ್‌ಗಳನ್ನು ನಡೆಸಲಾಗುವುದು ಪ್ರತಿ 30 ನಿಮಿಷಕ್ಕೆ ಬಸ್ ಪುನ ನಿಗದಿತ ಸ್ಥಳಗಳಿಗೆ ತಲುಪುವುದರಿಂದ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆಂದರು.

ಗ್ಯಾರಂಟಿಗಳಿಂದ ಅಭಿವೃದ್ಧಿ ಕಾರ್ಯಗಳನ್ನು ನಡೆಯುತ್ತಿಲ್ಲವೆಂಬುದು ಶುದ್ಧ ಸುಳ್ಳು. ಬಸ್ ಖರೀದಿ ಚಾಲಕ ನಿರ್ವಾಹಕರ ಕೊರತೆ, ಇತ್ಯಾದಿಗಳ ತೊಂದರೆಯ ನಡುವೆಯೂ ಹೊರಗುತ್ತಿಗೆ ಆಧಾರದಲ್ಲಿ 200 ಚಿಕ್ಕಬಳ್ಳಾಪುರ ವಿಭಾಗದಲ್ಲಿ ಆಯ್ಕೆ ಮಾಡಿಕೊಂಡಿದ್ದು, ಇದರಲ್ಲಿ ಚಿಂತಾಮಣಿ ವಿಭಾಗಕ್ಕೆ 60 ಚಾಲಕರ ನೇಮಕ ಮಾಡಿಕೊಳ್ಳಲಾಗಿದ್ದು, ಹಲವರು ಸುಳ್ಳು ಹೇಳುವುದರಲ್ಲಿ ನಿರಂತರಾಗಿರುತ್ತಾರೆ ಸತ್ಯ ಸತ್ಯಾತೆಯನ್ನು ಅರಿತು ಮಾತನಾಡಬೇಕೆಂದರು.

ವಿಭಾಗೀಯ ನಿಯಂತ್ರಣಾಧಿಕಾರಿ ನಾಗೇಂದ್ರ, ಪ್ರಾಸ್ತಾವಿಕ ನುಡಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಉತ್ತಮ ಸಾರಿಗೆ ವ್ಯವಸ್ಥೆಯಿದ್ದು ಚಿಕ್ಕಬಳ್ಳಾಪುರ ವಿಭಾಗದಲ್ಲಿ 138 ಮಾರ್ಗಗಳಲ್ಲಿ ಬಸ್ ಸಂಚಾರವಿದ್ದರೆ, ಚಿಂತಾಮಣಿ ತಾಲೂಕು 126 ಮಾರ್ಗಗಳಲ್ಲಿ ಬಸ್ ಸಂಚಾರವನ್ನು ಹೊಂದಿದ್ದು 2ನೇ ಸ್ಥಾನದಲ್ಲಿದೆಯೆಂದರು.

ತಾ.ಪಂ. ಇಒ ಎಸ್.ಆನಂದ್, ಡಿವೈಎಸ್‌ಪಿ ಪಿ.ಮುರಳೀಧರ್, ವಿಭಾಗ ನಿಯಂತ್ರಣಾಧಿಕಾರಿ ನಾಗೇಂದ್ರ, ಘಟಕ ವ್ಯವಸ್ಥಾಪಕಿ ಸರಿತ, ಎಆರ್ ಟಿಒ ಬೈರಾರೆಡ್ಡಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್, ಪೌರಾಯುಕ್ತ ಜಿ.ಎನ್.ಚಲಪತಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಾಥ್ ರೆಡ್ಡಿ, ತಾಲ್ಲೂಕು ಗ್ಯಾರಂಟಿ ಅಧ್ಯಕ್ಷ ಮುನಿನಾರಾಯಣಪ್ಪ, ಕೃಷಿಕ ಸಮಾಜದ ಅಧ್ಯಕ್ಷ ಜಯರಾಮರೆಡ್ಡಿ, ಜಿ.ಪಂ. ಮಾಜಿ ಅಧ್ಯಕ್ಷ ಚಿನ್ನಪ್ಪ, ಆರ್ ಎಂ. ಶ್ರೀನಿವಾಸ್, ಸುರೇಶ್, ಶ್ರೀರಾಮರೆಡ್ಡಿ, ಲಕ್ಷ್ಮೀಪತಿ, ರಾಮಯ್ಯ, ಮಂಜುನಾಥ್ ಮುಖಂಡರು ಇದ್ದರು.

ಹಿರಿಯರ ಜತೆ ಸಮಾಲೋಚನೆ



ಚಿಕ್ಕಬಳ್ಳಾಪುರ: ನಗರಕ್ಕೆ ಹೊಂದಿಕೊಂಡಂತಿರುವ ಅಗಲಗುರ್ಕಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬನ್ನಿಕುಪ್ಪೆ ಗ್ರಾಮಕ್ಕೆ ಒದಗಿದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಮುಂದಾಗಿರುವುದು ಸಾರ್ವಜನಿಕ ವಲಯದಲ್ಲಿ ಭಾರೀ ಪ್ರಶಂಸೆಗೆ ಪಾತ್ರವಾಗಿದೆ.

ಬನ್ನಿಕುಪ್ಪೆ ಗ್ರಾಮದ ಜನರಿಗೆ ಒಂದೆಡೆ ಹೆಚ್.ಎನ್.ವ್ಯಾಲಿ ನೀರಿನ ಕಾರಣವಾಗಿ ವಿಪರೀತ ಸೊಳ್ಳೆಕಾಟ, ಮತ್ತೊಂದೆಡೆ ಚಿಕ್ಕಬಳ್ಳಾಪುರ ನಗರದ ಯುಜಿಡಿ ಪ್ಲಾಂಟ್‌ನ ದುರ್ನಾತದಿಂದ ಬದುಕು ಅಸಹನೀಯವಾಗಿದೆ. ಈ ಗ್ರಾಮದ ಪ್ರತಿಯೊಂದು ಮನೆಯ ವಾಸಿಯೂ ಕೂಡ ಸೊಳ್ಳೆಗಳ ಕಾಟದಿಂದ ರೋಸಿಹೋಗಿದ್ದಾರೆ.ಇಲ್ಲಿ ಮನೆಗೆ ಬಾಗಿಲಿರುವಂತೆ ಸೊಳ್ಳೆ ಪರದೆಯ ಪರ್ಯಾಯ ಬಾಗಿಲೂ ಇಟ್ಟುಕೊಳ್ಳುವಂತಾಗಿದೆ. ಹಿಂದೆ ಈ ಗ್ರಾಮಕ್ಕೆ ಕೋಚಿಮುಲ್ ನಿರ್ದೇಶಕರಾಗಿದ್ದ ಭರಣಿ ವೆಂಕಟೇಶ್ ಹಾಕಿಸಿಕೊಟ್ಟಿದ್ದ ಶುದ್ಧಕುಡಿಯುವ ನೀರಿನ ಘಟಕ ಹಾಳಾಗಿದೆ.ಪರಿಣಾಮ ಜನ ಎಚ್.ಎನ್. ವ್ಯಾಲಿ ನೀರಿನ ಅಂತರ್ಜಲ ಬಳಸುತ್ತಿದ್ದು ಆತಂಕಕ್ಕೆ ಒಳಗಾಗಿದ್ದರು. ಈ ಬಗ್ಗೆ ಮಾಧ್ಯಮಗಳಲ್ಲಿ ಸಾಕಷ್ಟು ವರದಿಯಾದ ಪರಿಣಾಮ ಎಚ್.ಎನ್.ವ್ಯಾಲಿ ನೀರಿನ ಬಗ್ಗೆ ಜನರಲ್ಲಿ ಅಪನಂಬಿಕೆ ಉಂಟಾಗಿತ್ತು. ಇದನ್ನು ಮನಗಂಡ ಭಗತ್ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್‌ರೆಡ್ಡಿ ಮಾ.19ರ ಗುರುವಾರ ಯುಗಾದಿ ಹಬ್ಬವಿದ್ದರೂ ಬನ್ನಿಕುಪ್ಪೆ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ಮುಖಂಡರ ಜತೆಗೆ ಈ ಬಗ್ಗೆ ಆಪ್ತ ಸಮಾಲೋಚನೆ ನಡೆಸಿದರು.

ಎಚ್.ಎನ್.ವ್ಯಾಲಿ ನೀರಿನಲ್ಲಿ ನೈಟ್ರೇಟ್ ಮತ್ತು ಪಾಸ್ಪರೇಟ್ ಅಂಶಗಳು ಹೆಚ್ಚಿವೆ ಎಂಬುದನ್ನು ಜಲವಿಜ್ಞಾನಿಗಳು ಹೇಳಿದ್ದಾರೆ. ಇದರಿಂದ ಯಾವ್ಯಾವ ಖಾಯಿಲೆಗಳು ಬರುತ್ತವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಕರಣಕ್ಕೆ ಒತ್ತಾಯಿಸಿ ಜಿಲ್ಲೆಯ ಜನಪ್ರತಿನಿಧಿಗಳ ನಿಯೋಗವನ್ನು ಮುಖ್ಯಮಂತ್ರಿಗಳ ಬಳಿ ಕರೆದುಕೊಂಡು ಹೋಗಲು ಮುಂದಾಗಬೇಕು. ಶಾಸಕರ ಮುಂದಾಳತ್ವದಲ್ಲಿ ಯಾವುದೇ ಹೋರಾಟಕ್ಕೆ ನಾವು ಸಿದ್ದರಿದ್ದೇವೆ. ಸರಕಾರ ಯಾವುದೇ ಆಗಿರಲಿ ಅವರ ಹೆಸರು ಚಿರಾಯುವಾಗಿ ಉಳಿಯಲಿ.ಇದಾಗಬೇಕಾದರೆ 3ನೇ ಹಂತದ ಶುದ್ದೀಕರಣ ಮಾಡಸಲು ಮುಖ್ಯಮಂತ್ರಿಗಳ ಮನವೊಲಿಸಲಿ.ಬಿಜೆಪಿ ಶಾಸಕರೊಂದಿಗೆ ನಾನು ಹೋಗಲು ಸಿದ್ಧ ಎಂದು ಸಂದೀಪ್ ರೆಡ್ಡಿ ಮನವಿ ಮಾಡಿದರು.

ಗೃಹ ಬಳಕೆ ಸಿಲಿಂಡರ್‌ಗಳ ಜಪ್ತಿ

ಬಾಗೇಪಲ್ಲಿ: ಗೃಹಪಯೋಗಿ ಸಿಲಿಂಡರ್ ಗಳನ್ನು ಹೋಟೆಲ್‌ಗಳಲ್ಲಿ ಟೀ-ಅಂಗಡಿಗಳಲ್ಲಿ ಬಳಕೆಮಾಡುತ್ತಿರುವುದರಿಂದ ಜಿಲ್ಲಾಧಿಕಾರಿಗಳ ಆದೇಶದಂತೆ ಕಂದಾಯ ಇಲಾಖೆಯ ರೆವಿನ್ಯೂ ಇನ್‌ಸ್ಪೆಕ್ಟರ್ ಎಂ.ಎನ್.ಈಶ್ವರ್ ನೇತೃತ್ವದ ತಂಡ ಚೇಳೂರು ಪಟ್ಟಣದ ವಿವಿಧ ಹೋಟೇಲ್ ಟೀ ಅಂಗಡಿಗಳು ಮತ್ತಿತರಗಳಲ್ಲಿ ಶನಿವಾರ ಜಪ್ತಿ ಮಾಡಿದ್ದಾರೆ. ಇರಾನ್-ಇಸ್ರೇಲ್ ಸಂಘರ್ಷ ಪರಿಣಾಮವಾಗಿ ದೇಶಾದ್ಯಂತ ಉಂಟಾದ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇದೀಗ ಗ್ರಾಮೀಣ ಪ್ರದೇಶಗಳಿಗೂ ತಲುಪಿದ್ದು, ಚೇಳೂರು ತಾಲೂಕಿನಲ್ಲಿ ಗಂಭೀರ ಬಿಕ್ಕಟ್ಟಾಗಿ ಪರಿಣಮಿಸಿದ/ಹಿನ್ನೆಲೆಯಲ್ಲಿ ತಹಸೀಲ್ದಾರ್ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ದಾಳಿ ನಡೆಸಿದ್ದಾರೆ. ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಅಭಾವದಿಂದ ಹೋಟೆಲ್ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದು ದೈನಂದಿನ ವ್ಯಾಪಾರ ನಡೆಸಲು ಕಷ್ಟಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೊರತೆ ದುರುಪಯೋಗ ಮಾಡಿಕೊಂಡ ದಂಧೆಕೋರರು ಗೃಹಬಳಕೆ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾಡುತ್ತಿರುವುದು ಕಂಡು ಬಂದಿದೆ. ಈ ಅಕ್ರಮ ಚಟುವಟಿಕೆಗಳ ವಿರುದ್ಧ ಕ್ರಮ ಕೈಗೊಂಡ ಅಧಿಕಾರಿಗಳು ಚೇಳೂರು ಮತ್ತು ಚಿಲಕಲನೇರ್ಪು ಹೋಬಳಿ ಕೇಂದ್ರದಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಾಳಿ ನಡೆಸಿದರು. ದಾಳಿಯಲ್ಲಿ ಕಂದಾಯ ಇಲಾಖೆಯ ರೆವಿನ್ಯೂ ಇನ್‌ಸ್ಪೆಕ್ಟರ್ ಎಂ.ಎನ. ಈಶ್ವರ್ ಕಂದಾಯ ಇಲಾಖೆ ಅಧಿಕಾರಿ ಡಿ.ಬಾಲು. ಚೇಳೂರು ಗ್ರಾ.ಪಂ.ಯ ಲೆಕ್ಕಾಧಿಕಾರಿ ಪಿ.ಎನ್.ಮಂಜುನಾಥ್. ಪೋಲೀಸ್ ಇಲಾಖೆ ಮುಖ್ಯ ಪೇದೆ ಚೌಡಪ್ಪ. ಬೀರಣ್ಣ. ಭಾಗವಹಿಸಿದ್ದರು.

ಟೀ-ಬೇಂಚ್‌ನಲ್ಲಿ ಅಕ್ರಮವಾಗಿ ಇಟ್ಟಿದ್ದ ಸಿಲಿಂಡರ್ ಮತ್ತು ನಾಯುಡು ಹೋಟೇಲ್ ನಲ್ಲಿ ಇಟ್ಟಿದ್ದ ಗೃಹೋಪಯೋಗಿ ಸಿಲಿಂಡರ್ ಗಳನ್ನು ಕಂದಾಯ ಇಲಾಖೆ ರೆವಿನ್ಯೂ ಇನ್ ಸ್ಪೆಕ್ಟರ್ ಎಂ.ಎನ್.ಈಶ್ವರ್ ಜಪ್ತಿ ಮಾಡಿದರು.


ಚೇಳೂರಿನ ಹೋಟೇಲ್‌ನಲ್ಲಿ ಗೃಹ ಬಳಕೆ ಸಿಲಿಂಡರ್‌ಗಳನ್ನು ಜಪ್ತಿ ಮಾಡುತ್ತಿರುವ ವಿವಿಧ ಇಲಾಖೆಗಳ ತನಿಖಾ ತಂಡ.

ರಂಜಾನ್: ಶಾಸಕ ಸುಬ್ಬಾರೆಡ್ಡಿ ಪ್ರಾರ್ಥನೆ

ಬಾಗೇಪಲ್ಲಿ: ಪಟ್ಟಣದ ಕೊಡಿಕೊಂಡ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಸಾಮೂಹಿಕ ಪ್ರಾರ್ಥನೆ (ಈದ್ ನಮಾಜ್) ನೆರವೇರಿತು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಮೈದಾನದಲ್ಲಿ ಜಮಾಯಿಸಿ ಭಕ್ತಿಭಾವದಿಂದ ಅಲ್ಲಾಹನಿಗೆ ಪ್ರಾರ್ಥನೆ ಸಲ್ಲಿಸಿದರು. ಹಬ್ಬದ ಸಂಭ್ರಮದ ನಡುವೆ ಪ್ರಾರ್ಥನೆ ನಡೆದಿದ್ದು, ಪರಸ್ಪರ ಸಹೋದರತ್ವ ಮತ್ತು ಸೌಹಾರ್ದತೆ ಸನ್ನಿವೇಶಕ್ಕೆ ಸಾಕ್ಷಿಯಾಯಿತು. ಕ್ಷೇತ್ರದ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರು ಈದ್ಗಾ ಮೈದಾನಕ್ಕೆ ಭೇಟಿ ನೀಡಿ, ಮುಸ್ಲಿಂ ಸಮುದಾಯದವರಿಗೆ ರಂಜಾನ್ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರಿದರು. ರಂಜಾನ್ ಹಬ್ಬವು ತ್ಯಾಗ, ಶಾಂತಿ, ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳ ಸಂಕೇತವಾಗಿದ್ದು, ಸಮಾಜದಲ್ಲಿ ಏಕತೆ ಬೆಳೆಸುವ ಹಬ್ಬವಾಗಿದೆ ಎಂದು ಅವರು ಹೇಳಿದರು.



ಪ್ರಾರ್ಥನೆ ಬಳಿಕ ಧಾರ್ಮಿಕ ಮುಖಂಡರು ಉಪನ್ಯಾಸ ನೀಡಿ, ರಂಜಾನ್‌ನ ಮಹತ್ವವನ್ನು ವಿವರಿಸಿದರು. ಉಪವಾಸದ ಮೂಲಕ ಆತ್ಮಶುದ್ಧಿ, ಸಹನೆ ಮತ್ತು ದಾನಧರ್ಮದ ಮಹತ್ವವನ್ನು ಅರಿತುಕೊಳ್ಳಬೇಕು ಎಂದು ತಿಳಿಸಿದರು. ಬಡವರ ನೆರವಿಗೆ ಮುಂದಾಗುವುದು, ಪರಸ್ಪರ ಪ್ರೀತಿ ಮತ್ತು ಗೌರವದಿಂದ ನಡೆದುಕೊಳ್ಳುವುದು ಈ ಹಬ್ಬದ ಸಾರವಾಗಿದೆ ಎಂದು ಹೇಳಿದರು.

ನಂತರ ಭಕ್ತರು ಪಕ್ಕದಲ್ಲಿರುವ ಸ್ಮಶಾನಕ್ಕೆ ಭೇಟಿ ನೀಡಿ, ತಮ್ಮನ್ನು ಅಗಲಿದ ಬಂಧು-ಬಳಗ ಹಾಗೂ ಪೂರ್ವಜರನ್ನು ನೆನೆದು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಶಾಂತಿ ಮತ್ತು ಆತ್ಮಶಾಂತಿಯಿಗಾಗಿ ಪ್ರಾರ್ಥನೆ ಸಲ್ಲಿಸಿದ ದೃಶ್ಯ ಮನಮಿಡಿಯುವಂತಿತ್ತು. ಪ್ರಾರ್ಥನೆ ಬಳಿಕ ಪರಸ್ಪರ ಈದ್ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು,ಸಿಹಿತಿಂಡಿಗಳನ್ನು ಹಂಚಿಕೊಂಡರು. ಸ್ಥಳೀಯ ಗಣ್ಯರು, ಧಾರ್ಮಿಕ ಮುಖಂಡರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹಬ್ಬದ ಸಂಭ್ರಮವನ್ನು ಹೆಚ್ಚಿಸಿದರು. ಚಿಮುಲ್ ಡೈರಿ ಅಧ್ಯಕ್ಷ ವಿ.ಮಂಜುನಾಥರೆಡ್ಡಿ, ನೂರುಲ್ಲಾ, ಕಾಂಗ್ರೆಸ್ ಮುಖಂಡ ಗುಂಡಿಗಾನಪಲ್ಲಿ ಮಂಜುನಾಥರೈಡ್ಡಿ.ನೂರಾರು ಮುಸ್ಲಿಂ ಸಮುದಾಯದ ಬಂಧುಗಳು ಭಾಗವಹಿಸುತ್ತಿದ್ದರು.

ಯುದ್ಧದಿಂದ ಕೃಷಿ ಪರಿಕರಗಳ ಬೆಲೆ ಹೆಚ್ಚಳ

ಶಿಡ್ಲಘಟ್ಟ: ರೈತರು ಕೃಷಿಗೆ ಬಳಸುವ ಪಿವಿಸಿ ಪೈಪು ಸೇರಿದಂತೆ ಹನಿ ನೀರಾವರಿ ಪರಿಕರಗಳ ಬೆಲೆ ದಿಢೀರ್ ಹೆಚ್ಚಿದ್ದು, ರೈತರು ಆತಂಕಗೊಂಡಿದ್ದಾರೆ. ಕೂಡಲೇ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಪಿವಿಸಿ ಪೈಪು ಮತ್ತು ಹನಿ ನೀರಾವರಿ ಪರಿಕಗಳ ಬೆಲೆ ಇಳಿಸಲು ಕ್ರಮವಹಿಸಬೇಕೆಂದು ಕರ್ನಾಟಕ ಒಕ್ಕಲಿಗರ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಹಾಗೂ ಪ್ರಗತಿಪರ ಕೃಷಿಕ ಪೂಲಕುಂಟಹಳ್ಳಿ ರಘುನಾಥರೆಡ್ಡಿ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೇರಿಕಾ, ಇರಾನ್, ಇಸ್ರೇಲ್ ನಡುವಿನ ಯುದ್ಧದಿಂದಾಗಿ ಪೆಟ್ರೋಲಿಯಂ ಕಚ್ಚಾ ವಸ್ತುಗಳ ಕೊರತೆಯಿಂದ ಪಿವಿಸಿ ಪೈಪ್ ಮತ್ತು ಹನಿ ನೀರಾವರಿ ಪರಿಕಗಳ ಬೆಲೆ ದಿಢೀರ್ ಹೆಚ್ಚಿದೆ. 20 ಅಡಿ ಉದ್ದದ ಪಿವಿಸಿ ಪೈಪ್ ಬೆಲೆ 300-320 ರೂ. ಇದ್ದದ್ದು ಇದೀಗ 420-440 ರೂ.ಗಳಿಗೆ ಏರಿದೆ ಎಂದು ಆತಂಕ ವ್ಯಕ್ತಪಡಿಸಿದರು. ಪಿವಿಸಿ ಪೈಪ್ ಮತ್ತು ಹನಿ ನೀರಾವರಿ ಪರಿಕರಗಳ ತಯಾರಿಕೆಯಲ್ಲಿ ಪೆಟ್ರೋಲಿಯಂ ಕಚ್ಚಾ ಪದಾರ್ಥಗಳನ್ನು ಬಳಸಲಿದ್ದು ಇದು ಬೆಲೆ ಏರಿಕೆಗೆ ಕಾರಣವಾಗಿದೆ. ಇದೀಗ ಮುಂಗಾರು ಮಳೆ ಆರಂಭವಾಗುವ ಕಾಲ. ಹೊಸದಾಗಿ ಬೆಳೆ ನಾಟಿ ಮಾಡುವ ರೈತರು ಜಮೀನನ್ನು ಉಳುಮೆ ಮಾಡಿ ಹನಿ ನೀರಾವರಿ ಪದ್ಧತಿ ಅಳವಡಿಸುವ ಕಾಲವಿದು.

ಈ ಸಮಯದಲ್ಲಿ ಕೃಷಿ ಪರಿಕರಗಳ ಬೆಲೆಯಲ್ಲಿ ದಿಢೀರ್ ಏರಿಕೆ ಆಗಿರುವುದು ರೈತರು ಕೃಷಿ ವಿಸ್ತೀರ್ಣ ಮಾಡಲು, ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಲು ಕಷ್ಟವಾಗಲಿದೆ. ಆದ್ದರಿಂದ ಕೇಂದ್ರ ಸರಕಾರ ಪೆಟ್ರೋಲಿಯಂ ಕಚ್ಚಾ ಪದಾರ್ಥಗಳಿಗೆ ರಿಯಾಯಿತಿ ಘೋಷಿಸಿ ಕೃಷಿ ಪರಿಕರಗಳ ಬೆಲೆ ಕಡಿಮೆಯಾಗುವಂತೆ ಮಾಡಬೇಕೆಂದು ಒತ್ತಾಯಿಸಿದರು. ಜತೆಗೆ ರಾಜ್ಯ ಸರ್ಕಾರವು ರೈತರ ಹಾಗೂ ಕೃಷಿಯ ಹಿತ ದೃಷ್ಟಿಯಿಂದ ಪಿವಿಸಿ ಪೈಪು ಸೇರಿದಂತೆ ಹನಿ ನೀರಾವರಿ ಪರಿಕರಗಳ ಬೆಲೆ ಕಡಿಮೆ ಮಾಡಲು ರೈತರೊಂದಿಗೆ ನಿಲ್ಲಬೇಕೆಂದು ಅವರು ಆಗ್ರಹಿಸಿದರು.

ಮಹಿಳಾ ಸಿರಿ| ತಾಲೂಕಿನ 18ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರಿಗೆ ಸನ್ಮಾನ

ಪ್ರತಿಯೊಬ್ಬರೂ ಮಹಿಳೆಯರನ್ನು ಗೌರವಿಸಿ

ಶಿಡ್ಲಘಟ್ಟ: ತಾಲೂಕಿನ ಬಶೆಟ್ಟಹಳ್ಳಿ ಗೇಟ್‌ನಲ್ಲಿರುವ ಶ್ರೀಸಾಯಿ ಇಂಟರ್ ನ್ಯಾಷನಲ್ ಸ್ಕೂಲ್ ಹಾಗೂ ಪಿಯು ಕಾಲೇಜಿನಲ್ಲಿ ಪದವಿ ಪ್ರದಾನ ಹಾಗೂ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಹಿಳಾ ಸಿರಿ ಕಾರ್ಯಕ್ರಮದಲ್ಲಿ ತಾಲೂಕಿನ ಸುಮಾರು 18ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸುವ ಮೂಲಕ ವಿಭಿನ್ನ ಹಾಗೂ ವಿನೂತನವಾಗಿ ಆಚರಿಸಲಾಯಿತು. ಈ ವೇಳೆ ಮಾತನಾಡಿದ ಸಂಸ್ಥೆಯ ಅಧ್ಯಕ್ಷೆ ಜೆ.ದೀಪಾ ಮಂಜುನಾಥ್, ಎಲ್ಲಿ ಮಹಿಳೆಯರನ್ನು ಗೌರವದಿಂದ ಪೂಜಿಸುತ್ತಾರೋ, ಅಲ್ಲಿ ದೇವತೆಗಳು ಸಂತೋಷದಿಂದ ವಾಸಿಸುತ್ತಾರೆ. ಎಲ್ಲಿ ಮಹಿಳೆಯರಿಗೆ ಗೌರವ ನೀಡುವುದಿಲ್ಲವೋ, ಅಲ್ಲಿ ಮಾಡುವ ಎಲ್ಲಾ ಕಾರ್ಯಗಳಿಗೂ ಫಲ ದೊರೆಯುವುದಿಲ್ಲ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮಹಿಳೆಯರನ್ನು ಗೌರವಿಸಿ ಸಮಾನ ಅವಕಾಶಗಳನ್ನು ಕಲ್ಪಿಸಬೇಕಿದೆ ಎಂದು ಹೇಳಿದರು.



ಭಾರತದ ಚರಿತ್ರೆಯಲ್ಲಿ ದೇಶ ಧರ್ಮ ರಕ್ಷಣೆಗೆ ಸೇವೆ ಸಲ್ಲಿಸಿದ ಮಹಿಳೆಯರ ದೊಡ್ಡ ಚರಿತ್ರೆ ಮತ್ತು ಶಕ್ತಿ ಇದೆ. ಝಾನ್ಸಿರಾಣಿ ಲಕ್ಷ್ಮೀಬಾಯಿ, ಸರೋಜಿನಿ ನಾಯ್ಡು, ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವ ಸೇರಿ ಅಸಂಖ್ಯಾತ ಮಹಿಳಾ ಸಾಧಕಿಯರು ನಮ್ಮ ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರವಾದದ್ದು, ಅವರ ಸಾಧನೆಗಳನ್ನು ಸ್ಮರಿಸುವ ಜೊತೆಗೆ ಅವರ ಆದರ್ಶಗಳನ್ನು ಪಾಲಿಸಬೇಕೆಂದು ಕರೆ ನೀಡಿದರು. ಪ್ರಸ್ತುತದ ದಿನಗಳಲ್ಲಿ ಇಂದಿನ ದಿನಮಾನ ಕೃತಕ ಬುದ್ಧಿಮತ್ತೆಗೆ ಹೆಚ್ಚಿನ ಮಹತ್ವವಿದೆ. ಬುದ್ಧಿವಂತಿಕೆ ಮತ್ತು ಜ್ಞಾನ ಇರುವವರು ಮಾತ್ರ ಪ್ರಗತಿಯಾಗಲು ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಹೆಣ್ಣು ಮಕ್ಕಳು ಜ್ಞಾನ ಸಂಪಾದನೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.ಕಾರ್ಯಕ್ರಮದಲ್ಲಿ ಮಮಿಕ್ರಿ ಗೋಪಿ ಅವರು ಹಲವು ಗಣ್ಯರ ಧ್ವನಿಗಳನ್ನು ಮಿಮಿಕ್ರಿಯನ್ನು ಮಾಡುವ ಮೂಲಕ ಎಲ್ಲರ ಗಮನ ಸೆಳೆದರು.

ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದಿದ್ದವರ ಮನಸೂರೆಗೈದವು. ತಾಲೂಕಿನ 18 ಕ್ಕೂ ಹೆಚ್ಚು ಆಶಾಕಾರ್ಯಕರ್ತೆಯನ್ನು ಸನ್ಮಾನಿಸಲಾಯಿತು. ಯುಕೆಜಿ, 10ನೇ ತರಗತಿಯ ಮಕ್ಕಳಿಗೆ ಪದವಿ ಪ್ರದಾನ ಮಾಡಲಾಯಿತು. ಸಂಸ್ಥೆಯ ಕಾರ್ಯದರ್ಶಿ ಎಂ.ಮಂಜುನಾಥ್, ಗುರುಕುಲ ಇಂಟರ್ ನ್ಯಾಷನಲ್ ಶಾಲೆಯ ಅಧ್ಯಕ್ಷ ಪಿ.ಸುರೇಶ್, ಇಸ್ಕೇರ್ ಟ್ರಸ್ಟ್ ವಿನಯ್ ಆನಂದಬಾಬು, ಸೋ.ಸು ನಾಗೇಂದ್ರನಾಥ್, ವಿಸ್ಡಂನಾಗರಾಜ್, ಪ್ರಾಂಶುಪಾಲ, ಶಿಕ್ಷಕರು ಹಾಗೂ ನೂರಾರು ಮಂದಿ ಪೋಷಕರು ಭಾಗವಹಿಸಿದ್ದರು.

ಅಪಘಾತದಲ್ಲೂ ಧೈರ್ಯ ಕಳೆದುಕೊಳ್ಳದ ವಿದ್ಯಾರ್ಥಿನಿ ಕುಸುಮಾ| ಶಾಸಕಿ ಮೆಚ್ಚುಗೆ

ಸ್ಟ್ರೆಚರ್ ಮೇಲೆಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಕೆಜಿಎಫ್: ಮಾರಿಕುಪ್ಪ ಗ್ರಾಮ ಪಂಚಾಯಿತಿಯ ಚಿನ್ನಾಗನಹಳ್ಳಿ ಗ್ರಾಮದ ಕು. ಕುಸುಮಾ ಎಂಬ ಹತ್ತನೇ ತರಗತಿ ವಿದ್ಯಾರ್ಥಿನಿ ಅಪಘಾತದಲ್ಲಿ ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡಿದ್ದರೂ, ಧೈರ್ಯ ಕಳೆದುಕೊಳ್ಳದೆ ಸ್ಟ್ರೆಚರ್ ಮೇಲೆಯೇ ಮಲಗಿ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆದ ಘಟನೆ ಪ್ರೇರಣಾದಾಯಕವಾಗಿದೆ.

ಕೆಲವು ತಿಂಗಳುಗಳ ಹಿಂದೆ ಸಂಭವಿಸಿದ ಅಪಘಾತದಿಂದ ಗಂಭೀರವಾಗಿ ಗಾಯಗೊಂಡಿದ್ದ ಕುಸುಮಾ ಚಿಕಿತ್ಸೆ ಪಡೆಯುತ್ತಿದ್ದು, ವೈದ್ಯರು ವಿಶ್ರಾಂತಿ ಅಗತ್ಯವೆಂದು ತಿಳಿಸಿದ್ದರೂ ಶಿಕ್ಷಣದ ಮೇಲೆ ಇರುವ ಆಸಕ್ತಿ ಮತ್ತು ದೃಢ ಸಂಕಲ್ಪದಿಂದ ಇತ್ತೀಚೆಗೆ ಆರಂಭವಾದ ಹತ್ತನೇ ತರಗತಿ ಪರೀಕ್ಷೆಯನ್ನು ಬರೆದಿದ್ದಾಳೆ.

ಇಂದು ಕ್ಷೇತ್ರದ ಶಾಸಕಿ ರೂಪಕಲಾ ಎಂ ಶಶಿಧರ್ ಅವರು ಚಿನ್ನಾಗನಹಳ್ಳಿ ಗ್ರಾಮದಲ್ಲಿರುವ ಕುಸುಮಾ ಅವರ ತಾತ ವೆಂಕಟೇಶ್ ಮೇಸ್ತ್ರಿ ನಿವಾಸಕ್ಕೆ ಭೇಟಿ ನೀಡಿ, ವಿದ್ಯಾರ್ಥಿನಿಯೊಂದಿಗೆ ಮಾತನಾಡಿದರು. ಈ ಸಂದರ್ಭದಲ್ಲಿ ಆಕೆಯ ಆತ್ಮಸ್ಥೈರ್ಯವನ್ನು ಮೆಚ್ಚಿ ಅಭಿನಂದನೆಗಳನ್ನು ತಿಳಿಸಿದರು.



ಬಾಕಿ ಇರುವ ಪರೀಕ್ಷಾ ವಿಷಯಗಳನ್ನು ಧೈರ್ಯವಾಗಿ ಎದುರಿಸಲು ಆತ್ಮವಿಶ್ವಾಸ ತುಂಬಿದ ಶಾಸಕಿ, ಇಂತಹ ಸಂಕಷ್ಟದ ಸಮಯದಲ್ಲಿಯೂ ವಿದ್ಯಾರ್ಥಿನಿಗೆ ಬೆಂಬಲವಾಗಿ ನಿಂತಿರುವ ತಾತ, ಅಜ್ಜಿ ಹಾಗೂ ಪೋಷಕರನ್ನು ಶ್ಲಾಘಿಸಿದರು.

ವಿದ್ಯಾರ್ಥಿನಿಗೆ ಸುಗಮವಾಗಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಜಿ. ನಾರಾಯಣಸ್ವಾಮಿ ಅವರಿಗೆ ಅಭಿನಂದನೆಗಳನ್ನು ತಿಳಿಸಿದ ಅವರು, ಉಳಿದ ಪರೀಕ್ಷೆಗಳನ್ನು ಸುಸೂತ್ರವಾಗಿ ಬರೆಯಲು ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕುಸುಮಾ ಅವರ ಹೆಚ್ಚಿನ ಚಿಕಿತ್ಸೆಗೆ ಹಾಗೂ ಪರೀಕ್ಷೆ ಬರೆಯಲು ಸಂಚಾರ ವೆಚ್ಚಗಳಿಗಾಗಿ ಶಾಸಕಿ ಆರ್ಥಿಕ ಸಹಾಯವನ್ನು ನೀಡಿದರು. ವಿದ್ಯಾರ್ಥಿನಿ ಕುಸುಮಾಳ ಈ ಸಾಧನೆ ಮತ್ತು ಆತ್ಮಸ್ಥೈರ್ಯವು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಸಾರ್ವಜನಿಕರಿಂದಲೂ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.